START

START

START

MICRO FILMED

By

KARNATAKA STATE ARCHIVES

File No.: AUM 6 APP 90.

CAMP:-

MYSORE

DATE

10th July-1991

MICRO FILMED

By

KARNATAKA STATE ARCHIVES

File No. AUM 6 APP 90.

CAMP:-

MYSORE

DATE

10th July-1991

MICRO FILMED

By

KARNATAKA STATE ARCHIVES

File No.: AUM 6 APP 90.

CAMP:-

MYSORE

DATE

10th July-1991

INTRODUCTION

The first Kannada newspaper, the "Mangalore Samachara" (1st July 1843), may be said to have inaugurated Kannada journalism. This was followed by "Kannada Samachara" (1st march 1844), "Mysore Vrittanta Bodhini" (July 1859), "Karnatika Patrika" (July 1865), "The Mysore Gazette (April 1866) and so on. The Karnataka State Archives department has microfilmed several newspapers and periodicals of Karnataka both in Kannada and English since its establishment in December 1973.

Among these mention may be made of "Vedanta Patrike", "Vijaya", "Panchacharya Bodha", "Sadhvi", "Rationalist", Samachar, etc., the last two being in English. All the microfilmed newspapers and periodicals are available for the use of scholars and others.

To the above collection of microfilmed newspapers and periodicals are now being added the following, viz. "Jayakarnataka", "Vishwa Karnataka", "Vidyadayini", "Hitabodhini", and "Vagbhushana". An account of these, parts only of which are

microfilmed by the Karnataka State Archives, is given separately at the end owing to unavoidable reasons.

Date: 11th July 1991
Place: Mysore

H. P. Shashidhara Murthy
Deputy Director of Archives
Archives Unit, Mysore.
ಉಪ ನಿರ್ದೇಶಕರು
ದಾಖಲೆ ಘಟಕ, ಮೈಸೂರು.

ಅಪ ನಿರ್ದೇಶಕರವರ ಕಛೇರಿ
ಪುರಾಣದ ಘಟಕ
ಅಮಾಪನೆ ಆವರಣ
ಮೈಸೂರು-೫೭೦ ೦೦೬

CERTIFICATE OF AUTHENTICITY

Certified that the issues of Jayakarnāṭaka, Viswakarnāṭaka Vidyādāyini, Hitabódhini and Vāgbhūshaṇa microfilmed as per list hereunder are authentic copies made from the originals preserved in the Institute of Kannada studies, University of Mysore, Mysore-570006.

H.P. Shashidharamurthy

(H.P. SHASHIDHARAMURTHY)
Deputy Director of Archives
Archives Unit, Mysore.
ಉಪ ನಿರ್ದೇಶಕರು,
ಪುರಾಣದ ಘಟಕ, ಮೈಸೂರು.

Date: 11th July 1991
Place: Mysore

List of Kannada Periodicals Microfilmed (Monthlies)

ಅಖಿಲ ಭಾರತವಾಣಿ ಸೇವೆ
ಹಸ್ತಾಗಾರ ವಿಭಾಗ
ಅಮಾನತ್ ಅವಧಿ
ಮೈಸೂರು-೫೭೦ ೦೦೧

Sl. No	Name	Vol.	Issues	Chronological Range
I	Jayakarnataka ಜಯಕರ್ನಾಟಕ	12	1 to 10 and 12	January to October, December 1934
		13	1, 2, 4 to 12	January, February, April to December 1935
		14	3 to 9, 11 and 12	March to September, November and December, 1936
		15 { 19	7 to 11 / 11	July to November 1937 / November, 1941
		17	4 to 11	April to November 1939

19	2 to 10 and 12	February to October and December, 1941
20	1, 2	January, February, 194.
19	7 to 12	July to December 194.
20	5 to 11	May to November, 194.
21	1 to 6	January to June, 194.
23	1 to 11	January to November, 19
24	1, 3 to 12	January, March to Decembe 1946
25	1 to 12	January to December 1947
26	1, 3, 4 to 11	January, March, April t November, 1948

27	1 to 8 and 10 to 12	January to August, October to December, 1949
29	2, 4 to 12	February, April to December 1951
30	1 to 12	January to December 1952
31	1 to 5, 8, 11, 12	January to May, August, November, December, 1953
32	2 to 12	February to December 1954
33	2 to 12	February to December 1955

ಶ್ರೀ Vishwakarnataka ಸಂಪುಟ ಸಂಖ್ಯೆ

Yugadi issue ಯುಗಾದಿ ಸಂಚಿಕೆ

1931

III	Vidyadayini ವಿದ್ಯಾದಾಯಿನಿ	2	1 to 12	January to December 1894
		5	1 to 12	January to December 1897
		6	-00-	-80- 1898
		7	-00-	-00- 1899
		8	-00-	-00- 1900
		9	-00-	-00- 1901
		14	-00-	-00- 1906
		15	-00-	-00- 1907
		16	-00-	-00- 1908
		17	-00-	-00- 1909
		22	-00-	-00- 1914

IV.	Hitabodhini ಹಿತಬೋಧಿನಿ	2	1 to 7	October 1884 to April 1885 (2 Pages of October issue missing)
V.	Vagbhushana ವಾಗ್ಭೂಷಣ	16	1 to 12	August 1911 to July 1912

Date. 11th July 1991

Place: Mysore

H. P. Shashidharaiah

Deputy Director of Archives
Archives Unit, Mysore.
ಮೈಸೂರು.
ಮೈಸೂರು ವಿ.ವಿ. ಕಾಲೇಜು

VISWA KARNATAKA

UGADI ISSUE

1931

VISWA KARNATAKA

UGADI ISSUE

1931

ವಿಶ್ವಕರ್ನಾಟಕ

ಯುಗಾದಿ ಸಂಚಿಕೆ

K-2456



'ವಿಶ್ವಕರ್ನಾಟಕ'
ಬೆಂಗಳೂರು ನಗರ
೧೯೩೧

'ಪ್ರಕಾಶಕ'

ಯುಗಾದಿ ಸಂಚಿಕೆ

೬೧೫
೨೭೬೬೭
೫೧೦೯

ತಿರುಮಲ ತಾತಾಚಾರ್ಯ ಶರ್ಮನ್
ಸಂಪಾದಕ

ಬೆಂಗಳೂರು ನಗರ
೧೯೩೧

ವಿಚಾರಿಸಿ

ಪಿನ್ನಹ

'ವಿಶ್ವಕರ್ನಾಟಕ'ದ ಮೇಲೆ ಕನ್ನಡಿಗರಿಗೆಲ್ಲ ಬಹಳ ಅಭಿಮಾನ. ಇದಿಕ್ಕೆ ಜನರ ಔದಾರ್ಯವೇ ಕಾರಣ 'ವಿಶ್ವಕರ್ನಾಟಕ' ದಲ್ಲಿ ಏನೂ ಇಲ್ಲ. ಅದು ಹೆದರಿ, ಹೆದರಿ ಒಂದೊಂದಾಗಿ ಹೆಜ್ಜೆಯನ್ನು ಮುಂದಿಡುತ್ತಿದೆ ಆದರೆ ಜನತೆಯ ಪ್ರೇಮವು ಅದನ್ನು ನಾಗಾಲ್ಗೋಟಕ್ಕೂ ತಳ್ಳುತ್ತಿದೆ. ಹೆಚ್ಚೇನು ಅದು ಏಳಲಿ, ಬೀಳಲಿ ಆ ಹೊಣೆಗಾರಿಕೆಯೆಲ್ಲ ಜನಪದಕ್ಕೆ ಸೇರಿದ್ದೆ.

ಪತ್ರಿಕೆ ಹುಟ್ಟಿ ಐದಾರು ವರ್ಷಗಳಾದರೂ ವಾರ್ಷಿಕಸಂಚಿಕೆಯೊಂದಾದರೂ ಬರಲಿಲ್ಲವೆಂದು ಒಂದು ದೂರು. 'ವಾಚಕರು ನಮ್ಮಿಂದ ಬಹಳ ನಿರೀಕ್ಷಿಸುತ್ತಿದ್ದಾರೆ. ನಮ್ಮ ಶಕ್ತಿಯೋಗ್ಯತೆ ಅವರಿಗೆ ಗೊತ್ತಿಲ್ಲವಲ್ಲ' ಎಂಬ ನ್ಯಾಯ ನಮಗೆ.

ಯಾರದೂ ಏನನ್ನೂ ನಡೆಯುವ ಹಾಗಿಲ್ಲ: ಎಲ್ಲವೂ ಕಾಲವಶ. ಈಸಾರಿ 'ಯುಗಾದಿ ಸಂಚಿಕೆ'ಯೊಂದು ಹೊರಡಬೇಕೆಂಬ ಆಲೋಚನೆಗೆ ಯಾವ ಯಾವ ಮೂಲೆಗಳಿಂದಲೋ ಬಲ ಒತ್ತು. ಆ ಸಂಚಿಕೆಗೆ ಒಂದು ರೂಪಕೊಡುವ ಪ್ರಶ್ನೆ ಮಾತ್ರ ಉಳಿಯಿತು.

ಹೆಸರುವಾಸಿಯಾದ ಲೇಖಕರಿಗೆಲ್ಲ ಬಂದು 'ಪಿನ್ನಹ' ಕಳುಹಿಸುವುದು. ಅವರನ್ನು ಪೀಡಿಸಿ ಏನಾದರೊಂದು ಬರೆಸುವುದು. ಹೀಗೆ ಬರೆದು ಬಂದ ನಾನಾಲೇಖನಗಳನ್ನು ಒಟ್ಟುಗೂಡಿಸಿ, ಒಂದು ವಿಶೇಷಸಂಚಿಕೆಯೆಂದು ಹೆಸರಿಟ್ಟು ಪ್ರಕಟಿಸಿಬಿಡುವುದು.

ಆದೇಕೋ ಈ ಸಂಪ್ರದಾಯವು ರುಚಿಸಲಿಲ್ಲ. ಇದರಿಂದ ಯಾವ ದೇನರಿಗೆ ಪ್ರೀತಿ ಅನ್ನಿಸಿತು. ವಿಶೇಷ ಸಂಚಿಕೆಯೆಂದರೆ ಅದರಲ್ಲಿ ಏನಾದರೂ ಒಂದು ಭಾವನೆ, ಒಂದು ವಿಚಾರ, ಒಂದು ಉದ್ದಿಶ್ಯ, ಒಂದು ಪುರುಷಾರ್ಥ ಇರಬೇಕು ಅನ್ನಿಸಿತು. ಹಾಗೆ ಅನ್ನಿಸಿದ ಕೂಡಲೇ ಹೆದರಿಕೆಯಾಯಿತು. ಅಸಾಧ್ಯವೆಂದು ತೋರಿತು.

ಅಸಾಧ್ಯವೇನೋ ಹೌದು. ಆದರೆ ಚಾಪಲ್ಯವೊಂದುಂಟಲ್ಲ. ಒಬ್ಬಿಬ್ಬರು ಹಿರಿಯರ ಬಳಿಗೆ ಹೋಗಿ ಈ ಆಲೋಚನೆಯನ್ನು ಅವರೆದುರಿಗಿಟ್ಟದ್ದಾಯಿತು. ಅವರು 'ಬಹಳ ಚನ್ನಾಗಿದೆ. ಇಂತಹ ಪ್ರಯತ್ನಕ್ಕಿದೇ ಮೊದಲು. ಹಿಂದು ಮುಂದು ನೋಡಬೇಕಾದ್ದಿಲ್ಲ.' ಅಂದರು.

'ಊ' ಅಂದರೆ ಸಾಕು ಈಕಾಲದಲ್ಲಿ. ಕೊಂಚ ಪ್ರೋತ್ಸಾಹ ಬೇರೆ ಸಿಕ್ಕಿಬಿಟ್ಟರೆ ಕೇಳಬೇಕೆ. ಆ ಉತ್ಸಾಹ, ಆತುರದ ಫಲಿತಾಂಶವೇ ಈ ಪ್ರಯತ್ನ. ಮೊದಲಿನ ಆಲೋಚನೆಯೆಂಬ ಸಕ್ಕರೆ ಕುಂಬಳಕಾಯಲ್ಲಿ ಈ ಸಂಚಿಕೆಯೆಂಬ ಸಾಸಿವೆಕಾಳು ಹೊರಬಿತ್ತು. ಇದಕ್ಕಾಗಿ ಸಂಕೋಚಪಟ್ಟು ಸುಖವಿಲ್ಲ. ಒಳ್ಳೆಯ ಉದ್ದಿಶ್ಯ ಇಟ್ಟುಕೊಂಡು, ವಂಚನೆಯಿಲ್ಲದೆ ಕೈಲಾದ್ದನ್ನು ಮಾಡಲಾಗಿದೆ. ವಾಚಕರು ತಮ್ಮ ಕೃಪಾಕಟಾಕ್ಷವನ್ನು ಕೆಲಸದ ಕಡೆಗೆ ಮಾತ್ರವಲ್ಲದೆ ಆ ಕೆಲಸದ ಹಿಂದಿನ ಅಂತರಂಗದ ಕಡೆಗೂ ಕೊಂಚ ಪ್ರಸರಿಸಬೇಕು.

ನಿಷ್ಕೃಷ್ಟವಾದ ಜ್ಞಾನವೇ ಶೀಲ ಮತ್ತು ಸಾಮರ್ಥ್ಯಯುತವಾದ ಲೋಕಜಾಗೃತಿಗೆ ಮೂಲಕಾರಣವೆಂದು ನಂಬಿ, ವಾಚಕಲೋಕಕ್ಕೆ ವಿಜ್ಞಾನ, ರಾಜನೀತಿ, ಸಾಹಿತ್ಯ ವಿಚಾರಗಳಲ್ಲಿ ಸಾಕಾದಷ್ಟುಮಟ್ಟಿಗೆ ಸ್ಥೂಲವಾಗಿ ವಿಷಯ ಪರಿಚಯಮಾಡಿಕೊಡುವ ಸಾಹಸಕ್ಕೆ ಕೈಹಾಕಿದ್ದಾಯಿತು. ಈ ಲೇಖನಗಳನ್ನು ಬರೆದಿರುವುದು ಪ್ರಧಾನವಾಗಿ ಪ್ರೌಢಶಿಕ್ಷಣಲಾಭ ದೊರೆಯದ, ಸಾಮಾನ್ಯ ತಿಳಿವಳಿಕೆಯ, ಕನ್ನಡಕನ್ನಡಿತಿಯರ ಸ್ವಯೋಚನಕ್ಕಾಗಿ ಎಂಬುದನ್ನು ಮರೆಯಬಾರದು. ಉದ್ದಿಶ್ಯವು ಎಷ್ಟರಮಟ್ಟಿಗೆ ನೆರವೇರಿದೆಯೋ ಹೇಳಬಲ್ಲವರು ವಾಚಕರು; ಪಾಮರರಚನಪ್ರಗತಿ ಕುತೂಹಲಿಗಳು.

ಮಾನವಜೀವನವು ಸುಖಮಯವಾಗಿದ್ದರೆ ಆ ಯಶಸ್ಸು ಮಾನವನಿಗೇ ಸೇರುವುದು; ದುಃಖಮಯವಾಗಿದ್ದರೆ ಆ ಅಪಕೀರ್ತಿಯೂ ಮಾನವನಿಗೇ ಸೇರಿದು, ಅಂದರೆ ಜೀವನದ ಏಳಿಗೆ-ಕುಸಿತ, ಆನಂದ-ದುಃಖ, ಉಳಿವು ಇವಕ್ಕೆಲ್ಲ ಪ್ರಧಾನವಾಗಿ ಮನುಷ್ಯನೇ ಕಾರಣ. ಈ ದೃಷ್ಟಿಯಿಂದ ಮನೋವೈಜ್ಞಾನಿಕ ಅಂತಹ ಎಷ್ಟೊವ ಗಳು, ಕಂಪಗಳು, ಭಾವವಾಹಿನಿಗಳು ತಲೆಹಾಕಿದವು? ಅವಕ್ಕೆ ವಿಜ್ಞಾನ ಪರಿಶೋಧನೆಗಳು, ರಾಷ್ಟ್ರೀಯ ರಾಜ ನೀತಿ ತತ್ವಪ್ರಯೋಗಗಳು, ಕಲಾಸೃಷ್ಟಿ (ಸಾಹಿತ್ಯವೂ ಸೇರಿ) ಸುಂತಾದುವು ಎಷ್ಟುಮಟ್ಟಿಗೆ ಕಾರಣಗಳಾ ದುವು? ಮಾನವಜಾತಿ ಚರಿತ್ರೆಯಲ್ಲಿ 'ಪ್ರಗತಿ' ಎಂಬ ಸ್ಪಷ್ಟತೆಯೊಂದನ್ನು ಸಂಬುವುದಾದರೆ ಸಿಂತಾಗಿ, ಅದರ ಪ್ರಭಾವ ಪ್ರಮಾಣಗಳೆಷ್ಟು?

ಜನಸಾಮಾನ್ಯದಲ್ಲಿ ಈ ಬಗೆಯ ವಿಚಾರವಾಹಿನಿಗಳನ್ನು ಹೊರಡಿಸಿದರೆ ಅವರ ತಿಳಿವಳಿಕೆಗೆ, ಹೃದಯಕ್ಕೆ ಔದಾರ್ಯಕ್ಕೆ, ಸಮಬುದ್ಧಿಗೆ ಸಹಾಯವಾದೀತೇನೋ ಎಂಬ ದೂರದ ಆಸೆ—ಅಲ್ಲ—ಕುಂಬು ಆಸೆಯಿಂದ ಆಗಾಗ 'ವಿಶೇಷ ಸಂಚಿಕೆ'ಗಳನ್ನು ಹೊರಡಿಸಬೇಕೆಂಬ ಹುಚ್ಚು ಹುಟ್ಟಿದೆ. ಅಂತಹ ನೊಡ್ಡ ಕಾರ್ಯಸಾಧ್ಯ ಹಕ್ಕೆ ತಕ್ಕ ಯೋಗ್ಯತೆ ಇದೆಯೆ ಇಲ್ಲವೆ ಎಂಬುದರ ಪರೀಕ್ಷೆಗಾಗಿ ಈ 'ಯುಗಾದಿಸಂಚಿಕೆ' ಯನ್ನು ಹೊರಡಿಸ ಲಾಗಿದೆ. ಹಿರಿಯರು, ತಿಳಿದವರು, ಹಿತೈಷಿಗಳು ಈ 'ಮಾನಪರೀಕ್ಷೆ'ಯಲ್ಲಿ ನಮ್ಮ ಹಣೇಬರಹವೇನೆಂಬುದನ್ನು ತಿಳಿಸಬೇಕು. ಅಷ್ಟೆ.

ಇಂದಿನ ವಿಶಾಲವೂ ಶಕ್ತಿಪೂರ್ಣವೂ ಆದ ಜಗತ್ತಿನ ಆರೋಗ್ಯ, ಆನಂದ, ಆದರ್ಶ ಜೀವನ ವಿಚಾರಸಾರ ವನ್ನು ಹೀರಿ, ವಾತ್ಸಲ್ಯಹೃದಯದ ಹಿರಿಯರ ಕೈಗಳಿಂದಲೇ ವೈಶಿಷ್ಟ್ಯಪೂರ್ಣ ಸುಖಪ್ರಾಪ್ತಿಯಿಲ್ಲದ ಪಾಮರ ಕೋಟಿಗೆ ಅದನ್ನು ಎರೆಯಿಸಬೇಕೆಂಬುದೊಂದೇ ನಮ್ಮ ಸಂಕಲ್ಪ ಸರ್ವಸ್ವ. ಅದನ್ನು ನೆರವೇರಿಸುವ ಭಾರ ಕಲಿತವರದು, ಉಳ್ಳವರದು, ಪದವೀಧರರದು. 'ವಿಶ್ವಕರ್ಣಾಟಕ'ವು ಬಂದು ವಳಲೆ ಮಾತ್ರ.

ಸಂಪಾದಕ.

ಕೃತಜ್ಞತಾ ಸೂಚನೆ

ಮೊಟ್ಟಮೊದಲು ರಾವ್ ಬಹದ್ದೂರ್ ಶ್ರೀ ಬಿ. ವೆಂಕಟೇಶಾಚಾರ್ಯರವರಿಗೆ ನಾವು ತ್ರಿಕರಣಪೂರ್ವಕವಾದ ವಂದನೆಗಳನ್ನು ಸಮರ್ಪಿಸಬೇಕಾಗಿದೆ. ಅವರ ಬಳಿ ಹೋಗಿ ನಮ್ಮ 'ರಾಯಭಾರ' ತಿಳಿಸಿದಕೂಡಲೇ ಮರುಮಾತಾಡದೆ 'ಕನ್ನಡದಲ್ಲೇ ಬರೆದು ಕೊಡುತ್ತೇನೆ' ಅಂದರು. ಸಮ್ಮೋರಿನವರು. ನಾವು ಹೋಗಿ ಕೇಳಿದರೆ 'ಇಲ್ಲ' ಅನ್ನುವರೆ ಎಂಬ ಧೈರ್ಯವೊಂದಿತ್ತು. ಆದರೂ ಅವರ 'ಕರ್ತವ್ಯ ಭಾರ' ನೋಡಿ ಏನೋ ಹೇಗೋ ಎಂಬ ಭಯವೂ ಇತ್ತು. ಇವೆರಡೊ ಭಾವಗಳೂ ನಮ್ಮ ಎದೆಬಡಕತನವನ್ನು ಮಾತ್ರ ಸೂಚಿಸುತ್ತವೆ ಅಷ್ಟೆ. ಆಚಾರ್ಯರು ದೊಡ್ಡ ಮನಸ್ಸು ಮಾಡಿದರು. ಪಾಮರಜನ ಸೇವೆಯೆಂದು ನಮಗೆ ಪೂರ್ಣ ನೆರವಾದರು. ವಿಜ್ಞಾನ ದಾನ ಮಾಡಿದರು.. ಕನ್ನಡನಾಡೇ ಇವರಿಗೆ ಚಿರಋಣಿಗಳಾಗಿರಬೇಕಾಗಿದೆ.

ಶ್ರೀ ಪಿ. ಶ್ರೀನಿವಾಸರಾಯರೂ ಶ್ರೀ ಕೆ, ಸಂಪದ್ಗಿರಿರಾಯರೂ, ಶ್ರೀ ಕೆ. ವಿ. ಪುಟ್ಟಪ್ಪನವರೂ, ಶ್ರೀ ರಾಳ್ಳಪಲ್ಲಿ ಅನಂತಕೃಷ್ಣಶರ್ಮರವರೂ, ಶ್ರೀ ಎ. ಎನ್. ಮೂರ್ತಿರಾಯರೂ, ಶ್ರೀ ಕೆ. ಕೃಷ್ಣಯ್ಯಂಗಾರ್ಯರೂ ಇವರೆಲ್ಲ ನಮ್ಮ ಮಿತ್ರರು, ಆಪ್ತ ಮಿತ್ರರು. 'ವಿಶ್ವಕರ್ನಾಟಕ' ಪ್ರೇಮಿಗಳು. ಅವರು ಈ ಸಂಚಿಕೆಗೆ ನೂಡಿರುವ ಸಹಾಯವನ್ನು ಕುರಿತು ಇಲ್ಲಿ ಏನಾದರೂ ಹೇಳಿದರೆ ಅದನ್ನು ಅವರು ಹೇಗೆ ಭಾವಿಸುವರೋ ಎಂಬ ಭಯ ಹುಟ್ಟಿದೆ. ಏನೂ ತೋರುವುದಿಲ್ಲ. ಮೌನವಾಗಿ ಅವರೆಲ್ಲರಿಗೂ ಕೈ ಮುಗಿದುಬಿಡುವೆವು.

ತಮಿಳು ಸಾಹಿತ್ಯ ವಿಚಾರವಾಗಿ ತಾವೊಂದು ಲೇಖನ ಬರೆದು ಸಹಾಯ ಮಾಡಬೇಕೆಂದು ಪತ್ರ ಬರೆದಕೂಡಲೇ ಮದರಾಸಿನ ಡಾಕ್ಟರ್ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರು 'ತಮ್ಮ ಪ್ರಯತ್ನವು ಯಶಸ್ವಿಯಾಗಲಿ. ನಾನೇ ತಾವು ಬಯಸಿದ ಲೇಖನವನ್ನು ಸಂತೋಷವಾಗಿ ಬರೆದು ಕಳಿಸುತ್ತಿದ್ದೆ. ಏನು ಮಾಡಲಿ. ಕೈತುಂಬ ಕೆಲಸ ಬಿದ್ದಿದೆ. ಒಳ್ಳೆಯದು ಮತ್ತೆ ಯಾರಿಂದಲಾದರೂ ಬರೆಸಿ ಕಳಿಸುತ್ತೇನೆ' ಎಂದು ಉತ್ತರ ಕೊಟ್ಟರು. ನಮ್ಮ ಪುಣ್ಯ, ಕನ್ನಡಿಗರ ಅದೃಷ್ಟ. ಶ್ರೀಯುತ ಕೃಷ್ಣಸ್ವಾಮಿ ಅಯ್ಯಂಗಾರ್ಯರವರೇ ಕೂತು, ಲೇಖನವನ್ನು ಬರೆದು ಕಳುಹಿಸಿಕೊಟ್ಟರು. ಎಂತಹ ಔದಾರ್ಯ! ಅದಕ್ಕಾಗಿ ಅವರನ್ನು ಎಷ್ಟು ವಂದಿಸಿದರೂ ತೀರದು.

ಮರಾಠಿ ಸಾಹಿತ್ಯ ವಿಚಾರವಾಗಿ ಲೇಖನ ಬರೆದು ಕಳುಹಿಸಿದ ಶ್ರೀಯುತ ಭಿಡೆಯವರಿಗೂ, ಬಂಗಾಳಿ ವಾಙ್ಮಯ ವಿಚಾರವಾಗಿ ಬರೆದ ಬಾಬು ಮೋಹಿತಕುಮಾರ ಬಾನರ್ಜಿಯವರಿಗೂ, ಹಿಂದೀ ಸಾಹಿತ್ಯ ವಿಚಾರ ಲೇಖನ ಬರೆದು ಪೂರೈಸಿದ ಶ್ರೀ ಭಿಡೆಯವರಿಗೂ, 'ಕೇರಳೀಯ'ರಿಗೂ ನಮ್ಮ ಅನಂತ ಧನ್ಯವಾದಗಳು. ಈ ಸಂದರ್ಭದಲ್ಲಿ ಹಿಂದೀ ಪ್ರಚಾರಕರಾದ ಶ್ರೀ ಜಮ್ನಾಪ್ರಸಾದ ಶ್ರೀವತ್ಸವರೂ ಶಾಂತಿನಿಕೇತನದಲ್ಲಿ ಕಲಾವ್ಯಾಸಂಗ ಮಾಡುತ್ತಿರುವ 'ಗೆಳೆಯರ ಗುಂಪಿ'ನ ಶ್ರೀ ನಾರಾಯಣಸಂಗಮರೂ ನಮಗೆ ಮಹೋಪಕಾರ ಮಾಡಿದ್ದಾರೆ. ಅವರ ಋಣವನ್ನು ನಾವು ತೀರಿಸಲಾರೆವು.

ಈ ಸಂಚಿಕೆಗೆ ಬೇಕಾದ ಪಡಿಯಚ್ಚುಗಳನ್ನು, ಪಡಿಯಚ್ಚಿಗಾಗಿ ಬೇಕಾದಾಗ ಚಿತ್ರಗಳನ್ನೂ ಒದಗಿಸಿ ಕೊಟ್ಟ ಶ್ರೀಯುತರುಗಳಾದ ಡಿ. ಕೆ. ಭಾರದ್ವಾಜ್, ಎಂ. ರಾಮರಾವ್, ಮುಂತಾದವರಿಗೂ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘಕ್ಕೂ ನಮ್ಮ ಧನ್ಯವಾದಗಳು. ಈ ಸಂಚಿಕೆಯಲ್ಲಿ ಕೊಟ್ಟಿರುವ ೯ ರೇಖಾಚಿತ್ರಗಳ ಮೂಲವನ್ನು ಸಿದ್ಧಗೊಳಿಸಿ ಕೊಟ್ಟ 'ಕಲಾಮಂದಿರ'ದ ಶ್ರೀ ಜಿ. ಶ್ರೀನಿವಾಸರಾಯರಿಗೂ, ಶ್ರೀ ಜೋಶಿಯವರಿಗೂ ನಾವು ಎಷ್ಟು ಕೃತಜ್ಞತೆ ತೋರಿಸಿದರೂ ಸಾಲದು. ಈ ಸಂದರ್ಭದಲ್ಲಿ ಶ್ರೀ ಎ. ಎನ್. ಸುಬ್ಬರಾಯರ ಸಹಾಯವೇನೂ ಸಾಮಾನ್ಯವಾದುದಲ್ಲ.

ಈ ಸಂಚಿಕೆಯಲ್ಲಿ ಏನಾದರೂ ಗುಣಗಳಿದ್ದರೆ ಅವುಗಳೆಲ್ಲ ನಾನಾ ಲೇಖಕರಿಗೂ ಕಲಾವಿದರಿಗೂ ಸೇರಿದ್ದು ಅದರ ದೋಷಗಳಿಗೆಲ್ಲ ಹೊಣೆಗಾರರು ನಾವು. ವಾಚಕ ಮಹಾಶಯರು ನಮ್ಮ ಯೋಗ್ಯತೆಯ ಮಿತಿಯನ್ನು ಅರಿತು, ನಮ್ಮ ಪ್ರಯತ್ನ ಫಲಕ್ಕಿಂತ, ನಮ್ಮ ಉದ್ದಿಶ್ಯಕ್ಕೆ ಸಹಾನುಭೂತಿ ತೋರಿಸಬೇಕೆಂದು ಪ್ರಾರ್ಥಿಸುವೆವು.

ಸಂಪಾದಕ.

ವಿ ಜ್ಞಾ ನ

೧. ವಿಜ್ಞಾನ ಪ್ರಗತಿಯೂ, ಜೀವನ ಪರಿವರ್ತನವೂ

ರಾವ ಬಹದ್ದೂರ್ ಬಿ. ವೆಂಕಟೇಶಾಚಾರ್, ಎಂ ಎ., ಸೆಂಟ್ರಲ್ ಕಾಲೇಜ್, ಬೆಂಗಳೂರು

೨. ಆಧುನಿಕ ವಿಜ್ಞಾನ ಭಂಡಾರಕ್ಕೆ ಭಾರತೀಯರ ಕಾಣಿಕೆ

ಶ್ರೀ ಪಿ. ಶ್ರೀನಿವಾಸರಾವ್ ಎಂ.ಎಸ್.ಸಿ., ಸೆಂಟ್ರಲ್ ಕಾಲೇಜ್, ಬೆಂಗಳೂರು

K 2406

GOVERNMENT ORIENTAL LIBRARY
No.....
Date.....
MYSORE.

ವಿಜ್ಞಾನ ಪ್ರಗತಿಯೂ ಜೀವನ ಪರಿವರ್ತನವೂ

(ರಾ|| ಶ್ರೀ ಬಿ. ವೆಂಕಟೇಶಾಚಾರ್, ಎಂ. ಎ., ಸೆಂಟ್ರಲ್ ಕಾಲೇಜ್, ಬೆಂಗಳೂರು)

ವಿಜ್ಞಾನಶಾಸ್ತ್ರವು ಪಾಶ್ಚಾತ್ಯರಲ್ಲಿ ಸುಮಾರು ಎರಡು ಶತಮಾನಗಳಿಂದ ಈಚೆಗೆ ಅಭಿವೃದ್ಧಿಯನ್ನು ಹೊಂದಿ ಈಗ ಉನ್ನತಸ್ಥಿತಿಯಲ್ಲಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಅಭಿವೃದ್ಧಿಯು ಅನೇಕ ವಿಧದಲ್ಲಿ ಜನಸೌಕರ್ಯಕ್ಕೆ ಕಾರಣವಾಯಿತು. ವಿದ್ಯುಚ್ಛಕ್ತಿಯ ದೀಪ, ತಂತಿಯು ಕೂಡ ಇಲ್ಲದೆ ದೂರಸ್ಥಳಗಳಿಗೆ ಆಶುವರ್ತಮಾನಪ್ರಚಾರ, (ವೈರ್‌ಲೆಸ್ ಟೆಲಿಗ್ರಫಿ) ವಿಮಾನದಲ್ಲಿ ವಾಯುಮಂಡಲ ಸಂಚಾರ, ಮೋಟಾರ್‌ಯಾನ, ಇವೇ ಮೊದಲಾದ ಅನೇಕವಿಧ ಅನುಕೂಲಗಳು ಈಗಿನ ಕಾಲದ ನಾಗರಿಕತೆಯ ಅಂಗಗಳಾಗಿವೆ. ಅಲ್ಲದೆ ಜನಗಳಿಗೆ ಉಪಯುಕ್ತವಾದ ಪದಾರ್ಥಗಳನ್ನು ತಯಾರಿಸುವ ಯಂತ್ರಗಳು ಬಹಳ ಅಭಿವೃದ್ಧಿಯನ್ನು ಹೊಂದಿ ಪೂರ್ವದಲ್ಲಿ ಜನರು ಕೈಯಿಂದ ಮಾಡುತ್ತಿದ್ದ ಪದಾರ್ಥಗಳೆಲ್ಲವೂ ಈಗ ಕಾಲವಿಳಂಬವಿಲ್ಲದೆ ಪ್ರಾಯಃ ಯಂತ್ರಗಳಿಂದಲೇ ಒದಗಿಸಲ್ಪಡುತ್ತಿವೆ.

ಆದರೆ ಈ ವಿಜ್ಞಾನಶಾಸ್ತ್ರದಿಂದ ಜನಗಳಿಗೆ ಉಂಟಾಗಿರುವ ಸೌಕರ್ಯೋಚ್ಚ್ರಯವು ದೃಶ್ಯಪ್ರಪಂಚ (ಫೆನಾಮೆನಲ್ ವರಲ್ಡ್) ದಲ್ಲಿನ ವಸ್ತುಸ್ವರೂಪ ಜ್ಞಾನೋತ್ಸುಕರಾದ - ವಿಜ್ಞಾನಶಾಸ್ತ್ರಾಭಿಜ್ಞರಿಂದ ಉಂಟಾಯಿತೇ ಹೊರತು ಕೇವಲ ಈ ಶಾಸ್ತ್ರದಲ್ಲಿ ನಿಷ್ಣಿತವಾದ ವಿಷಯವನ್ನು ತಿಳಿದುಕೊಂಡು ಜನಾನುಕೂಲಕ್ಕೆ ಉಪಯೋಗಿಸಲು ಹೊರಟವರಿಂದಲ್ಲ. ಮೈಕೇಲ್ ಫ್ಯಾರಡೇ ಎಂಬ ಆಂಗ್ಲೇಯ ವಿಜ್ಞಾನಶಾಸ್ತ್ರ ಪಂಡಿತನು ಸುಮಾರು ನೂರು ವರ್ಷಗಳ ಹಿಂದೆ ವೈಜ್ಞಾನಿಕ ಪರೀಕ್ಷೆಯೊಂದನ್ನು ಮಾಡಿದನು. ವೈದ್ಯುತ್ಪ್ರವಾಹಯುಕ್ತವಾದ ತಂತಿಯ ಸುತ್ತಲೂ ಅಯಸ್ಕಾಂತಸೂಚಿಯನ್ನು ನಿರೋಧಿಸುವ ಶಕ್ತಿಯು ಹರಡಿರುತ್ತದೆಂಬುದು ಫ್ಯಾರಡೇಗೆ ತಿಳಿದಿತ್ತು. ಆದರೆ ವೈದ್ಯುತ್ಪ್ರವಾಹವಿಲ್ಲದ ತಂತಿಯ ಬಳಿಗೆ ಅಯಸ್ಕಾಂತಶಲಾಕೆಯನ್ನು (ಬಾರ್-ಮ್ಯಾಗ್ನೆಟ್) ತಂದರೆ ತಂತಿಯಲ್ಲಿ ವೈದ್ಯುತ್ಪ್ರವಾಹವುಂಟಾಗುವುದೇ? ಎಂಬುದು ಫ್ಯಾರಡೆಯ ವೈಜ್ಞಾನಿಕ ಪರೀಕ್ಷೆಯ ಉದ್ದೇಶವಾಗಿತ್ತು. ಫ್ಯಾರಡೆಯ ಈ ಉದ್ಯೋಗವನ್ನು ಸಾಧಾರಣ ಲೋಕರೀತಿಯಿಂದ ನೋಡಿದರೆ ಪರತತ್ವವಿಚಾರದಲ್ಲಿ ನಿಪುಣರಾದ

(ಮೈಕೇಲ್ ಫ್ಯಾರಡೆ)

ನಮ್ಮ ಪೂರ್ವಿಕರು ಅನುಪಯುಕ್ತವಾದ ಕೆಲಸವನ್ನು ಉಪಹಾಸಮಾಡುವುದಕ್ಕೆ ಹೇಳಿರುವ ದೃಷ್ಟಾಂತವಾದ ಕಾಗೆಯ ಹಲ್ಲಿನ ಪರೀಕ್ಷೆಯನ್ನು ನೆನಪಿಗೆ ತರುವುದು. ಆದರೆ ನಿಜವಾಗಿ ಇದು ಹಾಗಲ್ಲ. ನಾವು ಎಲ್ಲಿ ನೋಡಿದರೂ ವಿದ್ಯುದ್ಯಂತ್ರಗಳಿಂದ ಈಗ ಉಂಟಾಗಿರುವ ಎಲ್ಲ ಜನಸೌಕರ್ಯಕ್ಕೂ ಸುಮಾರು ನೂರು ವರ್ಷಗಳ ಹಿಂದೆ ಫ್ಯಾರಡೆಯ ಪರೀಕ್ಷೆಯಿಂದ ನಿಶ್ಚಯವಾದ ವಿಷಯವೇ ಮೂಲಕಾರಣವಾಗಿದೆ. ಅನೇಕ ನಿದರ್ಶನಗಳನ್ನು ಇದಕ್ಕೆ ಕೊಡಬಹುದು. ತಿವನಸಮುದ್ರದ ಜಲಪಾತವನ್ನು ಉಪಯೋಗಿಸುವುದರಿಂದುಂಟಾದ ವಿದ್ಯುಚ್ಛಕ್ತಿಯ ಉಪಯೋಗ

ವೇ ಮೈಸೂರು ದೇಶದ ನಮ್ಮಗಳಿಗೆ ದೊಡ್ಡ ದೃಷ್ಟಾಂತವಾಗಿದೆ. ಆಂಗ್ಲೇಯ ದೇಶಕ್ಕೆ ಮುಖ್ಯ ಪ್ರಧಾನನಾಗಿದ್ದ ಗ್ಲಾಸ್ಟನ್ ಎಂಬಾತನಿಗೆ ಫ್ಯಾರಡೇಯು ತನ್ನ ವೈಜ್ಞಾನಿಕ ಪರೀಕ್ಷೆಯನ್ನು ತೋರಿಸಿದಾಗ ಆ ಮಂತ್ರಿವರ್ಯನು "ಇದೆಲ್ಲಾ ಸರಿಯೇ. ಈ ನಿನ್ನ ಪರೀಕ್ಷೆಯಿಂದ ನಿನು ಉಪಯೋಗ"ವೆಂದು ಕೇಳಿದನು. ಇದಕ್ಕೆ ಫ್ಯಾರಡೆಯು ತಟ್ಟನೆ ಈ ಉತ್ತರವನ್ನು ಕೊಟ್ಟನು "ಅಯ್ಯಾ ಬಂಡಾಸೊಂಡು ಬನ ಇದಕ್ಕೆ ನೀವು ತೆರಿಗೆಯನ್ನು ಹಾಕಬಹುದು." ಈ ಉತ್ತರವು ಎಷ್ಟರಮಟ್ಟಿಗೆ ನಿಜವಾದುದೆಂಬುದಕ್ಕೆ ಶಿವನಸಮುದ್ರದ ವಿದ್ಯುಚ್ಛಕ್ತಿಯು ಹರಡಿಕೆಯಿಂದ ಮೈಸೂರು ದೇಶಕ್ಕೆ ಬರುವ ಸುಮಾರು ಹತ್ತು ಲಕ್ಷ ರೂ. ಗಳ ವಾರ್ಷಿಕ ವರಮಾನವೇ ನಿದರ್ಶನವಾಗಿದೆ.

ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ನಾವು ಉಪಯೋಗಿಸುವ ವಿದ್ಯುಚ್ಛಕ್ತಿಯು ಬೆಳಕು ಬಂದು ಕಾಲದಲ್ಲಿ ಭೂಮಂಡಲದ ಮೇಲೆ ಬಿದ್ದ ಸೂರ್ಯನ ಕಾಂತಿಯ ಅಲ್ಪಭಾಗದ ಪರಿಣಾಮವೆಂದು ಹೇಳಬಹುದು. ಅದು ಹೇಗೆಂದರೆ ಸೂರ್ಯನ ಕಿರಣಗಳು ಸಮುದ್ರದ ನೀರನ್ನು ಆವಿಯಾಗಿ ಮಾಡಿ ಆಕಾಶದ ಮೇಲುಭಾಗಕ್ಕೆ ಎಳೆದಮೇಲೆ ಅಲ್ಲಿ ಆವಿಯು ಮೊದಲು ಮೇಘವಾಗಿ ನಂತರ ಉನ್ನತ ಪ್ರದೇಶಗಳಲ್ಲಿ ಮಳೆಯಾಗಿ ಬಿದ್ದ ನೀರನ್ನೇ ಶಿವನಸಮುದ್ರದ ಜಲಪಾತದ ಅಗ್ರ ಭಾಗದಲ್ಲಿ ಕಾವೇರೀನದಿಯು ತರುವುದು. ಈ ನೀರು ಉನ್ನತ ಪ್ರದೇಶದಲ್ಲಿರುವುದರಿಂದ ಕೆಲಸಮಾಡುವ ಶಕ್ತಿಯು ಇದಕ್ಕೆ ಉಂಟು. ವಿದ್ಯುಚ್ಛಕ್ತಿಯು ಕಾರ್ಖಾನೆಯು ನಿರ್ಮಿಸುವುದಕ್ಕೆ ಮೊದಲು ಸೋಲಾರ್‌ಗದಲ್ಲಿನ ನೀರು ಆದೋನೀದೇಶಕ್ಕೆ ರಭಸವಾಗಿ ಬೀಳುವುದರಿಂದ ಈ ಶಕ್ತಿಯು ಶಾಖವಾಗಿ ಪರಿಣಮಿಸಿ ನಮ್ಮಗೆ ಉಪಯೋಗವಿಲ್ಲದೆ ನಷ್ಟವಾಗುತ್ತಿತ್ತು. ಈಗಲಾದರೋ ಆ ಉನ್ನತ ಪ್ರದೇಶದಲ್ಲಿನ ನೀರು ದೊಡ್ಡ ಕಬ್ಬಿಣದ ಕೊಳವಿಯ ಮಾರ್ಗವಾಗಿ ಹೊರಟು ಕೆಳಭಾಗದಲ್ಲಿರುವ ಉದಕ ಯಂತ್ರಗಳನ್ನು (ವಾಟರ್-ಟರ್‌ಬೈನ್) ತಿರುಗಿಸುತ್ತದೆ. ಈ ಉದಕ ಯಂತ್ರಗಳು ವಿದ್ಯುಚ್ಛಕ್ತಿಯನ್ನುಂಟುಮಾಡುವ ಯಂತ್ರಗಳನ್ನು ತಿರುಗಿಸುವುದರಿಂದ ಉಂಟಾದ ವೈದ್ಯುತ್ತು ತಂತಿಯ ಮುಖೇಕ ಪ್ರವಹಿಸಿ ಬೆಂಗಳೂರು, ಕೋಲಾರದ ಗಣಿ ಮೊದಲಾದ ಸ್ಥಳಗಳಲ್ಲಿ ಉಪಯೋಗಿಸಲು ಅನುಕೂಲವಾದ ಪರಿಣಾಮವನ್ನು ಹೊಂದಿ ಬೆಳಕನ್ನು ಕೊಡುವುದು. ಅಲ್ಲದೆ ಗಣಿಯಲ್ಲಿ ಬಂಗಾರವನ್ನು ಕಲ್ಲಿನಿಂದ ಬೇರೆಮಾಡುವುದಕ್ಕೆ ಅವಶ್ಯಕವಾದ ಇತರ ಕೆಲಸಗಳನ್ನೂ ಮಾಡುತ್ತದೆ.

(ಸರ್ ಕೆ. ಶೇಷಾದ್ರಿ ಅಯ್ಯರ್)

ನಮ್ಮ ಈ ಭಾರತಭೂಮಿಯಲ್ಲಿ ವಿದ್ಯುಚ್ಛಕ್ತಿಯನ್ನು ಜಲಪಾತದ ಸಹಾಯದಿಂದುಂಟುಮಾಡಿ ಜನಸಾಮಾನ್ಯರುಪಯೋಗಿಸುವುದರಲ್ಲಿ ಮೈಸೂರುದೇಶದ ದಿವಾನ್ ಪದವಿಯನ್ನಲಂಕರಿಸಿದ್ದ ಸರ್ ಕೆ. ಶೇಷಾದ್ರಯ್ಯನವರು ಪ್ರಥಮಪ್ರವರ್ತಕರು. ಇವರ ದೂರದೃಷ್ಟಿಯ ಪ್ರಭಾವದಿಂದಲೇ ಶಿವನಸಮುದ್ರದ ವೈದ್ಯುತ್ ಕಾರ್ಖಾನೆಯು ಉಂಟಾಯಿತು.

ಕ್ಲಾರ್ಕ್ ನ್ಯಾಕ್ಸ್‌ವೆಲ್ ಎಂಬ ಮತ್ತೊಬ್ಬ ಆಗ್ಲೇಯ ವೈಜ್ಞಾನಿಕನು ಅರವತ್ತು ವರ್ಷಗಳ ಹಿಂದೆ ವಿದ್ಯುಚ್ಛಕ್ತಿಯೂ ಮತ್ತು ಬೆಳಕೂ (ಲೈಟ್) ಅತಿವಿಷ್ಣಾಣವಾಗಿ ಕಂಡು ಬಂದರೂ ನಿಜವಾಗಿಯೂ ಏಕಸ್ವಭಾವವುಳ್ಳವುಗಳೆಂಬ ನುತ (ಥಿಯರಿ) ವನ್ನು ಫ್ಯಾರಡೆಯು ವೈಜ್ಞಾನಿಕ ಪರೀಕ್ಷೆಯಿಂದ ನಿಶ್ಚಯಿಸಿ ತತ್ವಗಳನ್ನುಪಯೋಗಿಸಿ ಗಣಿತಶಾಸ್ತ್ರದ ಸಹಾಯದಿಂದ ನಿಶ್ಚಯಿಸಿದನು. ಬೆಳಕು ತನ್ನ ಮೂಲಸ್ಥಾ

ವಾದ ದೀಪದಿಂದ ಭೂತಾಕಾಶದಲ್ಲಿ (ಈಥರ್) ಅಲೆಗಳಂತೆ ಸುತ್ತಲೂ ಹರಡುವುದೆಂಬುದು ವೈಜ್ಞಾನಿಕರ ಅಭಿಪ್ರಾಯ. ವಿದ್ಯುಚ್ಛಕ್ತಿಯೂ, ಬೆಳಕೂ, ಮ್ಯಾಕ್ಸ್‌ವೆಲ್ ಹೇಳಿದಂತೆ ಏಕಸ್ವಭಾವವುಳ್ಳವುಗಳಾದರೆ, ವಿದ್ಯುಚ್ಛಕ್ತಿಯ ಅಲೆಗಳನ್ನೂ ಭೂತಾಕಾಶದಲ್ಲಿ ಹರಡುವಂತೆ ಮಾಡುವುದು ಸಾಧ್ಯವಾಗಬೇಕಾಯಿತು. ವಿದ್ಯುಚ್ಛಕ್ತಿಯ ಅಲೆಗಳನ್ನು ಹೆರ್ಟ್ಜ್ ಎಂಬ ಜರ್ಮನೀದೇಶದ ವೈಜ್ಞಾನಿಕನು ಗಲಲಲ ರಲ್ಲಿ ಉಂಟುಮಾಡಿ ಈ ಅಲೆಗಳ ಸ್ವಭಾವವನ್ನು ನಿರ್ಣಯಿಸುವ ಅನೇಕ ಪರೀಕ್ಷೆಗಳನ್ನು ಮಾಡಿ ಬೆಳಕಿನ ಅಲೆಗಳಿಗೂ (ಲೈಟ್ ವೇವ್ಸ್) ವಿದ್ಯುಚ್ಛಕ್ತಿಯ ಅಲೆಗಳಿಗೂ ಎಲ್ಲ ವಿಧದಲ್ಲಿಯೂ ಸಾಮ್ಯವನ್ನು ನಿದರ್ಶನಗೊಳಿಸಿದನು. ಈ ಪರೀಕ್ಷೆಗಳೆಲ್ಲಾ ಕೇವಲ ವಸ್ತುತತ್ವ ವಿಚಾರದಲ್ಲಿ ಪರಿಣಮಿಸಿದವು. ಶುದ್ಧ ವೈಜ್ಞಾನಿಕಾಭಿಜ್ಞನಿಗೆ ಇಷ್ಟರಿಂದಲೆ ತೃಪ್ತಿ. ವಿದ್ಯುಚ್ಛಕ್ತಿಯನ್ನು ಅಲೆಗಳಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕಳುಹಿಸಬಹುದಾದರೆ, ತಂತಿಯ ಸಹಾಯವಿಲ್ಲದೆಯೇ ವಿದ್ಯುಚ್ಛಕ್ತಿಯ ಸಹಾಯದಿಂದ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ತಮಾನವನ್ನು ವಿದ್ಯುದಲೆಗಳ ಸಹಾಯದಿಂದ ಕಳುಹಿಸುವುದು ಸಾಧ್ಯವಾಗಬೇಕು.



(ಆಶುವಾರ್ತೆಯನ್ನು ಕಳಿಸುವ ಮತ್ತು ತರಿಸುವ ಯಂತ್ರೋಪಕರಣಗಳು)

ಈ ವಿಷಯಕ್ಕೆ ಬಹುದಿವಸ ಅನೇಕ ವೈಜ್ಞಾನಿಕ ಪಂಡಿತರು ನಡೆಸಿದ್ದರಿಂದ ತಂತಿಯಿಲ್ಲದ ಆಶ್ಚರ್ಯಮಾನ ಪ್ರಚಾರವು (ವಯರ್‌ಲೆಸ್ ಟೆಲಿಗ್ರಫಿ) ಸಾಧ್ಯವಾಯಿತು. ಸಾವಿರಾರು ಮೈಲಿ ದೂರದಲ್ಲಿರುವ ದೇಶಗಳ ಜನರೊಂದಿಗೆ ಎದುರಿಗೆ ಕುಳಿತಿರುವ ಜನಗಳೊಂದಿಗೆ ಹೇಗೋಹಾಗೆ ಭಾಷಣವನ್ನು ನಡಿಸಬಹುದು. ಕಲ್ಕತ್ತಾ ಪಟ್ಟಣದಲ್ಲಿನ ಒಂದು ಮಂದಿರದಲ್ಲಿ ನಡೆಯುವ ಸಂಗೀತವಾಗಲಿ ಉಪನ್ಯಾಸವಾಗಲಿ ಬೆಂಗಳೂರಿನಲ್ಲಿರುವವರು ಅದೇಕಾಲದಲ್ಲಿಯೇ ಕೇಳಬಹುದು. ವಿಜ್ಞಾನ ಶಾಸ್ತ್ರದಿಂದುಂಟಾಗಿರುವ ಅತ್ಯಾಶ್ಚರ್ಯಕರವಾದ ಈ ಜನಸೌಕರ್ಯಕ್ಕೆ, ಪ್ರಯೋಜನವನ್ನಪೇಕ್ಷಿಸದೇ ಕೇವಲ ವಸ್ತು ತತ್ವವನ್ನೇ ವಿಚಾರಮಾಡುವುದಕ್ಕೆ ಹೊರಟ ಪಾಶ್ಚಾತ್ಯರಲ್ಲಿನ ಪ್ರಯತ್ನವೇ ಮೂಲಕಾರಣವಾಗಿದೆ.

ಇಷ್ಟಲ್ಲದೆ ವಾಯುಮಂಡಲದಲ್ಲಿ ಸಂಚರಿಸಬೇಕೆಂಬ ಅಭಿಲಾಷೆಯಿಂದ ಬಹುಜನ ಪಾಶ್ಚಾತ್ಯ ಮತ್ತು ಅಮೆರಿಕಾ ದೇಶಸ್ಥರು ಯಂತ್ರಗಳನ್ನು ನಿರ್ಮಿಸಲು ಪ್ರಯತ್ನಪಟ್ಟರು. ಅನೇಕರಿಗೆ ಈ ಪ್ರಯತ್ನಗಳು ನಿಷ್ಫಲವಾದವು. ಪ್ರಥಮದಲ್ಲಿ ಆಕಾಶದಲ್ಲಿ ಸಂಚರಿಸುವ ಕಾಲದಲ್ಲಿ ಯಂತ್ರವನ್ನು ನಿರೋಧಿಸಲು ಶಕ್ತರಾಗದೆ ಅಲ್ಲಿಂದ ಕೆಳಗೆ ಬಿದ್ದು ಕೆಲವರು ಮೃತರಾದರು. ಆದರೂ ಈ ಜನರು ತಮ್ಮ ಸೋಲಿನಿಂದ ನಿರುತ್ಸಾಹರಾಗದೆ ಅತಿಶಯವಾದ ಪ್ರಯತ್ನವನ್ನು ಮಾಡಿ ವಿಮಾನ ಸಂಚಾರವನ್ನು ಸಾಧಿಸಿರುತ್ತಾರೆ. ಈ ವಿಮಾನಗಳಲ್ಲಿ ಹಾರುವ ಆಕಾಶಯಾನ (ಏರೋಪ್ಲೇನ್) ವೆಂತಲು, ಆಕಾಶದ ಹಡಗೆಂತಲೂ (ಏರ್‌ಷಿಪ್ ಅಥವಾ ಜೆಪ್ಪಲಿನ್) ಎರಡು ಪ್ರಕಾರ. ಆಕಾಶಯಾನವು ಪಕ್ಷಿಗಳು ರೆಕ್ಕೆಯ ಸಹಾಯದಿಂದ ಹಾರುವಂತೆ, ಯಂತ್ರದ ಸಹಾಯದಿಂದ ಹಾರುವುದು. ದೂರದಲ್ಲಿ ಸಂಚರಿಸುತ್ತಿರುವ ಆಕಾಶಯಾನವನ್ನು ನೋಡಿದರೆ ಅದು ಹಾರುತ್ತಿರುವ ಪಕ್ಷಿಯಂತೆ ಕಾಣುವುದು. ಈ ಯಾನ ನಿರ್ಮಾಣವು ಹೇಗೆ ಸಾಧ್ಯವಾಯಿತೆಂದು ವಿಚಾರಮಾಡಿದರೆ ಜಲಜನಶಾಸ್ತ್ರ (ಹೈಡ್ರೊ ಡೈನೆಮಿಕ್ಸ್) ವಿಚಾರದಿಂದ ವೈಜ್ಞಾನಿಕರು ನಿಶ್ಚಯಿಸಿದ ತತ್ವಗಳೇ ಮೂಲಕಾರಣವೆಂದು ಹೇಳಬೇಕು. ಘಂಟೆಗೆ ಇನ್ನೂರು ಮೈಲಿಗಳಿಗೆ ಕಮ್ಮಿಯಿಲ್ಲದಂತೆ ಆಕಾಶಯಾನವು ಹಾರುವುದು. ಯಾನವು ಮೇಲಕ್ಕೆ ಹೋಗುವ ಕಾಲದಲ್ಲಿ ಒಳಗೆ ಕೂತವನಿಗೆ ಭೂಮಿಯು ವೇಗದಿಂದ ಕೆಳಗೆ ಹೋಗುವಂತೆ ಕಾಣುವುದಲ್ಲದೆ ಅಪೂರ್ವವಾದ ವಿಚಿತ್ರಾನುಭವವು ಉಂಟಾಗುವುದು.

ಕರಾಚಿ ಪಟ್ಟಣದಿಂದ ಇಂಗ್ಲಂಡಿಗೆ ಆಕಾಶಯಾನದ ಮೂಲಕ ಪ್ರತಿವಾರವು ಮೇಲ್ (ಟಪ್ಪಾಲು) ಹೋಗುವುದು. ಈ ಪ್ರಯಾಣಕ್ಕೆ ನಾಲ್ಕು ಐದು ದಿನಗಳ ಮೇಲೆ ಬೇಕಾಗಿಲ್ಲ. ಯಾನವು ಆಕಾಶದಲ್ಲಿ ಸಂಚರಿಸುವಾಗ ಕೆಳಗಿನ ಭೂಭಾಗಗಳ ಭಾವಚಿತ್ರಗಳನ್ನು ತೆಗೆಯುತ್ತಾರೆ. ಹೀಗೆ ಭೂಸಂಚಾರದಿಂದ ದುರ್ಗಮವಾದ ಸ್ಥಳಗಳ ಸ್ವರೂಪವು ತಿಳಿಯುವುದಕ್ಕೆ ಅವಕಾಶವಾಗುತ್ತದೆ. ಕಳೆದ ದೊಡ್ಡ ಯುದ್ಧದಲ್ಲಿ ಉಭಯ ಪಕ್ಷದವರೂ, ತಮ್ಮ ಶತ್ರುಗಳು ಯುದ್ಧಕ್ಕಾಗಿ ಆಕ್ರಮಿಸಿದ ಪ್ರದೇಶದಲ್ಲಿ ಏರ್ಪಡಿಸಿದ್ದ ಸನ್ನಾಹವನ್ನು ಆಕಾಶಯಾನದಿಂದ ತೆಗೆದ ಭಾವಚಿತ್ರಗಳನ್ನು ಪರೀಕ್ಷಿಸುವದರ ಮೂಲಕ ತಿಳಿಯುತ್ತಿದ್ದರು.

ಆಕಾಶ ಹಡಗು ಆಕಾಶಯಾನಕ್ಕಿಂತ ಬಹು ದೊಡ್ಡದು. ಬಹು ಜನರು ಇದರಲ್ಲಿ ಕುಳಿತು ಪ್ರಯಾಣ ಮಾಡಬಹುದು. ನೀರಿನಮೇಲೆ ಹೋಗುವ ಈಗಿನ ಹಡಗುಗಳಲ್ಲಿರುವ ಭೋಜನಶಾಲೆ, ವಿಹಾರ ಪ್ರದೇಶವೇ ಮೊದಲಾದ ಸೌಕರ್ಯಗಳೆಲ್ಲವೂ ಆಕಾಶ



(ಆಕಾಶದ ಹಡಗು ಅಥವಾ ಜೆಪ್ಪೆಲಿನ್)

ಹಡಗಿನಲ್ಲಿರುತ್ತವೆ. ಆಕಾಶದಲ್ಲಿ ಸಂಚಾರ ಮಾಡುವ ರೀತಿಯಲ್ಲಿ ಹಡಗಿಗೂ ಯಾನಕ್ಕೂ ವ್ಯತ್ಯಾಸವುಂಟು. ನಮ್ಮ ಸುತ್ತಲೂ ಇರುವ ಗಾಳಿಗಿಂತಲೂ ಹಗುರವಾದ ವಾಯುವನ್ನೊಳಗೊಂಡ ತನ್ನ ಒಂದು ಭಾಗದ ಸಹಾಯದಿಂದ ಮೇಲಕ್ಕೆ ತಾನೇ ಏಳುವುದು. ಅಪೇಕ್ಷಿತವಾದ ಮಾರ್ಗದ ಸಂಚಾರವು ಒಳಗಿನ ಯಂತ್ರವನ್ನು ನಡಿಸುವುದರಿಂದ ಸಾಧ್ಯವಾಗುತ್ತದೆ. ಆಕಾಶ ಹಡಗಿನಲ್ಲಿ ಉಪಯೋಗಿಸುವ ವಾಯುವು ಜಲಜನಕ (ಹೈಡ್ರ

ಜಿನ್) ಅಥವಾ ಹೀಲಿಯಂ. ಜಲಜನಕವು ವಾಯುಗಳ ಲ್ಲೆಲ್ಲಾ ಬಹು ಹಗುರವಾದದ್ದು. ಆದರೆ ಇದು ವಾಯುಮಂಡಲದಲ್ಲಿರುವ (ಅಟ್‌ಮಸ್‌ಫಿಯರ್) ಆಮ್ಲಜನಕದೊಡನೆ ಸೇರಿ ಉರಿದು ನೀರನ್ನುಂಟುಮಾಡುವ ಸ್ವಭಾವವುಳ್ಳವಾದ್ದರಿಂದ ಬಹುವೇಳೆ ಇದು ಹಡಗಿಗೆ ಅಪಾಯವನ್ನುಂಟುಮಾಡುವುದು- ಆಂಗ್ಲೇಯರು ಬಹಳ ದೊಡ್ಡದಾದ ಒಂದು ಆಕಾಶ ಹಡಗನ್ನು (ಆರ್. ೧೦೧) ಪುಷ್ಕಳ ಹಣವ್ಯಯಮಾಡಿ ನಿರ್ಮಿಸಿದರು. ಹಡಗಿನ ಒಳಗೆ ಜನಗಳಿಗೆ ಬೇಕಾದ ಎಲ್ಲ ಸೌಕರ್ಯವೂ ಅರಮನೆಗಳಲ್ಲಿರುವ ಸೌಕರ್ಯವನ್ನು ನೆನಪಿಗೆ ತರುವ ಹಾಗಿತ್ತು. ಈ ಹಡಗು ಕಳದ ವರುಷದ ಅಕ್ಟೋಬರ್ ತಿಂಗಳು ಐದನೇ ತಾರೀಖಿನಲ್ಲಿ ಇಂಡಿಯಾ ದೇಶಕ್ಕೆ ಪ್ರಯಾಣ ಮಾಡಿ ಫ್ರಾನ್ಸ್ ದೇಶದ ಬೊವೇ ಎಂಬ ಪಟ್ಟಣದ ಸಮೀಪದಲ್ಲಿ ಬಿರುಗಾಳಿಯಲ್ಲಿ ಕೆಳಗೆ ಹಾರುತ್ತಿರುವಾಗ ಒಂದು ಗುಡ್ಡಕ್ಕೆ ತಗಲಿ ಜಲಜನಕವು ಹತ್ತಿಕೊಂಡು ಉರಿದು ನಾಶವಾಯಿತು. ಪ್ರಖ್ಯಾತರಾದ ನಲವತ್ತೇಳು ಜನ ಆಂಗ್ಲೇಯರು ಮರಣ ಹೊಂದಿದರು. ಇಂತಹ ಅನಾಹುತವಾದರೂ ಹಿಂಜರಿಯದೆ ಆಕಾಶ ಹಡಗು ಅಪಾಯವಿಲ್ಲದೆ ವಾಯುಮಂಡಲದಲ್ಲಿ ಸಂಚರಿಸುವುದನ್ನು ವೈಜ್ಞಾನಿಕ ಶಿಲ್ಪಿಗಳು ಕೈಗೂಡಿಸುವರೆಂಬುವದರಲ್ಲಿ ಸಂಶಯವಿಲ್ಲ. ಹಿಂದೆ ಹೇಳಿದ ಹೀಲಿಯಂ ಎಂಬ ವಾಯುವು ಯಾವ ಪದಾರ್ಥದಿಂದಲೇ ಆಗಲಿ ಸೇರಿ ಜಲಜನಕದ ಹಾಗೆ ಉರಿಯುವುದಿಲ್ಲವಾದ್ದರಿಂದ, ಈ ಗಾಳಿಯನ್ನು ಜಲಜನಕಕ್ಕೆ ಬದಲು ಉಪಯೋಗಿಸುವುದರಿಂದ ಆಕಾಶ ಹಡಗಿಗೆ ಅಪಾಯವು ಬಹುಮಟ್ಟಿಗೆ ಕಮ್ಮಿಯಾಗುವುದು.

ವಿಜ್ಞಾನಶಾಸ್ತ್ರದ ಅಭಿವೃದ್ಧಿಯಿಂದುಂಟಾಗಿರುವ ಸರ್ವ ಸೌಕರ್ಯವನ್ನೂ ನಿರೂಪಿಸುವುದು ಲೇಖನ ಕರ್ತರ ಅಭಿಪ್ರಾಯವಲ್ಲ. ಅಂತಹ ಪ್ರಯತ್ನವು ಒಂದು ದೊಡ್ಡ ಗ್ರಂಥವನ್ನು ಬರೆಯುವುದರಿಂದ ಕೂಡ ಪೂರೈಸಲು ಸಾಧ್ಯವಾಗಲಾರದು. ಪ್ರಕೃತ ನಮ್ಮ ಭಾರತ ಭೂಮಿಯಲ್ಲಿ ವಿಜ್ಞಾನಶಾಸ್ತ್ರದ ಅಭಿವೃದ್ಧಿಯು ಅತ್ಯಾವಶ್ಯಕ. ಪಾಶ್ಚಾತ್ಯರ ಮತ್ತು ಅಮೇರಿಕಾ ದೇಶದವರ ಔನ್ನತ್ಯಕ್ಕೆ ವೈಜ್ಞಾನಿಕ ಶಾಸ್ತ್ರದಲ್ಲಿ ಬಹುಕಾಲದಿಂದ ಅವರಿಗಿರುವ ಉತ್ಸಾಹವೇ ಮುಖ್ಯ ಕಾರಣ. ನಮ್ಮ ದೇಶದಲ್ಲಾದರೋ ಈ ಶಾಸ್ತ್ರದಲ್ಲಿ ಉತ್ಸಾಹವು ಈಚೆಗೆ ಉಂಟಾಯಿತು. ಮುಂದೆ ಇತರ ದೇಶದವರ ಸಮನಾಗಿ ನಾವು ಇರಬೇಕಾದರೆ ವಿಜ್ಞಾನಶಾಸ್ತ್ರದ ಅಭಿವೃದ್ಧಿಯಲ್ಲಿ ದೇಶದ ಉಜ್ಜ್ವಲ್ಯದಲ್ಲಿ ಉದ್ಯುಕ್ತರಾಗಿರುವರು ಪ್ರಯತ್ನಿಸಬೇಕು. ಹೊರಗಿನ ದೇಶದಿಂದ ಬರುವ ಅನೇಕ ಪದಾರ್ಥಗಳನ್ನು ನಾವು ಕೊಳ್ಳುವುದರಿಂದ ದೇಶದ ಬಡತನವು ಬಹಳ ಹೆಚ್ಚಿದೆ. ಇದಕ್ಕೆ ಔಷಧ ವಿಜ್ಞಾನ ಶಾಸ್ತ್ರದ ಅಭಿವೃದ್ಧಿಯಲ್ಲಲ್ಲದೆ ಬೇರೆ ಇಲ್ಲ. ನಾವು ಈಗ ಯಾವ ಹೊರದೇಶದ ಪದಾರ್ಥಗಳನ್ನು ಕೊಳ್ಳುತ್ತಿದ್ದೇವೊ ಅವುಗಳನ್ನು ತಯಾರ್ಮಾಡುವ ರೀತಿಯನ್ನು ಕಲಿತುಬರುವುದಕ್ಕೆ ನಮ್ಮ ದೇಶದವರನ್ನು ಯೂರೋಪ್ ಅಥವಾ ಅಮೇರಿಕ ದೇಶಕ್ಕೆ ಕಳುಹಿಸಿದರೆ ಸಾಕೆಂದು ಕೆಲವರ ಅಭಿಪ್ರಾಯ. ಇದು ಸಾಲದು. ಭರತವರ್ಷದಲ್ಲಿ ಕೇವಲ ವಸ್ತುತತ್ವವನ್ನೇ ತಿಳಿಯಬೇಕೆಂಬ ಉತ್ಸಾಹವುಳ್ಳ ವಿಜ್ಞಾನ ಶಾಸ್ತ್ರಾಭಿಜ್ಞರು ಇದ್ದ ಹೊರತು ದೇಶದ ಏಳಿಗೆಯು ಉಂಟಾಗಲಾರದು. ಈ ತತ್ತ್ವವನ್ನು ತಿಳಿದಿರುವುದರಿಂದಲೇ ಅನೇಕ ಪಾಶ್ಚಾತ್ಯ ಕೈಗಾರಿಕೆ ಸಂಘದವರು ಶುದ್ಧ ವೈಜ್ಞಾನಿಕರನ್ನು ಬಹಳ ಸಂಬಳ ಕೊಟ್ಟು ಇಟ್ಟಿರುತ್ತಾರೆ. ಹಿಂದೆ ಈ ಲೇಖನದಲ್ಲಿ ಕೊಟ್ಟಿರುವ ಒಂದೆರಡು ದೃಷ್ಟಾಂತಗಳಿಂದ ಕೈಗಾರಿಕೆ ಸಂಘದವರ ಇಂತಹ ಹಣವ್ಯಯವು ಎಷ್ಟು ಲಾಭವನ್ನು ತಂದುಕೊಡುವುದೆಂಬುದು ವ್ಯಕ್ತವಾಗುತ್ತೆ. ನಮ್ಮ ಭರತಖಂಡದಲ್ಲಿಯೂ ಅಲ್ಪಕಾಲದಲ್ಲೇ ವೈಜ್ಞಾನಿಕಶಾಸ್ತ್ರವು ಅಭಿವೃದ್ಧಿಯಾಗಿ ಅದರಿಂದ ದೇಶದ ಬಡತನವು ಹೋಗಿ ಪಾಶ್ಚಾತ್ಯ ದೇಶಗಳಂತೆ ಭರತಖಂಡವೂ ಐಶ್ವರ್ಯದಿಂದ ಉನ್ನತಸ್ಥಿತಿಯನ್ನು ಹೊಂದುತ್ತೆಂಬುವುದರಲ್ಲಿ ಸಂಶಯವಿಲ್ಲ.

ವಿಜ್ಞಾನಪ್ರಪಂಚಕ್ಕೆ ಭಾರತೀಯರ ಕಾಣಿಕೆ

(ಶ್ರೀ ಪಿ. ಶ್ರೀನಿವಾಸರಾವ್, ಎಂ. ಎಸ್. ಸಿ., ಸೆಂಟ್ರಲ್ ಕಾಲೇಜ್, ಬೆಂಗಳೂರು)

"ಪರತತ್ತ್ವವನರಿವೊಡೆಯುಂ, ಸಿರಿಯಂ ಸುಖಮುಂ ಸುಕೀರ್ತಿಯಂ ಪಡೆವೊಡೆಯುಂ।
ಅರಿಭೀತಿಯಪಡೆವೊಡೆಯುಂ, ತಿರೆಯೋಳ್ ವಿಜ್ಞಾನಮೊಂದೆ ಸಾಧನಮುಲ್ಕೆ" ॥

—ವಸಂತಕುಸುಮಾಂಜಲಿ.

ಕಳೆದವರ್ಷ ನವೆಂಬರ್ ತಿಂಗಳಲ್ಲಿ, ಸ್ವೀಡನ್ ದೇಶದಲ್ಲಿನ ನೋಬೆಲ್ ಒಡುಮಾನ ಸಮಿತಿಯವರು, ಈ ಸಲದ ಪಾರಿತೋಷಕವನ್ನು ಸರ್ ಚಂದ್ರಶೇಖರ ವೆಂಕಟರಾಮನ್‌ರವರಿಗೆ ಸಲ್ಲಿಸಬೇಕೆಂದು ತೀರ್ಮಾನಿಸಿದರು. ಭೌತಿಕಶಾಸ್ತ್ರದಲ್ಲಿ ಇವರು ಕಂಡುಹಿಡಿದ ನೂತನವಾದ "ರಾಮನ್ ಎಫೆಕ್ಟ್" ಎಂಬ ವಿಚಾರವು ಪ್ರಪಂಚದ ನಾನಾಭಾಗಗಳಲ್ಲಿದ್ದ ಭೌತಿಕ ಶಾಸ್ತ್ರಜ್ಞರ ದೃಷ್ಟಿಯನ್ನು ಭರತಖಂಡದ ಕಡೆಗೆ ಸೆಳೆಯಿತು. ಒಡನೆಯೇ ನೋಬೆಲ್ ಪಾರಿತೋಷಕವೂ ಇವರ ಹಸ್ತಗತವಾಯಿತು. ವಿಜ್ಞಾನದ ದೃಷ್ಟಿಯಿಂದ ಮಾತ್ರ ನೋಡಿದಲ್ಲಿ ಇದು ಆಧುನಿಕ ಭಾರತ ಚರಿತ್ರೆಯಲ್ಲಿ ಒಂದು ಘಟ್ಟವೆನ್ನಬಹುದು. ಬಹುಮಾನ ಪ್ರದಾನವು ರಾಮನ್ ಮಹಾಶಯರೊಬ್ಬರಿಗೇ ಆಲ್ಲದೆ ಸಮಸ್ತ ಭರತಖಂಡಕ್ಕೇ ವಿಜ್ಞಾನ ಪ್ರಪಂಚವು ಮಾಡಿದ ಸತ್ಕಾರವೆನ್ನಬಹುದು.

ಭಾರತೀಯರ ಚೈತನ್ಯವು ಕ್ಷೀಣವಾಗಿ ಹೋಯಿತೆಂಬ ದುರಭಿಪ್ರಾಯವು ಪಾಶ್ಚಾತ್ಯರಲ್ಲಿ ಕೆಲವರಲ್ಲಿ ಪ್ರಬಲವಾಗಿತ್ತು. ಹಿಂದೂದೇಶೀಯರ ಸೃಷ್ಟಿಚಾತುರಿ, ಶಾಸ್ತ್ರಪರಿಶೋಧನ, ಆತ್ಮಸಾಧನ—ಇತ್ಯಾದಿಗಳೆಲ್ಲಾ ಪೂರ್ವಕಾಲದಲ್ಲಿ ಪ್ರಬಲವಾಗಿದ್ದಿರಬಹುದಾದರೂ ಈಗ ಮಟ್ಟಿಗೆ ಅವುಗಳನ್ನು ಪ್ರತಿಪಾದಿಸುವುದರಲ್ಲಿ ಅವುಗಳ ಪ್ರಚಾರವಾಗಿ ಮಾತನಾಡುವುದು ಕೂಡ ಅಶಕ್ಯಕೃತವೆಂದು ಭಾವಿಸುತ್ತಿದ್ದವರೆಲ್ಲರೂ ಲಜ್ಜಿತರಾಗಿತ್ತು ತಮ್ಮ ದುರಭಿಪ್ರಾಯವನ್ನು ನೀಗುವ ಸ್ವರ್ಣಯುಗವು ತಲೆದೋರುತ್ತಿರುವುದು. ವಿಜ್ಞಾನ ಕ್ಷೇತ್ರದಲ್ಲಿ ಅಸಮಾನ ಪ್ರತಿಭೆಯನ್ನು ತೋರಿ, ಪಾಶ್ಚಾತ್ಯರು ಮಾಡುವ ಪರಿಶೋಧನೆಗಳಿಗೆ ಯಾವ ತೆರದಲ್ಲೂ ಕಡಿಮೆಯಾಗದಂತೆ ಸಾಧಿಸಿರುವ, ಮತ್ತು ಜಗತ್ಪ್ರಸಿದ್ಧಿಯನ್ನು ಹೊಂದಿರುವ, ಜೀವನವನ್ನೇ ವಿಜ್ಞಾನಕ್ಕಾಗಿ ಧಾರೆಯೆರೆದಿರುವ ಆಧುನಿಕ ಭಾರತ ವಿಜ್ಞಾನವೇತ್ತರಲ್ಲಿ ಕೆಲವರ ಪರಿಚಯವನ್ನು ಕೊಂಡಿ ಇಲ್ಲಿ ಮಾಡಿಕೊಡಲು ಪ್ರಯತ್ನಮಾಡಲಾಗಿದೆ.

ಸರ್ ಚಂದ್ರಶೇಖರ ವೆಂಕಟರಾಮನ್

ಪ್ರಜ್ಞಾವಂತರಲ್ಲಿ ಅನೇಕ ಮಾದರಿಗಳುಂಟು. ಬಾಲ್ಯದಲ್ಲಿ ಬೂದಿಮುಚ್ಚಿದ ಕೆಂಡದಂತೆ ಸಾಮಾನ್ಯರಾಗಿದ್ದು, ಕೆಲವು ಕಾಲಾನಂತರ ಅಸಮಾನ ಪ್ರತಿಭೆಯನ್ನು ತೋರಿಸಿ ಲೋಕಮಾನ್ಯರಾಗುವರು ಕೆಲವರು. ಇದಕ್ಕೆ ವಿರೋಧವಾಗಿ ಮತ್ತೆ ಕೆಲವರು ಬಾಲ್ಯದಲ್ಲೇ ತಮ್ಮ ಕೌಶಲವನ್ನು ತೋರಿಸಿ ಬೇಗ ಮುಕ್ತಾಯವನ್ನು ಹೊಂದುವುದೂ ಉಂಟು. ಅದರೆ ಸದಾ

ಕಾಲದಲ್ಲೂ ವಿಕರೀತಿಯಾಗಿ ಪ್ರತಿಭೆಯು ಕಂದಿಕುಂ ದದಂತೆಕಾಣಬರುವುದು ಬಲು ಸ್ವಲ್ಪ ಮಂದಿಯಲ್ಲಿ ಮಾತ್ರ. ರಾಮನ್‌ರವರು ಈ ಶ್ರೇಷ್ಠತಮವಾದ ಪಂಗಡಕ್ಕೆ ಸೇರಿದವರೆಂದರೆ ಅತಿಶಯೋಕ್ತಿಯಾಗಲಾ ರದು. ೧೮೮೮ರಲ್ಲಿ ತಿರುಚನಾಪಲ್ಲಿಯಲ್ಲಿ ಇವರು ಹುಟ್ಟಿದರು. ಇವರ ತಂದೆಯವರು ವಿಶಾಖಪಟ್ಟಣ ದಲ್ಲಿ ಗಣಿತಶಾಸ್ತ್ರಾಧ್ಯಾಪಕರಾಗಿದ್ದರೆಂದು ತಿಳಿದು ಬರುತ್ತದೆ. ರಾಮನ್‌ರವರು ತಮ್ಮ ೧೫ನೆಯ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಮದ್ರಾಸು ವಿಶ್ವವಿದ್ಯಾಲಯದಲ್ಲಿ ಬಿ. ಎ ಮತ್ತು ಎಂ. ಎ ಪರೀಕ್ಷೆಗಳಲ್ಲಿ ಮೊದಲನೆಯ ಸ್ಥಾನವನ್ನು ಪಡೆದರು. ಇದ್ದಾದಮೇಲೆ ಇಂಡಿಯಾ ದೇಶದ ಆರ್ಥಿಕಶಾಖೆಯಲ್ಲಿ ಉನ್ನತ ಉದ್ಯೋಗಗ ಳಿಗೆ ನೇಮಿಸುವ ಸಲುವಾಗಿ ನಡೆದ ಪ್ರೈವೋಟಿ ಪರೀ ಕ್ಷೆಯಲ್ಲಿ ಇವರು ತೇರ್ಗಡೆ ಹೊಂದಿದರು. ಕಲ್ಕ ತ್ತಾಪಟ್ಟಣದಲ್ಲಿ ಕೆಲಸಮಾಡುವ ಸುಯೋಗವು ಇವರಿಗೆ ಒದಗಿತು.

ಆರ್ಥಿಕಶಾಖೆಯಲ್ಲಿ ಕೆಲಸಮಾಡುತ್ತಿದ್ದರೂ ಇವ ರಿಗೆ ಬಾಲ್ಯದಿಂದಲೂ ವಿಶೇಷ ಪ್ರಿಯವಾಗಿದ್ದ ಭೌತಿಕಶಾಸ್ತ್ರದ ಮೇಲಿನ ಮಮತೆಯು ಮಾತ್ರ ಕಡಿಮೆಯಾಗಲಿಲ್ಲ. ಕಲ್ಕತ್ತಾಪಟ್ಟಣದಲ್ಲಿ ಮಹೇಂ ದ್ರನಾಥ ಸರ್ಕಾರ ಎಂಬವರಿಂದ ಸ್ಥಾಪಿತವಾದ ವಿಜ್ಞಾನ ಪರಿಶೋಧನಾಲಯಕ್ಕೆ ಪ್ರತಿಸಾಯಂಕಾ ಲವೂ ತಪ್ಪದೆ ಹೋಗಿ ಅಲ್ಲಿ ಭೌತಿಕಶಾಸ್ತ್ರದಲ್ಲಿ ಪರಿಶೋಧನೆಗಳನ್ನು ಮಾಡುತ್ತಿದ್ದರು. ಕೆಲವು ದಿನ ಗಳಮೇಲೆ ಶಾಸ್ತ್ರಪರಿಶೋಧನೆಯಲ್ಲಿ ಇವರು ತೋ ರಿಸಿದ ಕೌಶಲ್ಯವನ್ನು ಕಂಡು ಕಲ್ಕತ್ತಾ ವಿಶ್ವವಿದ್ಯಾ ಲಯದವರು ಇವರನ್ನು ಪಲಿತ್ ಪ್ರೊಫೆಸರ್ ಆಗಿ ನೇಮಿಸಲು ಆತಿಸಿದರು. ರಾಮನ್‌ರವರೂ ವಿಜ್ಞಾ ನದ ಮೇಲಿನ ಶ್ರದ್ಧೆಯಿಂದ, ಹಣಕಾಸುಗಳನ್ನು ಲೆಕ್ಕಿ ಸದೆ, ಹೆಚ್ಚಾಗಿ ಶ್ರಮಪಡದೆ ಕೂತಲ್ಲಿಯೇ ವಿಶೇಷ ಹಣವನ್ನು ಸಂಪಾದಿಸಬಹುದಾಗಿದ್ದ ಆರ್ಥಿಕಶಾಖೆ ಯಲ್ಲಿ ಇವರು ಪಡೆದಿದ್ದ ಕೆಲಸವನ್ನು ಬಿಟ್ಟು, ಭೌತಿ ಕ ಶಾಸ್ತ್ರಾಧ್ಯಾಪಕರಾಗಿರಲು ಒಪ್ಪಿಕೊಂಡರು. ಪ್ರಕೃತಿಯ ರಹಸ್ಯಗಳನ್ನು ವಿಶೇಷ ಸಾಧನೆಯಿಂದ ತಿಳಿಯಲು ದೀಕ್ಷೆಯನ್ನು ವಹಿಸಿ, ಕೇವಲ ಐಹಿಕ ವಾದ ಐಶ್ವರ್ಯದ ಮೇಲೆ ಚಾಪಲ್ಯವನ್ನು ಬಿಟ್ಟ ಇವರ ಚರಿತ್ರೆಯು ಒಂದು ರೀತಿಯಲ್ಲಿ ಗೌತಮನ ತ್ಯಾಗವನ್ನು ನೆನಪಿಗೆ ತರುತ್ತದೆ.

ಇದರಸಂತರ ಇವರು ಒಂದೇಸಮನಾಗಿ ಹಗಲೂ ಇರುಳೂ ಶ್ರಮಪಟ್ಟು ನೂತನವಾದ ಅನೇಕ ವಿಷಯು ಗಳನ್ನು ಕಂಡುಹಿಡಿದು ವಿಜ್ಞಾನ ಪ್ರಪಂಚದ ಮೆಚ್ಚು ಗೆಯನ್ನು ಪಡೆದರು. ಇವರ ಅನುಪಮವಾವ ಜನಾ ನುರಾಗ, ಸರಳತೆಗಳು ಇವರ ಬುದ್ಧಿಕುಶಲತೆಗೆ ನೆರವಾಗಿ ನಿಂತು, ಇವರು ನಡೆಸತಕ್ಕ ವಿಜ್ಞಾನಕಾ ರ್ಯಕ್ಕೆ ಸಹಾಯವಾಗಿ ಸಲ್ಲಲು ಶಿಷ್ಯಮಂಡಲಯು ತಾನಾಗಿಯೇ ಸೃಷ್ಟವಾಯಿತು. ಇವರಲ್ಲಿ ಪ್ರತಿ ಯೊಬ್ಬರೂ ಇವರ ಹತ್ತಿರ ವಿದ್ಯಾರ್ಥಿಗಳಾಗಿದ್ದು, ಪದವೀಧರರಾದ ಮೇಲೂ ಇವರೊಂದಿಗೆ ಶಾಸ್ತ್ರಪರಿ ಶೋಧನಾಕಾರ್ಯದಲ್ಲಿ ನಿರತರಾಗಿರುವರು. ವಿಜ್ಞಾನ ಪ್ರಪಂಚದಲ್ಲಿ ವಿಶೇಷವಾಗಿ ಮನ್ನಣೆಯನ್ನು ಪಡೆದ ಇವರ "ರಾಮನ್ ಎಫೆಕ್ಟ್" ಎಂಬುವ ವಿಚಾರವನ್ನು, ತಮ್ಮ ಶಿಷ್ಯರಾದ ರಾಮನಾಥನ್, ಕೃಷ್ಣನ್ ಮೊದ ಲಾದವರ ಸಹಾಯದಿಂದ ಕಂಡು ಹಿಡಿದರು. ಈ ವಿಚಾರದಲ್ಲಿ ರಾಮನ್‌ರವರ ಮನೋವೃತ್ತಿಯು ಕೇವಲ ಆದರ್ಶನೀಯವಾದುದು. ವಿಜ್ಞಾನಲೋಕದ ಮೆಚ್ಚುಗೆಯೆಲ್ಲವೂ ತಮ್ಮ ಹಸರಿಗೇ ಸಲ್ಲುತ್ತಿರುವಕಾಲ ದಲ್ಲಿ ತಾವು ಆನಂದದಿಂದ ಸುಮ್ಮನೆ ಕೂತಿರದೆ, ಸಮಯ ದೊರತಾಗಲೆಲ್ಲಾ ತಾವು ಮಾಡಿದ ಪ್ರತಿ ಯೊಂದು ಉಪನ್ಯಾಸದಲ್ಲೂ, ತಮ್ಮ ಶಿಷ್ಯರಾದ ಕೃಷ್ಣನ್ ಮೊದಲಾದವರ ಶ್ರಮಸಹಿಷ್ಣುತೆ, ಶ್ರದ್ಧೆ ಮತ್ತು ಪ್ರತಿಭೆ ಇವುಗಳ ದೆಸೆಯಿಂದಲೇ ತಾವು ಈ ಪರಿಶೋಧನಾಕಾರ್ಯವನ್ನು ಸಾಧಿಸಲು ಅನುಕೂಲ ವಾಯಿತೆಂದು ಒತ್ತಿ ಹೇಳುತ್ತಿದ್ದಾರೆ. ಸ್ವಾಮಿಯ ಈ ತೆರನಾದ ಪ್ರೇಮವನ್ನು ಯಾವ ಶಿಷ್ಯನು ತಾನೇ ತನ್ನ ಜೀವಿತಕಾಲದಲ್ಲೆಲ್ಲಾ ನೆನಪಿಲ್ಲಿಟ್ಟು ಆನಂದಿಸದಿರನು!

ರಾಮನ್‌ರವರು, ವೈಜ್ಞಾನಿಕ ಪರಿಶೋಧನೆಗೆ ಕೈಹಾಕಿದ ಮೊದಲಲ್ಲಿ, ಶಬ್ದ, ಇದರ ಉತ್ಪತ್ತಿ-ವಿಶೇ ಷಗಳೇ ಮೊದಲಾದುವುಗಳನ್ನು ಪರೀಕ್ಷಿಸಿ ಮೃದಂಗ ಮೊದಲಾದ ಸಂಗೀತ ವಾದ್ಯಗಳ ಮರ್ಮಗಳನ್ನು ಪಾಶ್ಚಾತ್ಯಶಾಸ್ತ್ರಕಾರರ ವಿಧಿಗನುಸಾರವಾಗಿ ಕಂಡು ಹಿಡಿದರು. ಇದಾದಮೇಲೆ ಇವರು ಬೆಳಕು ವಸ್ತುವಿನ ದೆಸೆಯಿಂದ ಯಾವ ರೀತಿಯಲ್ಲಿ ದೆಸೆದೆಸೆಗೂ ವಿಭಾಗಿ ಸಲ್ಪಡುವುದೆಂಬುದನ್ನು (ಸ್ಕ್ಯಾಟರಿಂಗ್ ಆಫ್ ಲೈಟ್) ಸೂಕ್ಷಾರು ತೆರನಲ್ಲಿ ಪರೀಕ್ಷಿಸಿ, ಅಂತರಿಕ್ಷವು ನೀಲಿಯಾ ಗಿರುವದೇಕೆ, ಸಮುದ್ರಗಳು ನೀಲಿಯಾಗಿರುವುದೇಕೆ ಎಂ ಬ ಪ್ರಶ್ನೆಗಳಿಗೆ ಒಲು ಸಮಂಜಸವಾದ ಸಮಾಧಾನಗ

ಳನ್ನು ಕೊಟ್ಟರು. ಈ ಪರೀಕ್ಷೆಗಳನ್ನೇ ಮತ್ತು ಸ್ವಲ್ಪ ಮುಂದುವರಿಸಲು ಈಗ ಪ್ರಖ್ಯಾತಿಯನ್ನು ಪಡೆದಿರುವ ರಾಮನ್ ಎಫೆಕ್ಟ್ ಎಂಬುದು ಸಾಧಿಸಲ್ಪಟ್ಟಿತು. ಇದರ ಮುಖ್ಯ ಸಾರವನ್ನು ಹೀಗೆಂದು ಹೇಳಬಹುದು. ಪ್ರತಿಯೊಂದು ಪದಾರ್ಥವೂ ಒಂದೇ ಸಮನಾದ ಉದ್ದವುಳ್ಳ ಬೆಳಕಾದ ಅಲೆಗಳಿಂದ ಬೆಳಗಿಸಲ್ಪಟ್ಟರೆ, ಪದಾರ್ಥದಲ್ಲಿನ ಅಣುಗಳು (ಮ್ಯಾಟರ್ಸ್) ಮೇಲೆ ಬೀಳುತ್ತಿರುವ ಬೆಳಕಿನ ಕಿರಣದ ಅಣುಗಳೊಂದಿಗೆ ಸಂಯೋಗ ಹೊಂದುವಾಗ, ಬಿದ್ದ ಬೆಳಕೆ ಚದರಿಹೋಗುವುದು. ಈ ಬೆಳಕನ್ನು ಪರೀಕ್ಷಿಸಿದರೆ ಇದರಲ್ಲಿನ ಅಲೆಗಳು ರೂಪಾಂತರಗಳನ್ನು ಹೊಂದಿರುವುದನ್ನು ಕಾಣಬಹುದು. ಮತ್ತು ಅಲೆಗಳ ಉದ್ದದಲ್ಲಿ ತೋರಿಬರುವ ವ್ಯತ್ಯಾಸವನ್ನು ಅಳೆಯುವುದರಿಂದ ಬೆಳಕನ್ನು ಚದರಿಸಲು ಕಾರಣಭೂತವಾದ ಅಣುಗಳ ಗುಣಗಳನ್ನು ನಿರ್ಧರಿಸಬಹುದು. ವಿಜ್ಞಾನ ಪರಿಶೋಧಕರಿಗೆ, ಅದರಲ್ಲೂ ರಸಾಯನ ಶಾಸ್ತ್ರಾಧ್ಯಯನವನ್ನು ಮಾಡುವವರಿಗೆ ಅತ್ಯಂತ ಉಪಯುಕ್ತವಾದ ಸಾಧನವು ಈ ನೂತನ ಸಂಗತಿಯಿಂದ ಒದಗಿದೆಯೆಂದು ವಿಜ್ಞಾನವೇತ್ತರೆಲ್ಲರೂ ಒಪ್ಪಿರುವರು. ಜರ್ಮನಿ ದೇಶದ ಪ್ರಿಂಗ್ಸ್‌ಹೀವ್, ಅಮೇರಿಕದ ವುಡ್ ಮೊದಲಾದ ಜಗತ್ಪ್ರಸಿದ್ಧರಾದ ಪಂಡಿತರು ಧಾರಾಳವಾಗಿ ಹೊಗಳಿದಮೇಲೆ, ೧೯೨೪ನೇ ಸೆಪ್ಟಂಬರಿನಲ್ಲಿ ಪ್ರಪಂಚದ ನಾನಾ ಭಾಗಗಳಿಂದ ಪಂಡಿತೋತ್ತಮರೆಲ್ಲ ಬ್ರುಸ್ಸೆಲ್ ನಗರದಲ್ಲಿ ಸೇರಿ ರಾಮನ್ ರವರೊಂದಿಗೆ ಕಲೆತು ಈ ನೂತನ ವಿಚಾರವನ್ನು ಚರ್ಚಿಸಿ ಮೆಚ್ಚಿದಮೇಲೆ, ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ಸ್ವೀಡನ್ ದೇಶದ ನೋಬೆಲ್ ಪಾರಿತೋಷಕವನ್ನು ಇವರ ಶ್ರೇಷ್ಠತಮವಾದ ವೈಜ್ಞಾನಿಕ ಕಾರ್ಯಕ್ಕಾಗಿ ಕೊಡುವುದೆಂದು ನಿರ್ಧಾರವಾದಮೇಲೆ, ಭಾರತೀಯರಾದ ನಾವು ರಾಮನ್ ಅವರು ನಮ್ಮವರೆಂದು ಹೆಮ್ಮೆ ಪಡಬಹುದು! ಇಷ್ಟೇ ಅಲ್ಲದೆ ಕೆಲವು ದಿವಸಗಳ ಕೆಳಗೆ ಅವರು (ಬೆಂಗಳೂರಲ್ಲಿ) ಈಚಿಗೆ ನಡೆಸಿದ ಲೆಕ್ಕಾಚಾರದ ಪ್ರಕಾರ ಇಂಡಿಯಾ ದೇಶದಲ್ಲಿ ರತಕ್ಕ ಜನಸಮುದಾಯವು ಪ್ರಪಂಚದ ಒಟ್ಟಿನಲ್ಲಿನ ೫ ರಲ್ಲಿ ೧ ಭಾಗ. ಪ್ರತಿ ವರ್ಷವೂ ಸ್ವೀಡನ್ನಿನವರು ೫ ನೋಬೆಲ್ ಪಾರಿತೋಷಕಗಳನ್ನು ಕೊಡುವರು. ಅಂದಮೇಲೆ ಪ್ರತಿ ವರ್ಷವೂ ನಮ್ಮಲ್ಲಿ ಭರತಖಂಡಕ್ಕೆ ಒಂದು ಬಹುಮಾನವು ಬಂದೇ ಬರಬೇಕೆಂದು ಹಟವನ್ನು ಮಾಡಿ ಇಲ್ಲಿನವರು ಪ್ರಯತ್ನಿಸಬೇಕೆಂದು ಬಲು ಉತ್ಸಾಹದಿಂದ ಅಪ್ಪಣೆ ಕೊಡಿಸಿದರು. ಸ್ಫೂರ್ತಿದಾಯಕವಾದ ವಾಕ್ಯಗಳು! ಉಜ್ವಲ ದೇಶಾಭಿಮಾನ!

ಸರ್ ಜಗದೀಶಚಂದ್ರಬೋಸ್

ಭರತಖಂಡದ ಖ್ಯಾತಿಯನ್ನು ಪ್ರಪಂಚದಲ್ಲೆಲ್ಲಾ ಪ್ರಸರಿಸಲು ವಿಶೇಷ ಧೈರ್ಯ ಉತ್ಸಾಹಗಳಿಂದ ಶ್ರಮಪಟ್ಟವರಲ್ಲಿ ಜಗದೀಶಚಂದ್ರಬೋಸರು ಮೊದಲಿಗರೆನ್ನಬಹುದು. ಇವರು ಮೊದಲು ಭೌತಿಕಶಾಸ್ತ್ರದಲ್ಲಿ ನಿಪುಣತೆಯನ್ನು ಪಡೆದು ಕಳೆದ ಶತಮಾನದ ಉತ್ತರಾರ್ಧದಲ್ಲಿ ಹರ್ಟ್ಸ್ ಎಂಬವರಿಂದ ಕಂಡು ಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಅಲೆಗಳ ವಿಚಾರದಲ್ಲಿ ಅನೇಕ ಪರಿಶೋಧನೆಗಳನ್ನು ಮಾಡಿದರು. ಶಾಸ್ತ್ರಾಧ್ಯಯನದಲ್ಲಾಗಲಿ ಪರಿಶೋಧನಾಕ್ರಮದಲ್ಲಾಗಲಿ ಭಾರತೀಯರು ಇತರ ಯಾವ ದೇಶದವರಿಗೂ ಕಡಿಮೆಯಲ್ಲವೆಂಬುದನ್ನು ಇವರು ನಿಸ್ಸಂಕೋಚವಾಗಿ ಪ್ರಪಂಚಕ್ಕೆ ತೋರಿಸಿಕೊಟ್ಟರು. ಕೆಲವು ದಿನಗಳ ನಂತರ ಇವರು ವನಸ್ಪತಿ ಶಾಸ್ತ್ರದಲ್ಲಿ ಹೆಚ್ಚು ಪರಿಶ್ರಮವನ್ನು ಪಡೆದು, ತಮ್ಮ ಸ್ವಂತ ಕೌಶಲದಿಂದ ನಿರ್ಮಿಸಿದ ಅನೇಕ ಯಂತ್ರಗಳ ಸಹಾಯದಿಂದ ವಿಶ್ವದಲ್ಲಿನ ಸಮಸ್ತ ವಸ್ತುಗಳೂ ಇತರ ಪ್ರಾಣಿಗಳಂತೆಯೇ ಜೀವಭರಿತವಾಗಿವೆಯೆಂಬ ಅಂಶವನ್ನು ಕಂಡುಹಿಡಿದರು. ಮುಖ್ಯವಾಗಿ ಗಿಡಗಳು ಇತರ ಪ್ರಾಣಿಗಳಂತೆಯೇ ಜೀವನಕ್ಕೆ ಅನ್ವಯಿಸುವ ಸಕಲ ಅವಸ್ಥೆಗಳನ್ನೂ ಅನುಭವಿಸುವವು. ಇತರ ಜೀವಿಗಳಂತೆಯೇ ನಿದ್ದೆಹೋಗುವುವು. ನಿದ್ದೆ

ಚ್ಛಕ್ತಿಯಿಂದಾಗಲಿ ಉಷ್ಣಾಧಿಕ್ಯದಿಂದಾಗಲಿ ಅತ್ಯಂತ ಶೈತ್ಯದಿಂದಾಗಲಿ ತೊಂದರೆ ಮಾಡಿದಾಗ ಬಲು ಕಾತರಗೊಳ್ಳುವುವು. ಬೇರೆ ಬೇರೆ ತೆರನಾದ ವಿಷಸ್ಯಯೋಗಗಳನ್ನು ಮಾಡಿದರೆ ಜೀವವು ಯಾವ ರೀತಿಯಲ್ಲಿ ನಂದಿ ಹೋಗುವುದು ಇಂತಹ ಸ್ಥಿತಿಯಲ್ಲಿ ಇತರ ಜೀವಿಗಳಂತೆಯೇ ಹೃದಯದ ಕಾರ್ಯವು ಬರಬರುತ್ತ ನಿಧಾನವಾಗಿ ಕೊನೆಗೆ ನಿಂತೇ ಹೋಗುವಂತೆ ಸಸ್ಯದ ನಾಡಿಯೂ ನಿಧಾನವಾಗಿಯೂ, ಬಲು ಅಲ್ಪವಾಗಿಯೂ ಹೊಡೆದುಕೊಳ್ಳುತ್ತಾ ಕೊನೆಗೆ ನಿಂತುಹೋಗುವುದು. ಮಾದಕ ಪದಾರ್ಥಗಳ ಸೇವನೆಯಿಂದ ಇತರ ಜೀವಿಗಳಿಗೆ ನೆತ್ತಿಗೆ ಪಿತ್ತವೇರಿಬ ತೆರದಲ್ಲಿಯೇ ಗಿಡಗಳೂ ವಿಚಿತ್ರಾನುಭವವನ್ನು ಹೊಂದುವುವು. ಹೀಗೆ ಸಸ್ಯವರ್ಗಕ್ಕೂ ಪ್ರಾಣಿವರ್ಗಕ್ಕೂ ವ್ಯತ್ಯಾಸವು ಕೇವಲ ಬಂದು ವಿಚಾರದಲ್ಲಿ ಮಾತ್ರ. ಸಸ್ಯಗಳು ಸ್ವಾಭಾವಿಕವಾಗಿ ನಿಂತಲ್ಲೇ ನಿಂತಿರುವಾಗ ಪ್ರಾಣಿಗಳು ಚಲಿಸಬಲ್ಲವು. ಇದೊಂದನ್ನು ಬಿಟ್ಟರೆ ಇತರ ಸಕಲೇಂದ್ರಿಯ ವ್ಯಾಪಾರಗಳೂ ಸಸ್ಯಗಳಲ್ಲೂ ಜೀವಿಗಳಲ್ಲೂ ಒಂದೇ ರೀತಿಯಾಗಿದೆಯೆಂಬುದನ್ನು ವಿಶದವಾಗಿ ಕಣ್ಣಿಗೆ ಒತ್ತಿ ತೋರಿಸುವ ಪ್ರಸಿದ್ಧವಾದ ಕ್ರೆಸ್ಕೋಗ್ರಾಫ್, ಆಪ್ಟಿಕಲ್ ಸ್ಫಿಗ್ಮೋಗ್ರಾಫ್ ಮೊದಲಾದ ಅನೇಕ ಯಂತ್ರಗಳನ್ನು ನಿರ್ಮಿಸಿದ ಇವರ ಪ್ರತಿಭೆಗೆ ಸಮನಾದುದನ್ನು ಕಾಣುವುದು ಬಲು ಅಪೂರ್ವ.

ಪ್ರೊಫೆಸರ್ ಮೇಘನಾದ ಸಹ

ಪಾಶ್ಚಾತ್ಯರಲ್ಲಿ ಹಿಂದೂಸ್ಥಾನದ ವಿಚಾರದಲ್ಲಿ ಗೌರವ ಹೆಚ್ಚುವಂತೆ ಒತ್ತಾಯ ಪಡಿಸಲು ತಕ್ಕ ಶ್ರೇಷ್ಠತಮವಾದ ವೈಜ್ಞಾನಿಕ ಕಾರ್ಯವನ್ನು ಈ ಮಹನೀಯರು ಸಾಧಿಸಿರುವರು. ಬಂಗಾಳಾ ದೇಶದವರಾದ ಇವರು ಸಾಮಾನ್ಯ ಕುಟುಂಬದಲ್ಲಿ ಬೆಳೆದವರಾದರೂ ಅಸಾಧಾರಣವಾದ ಮೇಧಾವಿಗಳು. ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಎಂ. ಎಸ್. ಸಿ. ಪದವೀಧರರಾದಮೇಲೆ ಅಲ್ಲಿಯೇ ಭೌತಿಕಶಾಸ್ತ್ರ ಶಾಖೆಯಲ್ಲಿ ಸಹಾಯೋಪಾಧ್ಯಾಯರಾಗಿ ಕೆಲವುಕಾಲವಿದ್ದು ಅನಂತರ ವಿದ್ಯಾರ್ಥಿ ವೇತನವನ್ನು ಪಡೆದು ಜರ್ಮನಿ ಮೊದಲಾದ ದೇಶಗಳಲ್ಲಿ ಸುಪ್ರಸಿದ್ಧರಾದ ಬೋಹರ್, ಪ್ಲಾಕ್, ಇಯನ್‌ಸ್ಟೀನ್ ಮೊದಲಾದ ಪಂಡಿತರಲ್ಲಿ ಭೌತಿಕಶಾಸ್ತ್ರದಲ್ಲಿ ಉಚ್ಚ ಶಿಕ್ಷಣವನ್ನು ಪಡೆದು ಹಿಂದೂದೇಶಕ್ಕೆ ಬಂದು ಅಲಹಾಬಾದಿನಲ್ಲಿ ಭೌತಿಕ ಶಾಖೆಗೆ ಮುಖ್ಯ ಅಧ್ಯಕ್ಷರಾಗಿರುವರು.

ಮೊದಲು ಇವರು ವೈದ್ಯಾಸಿಕ ಕ್ಷೇತ್ರದಲ್ಲಿ 'ಎಲೆಕ್ಟ್ರಾನ್' ಅಂದರೆ ಏಮ್ಯುತ್ಕ್ಷಣದ ಗುಣವಿಶೋಧನೆಯ ವಿಚಾರದಲ್ಲಿ ತಮ್ಮ ಗಣಿತಶಾಸ್ತ್ರದ ನಿಪುಣತೆ ತೋರಿಸಿದರು. ಇದರ ನಂತರ ಇಯನ್‌ಸ್ಟೀನರ 'ರೆಲಿಟಿವಿಟಿ' ಅಥವಾ 'ಸಾಪೇಕ್ಷ ಸಿದ್ಧಾಂತ'ವನ್ನು ಜರ್ಮನಿ ಭಾಷೆಯಿಂದ ಇಂಗ್ಲೀಷ್ ಭಾಷೆಗೆ ಪರಿವರ್ತಿಸಿ ಸುಲಭ

ವಾಗಿ ಅರ್ಥವಾಗುವಂತೆ ಬರೆದರು. ಇವೆಲ್ಲಕ್ಕಿಂತಲೂ ಹೆಚ್ಚಿನದಾಗಿ ಇವರು ನಕ್ಷತ್ರಗಳ ಶಾಖೆ ಮತ್ತು ಅವುಗಳಿಂದ ಬರುವ ಬೆಳಕಿನಲ್ಲಿರತಕ್ಕ ವಿಶೇಷಗಳನ್ನು ಕುರಿತು ನಡೆಸಿದ ಪರಿಶೋಧನೆಗಳಿಂದ ಇವರ ಖ್ಯಾತಿಯು ದಿಕ್ಕು ದಿಶೆಗಳಲ್ಲೆಲ್ಲ ಪ್ರಸರಿಸಿತು. ಉಷ್ಣಾಧಿಕ್ಯದಿಂದ ಅಣುಗಳು, ಅದರಲ್ಲೂ ಈ ಅಣುಗಳು ಕಳುಹಿಸುವ ಬೆಳಕು ವ್ಯತ್ಯಾಸವನ್ನು ಹೊಂದುವ ಕ್ರಮವನ್ನು ಸಮಗ್ರವಾಗಿ ಚರ್ಚಿಸುವ ಇವರ ಪ್ರತಿಭೆಗೆ ನಿದರ್ಶನವೆಂದು ನಿರಾಯಾಸವಾಗಿ ಒಪ್ಪಿಕೊಳ್ಳಬಹುದಾದ ('ಟೆಂಪರೇಚರ್ ಐಯೊನೈಜೇಷನ್ ಅಂಡ್ ಸ್ಟೆಲ್ಲಾರ್ ಸ್ಪೆಕ್ಟ್ರಾ' ಎಂಬ ಹೆಸರಿನ) ಇವರ ಪರಿಶೋಧನೆಗಳು ವಿಜ್ಞಾನವೇತ್ತರ ಮೆಚ್ಚುಗೆಯನ್ನು ಪಡೆದು, ನಕ್ಷತ್ರಗಳ ವಿಚಾರದಲ್ಲಿ ನಮ್ಮ ತಿಳಿವಳಿಕೆಯನ್ನು ಬಹಳಮಟ್ಟಿಗೆ ಮುಂದುವರಿಸಿವೆ. ಅಧುನಿಕ ಖಗೋಳಶಾಸ್ತ್ರ ಪಾರಂಗತರಲ್ಲಿ ಪ್ರಖ್ಯಾತರೆನಿಸಿದ ಎಡ್ಡಿಂಗ್‌ಟನ್‌ರವರು ಬರೆದಿರುವ 'ದಿ ಇನ್‌ಟ

ರ್ಲ್ ಕಾನ್ಸ್ಟಿಟ್ಯೂಷನ್ ಆಫ್ ಸ್ಟಾರ್ಸ್' (ನಕ್ಷತ್ರಗಳ ಗರ್ಭರಚನೆ) ಎಂಬ ಪುಸ್ತಕದಲ್ಲಿ (ಪುಟ ೩೮೫) ಮಹಾರವರು ಖಗೋಳ ಶಾಸ್ತ್ರಾಧ್ಯಯನಕ್ಕೆ ಮಾಡಿರುವ ಉಪಕಾರವನ್ನು ಸ್ಮರಿಸಿದ್ದಾರೆ. ಅದೇ ಗ್ರಂಥದಲ್ಲಿ ಮತ್ತೊಂದು ಕಡೆ (ಪುಟ ೩೪೭) ಮೇಘನಾದರ ಹೊಸ ವೈಜ್ಞಾನಿಕ ಪರಿಶೋಧನೆಯನ್ನು ಕುರಿತು

"ನಕ್ಷತ್ರಗಳ ಬೆಳಕಿನ ಸಂಬಂಧವಾಗಿ ಏನು ಶೋಧನೆಗಳು, ವಾದವ್ಯಾಖ್ಯಾನಗಳು, ಸಿದ್ಧಾಂತಗಳು ಇಂದು ಕಾಣಬರುತ್ತಿದೆಯೋ ಇದರಲ್ಲೆಲ್ಲ ಮೇಘನಾದಸಹರವರ ಪರಿಶೋಧನೆಗಳ ಪ್ರಭಾವವೇ ಪೂರ್ಣವಾಗಿ ಕಂಡುಬರುತ್ತಿದೆ. ಇವರ ಶೋಧನೆಗಳಿಂದ ನಕ್ಷತ್ರಗಳ ವಿಚಾರದಲ್ಲಿ ನಮ್ಮ ಜ್ಞಾನವು ಬಹಳ ಮುಂದುವರಿಯಲು ಸಾಧ್ಯವಾಯಿತು."

ಎಂಬದಾಗಿ ಹೇಳಿರುವರು.

ಆಚಾರ್ಯ ಪ್ರಫುಲ್ಲಚಂದ್ರರಾಯ್

ಪ್ರಫುಲ್ಲ ಚಂದ್ರರಾಯರ ಹೆಸರು ಯಾರಿಗೆ ತಾನೆ ಗೊತ್ತಿಲ್ಲ. ಅನೇಕರು ಅವರನ್ನು ಕಂಡಿದ್ದಾರೆ; ಅವರ ಭಾಷಣಗಳನ್ನು ಕೇಳಿದ್ದಾರೆ. ಮಹಾತ್ಮ ಗಾಂಧಿಯವರ ಬಲಭುಜವೆನ್ನಬೇಕು ಇವರನ್ನು. ಗಾಂಧೀಜಿಯವರ ಖಾದೀ ಸಂದೇಶವನ್ನು ಬಂಗಾಳ ದೇಶದ ಮೂಲೆಮೂಲೆಗಳಲ್ಲೂ ಸಾರಿದ್ದಾರೆ. ತಮ್ಮ ಆದರ್ಶ ಜೀವನದಿಂದ (ಶುದ್ಧ ಬ್ರಹ್ಮಚಾರಿಗಳು) ಭಾರತೀಯರೆಲ್ಲರ ಮನ್ನಣೆ, ಮೆಚ್ಚುಗೆ ಪಡೆದು ಕಲಿಯುಗ ಭೀಷ್ಮಾಚಾರ್ಯರೆಂದು ಖ್ಯಾತಿ ಪಡೆದಿದ್ದಾರೆ.

ಹಿಂದೂಸ್ಥಾನದ ಸುಪ್ರಸಿದ್ಧ ರಸಾಯನ ಶಾಸ್ತ್ರಜ್ಞರಲ್ಲಿ ಇವರು ಮೊದಲಿಗರು. ಇವರು ಬಹಳಕಾಲ ಪರಿಶೋಧನೆಗಳನ್ನು ನಡೆಸಿ, ನಮ್ಮ ಹಿರಿಯರಲ್ಲಿ ವಾಡಿಕೆಯಲ್ಲಿದ್ದ ರಸಾಯನಶಾಸ್ತ್ರದ ಮರ್ಮಗಳನ್ನೆಲ್ಲ ಹೊರಗೆಡವಿದರು. ಹೀಗೆ ಮಾಡುವುದರಿಂದ ಭರತ ಖಂಡದ ಗತವೈಭವವನ್ನು ನೆನಪಿಗೆ ತಂದರು. 'ಹಿಂದೂ ರಸಾಯನಶಾಸ್ತ್ರ' ವೆಂಬ ಗ್ರಂಥವು ಅವರ ಜೀವನ ಧ್ಯೇಯಕ್ಕೊಂದು ಚಿರಸ್ಮಾರಕವಾಗಿದೆ.

ರಸಾಯನಸಾಸ್ತ್ರದ ಶುದ್ಧ ಪರಿಶೋಧನೆಯಲ್ಲಿ ಮಾತ್ರ ಅವರು ತೃಪ್ತರಾಗಲಿಲ್ಲ. ಆ ಶಾಸ್ತ್ರಬಲದಿಂದ ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕು; ದೇಶದ ಸಂಪತ್ತನ್ನು ಬೆಳೆಸಬೇಕು ಎಂಬ ಆಶೆಯೂ ಆತುರವೂ ಅವರನ್ನು ಎಲ್ಲೂ ನಿಲ್ಲಿಸಲಾರದೆ ಹೋಯಿತು. ಅನೇಕ ಕೈಗಾರಿಕೆಗಳನ್ನು ಆರಂಭಿಸಲು ಅವಿಶ್ರಾಂತವಾಗಿ ಶ್ರಮಿಸಿದರು. ತಾವೇ ಸ್ಥಾಪಿಸಿದ್ದ 'ಫಾರ್ಮಾಕ್ಯೂಟಿಕಲ್ ವರ್ಕ್ಸ್' ಎಂಬ ಔಷಧಾಲಯವನ್ನು ಸ್ವಾವಲಂಬಿಸಿ, ತನ್ನ ಸ್ವಸಾಮರ್ಥ್ಯದಿಂದ 'ಸ್ವದೇಶಿ' ಭಾವಕ್ಕೊಂದು ಸತ್ವಸ್ವರೂಪವನ್ನಿತ್ತು ಶಾಶ್ವತ ಕೀರ್ತಿಯನ್ನು ಗಳಿಸಿದರು.

ಸಿವಗಂತರಾದ

ಶ್ರೀನಿವಾಸ ರಾಮಾನುಜಂ

"ಕಾನನದಿ ಮಲ್ಲಿಗೆಯು ಮೂಡದಿಂ ಬಿರಿದು
ಕಾಸೆಲೆಯಪಿಂತಿರ್ದು.."

ಎಂದು ಕವಿಯೊಬ್ಬನು ಹಾಡಿರುವನು. ಶ್ರೀನಿವಾಸ ರಾಮಾನುಜಂಯವರ ವಿಚಾರದಲ್ಲಿ ಇದು ಬಲು ಸೊಗಸಾಗಿ ಒಪ್ಪುವುದು. ಗಣಿತಶಾಸ್ತ್ರದಲ್ಲಿ ಇವರಿಗಿದ್ದ ನಿಪುಣತೆಗೂ, ಇವರು ನಡೆಸಿರುವ ಪರಿಶೋಧನೆಗಳಿಗೂ, ಜನಸಾಮಾನ್ಯರಲ್ಲಿ ಇವರ ವಿಚಾರದಲ್ಲಿರುವ ತಿಳಿವಿಗೂ ಹೋಲಿಸಿದರೆ ದೇಶಾಭಿಮಾನಿಯಾದ ಪ್ರತಿಯೊಬ್ಬನಿಗೂ ವ್ಯಸನವಾಗದಿರಲಿಕ್ಕಿಲ್ಲ. ಇವರ ಪ್ರತಿಭೆಯನ್ನು ನೂರು ಮಂದಿಗಳಿಗೆ ಹಂಚಿದರೆ ಪ್ರತಿಯೊಬ್ಬನಿಗೂ ಜಗತ್ಪ್ರಸಿದ್ಧಿಯನ್ನು ಪಡೆಯಲು ಸಾಕಾಗು

ಅನುಕೂಲತೆಯನ್ನು ಕೊಟ್ಟಂತಾಗುವುದೆಂದು ಮೇಲೆ ಮುಂದೆ ಇನ್ನು ಏನುಹೇಳ ಬೇಕಾಗಿದೆ! ಹೀಗಿದ್ದರೂ ನಮ್ಮಲ್ಲಿ ಬಲು ಸ್ವಲ್ಪ ಜನರಿಗೆ ಮಾತ್ರ ಇವರ ವಿಚಾರವು ತಿಳಿದಿದೆ. ಅದರಲ್ಲೂ ಇವರು ಬಲು ಪ್ರಸಿದ್ಧರಾದ ಗಣಿತಶಾಸ್ತ್ರಜ್ಞರೆಂಬ ವಿಚಾರ ಮಾತ್ರ ಗೊತ್ತು. ಹೆಚ್ಚು ಜನಗಳಿಗೆ ಇವರ ಪರಿಶೋಧನೆ

ಗಳೇನು; ಅವುಗಳ ಬೆಲೆಯೇನು ಎಂಬುದನ್ನು ನಿರ್ಧರಿಸಲು ಸಾಕಾದಷ್ಟು ಶಕ್ತಿಯಿಲ್ಲದಿರುವಿಕೆಯೇ ಇದಕ್ಕೆ ಕಾರಣ. ಆದರೆ ಈಗ ಕೇಂಬ್ರಿಡ್ಜಿನ ಮುಖ್ಯ ಪಂಡಿತರಾದ ಹಾರ್ಡಿ ಎಂಬವರು ಇವರ ವಿಚಾರದಲ್ಲಿ ಮಾಡಿರುವ ಪ್ರಶಂಸೆಯನ್ನು ಕೇಳಿಯಾದರೂ ನಮ್ಮ ಪುಣ್ಯ ಭೂಮಿಯಲ್ಲಿ ಈಗಲೂ ಮಹಾವಿಭೂತಿಗಳು ಹುಟ್ಟುತ್ತಿರುವರಲ್ಲಾ ಎಂದು ನಾವು ಹೆಮ್ಮೆಪಡಬಹುದು.

ಶ್ರೀನಿವಾಸರಾಮಾನುಜಂಯವರು ೧೮೮೭ ರಲ್ಲಿ, ದಕ್ಷಿಣ ಹಿಂದೂಸ್ಥಾನದಲ್ಲಿ ಈರೋಡ್ ನಗರದಲ್ಲಿ ಹುಟ್ಟಿದರು. ಬಾಲ್ಯದಲ್ಲಿ ಇವರ ವಿದ್ಯಾಭ್ಯಾಸವು ಕುಂಭಕೋಣದಲ್ಲಿ ನಡೆಯಿತು. ಆಗಲೇ ಇವರು ತಮ್ಮ ಗುರುಗಳನ್ನು ಇತರ ದೊಡ್ಡವರನ್ನು ಗಣಿತ ಶಾಸ್ತ್ರದಲ್ಲಿ ತೊಡಕಾದ ಮತ್ತು ಊಹಾ ಪ್ರಪಂಚದಲ್ಲಿ ಮಾತ್ರ ಇರತಕ್ಕ ಸಂಖ್ಯೆಗಳು ಮೊದಲಾದುವುಗಳ ಅರ್ಥವನ್ನು ಕೇಳುತ್ತಿದ್ದರು. ಕೆಲವು ವರ್ಷಗಳ ನಂತರ ಇವರು ಕಾರಣಾಂತರದಿಂದ ಕುಂಭಕೋಣ ಬಿಟ್ಟು ವಿಶಾಖಪಟ್ಟಣಕ್ಕೆ ಬಂದು ವಿದ್ಯಾಭ್ಯಾಸವನ್ನು ಮುಂದುವರಿಯಲು ಪ್ರಯತ್ನಿಸಿದರು. ಅಲ್ಲಿ ಪ್ರೋತ್ಸಾಹ ದೊರೆಯದೆ, ಮದರಾಸಿಗೆ ಬಂದು ೧೯೦೪ರಲ್ಲಿ ಎಫ್. ಎ. ಪರೀಕ್ಷೆಗೆ ಕಟ್ಟಿದರು. ಆದರೆ ಅದರಲ್ಲಿ ತೇಗಡೆಯಾಗಲಿಲ್ಲ. ಪುನಃ ಇವರು ಪರೀಕ್ಷೆಗೆ ಕೂಡಲು ಪ್ರಯತ್ನಿಸಲಿಲ್ಲ. ೧೯೦೯ರಲ್ಲಿ ಇವರಿಗೆ ಮದುವೆಯಾಯಿತು. ಸರಿ ಜೀವನೋಪಾಯವನ್ನು ಹುಡುಕುವ ಸಂಭ್ರಮದಲ್ಲಿ ಓದುಗಾರಿಕೆಯನ್ನು ಸಿಲ್ಲಿಸಿಬಿಟ್ಟರು.

ವಿಶ್ವವಿದ್ಯಾನಿಲಯದ ಪರೀಕ್ಷೆಗಳಲ್ಲಿ ಕೀರ್ತಿಪಡೆಯದಿದ್ದರೂ ಇವರು ಈಗಾಗಲೇ ಗಣಿತಶಾಸ್ತ್ರದಲ್ಲಿ ಬಲು ಶ್ರಾಷ್ಠ ವಿಚಾರಗಳಲ್ಲಿ ಅನೇಕ ಪರಿಶೋಧನೆಗಳನ್ನು ನಡೆಸಿ, ಅದೆಲ್ಲವನ್ನು ಕೆಲವು ಪುಸ್ತಕಗಳಲ್ಲಿ ಬರೆದಿಟ್ಟುಕೊಂಡಿದ್ದರು. ಇವರ ಪ್ರತಿಭೆಯನ್ನು ಕಂಡು ಇವರಿಗೆ ತಕ್ಕ ಪ್ರೋತ್ಸಾಹನವನ್ನು ಕೊಟ್ಟರೆ ಉತ್ಕೃಷ್ಟವಾದ ಪರಿಶೋಧನೆಗಳನ್ನು ಮಾಡುವರೆಂದು ಭರವಸೆಯಿಟ್ಟು ಇವರಿಗೊಂದು ವಿದ್ಯಾರ್ಥಿವೇತನವನ್ನು ಕೊಡಿಸಲು ಕೆಲವು ಪಂಡಿತರು ಪ್ರಯತ್ನಿಸಿದರು. ಕೊನೆಗೆ ಒಂದೂ ಫಲಿಸಲಿಲ್ಲ. ಮದರಾಸು ಪೋರ್ಟ್‌ಟ್ರಸ್ಟ್ ಆಫೀಸಿನಲ್ಲಿ ಇವರಿಗೆ ಗುಮಾಸ್ತೆಯ ಕೆಲಸವೊಂದು ಸಿಕ್ಕಿತು. ಬಡತನವಾದರೇನು? ಪ್ರತಿಭೆಗೆ ಬಡತನವೆ! ಪರಿಶೋಧನೆಗಳು ಎಂದಿನಂತೆಯೇ ಮುಂದುವರಿಯುತ್ತಿದ್ದುವು. ಕಾಲಕ್ರಮದಲ್ಲಿ ಇದರ ವಿಚಾರವು ಇವರ ಕಚೇರಿಯ ಸಾಹೇಬರಿಗೆ ತಿಳಿದು ಬಂತು. ಆತನ ಮೂಲಕ ಆಗತಾನೆ ಕೇಂಬ್ರಿಡ್ಜಿನಿಂದ ಬಂದು ಮದ್ರಾಸಿನಲ್ಲಿ ಉಪನ್ಯಾಸಗಳನ್ನು ಕೊಡುತ್ತಲಿದ್ದ ಪ್ರೊಫೆಸರ್ ನೆವಿಲ್ಸ್‌ರವರ ಕಿವಿಗೆ ಬಿತ್ತು. ಕೂಡಲೆ ಇವರು ರಾಮಾನುಜಂರವರನ್ನು ಕೇಂಬ್ರಿಡ್ಜ್‌ಗೆ ಬಂದು ಅಲ್ಲಿನ ಇತರ ಪಂಡಿತರೊಂದಿಗೆ ಕಲೆತು ತಮ್ಮ ಪರಿಶೋಧನೆಗಳನ್ನು ಜಗತ್ತಿಗೆ ತಿಳುಹಬೇಕೆಂದು ಕೇಳಿಕೊಂಡರು. ಇವರ ಅನುಕೂಲಕ್ಕಾಗಿ ವಿದ್ಯಾರ್ಥಿ ವೇತನವನ್ನು ಏರ್ಪಡಿಸಿಕೊಟ್ಟರು. ಶ್ರೀನಿವಾಸರಾಮಾನುಜಂರವರು ಬಹಳ ಶ್ರೋತ್ರಿಯರು. ಸಮುದ್ರಯಾನವು ನಿಷಿದ್ಧವೆಂದು, ವೇತನವನ್ನು ಒಪ್ಪಿಕೊಳ್ಳಲು ಬಹಳ ಹಿಂದುಮುಂದು ಆಲೋಚಿಸಿ, ಕೊನೆಗೆ ವಿಧಿಯಿಲ್ಲದೆ ೧೯೧೪ರಲ್ಲಿ ವಿಲಾಯಿತಿಗೆ ಹೊರಟೇ ಹೊರಟರು.

ವಿಲಾಯಿತಿಯಲ್ಲಿ ಇವರು ಇದ್ದುದು ಸುಮಾರು ನಾಲ್ಕು ವರ್ಷಗಳಕಾಲ. ಇಷ್ಟರೊಳಗೆ ಇವರು ನಡೆಸಿದ ಪರಿಶೋಧನೆಗಳು, ಇವರ ಪ್ರತಿಭೆಯು, ಹಿಂ

ದೂಸ್ಥಾನಕ್ಕೆ ಉಜ್ವಲವಾದ ಕೀರ್ತಿಯನ್ನು ತರುವಂಥವು. ೧೯೧೯ರಲ್ಲಿ ಇವರ ಆರೋಗ್ಯವು ಕೆಟ್ಟು ಹಿಂದೂದೇಶಕ್ಕೆ ಹಿಂತಿರುಗಿದರು. ಕ್ಷಯರೋಗದ ಚಿಹ್ನೆಗಳು ತೋರಿಬಂದುವು. ದೇಹದಲ್ಲಿ ಶಕ್ತಿಯು ಕುಂದಿದ್ದರೂ ಬುದ್ಧಿಯಲ್ಲಿ ಸ್ಫೂರ್ತಿಯು ಇನ್ನೂ ಉಚ್ಛ್ರಾಯಸ್ಥಿತಿಯಲ್ಲೇ ಇದ್ದಿತು. ಆರೋಗ್ಯವು ಸರಿಹೋದಂತೆ ತೋರಿಬಂತು. ಆದರೂ ೧೯೨೦ರಲ್ಲಿ ಇವರು ಕುಂಭಕೋಣದಲ್ಲಿ ಸ್ವರ್ಗಸ್ಥರಾದರು.

ಕೇಂಬ್ರಿಡ್ಜಿನ ಗಣಿತಶಾಸ್ತ್ರಾಧ್ಯಾಪಕರಾದ ಜಿ. ಎಚ್. ಹಾರ್ಡಿಯವರು ಇವರ ಮರಣವಾರ್ತೆಯನ್ನು ಕೇಳಿ, ವಿಲಾಯಿತಿಯ ಉತ್ತಮೋತ್ತಮವರ್ಗದ ವೈಜ್ಞಾನಿಕ ಪತ್ರಿಕೆಯಾದ 'ನೇಚರ್' (ಪ್ರಕೃತಿ) ನಲ್ಲಿ ಈರೀತಿ ಬರೆದಿರುತ್ತಾರೆ.

"ದೊಡ್ಡ ದೊಡ್ಡ ಗಣಿತಶಾಸ್ತ್ರಜ್ಞರಲ್ಲಿ ಸಹ ಬಹಳ ಸ್ವಲ್ಪಮಂದಿಗೆ ಮಾತ್ರ ಗೊತ್ತಾದ ಮಹಾಕ್ಷೇತ್ರದಲ್ಲೇ ರಾಮಾನುಜಂರವರ ಶೋಧನೆಗಳೆಲ್ಲ ಕೇಂದ್ರೀಕೃತವಾಗಿದ್ದುದು.....ನಾನೂ ಅನೇಕ ಐರೋಪ್ಯ ಗಣಿತಶಾಸ್ತ್ರ ಸಾರಾಂಗತವನ್ನು ನೋಡಿದ್ದೇನೆ. ಆದರೆ ರಾಮಾನುಜಂರವರ ತತ್ತ್ವಾವಲೋಕನದೃಷ್ಟಿಯು ಎಸ್ಮಯಗೊಳಿಸುವಂತಹುದು; ಊಹಿಸಲಸಾಧ್ಯವಾದಂತಹುದು. ಆಧುನಿಕ ವಿಚಾರ ಮತ್ತು ಶೋಧನಾಕ್ರಮಗಳ ಪರಿಚಯವು ಅತನಿಗೆ ತನ್ನ ೩೦ನೆಯ ವಯಸ್ಸಿನಲ್ಲುಂಟಾಯಿತು. ಆ ಪರಿಚಯವು ಅತನಿಗೆ ೧೫ನೆಯ ವಯಸ್ಸಿನಲ್ಲೇ ಉಂಟಾಗಿದ್ದರೆ ಅತನ ಚರಿತ್ರೆಯೇನಾಗುತ್ತಿತ್ತೆಂಬ ವಿಚಾರವನ್ನು ಈಗ ಎತ್ತಿ ಊಹಿಸುವುದರಿಂದೇನು ಫಲ. ಅತನ ಕಾಲದವರಲ್ಲಿ ಗಣಿತಶಾಸ್ತ್ರ ಪಾರೀಣತೆಯಲ್ಲಿ ಏಕೈಕವೀರನೆನಿಸುತ್ತಿದ್ದನೆಂದು ಭಾವಿಸಿದರೆ ಅತಿಶಯೋಕ್ತಿಯಾಗಲಾರದು. ಅತನು ಮಾಡಿರುವುದೇ ಸಾಕು; ಅದ್ಭುತ ಕಾರ್ಯ! ೩೦ ವರ್ಷಗಳ ತರುವಾಯ, ಅತನು ಸೂಚಿಸಿರುವ ಸಂಶೋಧನೆಗಳು ಮುಂದುವರಿದು ಮುಗಿದಾಗ, ಈಗ ಕಾಣಬರುವುದಕ್ಕಿಂತ ಆಗ ಅತನ ಕೆಲಸವು ಪರಮಾಶ್ಚರ್ಯಕರವಾಗಿ ಕಾಣಬರುತ್ತದೆ."

ರಾವ್ ಬಹದ್ದೂರ್ ಬಿ. ವೆಂಕಟೇಶಾಚಾರ್

ಜಗದ್ವಿಖ್ಯಾತರಾದ ವೈಜ್ಞಾನಿಕರು ಭರತಖಂಡದ ಬೇರೆ ಬೇರೆ ಪ್ರಾಂತ್ಯಗಳಿಗೆ ಕೀರ್ತಿ ಗೌರವಗಳನ್ನು ಗಳಿಸಿದ್ದಾರೆ. ಈ ಸಮಯದಲ್ಲಿ ನಮ್ಮ ಕರ್ಣಾಟಕ ದೇಶವೆಲ್ಲಿದೆ ಎಂಬ ಪ್ರಶ್ನೆಯು ಸಹಜವಾಗಿ ಎಲ್ಲರಲ್ಲೂ ಹುಟ್ಟುತ್ತದೆ. ಧೈರ್ಯವಾಗಿ, ಉಚ್ಚಸ್ವರದಿಂದ ಆ ಪ್ರಶ್ನೆಗೆ ಉತ್ತರ ಕೊಡುವ ಭಾಗ್ಯವು ಕನ್ನಡಿಗರಿಗಿದೆ.

ರಾವ್ ಬಹದ್ದೂರ್ ಬಿ. ವೆಂಕಟೇಶಾಚಾರ್ಯರು ಮೈಸೂರಿನ ಮಕ್ಕಳಲ್ಲಿ ಒಬ್ಬರು. ವಿಖ್ಯಾತ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಜನ್ಮಧಾರಣ ಮಾಡಿದ ನಂದಿ ಕ್ಷೇತ್ರದಿಂದಲೇ (ಚಿಕ್ಕಬಳ್ಳಾಪುರ) ವೆಂ

ಕಟೇಶಾಚಾರ್ಯರೂ ಜನ್ಮ ತಾಳಿ ಬಂದರು. ಆಗ ಅವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಭೌತಿಕ ಶಾಸ್ತ್ರ ಶಾಖೆಯು ಮುಖ್ಯ ಆಚಾರ್ಯರಾಗಿರುವರು. ಈ ಶಾಸ್ತ್ರದಲ್ಲಿ ತಾವು ನಡೆಸಿರುವ ಪರಿಶೋಧನೆಗಳಿಂದ ಆಚಾರ್ಯರು ತಮ್ಮ ತಾಯಿನಾಡಿಗೆ ಕೀರ್ತಿ ಕಲಶವನ್ನಿಟ್ಟಿರುವರು. ಸರ್ ಚಂದ್ರಶೇಖರ ವೆಂಕಟರಾಮನ್‌ರವರೇ ಅನೇಕಸಲ ಹೇಳಿರುವಂತೆ ವೆಂಕಟೇಶಾಚಾರ್ಯರು ಪಾದರಸದ ಆವಿಯ ದೀಪವನ್ನು, ಆದರ ವ ಹತ್ತನ್ನು ತೋರಿಸಿಕೊಟ್ಟಮೇಲೆ ರಾಮನ್‌ರವರು ತಮ್ಮ 'ರಾಮನ್ ಎಫೆಕ್ಟ್' ಕಂಡುಹಿಡಿದರು.

೧೯೩೦ರಲ್ಲಿ 'ಅಖಿಲ ಭಾರತ ವೈಜ್ಞಾನಿಕರ ಪರಿಷತ್ತು' ಅಲಹಾಬಾದಿನಲ್ಲಿ ಸೇರಿತ್ತು. ಆ ಪರಿಷತ್ಸಮ್ಮೇಳನದ 'ಭೌತಿಕಶಾಖೆ'ಗೆ ಆಚಾರ್ಯರನ್ನು ಅಧ್ಯಕ್ಷರನ್ನಾಗಿ ಆರಿಸಿದುದು ಇವರ ಪ್ರತಿಭೆಗೆ ವೈಜ್ಞಾನಿಕರು ಮಾಡಿದ ಸತ್ಕಾರವೆನ್ನಬೇಕು. ಶಾಸ್ತ್ರ ಪರಿಶೋಧನ ಕಾರ್ಯದಲ್ಲಿ ಇವರ ದಕ್ಷತೆಯೂ, ಕರ್ತವ್ಯ ಪರಾಯಣತೆಯೂ ಆದರ್ಶಯುತವಾದುದು.

ರಾ ಜ ನೀ ತಿ

೧. ಮಾನವನೂ ಸ್ವಾತಂತ್ರ್ಯಾಪೇಕ್ಷೆಯೂ

'ರಾಜಕಾರಣ ಪಟುಗಳೊಬ್ಬರು'

೨. ಪೌರಧರ್ಮ ಮತ್ತು ರಾಷ್ಟ್ರನೀತಿ

ಶ್ರೀ ಕೆ. ಕೃಷ್ಣಯ್ಯಂಗಾರ್, ಬಿ.ಎ., ದೇಶೀಯ ವಿದ್ಯಾಶಾಲಾ, ಬೆಂಗಳೂರು

೩. ಭಾರತೀಯರ ಸ್ವಾತಂತ್ರ್ಯ ಸಾಧನೆ

ಶ್ರೀ ಕೆ. ಸಂಪದ್ಗಿರಿರಾವ್, ಎಂ.ಎ., ದೇಶೀಯ ವಿದ್ಯಾಶಾಲಾ

೪. ಸ್ವಾತಂತ್ರ್ಯ ಸಂಗ್ರಾಮ, ರೇಖಾಚಿತ್ರ

ಶ್ರೀ ಜಿ. ಶ್ರೀನಿವಾಸರಾವ್, ಬಿ. ಎ., ಎಲ್. ಎಲ್. ಬಿ., ಮತ್ತು

ಶ್ರೀ ಜೋಶಿ, ಕಲಾಮಂದಿರ

ಮಾನವನೂ ಸ್ವಾತಂತ್ರ್ಯಾಪೇಕ್ಷೆಯೂ

(' ರಾಜಕಾರಣವಟುಗಳೊಬ್ಬರು')

ಜೀವನ ಸಮಸ್ಯೆ

ಒಂದು ಸಸಿಯನ್ನು ಬೆಳೆಸಬೇಕಾದರೆ ಅದಕ್ಕೆ ಬೇಲಿಯನ್ನು ಕಟ್ಟಿ ಅದನ್ನು ಕಾಪಾಡುವರು. ಸಸಿಯು ಭೂಮಿಯ ಸಾರವನ್ನು ಹೀರಿ, ನೀರು, ಗಾಳಿ, ಬಿಸಿಲು ಇವುಗಳ ಸಹಾಯದಿಂದ ಕ್ರಮೇಣ ದೊಡ್ಡ ವೃಕ್ಷವಾಗುವುದು. ಬೇಲಿಯು ಸಸಿಯನ್ನು ಬೆಳೆಸಲಿಲ್ಲ; ಅದು ಬೆಳೆಯಲು ಸಾಕಾದಷ್ಟು ಅವಕಾಶವನ್ನು ಒದಗಿಸಿತು. ಆದರೆ ಬೇಲಿಯೂ ಬೆಳೆಯುವುದಾಗಿದ್ದರೆ ಸಸಿಯ ಬೆಳವಣಿಗೆಗೆ ಅಡ್ಡಿಮಾಡಿ ಅದನ್ನು ಕೊಲ್ಲುವ ಸಂಭವವುಂಟು. ಸಸಿಯು ಅದರಲ್ಲಿತಕ್ಕ ಸತ್ತ್ವದಿಂದ, ಜೀವಶಕ್ತಿಯಿಂದ ಬೆಳವಣಿಗೆಯನ್ನು ಹೊಂದುವುದು. ಬೇಲಿಯಲ್ಲಿಯೂ ಇಂತಹ ಶಕ್ತಿಯಿರುವುದಾದರೆ, ಪರಸ್ಪರ ವಿರೋಧವುಂಟಾಗಿ ಸಸಿಯ ಬೆಳೆವಣಿಗೆಗೆ ಕಾರಣವಾಗದೆ ಅದಕ್ಕೆ ಕಂಟಕವಾಗಿ ಪರಿಣಮಿಸುವುದು.

ಇದೇರೀತಿಯಲ್ಲ ಪ್ರತಿಯೊಂದು ಜೀವದ, ವ್ಯಕ್ತಿಯ, ಜೀವಶಕ್ತಿವಿಕಾಸದಲ್ಲಿಯೂ ಈ ಮೇಲಿನ ಉಪಮೆಯನ್ನು ಅನ್ವಯಿಸಬಹುದು. ಪ್ರತಿಯೊಂದು ವ್ಯಕ್ತಿಯ ಬೆಳವಣಿಗೆಗೂ ಪೋಷಕವಾಗುವ ನುತ್ತು ಬಾಧಕವಾಗುವ ಅಥವಾ ಎಲ್ಲೆಯನ್ನು ನಿರ್ದೇಶಿಸುವ ಉಪಕರಣಗಳುಂಟು. ಈ ಬಾಧಕಗಳು ನಿರ್ಬಂಧಗಳಂತೆ ತೋರಿದರೂ ನದಿಯ ವಿಷಯದಲ್ಲಿ ದಡಗಳಿರುವಂತೆ ವ್ಯಕ್ತಿವಿಕಾಸಕ್ಕೆ ಒಳ್ಳೆಯ ರೂಪವನ್ನೂ ಪರಿಣಾಮವನ್ನೂ ಒದಗಿಸುವವು. ಅದೃಶ್ಯವಾದ ವಿಕಾಸಶಕ್ತಿಗೂ ಈ ಬಾಧಕಗಳಿಗೂ ಯುಕ್ತರೀತಿಯಲ್ಲಿ ಸಾಮರಸ್ಯವನ್ನು ಏರ್ಪಡಿಸುವುದೇ ಜೀವನದ ದೊಡ್ಡ ಸಮಸ್ಯೆ.

ಸಮಾಜ ಧರ್ಮ

ಪ್ರತಿಯೊಂದು ವ್ಯಕ್ತಿಯಲ್ಲಿಯೂ ಜೀವಶಕ್ತಿಯಿರುವಂತೆಯೇ ಪ್ರತಿಯೊಂದು ಸಮಾಜಕ್ಕೂ, ಜನಾಂಗಕ್ಕೂ ಒಂದು ಸಮುದಾಯಶಕ್ತಿಯೂ ಜೀವಕಳೆಯೂ ಉಂಟು. ಆದರೆ ಸಮುದಾಯ ಜೀವನವು ವ್ಯಕ್ತಿಯ ಸ್ವತಂತ್ರಜೀವನಕ್ಕೆ ಭಂಗವನ್ನು ತರುವಂತಿರಬಾರದು. ವ್ಯಕ್ತಿಯ ಸ್ವತಂತ್ರಜೀವನವೂ ಇತರ ವ್ಯಕ್ತಿಗಳ ಸುಖ ಶಕ್ತಿಯನ್ನೂ ಸಮುದಾಯ ಜೀವನವನ್ನೂ ನಾಶಗೊಳಿಸುವಂತಿರಬಾರದು. ವೈಯಕ್ತಿಕ ಜೀವನಕ್ಕೂ ಸಮುದಾಯ ಜೀವನಕ್ಕೂ ಸಾಮರಸ್ಯವನ್ನು ಏರ್ಪಡಿಸುವುದೇ ಸಮಾಜಧರ್ಮದ ಸೂಕ್ಷ್ಮ.

ವಿಶ್ವಸಂಸಾರ

ಪ್ರಪಂಚದಲ್ಲಿರುವ ಅನೇಕ ಜನಾಂಗಗಳು ತಮ್ಮ ತಮ್ಮ ಯೋಗಕ್ಷೇಮವನ್ನು ಬಯಸಿ ಅಭಿವೃದ್ಧಿಗಾಗಿ ಯತ್ನಿಸುವುವು. ಯಂತ್ರಶಕ್ತಿಯು ಪರಮಾವಧಿಯನ್ನು ಹೊಂದಿರುವ ಈ ಯುಗದಲ್ಲಿ ಯಾವ ಜನಾಂಗವೂ ಕೂಪಮಂಡೂಕ ಜೀವನವನ್ನು ಮಾಡುವುದು ಶಕ್ಯವಲ್ಲ. ಪರಸ್ಪರ ಸಂಬಂಧಗಳು ಜನಾಂಗಗಳಲ್ಲಿ ಬೆಳೆದಿವೆ. ಯಂತ್ರ ಸಹಾಯದಿಂದ ಕೈಗಾರಿಕೆಗಳೂ ವ್ಯಾಪಾರದ ವೇಗವೂ ಅಗಾಧವಾಗಿ ಬೆಳೆದು ಆರ್ಥಿಕ ಜೀವನದ ವಿಚಾರದಲ್ಲಿ ಪ್ರಪಂಚವೆಲ್ಲವೂ ವಿಕರೀತಿಯ ನಿಯಮಕ್ಕೆ ಒಳಪಟ್ಟು, ಇತರರ ಗೋಜಿಲ್ಲದೆ ಯಾವ ಜನಾಂಗವೂ ಸ್ವತ್ಯೇಕವಾಗಿ ತನ್ನ ಆರ್ಥಿಕಜೀವನದ ಚಿಂತನೆಯನ್ನು ಮಾಡುವುದು ದುಸ್ಸಾಧ್ಯವಾಗಿದೆ. ರಾಜಕಾರಣವೂ ವಾಣಿಜ್ಯವ್ಯವಹಾರಕ್ಕೆ ಪಕ್ಕವಾದ್ಯವಾಗಿದೆ.

ವಾರ್ತಾಪ್ರಸಾರಕ್ಕೆ ಬಹಳ ಅನುಕೂಲ್ಯಗಳು ಉಂಟಾಗಿರುವುದರಿಂದ ಆಚಾರ ವಿಚಾರಗಳೂ, ಭಾವನೆಗಳೂ, ಬಯಕೆಗಳೂ ಜನರ ಸೂಕ್ಷ್ಮ ಮತ್ತು ಉತ್ತಮ ಜೀವನದ ತತ್ತ್ವವಿಶೇಷಗಳೂ ಪರಸ್ಪರ ವಿನಿಮಯವಾಗಲು ಬಹಳ ಅವಕಾಶವೊದಗಿದೆ. ಇದರಿಂದ ಸಂಮಿಳನವೂ ಆಗಿದೆ. ಸಂಕರವೂ ಕಂಡುಬಂದಿದೆ. ಹೆಚ್ಚಿನ ಪರಸ್ಪರ ಸಂಬಂಧದಿಂದ ಕೆಲವು ಜನಾಂಗಗಳಿಗೆ ಸಾಧಕವೂ ಕೆಲವಕ್ಕೆ ಬಾಧಕವೂ ಆಗಿದೆ. ಕೆಲವು

ಜನಾಂಗಗಳ ತಪ್ಪು ಅಭಿಪ್ರಾಯವನ್ನು ಸಾಧಿಸುವುದರ ಸಲುವಾಗಿ ಇತರ ಜನಾಂಗಗಳ ಸುಖಜೀವನಕ್ಕೆ ಕ್ಷೋಭೆಯನ್ನುಂಟುಮಾಡುತ್ತವೆ. ಇದರಿಂದ ಯುದ್ಧಗಳು ಪ್ರಾಪ್ತವಾಗುತ್ತವೆ; ಬಹಳ ನಷ್ಟವೂ ಸಂಕಟವೂ ಉಂಟಾಗುತ್ತದೆ. ಕಷ್ಟಕ್ಕೂ ನಷ್ಟಕ್ಕೂ ಗುರಿಯಾಗುವ ಮಾನವಕೋಟಿಯು ಪ್ರಪಂಚದ ಯಾವ ಭಾಗದಲ್ಲೇ ಇರಲಿ ಒಮ್ಮನಸ್ಸುಳ್ಳವರಾಗಿ ದಬ್ಬಾಳಿಕೆಯಿಂದ ತಪ್ಪಿಸಿಕೊಂಡು ಶಾಂತಿಸ್ಥಾಪನೆ ಮಾಡಲು ಹಂಬಲಿಸುವರು. ಪರಸ್ಪರ ವಿಘಾತವಿಲ್ಲದೆ ಜನಾಂಗಗಳು ತಮ್ಮ ತಮ್ಮ ಜೀವನವನ್ನು ಸಾಧಿಸುವುದೇ ಮಾನವಕೋಟಿಯ ಸಮಸ್ಯೆಯಾಗಿದೆ.

ವ್ಯಕ್ತಿಜೀವನ, ಸಮಾಜಜೀವನ, ಮಾನವಕೋಟಿಯ (ಜನತಾಜನಾರ್ದನನ) ಜೀವನ—ಇವೆಲ್ಲಕ್ಕೂ ಒಂದೇ ರೀತಿಯ ತತ್ತ್ವಗಳನ್ನು ಅನ್ವಯಿಸಬಹುದಾಗಿದೆ. ಕಾಮಕ್ರೋಧಾದಿದೋಷಗಳು ಎಲ್ಲಕ್ಕೂ ಉಂಟು: ಸಾತ್ವಿಕರಾಜಸತಾಮಸಗುಣಗಳೂ ಉಂಟು.

ಸ್ವಾತಂತ್ರ್ಯವೇ ಪರಮಧ್ಯೇಯ

ಆತ್ಮರಕ್ಷಣೆ, ಆತ್ಮವಿಕಾಸ, ಸ್ವಧರ್ಮಪಾಲನೆ-ಇವೇ ಎಲ್ಲ ಪ್ರಯತ್ನಗಳಿಗೂ ಕಾರಣ. ಸ್ವಾತಂತ್ರ್ಯವೇ ಪರಮಧ್ಯೇಯ. ಸ್ವತಂತ್ರವಿಚಾರದಿಂದಲೇ ಪ್ರಪಂಚದಲ್ಲಿ ಜ್ಞಾನವೃದ್ಧಿಯಾಗಿರುವುದು. ಮತಸ್ಥಾಪಕರೂ ವಿಜ್ಞಾನಶಾಸ್ತ್ರವೇತ್ತರೂ ಮಾನಸಿಕಪ್ರಪಂಚದ ಶೂರಾಗ್ರೇಸರರು. ಇವರು ಸ್ವತಂತ್ರ ವಿಚಾರದಿಂದ ಒದಗುವ ಕಷ್ಟನಿಷ್ಠುರಗಳನ್ನು ಲೆಕ್ಕಿಸದೆ ತಮ್ಮ ಆತ್ಮಾನುಭವವನ್ನು ಪ್ರತ್ಯಕ್ಷವಾಗಿ ಶೋಧಿಸಿ—ಅರಿತ ಜ್ಞಾನವನ್ನು ಜನತೆಯ ಮುಂದಿಟ್ಟು ಕೃತಕೃತ್ಯರಾದರು; ಬಹುಜನರ ಹಿತವನ್ನೂ ಬಹುಜನರ ಸುಖವನ್ನೂ ಸಾಧಿಸಿದರು. ಈ ವೀರಪುರುಷರು ಸಾರಿದ ತತ್ತ್ವಗಳು ನಿರಂತರವೂ ಜ್ಯೋತಿರ್ಮಯವಾಗಿ ಬೆಳಗಿ ಮಾನವ ಜೀವನವನ್ನು ಪವಿತ್ರವನ್ನಾಗಿ ಮಾಡಿ ಉದ್ಧರಿಸುವುವು. ಈ ತತ್ತ್ವಗಳನ್ನೊಳಗೊಂಡು ಇವಕ್ಕೆ ಸ್ಥೂಲರೂಪವನ್ನು ಕೊಡುವ ಆಚಾರ, ವಿಧಿನಿಷೇಧ ಮುಂತಾದ ನಿಯಮಗಳನ್ನು ಧರ್ಮಶಾಸ್ತ್ರಜ್ಞರೂ ಸ್ಮೃತಿಕಾರರೂ ವ್ಯವಸ್ಥೆ ಮಾಡುವರು. ಆದರೆ ಕಾಲಗತಿಗನುಸಾರವಾಗಿ ಈ ನಿಯಮಗಳು ಬದಲಾವಣೆಯನ್ನು ಹೊಂದುವುವು.

ದೀನಜನರ ಕಾಲಾಗ್ನಿ

ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಬಯಕೆಯೂ ಇದೇ ರೀತಿ ವೀರಪುರುಷರ ಸಾಹಸಜೀವನದಿಂದ ಸಿದ್ಧವಾಗುವುದು. ಜನರ ಸಮುದಾಯಜೀವನವು ಎಲ್ಲರಿಗೂ ಹಿತಕಾರಿಯಾಗಿಯೂ ಎಲ್ಲರ ಯೋಗಕ್ಷೇಮಕ್ಕಾಗಿಯೂ ಮುಂದುವರಿಯುವಂತೆ ಎಲ್ಲರ ಸಮ್ಮತವನ್ನೂ ಗೌರವವನ್ನೂ ಪಡೆದ ವ್ಯವಸ್ಥೆಯೇ ಒಂದು ಜನತೆಯ ಸರಕಾರ. ಈ ವ್ಯವಸ್ಥೆಯ ಅಂತಿಮ ಧ್ಯೇಯ ಜನತೆಯ ಹಿತ ಮತ್ತು ನೈಜವಾದ ವಿಕಾಸ ಈ ಧ್ಯೇಯದ ಸಾಧನಕ್ಕಾಗಿಯೇ ಆಡಳಿತವರ್ಗದವರ ಶಾಸನಗಳು, ಕಾನೂನುಗಳು, ಕಾಯಿದೆಗಳು. ಈ ಸಾಧನೆಗಳು ಬಹುಜನರಿಗೆ ಅಹಿತವಾಗಿ ಪರಿಣಮಿಸಿದರೆ ಇವು ಬದಲಾವಣೆಯನ್ನು ಹೊಂದಿ ಸುಧಾರಿಸಲ್ಪಡುವುವು. ಆದರೆ ಅನೇಕ ಕಾರಣಗಳಿಂದ ಇಂತಹ ಬದಲಾವಣೆಗಳು ಆಗಲು ಅವಕಾಶವೇ ಇಲ್ಲದೆ ಪ್ರಭುತ್ವವರ್ಗವು ಅಂತಿಮಧ್ಯೇಯವನ್ನು ಮರೆತು, ಪ್ರಭುತ್ವಕ್ಕೇ ಹೆಚ್ಚು ಗಮನವನ್ನು ಕೊಟ್ಟು ಬಹುಜನರ ಯಾತನೆಯನ್ನು ದುರ್ಲಕ್ಷಮಾಡುವುದಾದರೆ ರಾಜ್ಯದಲ್ಲಿ ಕ್ರಾಂತಿ ತಲೆದೋರಿ ಪ್ರಳಯವೇ ಆಗುವುದು. ಹಿಂದೆ ಫ್ರಾನ್ಸ್ ಮತ್ತು ಇಟಲಿ ದೇಶಗಳಲ್ಲಿಯೂ, ಈಚೆಗೆ ರಷ್ಯಾ, ಜೀನಾ ದೇಶಗಳಲ್ಲಿಯೂ ಸಹಜವಾಗಿಯೂ ಸರಳ ಸ್ವಭಾವದವರೂ ಶಕ್ತಿಹೀನರೂ ಆದ ದೀನಜನರು ಕಾಲಾಗ್ನಿಯಂತೆ ಉರಿದೆದ್ದು ಸಾಧಿಸಿದ ವಿಪ್ಲವಗಳಿಗೆ ಇದೇ ಕಾರಣ ಸತ್ತ್ವವುಳ್ಳ ಜೀವನದ ನೈಜವಾದ ಶಕ್ತಿಯನ್ನು ಅಡಗಿಸುವುದು ಅಸಾಧ್ಯ. ಅಡಗಿಸಿದಷ್ಟೂ ಆ ಶಕ್ತಿಯು ಮತ್ತೆ ಮತ್ತೆ ಬೆಳೆಯುವುದು.

ಸ್ವಾತಂತ್ರ್ಯದ ಬಯಕೆ

ಸ್ವಾತಂತ್ರ್ಯದ ಬಯಕೆಯು ಜೀವನದ ಮೂಲ ತತ್ತ್ವ. ಇದೊಂದು ಸ್ವತಃಸಿದ್ಧವಾದ ಆಕಾಂಕ್ಷೆ. ವ್ಯಕ್ತಿಯ ದೃಷ್ಟಿಯಿಂದ ಪರಮಶ್ಲಾಘ್ಯವಾದ ಪುರುಷಾರ್ಥ, ಮೋಕ್ಷ; ಪ್ರೇಮಮಯನಾದ ಈಶ್ವರನನ್ನು ಸೇರುವಿಕೆ. ಇದೇ ಎಲ್ಲ ಮತಗಳ ಗುರಿ. 'ಪ್ರಪಂಚವೆಲ್ಲವನ್ನೂ ಗೆದ್ದು ಆತ್ಮವನ್ನು ಕಳೆದುಕೊಂಡರೆ ಫಲವೇನು?' ಎಂದು ಕ್ರಿಸ್ತನು ಸಾರಿದನು. ಸಮುದಾಯಜೀವನದ ದೃಷ್ಟಿಯಿಂದಲೂ ಸ್ವರಾಜ್ಯವೇ ಪರಮ ಧ್ಯೇಯ. ಇದು ಯುಕ್ತಿಪೂರ್ವಕವಾಗಿ ನಿಷ್ಪತ್ತಿಯಾಗಬೇಕಾಗಿಲ್ಲ ಆದ್ದರಿಂದಲೇ ಲೋಕಮಾನ್ಯ ತಿಲಕರು ನಿರರ್ಥಕವಾದ ಚರ್ಚೆಗೆ ಬೀಗನುದ್ರೆಹಾಕುವಂತೆ "ಸ್ವರಾಜ್ಯವು ಜನ್ಮಸಿದ್ಧವಾದ ಹಕ್ಕು" ಎನ್ನುವ ಮಂತ್ರವನ್ನು ಗಾನಮಾಡಿದರು ಮಾನವಕೋಟಿಯ ಜೀವನದಲ್ಲಿ 'ಹಿತ', 'ಅಹಿತ' ಎನ್ನುವುದು

ಸ್ವತಂತ್ರವಾದ ಅನುಭವಗಳಾಮದರಿಂದ 'ಅಹಿತ' ವನ್ನು ತಪ್ಪಿಸಿ ಹಿತವನ್ನು ಪಡೆಯಲು ಸರ್ವಪ್ರಯತ್ನ ವನ್ನೂ ಮಾಡುವವು ಅಲ್ಪಸಂಖ್ಯಾತರಾದ ಬಂಡ ವಾಳಗರೂ ಪ್ರಬಲವಾದ ಸರಕಾರಗಳೂ ಈ ಪ್ರಯತ್ನಗಳನ್ನು ತಮ್ಮ ಸ್ವಾರ್ಥಕ್ಕಾಗಿ ಎದುರಿಸುವರು. ಅದರೂ ಬಹುಜನರ ಏಳಿಗೆಯೇ ಕೊನೆಗೆ ಸಿದ್ಧಿಯಾಗುವುದು

ಉಪಕರಣಗಳ ಭೂತಾಕಾರ

ಈ ಯುಗದಲ್ಲಿ ಜೀವಶಕ್ತಿಗಿಂತಲೂ ಯಂತ್ರಶಕ್ತಿಗೇ ಮನ್ನಣೆ ಹೆಚ್ಚೆಂದು ಸ್ಥೂಲವಾಗಿ ಹೇಳಬಹುದು ಜೀವನದ ಪೋಷಣೆಗಿಂತಲೂ ಜಡಪದಾರ್ಥಗಳ ಉಪಾಸನೆಯೇ ಹೆಚ್ಚಾಗಿ ಕಂಡುಬರುವುದು. ಹೊಲಕ್ಕಿಂತಲೂ ಬೀಲಿಯೇ ದೊಡ್ಡದಾಗಿರುವುದು ನದಿಯ ಸೌಮ್ಯವಾದ ಪ್ರವಾಹಕ್ಕಿಂತಲೂ ದಡದ ಘನತೆಯೂ ಸೌಂದರ್ಯವೂ ಮೆಚ್ಚುಗೆಗೆ ಪಾತ್ರವಾಗಿರುವುದು ಇದೇ ಎಲ್ಲೆಲ್ಲಿಯೂ ಅಶಾಂತಿಗೆ ಕಾರಣವಾಗಿದೆ.

ಆದರೆ ಜೀವವು ಹಿರಿದು; ಜೀವನವು ಪುರಾಣವಾದುದು. ಹೊಲದ ಬೆಳೆವಣಿಗೆಯೂ ನದಿಯ ಪ್ರವಾಹವೂ ನೈಸರ್ಗಿಕ. ಇವುಗಳಲ್ಲಿ ದೈವಿಕ ಶಕ್ತಿಯಿದೆ ಮಾನವನ ವ್ಯವಸ್ಥೆಯಲ್ಲಿಯೂ, ನಿರ್ಮಾಣ ವಿಷಯಗಳಲ್ಲಿಯೂ ಇಂತಹ ನಿತ್ಯಶಕ್ತಿಯಿಲ್ಲ. ಕಾಲಕ್ಕನುಸಾರವಾಗಿ ಇವು ಬದಲಾವಣೆಗಳನ್ನು ಹೊಂದುತ್ತವೆ. ಬೇಲಿಯೂ ದಡವೂ ಶಾಶ್ವತವೆಂಬುದು ಭ್ರಮೆ; ಮೌಢ್ಯ ಇವು ಕೇವಲ ಸಾಧನಗಳು; ಉಪಕರಣಗಳು ಉಪಕರಣಗಳು ಭೂತಾಕಾರವನ್ನು ತಾಳಿ ಸ್ವತಂತ್ರ ಜೀವನದ ಅಂಕುರವನ್ನು ನಾಶಗೊಳಿಸಬಾರದು. ಈ ಯುಗದಲ್ಲಿ ಈ ಉಪಕರಣಗಳು ಭೂತಾಕಾರವನ್ನು ತಾಳಿವೆ.

ಪ್ರಯೋಗಶಾಲೆ

ಜೀವನವು ಸಾಮರಸ್ಯವನ್ನು ಹೊಂದಿ, ವಿಕಾಸವಾಗಿ ಸುಖಶಾಂತಿಗಳನ್ನು ಸ್ಥಾಪಿಸುವುದಕ್ಕೆ ಅನೇಕ ವೀರ ಪುರುಷರು ಸಾಹಸಪಡುತ್ತಿರುವರು ಮಹಾತ್ಮಾ ಗಾಂಧಿಯವರು ಅಂತಹವರಲ್ಲಿ ಅಗ್ರೇಸರರು. ಹಿಂದೂ ಸ್ಥಾನವು ಅವರ ಪ್ರಕೃತ ಕಾರ್ಯಕ್ಷೇತ್ರ. ಹಿಂದೂ ಸ್ಥಾನವೇ ಸಾಮರಸ್ಯ ಜೀವನದ ತತ್ತ್ವಗಳನ್ನು ಪ್ರತಿಪಾದಿಸಿದ ದೇಶ. ಹಿಂದೂಸ್ಥಾನವು ಜೀವನದ ಉದಾತ್ತತತ್ತ್ವಗಳ ಪ್ರಯೋಗಶಾಲೆಯಾಗಿತ್ತು. ಈ ತತ್ತ್ವಗಳಿಗೆ ಆಳವಿಲ್ಲದವಾದುದರಿಂದ ಹಿಂದೂಸ್ಥಾನವು ಕ್ಷೀಣದೆಶೆಯನ್ನು ಹೊಂದಿದರೂ ಅಳಿವಿಲ್ಲದೆ ಬದುಕಿರುವುದು: ಮತ್ತೆ ಪ್ರಪಂಚಕ್ಕೇ ಮಾರ್ಗದರ್ಶಕವಾಗುವಂತೆ ಗಾಂಧೀಜಿಯವರ ನೇತೃತ್ವದಲ್ಲಿ ಈಗ ಪ್ರವೃತ್ತವಾಗಿರುವುದು.

ಸ್ವಾತಂತ್ರ್ಯ ಜೀವನದ ಉಸಿರು

ನಿತ್ಯಮುಕ್ತರು ನಾವು

ನಾಸಜೀವನವಲ್ಲ ಚೈತನ್ಯಮಯವಾಯ್ತು
ನಾವಿನಾಡಿಗಳೆಲ್ಲ ಬಿಸಿರಕುತ ಹೊಳೆಯಾಯ್ತು.

ಕಣ್ಣಲ್ಲಿ ಜೀವಕಣ
ಕಾರ್ಯದಲಿ ಕ್ಷಾತ್ರಗುಣ
ಕರಣದಲಿ ಸತ್ಪಕಣ

ಜನಮನದ ದಾಸ್ಯತನ ಜಾರಿಹೋಯ್ತು.
ಜನವದಕ ಸ್ವಾತಂತ್ರ್ಯ ಬಂದುಹೋಯ್ತು.

ಭಾವಲೋಕದ ಮಬ್ಬುಮನವೆಂಬ ಮುಗಿಲಲ್ಲಿ
ಮೌಸಲಿ ಮರೆತಿದ್ದ ರಸಖುಷಿಯ ಹಿಡಿತಂದು,
ಕಾವ್ಯ ರಸರಂಗದಲಿ ಕೌತುಕವ ತೋರಿಸಲು
ಆಣತಿಯನಿತ್ತಿಹಳು ತಾಯಿಯಿಂದು.

ಬಡತನದ ಬಂಧನದಿ, ನೊರಗಿ, ಒರಗುತಲಿರುವ
ತರುಣ ತರುಣಿಯರನ್ನು ಕರಪಿಡಿದು ಪಿಡಿದೆತ್ತಿ
'ನಿತ್ಯಮುಕ್ತರು ನೀವು ಅಕ್ಷರರು ನೀವೆ'ಂದು
ಅಭಯವಿತ್ತಿಹಳಿಮಗೆ ತಾಯಿಯಿಂದು.

ಕನ್ನಡದ ನಾಡಿನಾ ಸರ್ವಶಕ್ತಿಗಳೆಂದು,
ಕನ್ನಡಿಗರೆದೆಯೊಳಿಹ ತ್ಯಾಗಶೌರ್ಯಗಳೆಂದು,
ಕನ್ನಡದ ಸರ್ವತೋ ಮುಖಶಕ್ತಿ ಪ್ರಭೆಯಿಂದು

ಅರಿಕೇಸರಿಗಳನ್ನು ತೋರುತಿಹುದು ;
ಕವಿಸಾರ್ವಭೌಮರನು ನೀಡುತಿಹುದು ;
ಕನ್ನಡಿಗರನ್ನೆಲ್ಲ ಕುಣಿಸುತಿಹುದು ;
ಭಾರತಿಯ ಕೀರ್ತಿಯನು ಬೆಳೆಸುತಿಹುದು.

—'ಕ'

ಅಮರತ್ವವೆನಗಿತ್ತೆ

ಭಾವ ಜಯಿಸುವ ಸತ್ವವೆನಗಿತ್ತು, ಧೃತಿಯಿತ್ತು,
ಅಮರತ್ವವೆನಗಿತ್ತೆ, ತಾಯೆ! ಭಾರತಿಯೆ!

ಆಕಾಶವನ್ನೊಡಲು, ಸಿಡಿಲೆದೆಯು, ಆನನ ನಗೆ
ಜೀವಕಳೆ, ಅಸಿಯಲಗೆ ರುದ್ರಜೀವನ ರಂಗ.

ಇಂದು ಯೋಧನ ವೇಷ,
ಕ್ಷಾರ ರೋಷಾವೇಶ;
ನಾಳೆ ಸಾಧಕನಂತೆ
ಸತ್ಯ ಶಾಂತಿವಿಲಾಸ।

ಅಳಿಸುತ್ತೆ, ನಗಿಸುತ್ತೆ, ಏಳಿಸಿದೆ, ಬೀಳಿಸಿದೆ;
ಕಡೆಗೆ ಮಗುವೆಂದು ನೀ ಕನಿಕರಿಸಿದೆ.
(ಇಂತೆನ್ನ ನಟರಾಜನಂತೆಸಗಿ ಆಡಿಸಿದೆ)
ದೇವಿ! ನಿನ್ನಯ ಪಾದವೆನ್ನೆದೆಯೊಳಿರಲಿ;
ತಾಯೆ! ನಿನ್ನಭಯಕರ ಶಿರದಮೇಲಿರಲಿ.

ಕೈವಲ್ಯಧಾಮ

ಸ್ವಾತಂತ್ರ್ಯಶೂನ್ಯದಿಂ
ನೊಂದು, ನಂದಿದ ಜೀವ
ಜೀವನವ ಒಯಸುವನೆ?
ಪರದಾಸ್ಯ ಸಂಕಲೆಯ
ಬಿಗಿಸಿಕೊಂಡುಳಿಯುವನೆ
ಸಿಡಿಲಿನಣುಗ.
ಏಳನೆಯ ನರಕದಾ
ಪುಳುವಿನಾಜೀವನವ
ಶತಮಾನಗಳು ಸೂಕಿ
ಉಳಿಯುವುದೆ? ಒಂದುದಿನ
ಸ್ವಾತಂತ್ರ್ಯದಾ ಬದುಕೆ
ಕೈವಲ್ಯಧಾಮವದು.
ಒಂದುದಿನ, ಒಂದುಕ್ಷಣ,
ಒಂದು ಯುಗಮಾನವದು.
ಅದರಿಂದ ಲೈತನ್ನಿರಣಭುವಿಗೆ
ಸೋದರರೆ!
ಮಾತೃಭೂಮಿಗೆ ಆತ್ಮಯಜ್ಞ
ಮಾಡಲು ಬನ್ನಿ;
ಅದಕಿಂತ ಮಿಗಿಲಾದ
ಈಶಸೇವೆಯದುಂಟೆ?

—ಈಶ್ವರಚಂದ್ರ ಗುಪ್ತ

ಪೌರಧರ್ಮ ಮತ್ತು ರಾಷ್ಟ್ರನೀತಿ.

(ಶ್ರೀ ಕೆ. ಕೃಷ್ಣಯ್ಯಂಗಾರ್, ಬಿ. ಎ., ದೇಶೀಯ ವಿದ್ಯಾಶಾಲಾ, ಬೆಂಗಳೂರು ನಗರ)

ನೈಜಾಮರಾಜ್ಯದ ಮಂತ್ರಿಗಳಲ್ಲಿ ಪ್ರಸಿದ್ಧರಾದವರಲ್ಲಿ ಒಬ್ಬಾತನು ರಾಜಾ ಚಂದೂಲಾಲನೆಂಬವನು. ೧೮೦೬ರಿಂದ ೧೯೫೩ರವರೆಗೆ ಹೈದರಾಬಾದಿನಲ್ಲಿ ಆತನು ಬಹಳ ಧರ್ಮಿಷ್ಠನೆಂದು ಖ್ಯಾತಿಗೊಂಡಿದ್ದನು. ಜೀವನದಲ್ಲಿ ಬಲು ಸರಳ, ಮಾತಿನಲ್ಲಿ ವಿನೀತ, ಕೆಲಸದಲ್ಲಿ ಸದಾನಿರತ, ವಿದ್ವಾಂಸರಲ್ಲಿ ಅಭಿಮಾನಿ, ಧರ್ಮಕಾರ್ಯಗಳಲ್ಲಿಯೂ ದಾನ ಮಾಡುವುದರಲ್ಲಿಯೂ ಅಗ್ರಗಣ್ಯ; ಯೋಗಿಯಂತೆಯೇ ಆತನಿದ್ದುದು ಅದರೂ ಆಡಳಿತದಲ್ಲಿ ಆತನ ಅಧಿಕಾರವು ಕಾಠಿಣ್ಯವಿಲ್ಲದೆ ಇದ್ದು ಬಿಕ್ಕಟ್ಟು ತಪ್ಪಿತು. ಆತನೇ ಸಾಲಕ್ಕೆ ಸಿಕ್ಕಿದನು. ಇಂಗ್ಲೀಷರು ಆತನ ಗುಣಗಳನ್ನು ಮೆಚ್ಚಿದರು. ಆದರೆ ಈವುಗಳನ್ನು ವಿಮರ್ಶೆಮಾಡುತ್ತ " ಸ್ವಂತ ಜೀವನದಲ್ಲಿ ಆತನು ಬಹು ಗುಣವಂತ, ಸಾರ್ವಜನಿಕರೀತ್ಯಾ ಗುಣಹೀನ " ಎಂದು ಬರೆದರು. ಈ ವ್ಯತ್ಯಾಸವನ್ನು ಸ್ವಲ್ಪ ಸಾವಧಾನವಾಗಿ ಕಾಣಬೇಕು. ಹುಡುಕಿದರೆ ಸ್ವಂತ ಜೀವನದಲ್ಲಿ ನಿಷ್ಕಳಂಕ ಸುಗುಣಿಗಳೂ ಆಗಿದ್ದು ರಾಷ್ಟ್ರಕಂಟಕರಾಗಿದ್ದವರ ಹೆಸರುಗಳು ಬೇಕಾದಷ್ಟು ಸಿಕ್ಕುತ್ತವೆ. ರಾಜಾ ನಂದಕುಮಾರನು ಮೋಸ, ತಂತ್ರ, ಕಪಟ, ಠಕ್ಕು ವಿದ್ಯೆಗಳಲ್ಲಿ ಅತಿ ಚತುರನಾದವನು; ಆದರೆ ಸ್ವಂತ ಜೀವನದಲ್ಲಿ ಪರಮನಿಷ್ಕಳಂಕನಾಗಿದ್ದನಂತೆ.

ಇದೊಂದು ಪಕ್ಷ. ಸ್ವಂತ ಜೀವನದಲ್ಲಿ ನೀತಿಭ್ರಷ್ಟರಾಗಿದ್ದು ಅಧಿಕಾರದಲ್ಲಿ ದಕ್ಷರಾಗಿದ್ದವರ ದೃಷ್ಟಾಂತಗಳು ಇನ್ನೊಂದು ಪಕ್ಷ. ಇಂತಹವರಲ್ಲಿ ಅಧಿಕಾರ ಗುಣಗಳು ಪ್ರಬಲ; ಸ್ವಂತ ಗುಣಗಳಿನ್ನುವುದು ದುರ್ಬಲ. ಈ ವಿಧವಾದ ಗುಣಗಳ ವಿಭಾಗವೇ ನಮಗೆ ತೋರುವುದಿಲ್ಲ. ಸ್ವಂತ ಗುಣ ಬೇರೆ, ಅಧಿಕಾರ ಗುಣ ಬೇರೆ ಎಂಬ ಭಾವನೆಯೇ ನಮಗೆ ವಕ್ರವಾಗಿ ಕಾಣುವುದು. ಇದರ ರಹಸ್ಯವನ್ನು ತಿಳಿಯಲು ನಾವು ಪೌರಸ್ತ್ಯ ಪಾಶ್ಚಾತ್ಯಸಮಾಜಗಳ ತುಲನೆಯನ್ನು ಮಾಡಬೇಕು. ಅಧಿಕಾರ ಗುಣವೆನ್ನುವುದು ಅವರಲ್ಲಿ ವಿಶೇಷವಾಗಿ ವೃದ್ಧಿಯನ್ನೈದಿದುದು ಹೇಗೆ? ನಮ್ಮಲ್ಲಿ ಆ ಗುಣಗಳು ಎಂದೂ ತೋರಲೇ ಇಲ್ಲವೇ? ತೋರಿದ್ದರೆ ಪ್ರಕಾಶಕ್ಕೆ ಬಾರಲೇ ಇಲ್ಲವೇ? ಬಂದಿದ್ದು ಅಡಗಿಹೋದುವೇಕೆ? ಈ ಪ್ರಶ್ನೆಗಳಿಗೆ ಒಮ್ಮೇಲೇ ಒಂದೆರಡು ಮಾತುಗಳಲ್ಲಿ ಸಮಾಧಾನ ಹೇಳುವುದು ಸುಲಭವಲ್ಲ. ಪ್ರಕೃತದಲ್ಲಿ ಅವುಗಳ ವಿಸ್ತಾರ ವಿಮರ್ಶೆಯನ್ನು ಮಾಡುವುದೂ ಕರ್ತವ್ಯವಲ್ಲ. ಪಾಶ್ಚಾತ್ಯರೀತಿನೀತಿಗಳನ್ನೂ ನಡೆನುಡಿಗಳನ್ನೂ ವಿಚಾರಿಸಿನೋಡಿದಾಗ ಸಾರ್ವಜನಿಕವೆಂದು ಹೆಸರಾದ ಗುಣಗಳು ಅವರಲ್ಲಿಯೇ ವಿಶೇಷವೆಂದು ಹೇಳಬೇಕಾಗುವುದು. ವಿದೇಶಗಳಲ್ಲಿ ಸಂಚಾರಮಾಡಿ ಬಂದವರು ಯಥಾರ್ಥವಾಗಿ ಹೇಳುವುದನ್ನು ಕೇಳಕೇಳಿ ಬೇಸರವಾಗಿದ್ದರೂ ಕೂಡ ಸ್ಮರಿಸೋಣ.

ಪಾಶ್ಚಾತ್ಯರು ಬೀದಿಗಳಲ್ಲಿ ಉಗುಳುವುದಿಲ್ಲ; ಕಾಗದವನ್ನು ಹರಿದರೆ ಚೂರುಗಳನ್ನು ತಮ್ಮ ಜೇಬಿನಲ್ಲಿ ಹಾಕಿಕೊಂಡು ತರುವಾಯ ಕಸದಬುಟ್ಟಿಗೆಹಾಕುತ್ತಾರೆ. ನಮ್ಮಲ್ಲಿ ರಸ್ತೆಯೇ ಗಲೀಜುಮಾಡುವ ಸ್ಥಳ. ಇದರಿಂದ ಅವರು ನಮಗಿಂತ ಶುಚಿಯೆಂದಲ್ಲ; ಬೀದಿಯನ್ನು ಶುಚಿಯಾಗಿಡುವುದರಲ್ಲಿ ಅವರಿಗೆ ನಿಷ್ಠೆಯುಂಟೆಂದು ಮಾತ್ರ ಅರ್ಥ. ಲಾಲ್‌ಬಾಗಿನಂತಹ ಸಾರ್ವಜನಿಕ ಉದ್ಯಾನವನದಲ್ಲಿ ಅವರು ದಾರಿಯನ್ನು ಬಿಟ್ಟು ಅಡ್ಡವಾಗಿ ಹೊರಡುವುದಿಲ್ಲ; ಹೂವೂ ಹಣ್ಣೂ ಕೀಳುವುದಿಲ್ಲ; ನಾವಾದರೆ ಅಂತಹ ನಿಯಮಗಳನ್ನು ಹೊಸದಾಗಿ ಕಲಿಯುತ್ತಿದ್ದೇವೆ. ರೈಲು ಸ್ಟೇಷನ್ನಿನಲ್ಲಿ ರೈಲು ಹೊರಡುವಾಗ ಟಿಕೆಟ್ಟುಗಳಿಗೆ ನಮ್ಮ ಗದ್ದಲವೋ ಗದ್ದಲ! ದೊಂಬಿಯಲ್ಲಿ ಉಸಿರು ಸಿಕ್ಕಿ ಪ್ರಾಣಸಂಕಟವೆಷ್ಟು ಸಲವೋ! ಅವರಲ್ಲಿ ಮೊದಲು ಬಂದಾತನು ಮುಂದೆ, ಆತನ ಹಿಂದೆ ಇತರರು ಕ್ರಮವಾಗಿ ಒಬ್ಬರ ಹಿಂದೊಬ್ಬರು ನಿಂತಿದ್ದು ಅದೇ ಕ್ರಮವನ್ನು. ಕಾಪಾಡಿ

ಕೊಂಡು ಗದ್ದಲವಿಲ್ಲದೆ, ಯಾರಿಗೂ ತೊಂದರೆಯಿಲ್ಲದೆ ಟಿಕೆಟ್ಟುಗಳನ್ನು ಕೊಳ್ಳುವರು. ರೈಲು ಬಂಡಿಯಲ್ಲಿ ಪ್ರಯಾಣ ಮಾಡುವಾಗ ಅವರು ಸಿಗರೇಟು ಸೇದಿದರೂ ಅದರ ತುಂಡನ್ನು ಕೆಳಗೆ ಹಾಕುವುದಿಲ್ಲ; ನೆಲಗಡಲೆ ಕಾಯಿ ತಿಂದು ಸಿಪ್ಪೆಯನ್ನು ನಮ್ಮ ತರುವಾಯ ಬಂಡಿಯನ್ನೇರುವವರ ಪಾಲಿಗೆ ಕೆಳಗೆ ಚಲ್ಲಿರುವುದು ನಮ್ಮಲ್ಲಿ ಸಾಮಾನ್ಯ, ಅಲ್ಪ ವಿಷಯ. ಇತ್ಯಾದಿ, ಇತ್ಯಾದಿ.

ಇವುಗಳನ್ನು ಸ್ಮರಿಸಿ ನಮ್ಮಲ್ಲಿ ಸೀಮೆಗೆ ಹೋಗಿ ಬಂದವರು ಖಿನ್ನರಾಗುವುದು ಸಾಮಾನ್ಯ ಮತ್ತು ಸಹಜ. ಆ ಸಮಯದಲ್ಲಿ ನಮ್ಮ ನಾಗರಿಕತೆಯನ್ನೇ ನಿಂದಿಸುವಷ್ಟು ಜುಗುಪ್ಸೆಯು ಅವರ ಮನಸ್ಸಿನಲ್ಲಿ ತೋರುವುದು. ಜುಗುಪ್ಸೆಯ ಮಧ್ಯದಲ್ಲಿ ವಿಚಾರ ವಿರುವುದಿಲ್ಲ. ಬಹಿರಂಗ ಗುಣಗಳಲ್ಲಿ ನಟ್ಟ ದೃಷ್ಟಿಯಿಂದ ನಮ್ಮನ್ನು ಅವರು ಅವಹೇಳನ ಮಾಡುವರು. ಆಂತರಂಗದ ಗುಣಗಳಲ್ಲಿ ಅವರ ದೃಷ್ಟಿಯು ಸಾಮಾನ್ಯವಾಗಿ ಕಡಿಮೆ. ಪಾಶ್ಚಾತ್ಯ ದೇಶಗಳಲ್ಲಿ ಪ್ರತಿ ವ್ಯಕ್ತಿಗೂ ಬಹಿರಂಗ ಗುಣಗಳು ಅತ್ಯವಶ್ಯಕ; ಅದುದರಿಂದ ಪಾಶ್ಚಾತ್ಯರಲ್ಲಿ ಬಹಿರಂಗ ಗುಣಗಳು ಪ್ರಧಾನವಾಗಿ ಕಾಣುತ್ತವೆ. ನಮ್ಮಲ್ಲಿ ಆ ಗುಣಗಳು ಇಲ್ಲವೇ ಇಲ್ಲವೆಂದು ಯಾರೂ ಹೇಳಲಾಗುವುದಿಲ್ಲ. ದೇವಸ್ಥಾನಗಳು ಈಗ ಕೊಳಕಿಗೆ ತೌರುಮನೆಯಾಗಿದ್ದಾಗ್ಗೂ ಪೂರ್ವದಲ್ಲಿ ನಿಯಮಗಳಿರಲಿಲ್ಲವೇ? ತೀರ್ಥಘಟ್ಟಗಳಲ್ಲಿ ನೀರನ್ನು ಕೆಡಿಸಿದವರು ಕಂಟಕಪ್ರಾಯರೆಂದು ಬಹಿಷ್ಕಾರಕ್ಕೆ ಗುರಿಯಾಗುತ್ತಿರಲಿಲ್ಲವೇ? ರೈಲು, ಟಿಕೆಟ್ಟಿನ ವಿನೋದ ಮುಂತಾದುವು ನಮ್ಮ ಸಮಾಜಕ್ಕೆ ಹೊಸವು; ಮತ್ತು ಅವನತಿಯಲ್ಲಿ ಸಿಲ್ಕಿದ ಭಾರತೀಯ ಸಮಾಜವನ್ನೂ ಉನ್ನತಿಯಲ್ಲಿರುವ ಪಾಶ್ಚಾತ್ಯ ಸಮಾಜದೊಡನೆ ಹೋಲಿಸುವುದು ನ್ಯಾಯವಲ್ಲ. ಈ ವಿಮರ್ಶೆಯು ಹಾಗಿರಲಿ. ಸದ್ಯಕ್ಕೆ ಪಾಶ್ಚಾತ್ಯರಲ್ಲಿ ಸಾರ್ವಜನಿಕ ವಿಷಯಗಳಲ್ಲಿ ಭಾರತೀಯರಿಗಿಂತ ಹೆಚ್ಚಾದ ಅವರ ಗೌರವಗಳನ್ನು ತೋರುವ ಗುಣಗಳು ಕಾಣುತ್ತವೆಂಬುದನ್ನು ಒಪ್ಪಿಕೊಳ್ಳೋಣ. ಸಾರ್ವಜನಿಕ ವಿಷಯಗಳು ಎಂಬ ವಿಚಾರವು ಅವರಲ್ಲಿ ಹುಟ್ಟಿದುದು ಹೇಗೆ? ಅಭಿವೃದ್ಧಿಯಾದುದು ಹೇಗೆ?

ಇಂಗ್ಲೆಂಡಿನಲ್ಲಿ ೧೬, ೧೭ನೆ ಶತಮಾನಗಳಲ್ಲಿ ದೊರೆಗಳು ನಿರಂಕುಶರಾಗಿಯೇ ಇದ್ದರು. ಎರಡನೆ ವಿಲಿಯಂ, ಎರಡನೆ ಹೆನ್ರಿ ಎಂಬ ದೊರೆಗಳ ಕಾಲದಲ್ಲಿ ಅರಣ್ಯಗಳು ದೊರೆಗೆ ಸೇರಿದವುಗಳಾಗಿದ್ದವು; ಸಾಮಾನ್ಯ ಪ್ರಜೆಗೆ ಅವುಗಳನ್ನು ಪ್ರವೇಶಿಸಿ ಮರಕಡಿಯುವುದಕ್ಕಾಗಲಿ, ಬೇಟೆಯಾಡುವುದಕ್ಕಾಗಲಿ ಅಸ್ಪದವಿರಲಿಲ್ಲ. ಈ ಸ್ಥಿತಿಯಲ್ಲಿ ಪ್ರಜೆಯು ದೊರೆಯ ಬಲಕ್ಕೆ ಭಯಪಡುತ್ತಿದ್ದನು; ದೊರೆಯು ದುರ್ಬಲನಾದಾಗ ಜೋರ

ಗಾಂಧೀಜಿಯವರ ಸಮರಪ್ರಯಾಣ

ನಾಗುತ್ತಿದ್ದನು. ಆಗಿನ ಕಾಲದ ಅರಣ್ಯಗಳು ಈಗ ಇಂಗ್ಲೆಂಡಿನಲ್ಲಿಲ್ಲ. ಆ ಪ್ರದೇಶಗಳು ಪಟ್ಟಣಗಳಾಗಿಯೋ, ವಿಹಾರವನಗಳಾಗಿಯೋ ರೂಪಾಂತರ ಹೊಂದಿವೆ. ವಿಹಾರವನವು ಈಗ ದೊರೆಯದಲ್ಲ; ವ್ರಜಗಳದು. ಆದ್ದರಿಂದ ಕದಿಯಲು ಮನಸ್ಸು ಮಾಡುವವನು ಒಂದಂಶವನ್ನು ತನ್ನಿಂದಲೇ ಕದಿಯಬೇಕು. ಎಲ್ಲರಿಗೂ ಬೇಕಾವ ಸ್ವತ್ತು ಒಬ್ಬನಿಗೋ ಅಥವಾ ಹಲಕೆಲವರಿಗೋ ಸೇರಿದಾಗ ಇತರರಿಗೆ ಅದರ ಮೇಲೆ ಕೆಟ್ಟಕಣ್ಣೇ ಇರುವುದು ಸಹಜ. ಸ್ವತ್ತು ಎಲ್ಲರಿಗೂ ಸೇರಿದಾಗ ಎಲ್ಲರೂ ಮಾಲೀಕರು. ಎಲ್ಲರೂ ಯಜಮಾನರು. ಅದುದರಿಂದ ಸ್ಥಿತಿಯನ್ನು ಕಾಪಾಡುವುದರಲ್ಲಿ ಎಲ್ಲರಿಗೂ ದೃಷ್ಟಿ. ಕಳ್ಳರು ಪುಂಡರನ್ನು ಹಿಡಿಯಲು ಎಲ್ಲರಿಗೂ ಆತುರ; ಎಲ್ಲರಿಗೂ ಉತ್ಸಾಹ ಎಲ್ಲರ ಯಾಜಮಾನ್ಯವೆಂಬುದು ಯಾವಾಗ ಪ್ರಾರಂಭವಾಯಿತು?

ಇಂಗ್ಲೆಂಡಿನ ಇತಿಹಾಸದಲ್ಲಿ 'ಮಾಗ್ನಕಾರ್ಟ' ಎಂಬುದೇ ಇದಕ್ಕೆ ಮೊದಲು. ಆಗ ದೊರೆಯೇ ದುರ್ನೀತಿಯುತನಾಗಿ ದೇಶದಲ್ಲೆಲ್ಲ ಹಾಹಾಕಾರವನ್ನೆಬ್ಬಿಸಿದನು. ಪ್ರಜೆಗಳ ಸಂಕಟವು ದಿನೇ ದಿನೇ ವೃದ್ಧಿಯಾಗಿ ಕಡೆಗೆ ದಂಗೆಯೇ ಸಿದ್ಧವಾಗಿ ರಾಜನಿಗೂ ಪ್ರಜೆಗಳಿಗೂ ಯುದ್ಧವಾಗಿ ರಾಜನು ಬಲವಂತಕ್ಕೆ ಸಿಲ್ಕಿ ಆ ಸನ್ನದನ್ನ ಜನರಿಗೆ ಕೊಡಲು ಒಪ್ಪಿದನು. ಅಲ್ಲಿಂದ ಮುಂದಕ್ಕೆ ಪ್ರಜಾಭಿಮತವನ್ನು ಅನುಸರಿಸಿದ ರಾಜರು ಒಳ್ಳೆಯವರೆನಿಸಿದರು; ಪ್ರಜೆಗಳನ್ನು ಅಸಡ್ಡೆಮಾಡಿದವರು ನಿಷ್ಠುರರೆನಿಸಿದರು. ಪ್ರಜೆಗಳಲ್ಲಿ ಐಶ್ವರ್ಯ ವೃದ್ಧಿಯಾದಹಾಗೆ ಪ್ರಜಾನಾಯಕರು ದೊರೆಗಳ ಬಲವನ್ನು ಮುರಿಯಲು ಸಾಹಸಪಟ್ಟರು. ತಾವು ದಿವ್ಯಪುರುಷರೆಂದು ಹಟ ಹಿಡಿದ ರಾಜರುಗಳಲ್ಲಿ ಒಬ್ಬ ದೊರೆಯು ಶಿರಚ್ಛೇದನವನ್ನು ಅನುಭವಿಸಿದನು; ಮತ್ತೊಬ್ಬನು ರಾಜ್ಯಭ್ರಷ್ಟನಾದನು. ಆ ತರುವಾಯ ದೊರೆಗಳು ಬಹಳ ಉಪಾಯದಿಂದ ವರ್ತಿಸಬೇಕಾಯಿತು. ರಾಜನಿಗೂ ಪ್ರಜೆಗಳಿಗೂ ನಡೆದ ಈ ವಿರೋಧ ಪ್ರಕರಣವು ಸಾವಕಾಶವಾಗಿ ಸಾಗಿ ಕಡೆಗೆ ರಾಜನು ಪ್ರಜಾನಾಯಕರ ಸೂತ್ರದ ಗೊಂಬೆಯಾದನು. ಈ ಸಂದರ್ಭದಲ್ಲಿ ರಾಜರು ಸರ್ವಾಧಿಕಾರವೂ ತಮ್ಮದೆಂದು ಹಟಹಿಡಿದುದಲ್ಲದೆ ತಾವು ಮಾಡಿದುದೆಲ್ಲವೂ ನ್ಯಾಯವೇ ಎಂಬವಾದವನ್ನು ಮಾಡಿದರೆಂಬುದನ್ನು ನೆನಪಿನಲ್ಲಿಡಬೇಕು. ಇಂತಹ ವಾದವನ್ನು ವ್ರತಿಭಟಿಸುವ ಸಂದರ್ಭದಲ್ಲಿಯೇ ಇಂಗ್ಲೀಷರು ರಾಷ್ಟ್ರನೀತಿ ಶಾಸ್ತ್ರದ ವ್ಯಾಸಂಗವನ್ನು ಮೊದಲು ಮಾಡಿದುದು. ರಾಜನಿಂದಲೋ, ಅಥವಾ ರಾಜನ ಗೆಳೆಯರಿಂದಲೋ ಅಧಿಕಾರವನ್ನು ಕಿತ್ತುಕೊಳ್ಳುವುದೇ ಈ ಸಾಧನೆಯ ಉದ್ದೇಶವಾಗಿತ್ತು. ಪ್ರಜೆಗಳ ಅಧಿಕಾರವನ್ನು ಭದ್ರವಾಗಿ ಸ್ಥಾಪಿಸಿಕೊಳ್ಳುವುದೇ ಪ್ರಜಾನೇತೃಗಳ ವರಮೋದ್ದೇಶವಾಗಿತ್ತು. ಆದುದರಿಂದ ಅಭಿವೃದ್ಧಿ ಪಡೆದ ರಾಷ್ಟ್ರನೀತಿಯ ವ್ಯಾಸಂಗದಲ್ಲಿಯೂ ರಾಷ್ಟ್ರದ ಸನ್ನದು, ಕರಾರು ಮುಂತಾದ ಪ್ರಮಾಣ ಪತ್ರಗಳಲ್ಲಿಯೂ ಪ್ರಜಾಧಿಕಾರವೇ ಪ್ರಕಟವಾಯಿತು.

ನೆರೆಯಲ್ಲಿರುವ ಸ್ಪ್ರಾನ್ಸ್ ದೇಶದಲ್ಲಿ ಈ ಸಂಗತಿಯು ಅದ್ಭುತವಾಗಿ ಸ

ಉಪ್ಪಿನ ಸತ್ಯಾಗ್ರಹ (ಆರಿಸುವಿಕೆ)

ಪ್ರದು ಪ್ರಾರಂಭವಾಯಿತು. ಆದುದರಿಂದ ವಿಪರೀತವಾ ಗಿಯೇ ಪರಿಣಮಿಸಿ ಪಾಶ್ಚಾತ್ಯ ಜಗತ್ತನ್ನೇ ಸ್ತಂಭಿ ಸಿತು. ಫ್ರೆಂಚುಜನರು ರಾಜರೊಡನೆ ಕರಾರುಮಾಡಿ ಕೊಂಡು ತೃಪ್ತರಾಗಲಿಲ್ಲ. ರಾಜತ್ವವನ್ನೇ ಕಿತ್ತೊ ಗೆದು ರಾಜನನ್ನು ಶಿರಚ್ಛೇದನಮಾಡಿದರು. ಈ ಸಂಗ ತಿಯ ಸತ್ಪರಿಣಾಮವು ಭದ್ರವಾಗಿ ಊರಲು ತಡವಾ ಯಿತು. ಮತ್ತು ಪರಿಣಾಮವು ಫ್ರಾನ್ಸ್ ಒಂದೇ ದೇಶದಲ್ಲಲ್ಲದೆ ಯೂರೋಪಿನ ದೇಶಗಳೆಲ್ಲವುಗಳಲ್ಲಿಯೂ ಪ್ರಬಲವಾದ ಸಾಂಕ್ರಾಮಿಕ ಜಾಡ್ಯದಂತೆ ಹರಡಿಕೊಂ ಡಿತು. ಮುಖ್ಯವಾಗಿ ಇದರ ಪರಿಣಾಮವಾಗಿ ರಾಷ್ಟ್ರನೀತಿಯಲ್ಲಿ ಪ್ರಜಾಪ್ರಭುತ್ವವೆಂಬ ತತ್ವವು ಮೂಲ ಮಂತ್ರವಾಯಿತು; ರಾಜರ ಅವತಾರ ಪೂರ್ತಿ ಯಾಗದಿದ್ದರೆ ಇವರ ಬಂಧನ ಪೂರ್ತಿಯಾಯಿತು. ಒಂ ದೊಂದಾಗಿ ದೇಶಗಳು ರಾಜತ್ವವನ್ನು ಕೊನೆಗಾಣಿಸಲು ಸಿದ್ಧವಾದುವು. ಅತ್ತಲಾಗಿ ಯೂರೋಪಿನ ಮರಿ ಯಾದ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ರಾಜ ರಹಿತವಾದ ರಾಷ್ಟ್ರವು ಸಿದ್ಧವಾಗಿ ದಿನೇ ದಿನೇ ಪ್ರವ ರ್ಧಮಾನವಾಗುತ್ತ ಯೂರೋಪಿನ ಜನಗಳಿಗೆ ಮಾ ರ್ಗದರ್ಶಕವಾಯಿತು.

ರಾಜರ ದೌಷ್ಟ್ಯವೇ ಪ್ರಜಾಪ್ರಭುತ್ವ ತತ್ವದ ವ್ಯಾ ಪ್ತಿಗೆ ಮೂಲಕಾರಣವಾಯಿತು. ಆದರೆ ಯೂರೋ ಪಿನ ರಾಜಕೀಯ ರಂಗದಲ್ಲಿ ಪ್ರಜಾತಂತ್ರವೆಂಬ ವಂ ಶ್ರದ ಜಯವು ಮೊದಲಾದ ಸಮಯದಲ್ಲಿಯೇ ಔದ್ಯೋ ಗಿಕ ಕ್ರಾಂತಿಯೆಂಬುದೂ ಘಟಿಸಿತು. ಯೂರೋಪಿನ ದೇಶಗಳು ವಿಶಾಲವಾದ ನದಿಗಳ ಬಯಲುಗಳಲ್ಲ; ಭೂ ಸ್ಥಿತಿಯು ಕಡಿಮೆ. ಆದ್ದರಿಂದ ಜೀವನದಲ್ಲಿ ಜನರು ವ್ಯವಸಾಯವನ್ನೇ ಹೆಚ್ಚಾಗಿ ಅವಲಂಬಿಸದೆ ಉದ್ಯೋಗಗಳನ್ನೂ ಕೈಗಾರಿಕೆಗಳನ್ನೂ ಅವಲಂಬಿಸಬೇಕಾ ಯಿತು. ಉದ್ಯೋಗದಲ್ಲಿ ಯಂತ್ರಗಳ ಉಪಯೋ ಗವೂ, ಯಂತ್ರದ ಹಿಂದೆಯೇ ಧನಿಕರ ಯಾಜಮಾನ್ಯವೂ ಸಹಜ ಪ್ರಾಬಲ್ಯವನ್ನು ಹೊಂದಿದುವು. ಉದ್ಯೋಗ ಕೈಗಾರಿಕೆಗಳ ಪ್ರಾಧಾನ್ಯದಲ್ಲಿ ವ್ಯವಸ್ಥೆಯೆಂಬುದು ಬಲು ಮುಖ್ಯವಾಯಿತು; ಪೋಟಾಪೋಟಿಯು ಯುದ್ಧಭೂಮಿಯಲ್ಲಿ ಹೇಗೋ ಔದ್ಯೋಗಿಕಕ್ಷೇತ್ರದ ಲ್ಲಿಯೂ ಹಾಗೆಯೇ. ಪ್ರತಿ ಉದ್ಯೋಗವೂ ವ್ಯವಸ್ಥೆ ಗೊಳಗಾಗುವುದು ಅತ್ಯವಶ್ಯಕವಾಯಿತು. ಒಗ್ಗಟ್ಟಿ ನಿಂದ ಹತ್ತು ಜನರು ಸೇರಿ ಕೆಲಸಮಾಡುವುದು ಜೀವ ನದ ಮೂಲಮಂತ್ರವಾಗಿ ಪರಿಣಮಿಸಿತು. ಮನೆ ಯಲ್ಲಿ ಕಠೋರನಾಗಿ ಪ್ರವರ್ತಿಸಿ ಹೆಂಡತಿ ಮಕ್ಕ ಳನ್ನು ಹೊಡೆದು ಬಯ್ದಾಡುವ ನೀಚನೂ ಕೂಡ ತನ್ನ ಉದ್ಯೋಗದಲ್ಲಿ ತನ್ನ ಸ್ಥಾನಮರ್ಯಾದೆಯನ್ನು ಪಾಲಿ ಸುವುದು ಸಮಾಜಜೀವನದ ಲಕ್ಷಣವಾಯಿತು. ವ್ಯವ ಸ್ಥೆಯೆನ್ನುವುದು ಪಾಶ್ಚಾತ್ಯರಲ್ಲಿ ಈ ಬಲದಿಂದ ಪೋಷಿ ತವಾಯಿತು. ನಮ್ಮ ಹಿಂದಿನ ಕಾಲದಲ್ಲಿ ಶಾಸ್ತ್ರದ ಹುಚ್ಚುರೇಗಿ ಚೌರ್ಯಕ್ಕೂ ಶಾಸ್ತ್ರ ಹುಟ್ಟಿಕೊಂಡಂತೆ ಅವರಲ್ಲಿ ಚೌರ್ಯಕ್ಕೂ ವ್ಯವಸ್ಥೆಯು ಹುಟ್ಟಿತು. ಜನಜೀವನದ ಎಲ್ಲ ರಂಗಗಳಲ್ಲಿಯೂ ವ್ಯವಸ್ಥೆಯು ಮೂಡಿದಾಗ ರಾಜಕೀಯ ರಂಗದಲ್ಲಿಯೂ ಕೂಡ ಅಧಿಕಾರಕಾಂಡದ ವ್ಯವಸ್ಥೆಯು ವಿಸ್ತಾರವೂ ಭದ್ರವೂ ಆಯಿತು. ಅನೇಕ ಶತಮಾನಗಳ ಕಾಲ ಅಧಿಕಾರ ಲೇಶವೂ ಇಲ್ಲದೆ ರಾಜಾಸ್ಥಾನಿಕರ ಹಂಗಿಗೆ ಒಳಗಾ ಗಿದ್ದ ವರ್ಗಗಳ ಜನರು ಪ್ರಜಾಪ್ರಭುತ್ವದ ಸ್ಥಾಪನೆ ಯಲ್ಲಿ ಮುಂದಾಳುಗಳಾಗಿ ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಂಡರು. ರಾಜಕೀಯವಾದ ವಿಷಯವು

ವ್ಯವಸ್ಥೆಗೂ ಕ್ರಮುಕ್ಕೂ ಒಳಗಾಗಿ ಅದರಲ್ಲಿ ನ್ಯಾಯಾನ್ಯಾಯ ಎಕ್ಸ್ಗಳನ್ನು ಸಿಷ್ಕರ್ಷೆಮಾಡಲು ಕಾನೂನುಗಳು ಸಿದ್ದವಾದವು.

ಇಂತಹ ಸ್ಥಿತಿಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯವೆನ್ನುವುದು ಮೂಲವೆನ್ನಿಸಿತು. ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬನಿಗೂ ದೈಹಿಕಸ್ವಾತಂತ್ರ್ಯ, ವಾಕ್ಸ್ವಾತಂತ್ರ್ಯ, ಸಂಚಾರಸ್ವಾತಂತ್ರ್ಯ, ಶಿಕ್ಷಣದ ಅನುಕೂಲ, ಜೀವನದ ಅನುಕೂಲ ಮುಂತಾದವು ಹಕ್ಕುಗಳಾಗಿ ಪರಿಣಮಿಸಿದವು. ರಾಷ್ಟ್ರಸ್ಥಾಪನೆಯ ಮೂಲಪತ್ರಗಳಲ್ಲಿ ಪ್ರಜಾಧಿಕಾರಗಳೆಂಬ ಈ ವಿಧವಾದ ಹಕ್ಕುಗಳು ಪ್ರಕಟವಾದುವು. ಬಹಳ ಕಾಲದವರೆಗೂ ಈ ಅನುಕೂಲಗಳು ಇಲ್ಲದೆ ಇದ್ದುದರಿಂದ ಅವರಿಗೆ ದೃಷ್ಟಿಯು ಹೆಚ್ಚಾಗಿ ಈ ಅಧಿಕಾರಗಳಲ್ಲಿಯೇ ನಟ್ಟಿತು. ರಾಜತ್ವವನ್ನು ನಾಶಮಾಡಿ, ಪ್ರಾತಿನಿಧ್ಯದ ಮೂಲಕ ಪ್ರಜಾತಂತ್ರವನ್ನು ಅನುಸರಿಸಿದ ರಾಷ್ಟ್ರಗಳೆಲ್ಲವುಗಳಲ್ಲಿಯೂ ಈ ಅಧಿಕಾರಗಳು ಪ್ರಧಾನಸ್ಥಾನಗಳನ್ನು ಪಡೆದಿವೆ. ಫ್ರಾನ್ಸ್ದೇಶದಲ್ಲಿ ಜನರ ನಾಯಕರು ನೂರಾರುವರ್ಷ ಕಾಲ ಅನ್ಯಾಯಕ್ಕೆ ಸಿಲ್ಕಿ, ೧೭೯೯ರಲ್ಲಿ ಪ್ರಳಯವನ್ನೇ ನಡೆಸಿದಾಗ ಸ್ವಾತಂತ್ರ್ಯ, ಸಮತ್ವ ಮತ್ತು ಭ್ರಾತೃಭಾವಗಳು ಸಮಾಜದ ಮೂಲತತ್ವಗಳಾಗಿರಬೇಕೆಂದು ಆಸೆಪಟ್ಟರು. ಬಂದೊಂದಾಗಿ ಇತರ ರಾಜ್ಯಗಳಲ್ಲಿಯೂ ಈ ತತ್ವಗಳು ಪ್ರಸಾರವಾದವು. ಪ್ರತಿವ್ಯಕ್ತಿಯೂ ಸ್ವತಂತ್ರನಾಗಿರಬೇಕಾದಂತೆಯೇ ಪ್ರತಿ ರಾಷ್ಟ್ರವೂ ಸ್ವತಂತ್ರವಾಗಿರಬೇಕೆಂಬ ತತ್ವವೂ ಹೊರಟಿತು. ಸ್ವಾತಂತ್ರ್ಯ, ಸಮತ್ವ ಮತ್ತು ಭ್ರಾತೃಭಾವಗಳು ರಾಷ್ಟ್ರಶಾಸ್ತ್ರದ ಮೂಲಮಂತ್ರಗಳಾದಂತೆಯೇ ರಾಷ್ಟ್ರಸಮೂಹದಲ್ಲಿ ಚಿಕ್ಕ ರಾಷ್ಟ್ರಗಳೂ ದೊಡ್ಡ ರಾಷ್ಟ್ರಗಳೊಂದಿಗೆ ಸಮವಾಗಿರತಕ್ಕದ್ದೆಂದು ಸಿದ್ಧವಾಯಿತು.

ಡೆಮಾಕ್ರೆಸಿ ಅಥವಾ ಪ್ರಜಾತಂತ್ರ ಮತ್ತು ನ್ಯಾಷನಾಲಿಟಿ ಅಥವಾ ರಾಷ್ಟ್ರೀಯತೆ–ಎಂಬುವು ಕಳೆದ ನೂರೈವತ್ತು ವರ್ಷಗಳ ಚರಿತ್ರೆಯ ಮುಖ್ಯ ಚಲನೆಗಳು. ಇವುಗಳ ಪರಿಣಾಮವಾಗಿ ವ್ಯಕ್ತಿಯಾದವನಿಗೆ ರಾಷ್ಟ್ರೀಯ ಗುಣಗಳು ವೃದ್ಧಿಯಾದವು. ತನ್ನ ಅಧಿಕಾರದಲ್ಲಿ ಪ್ರತಿ ಐರೋಪ್ಯನಿಗೂ ಪ್ರಜ್ಞೆಯೊಂದೇ ಅಲ್ಲದೆ ವಿಶೇಷವಾದ ಅಭಿಮಾನವುಂಟು; ಅಧಿಕಾರ ಲೋಪದ ಸಮಯದಲ್ಲಿ ಅದಕ್ಕಾಗಿ ಹೊಡೆದಾಡಲು

ಅರಣ್ಯಶಾಸನೋಲ್ಲಂಘನ

ತನು ಸಿದ್ಧನಾಗುತ್ತಾನೆ. ಮತ್ತು ರಾಷ್ಟ್ರಭಕ್ತಿ ನ್ನುವುದು ಪ್ರತಿವ್ಯಕ್ತಿಗೂ ಸಹಜಗುಣವಾಯಿತು. ಯೂರೋಪಿನಲ್ಲಿ ಬೇರೆ ಕಾರಣಗಳಿಂದ ರಾಷ್ಟ್ರಗಳಲ್ಲಿ ಸ್ಪರ್ಧೆ ಅಥವಾ ವೋಟಾವೋಟಿ ನಡೆದುದು ಈ ಗುಣ ಳ ಅಭಿವೃದ್ಧಿಗೆ ಪೋಷಕವಾಯಿತು.

ಡೆಮಾಕ್ರಸಿಯ ತತ್ವಗಳು ಪ್ರಚಾರಗೊಂಡಕಾಲದ ಯೇ ಯೂರೋಪಿನ ಜನಜೀವನದಲ್ಲಿ ಔದ್ಯೋಗಿಕ ಸ್ಪಾಬಲ್ಯವೂ ಮೊದಲಾಯಿತು. ಇತರ ಖಂಡಗಳ ಭೂಭಾಗಗಳನ್ನು ಸಾಧಿಸುವುದರಲ್ಲಿ ಸಾಹಸವನ್ನೂ ಸ್ಪರ್ಧೆಯನ್ನೂ ವಹಿಸಿ ಆ ಭೂಭಾಗಗಳನ್ನು ತಮ್ಮ ದೇಶಗಳ ಉದ್ಯೋಗ ಕೈಗಾರಿಕೆಗಳಿಗೆ ಪೋಷಕಗಳಾಗಿ ಮಾಡಿಕೊಂಡುದೂ ಈ ಕಾಲದಲ್ಲಿಯೇ. ಉದ್ಯೋಗ ಕೈಗಾರಿಕೆಗಳಲ್ಲಿ ಪರಸ್ಪರ ಸ್ಪರ್ಧೆಯು ರೇಗುತ್ತಿದ್ದಾಗ ಸ್ತು ಬಹಳ ಅವಶ್ಯಕವಾಯಿತು. ವ್ಯಾಪಾರೋದ್ಯೋಗಗಳಲ್ಲಿ ಶಿಸ್ತು ಎನ್ನುವುದು ಪ್ರಧಾನವಾದುದು ಹೀಗೆ. 'ಇಂಗ್ಲೀಷು ಪಾಪಿನಲ್ಲಾದರೆ ಒಂದೇ ನಿಕರವಾದ ಬೆಲೆಯಪ್ಪ. ಚಿಕ್ಕ ಮಗು ಹೋದರೂ ಬಂದೇ ಬೆಲೆ, ಾಮಾನು ಖಾತರಿ, ಕೆಟ್ಟದ್ದೆಂದು ವಾಪಸುಮಾಡಿದರೆ ಂದಕ್ಕೆ ತೆಗೆದುಕೊಳ್ಳುತ್ತಾರೆ, ಮೋಸವಿಲ್ಲ, ಪ್ರಾಮಾಣಿಕವಾದ ವ್ಯಾಪಾರ ಅವರದು'' ಎಂದು ನಾವಾಗಾಗ ಆಡಿಕೊಳ್ಳುವುದುಂಟು. ವ್ಯಾಪಾರದಲ್ಲಿ ಮೋಸಮಾಡಿದರೆ ಹೆಸರು ಕೆಟ್ಟು ಮುಂದೆ ವ್ಯಾಪಾರವು ಖಂಡಿತವಾಗಿ ಕೆಡುವುದೆಂಬ ಸಂಗತಿ ಅವರಿಗೆ ಸ್ಪಷ್ಟವಾಗಿ ಗೊತ್ತುಂಟು. ವ್ಯಾಪಾರವೇ ಜೀವನ ಮಂತ್ರವಾದವರಿಗೆ ಈ ವಿಧವಾದ ಪ್ರಾಮಾಣಿಕತೆಯು ಸಹಜವಾಗಿಯೇ, ಅವಶ್ಯವಾಗಿಯೇ ಜನಿಸುತ್ತದೆ. ಉದ್ಯೋಗವ್ಯಾಪಾರಗಳಲ್ಲಿ ಶಿಸ್ತಿಲ್ಲದೆ ಆಗುವುದೇ ಇಲ್ಲ. ಹಿಂದೆ ಶಿಸ್ತಿಗೊಳಗಾಗಿ ಯುದ್ಧಮಾಡುತ್ತಿದ್ದ ಐರೋಪ್ಯ ಸೋಜರರು ಶಿಸ್ತಿಲ್ಲದಿದ್ದ ಭಾರತೀಯ ಸಿಪಾಹಿಗಳನ್ನು ಸುಲಭವಾಗಿ ಸೋಲಿಸಿದ್ದು ಹೇಗೆ? ವ್ಯಾಪಾರದಲ್ಲಿಯೂ ಹೀಗೆಯೇ. ನಮ್ಮ ದೇಶದಲ್ಲಿ ಇಂಗ್ಲೀಷ್ ವರ್ತಕರು ಮೋಸಕ್ಕೆ ಮೊದಲಿಟ್ಟೊಡನೆಯೇ ಗಿರಾಕಿಗಳು ಅವರ ಆಂಗಡಿಗೆ ಬೆನ್ನು ತೋರಿಸಿ ಜಪಾನಿನ, ಅಥವಾ ಬೇರೊಬ್ಬನ ಮಳಿಗೆಗೆ ಹೊರಡುವರು. ಔದ್ಯೋಗಿಕ ಪ್ರಪಂಚದ ಸ್ಪರ್ಧೆಯಿಂದ ಪಾಶ್ಚಾತ್ಯರಲ್ಲಿ ಶಿಸ್ತೆಂಬುದು ಸರ್ವಸಾಧಾರಣವಾಪ ಮತ್ತು ಅತ್ಯಾವಶ್ಯಕವಾದ ಮಂತ್ರವಾಯಿತು.

ವಿದೇಶೀವಸ್ತ್ರ ಬಹಿಷ್ಕಾರ (ಪಿಕೆಟಿಂಗ್)

ಉದ್ಯೋಗಗಳ ಪ್ರಾಬಲ್ಯದಿಂದ ಸಮಾಜದಲ್ಲಿ ಬೇರೊಂದು ನಸೆಯಿತು. ಪ್ರಾಶ್ಚಾತ್ಯ ಸಮಾಜಗಳಲ್ಲಿ ಭಾರತ ದೇಶದಲ್ಲಿದ್ದ ವರ್ಣ ವ್ಯವಸ್ಥೆಯಿಲ್ಲ. ಬೇಕಾದವರು ಬೇಕಾದ ಕಸಬನ್ನು ಅವಲಂಬಿಸಬಹುದಾಗಿದೆ; ಆದ್ದರಿಂದ ಪ್ರತಿ ಉದ್ಯೋಗದಲ್ಲಿಯೂ ಪ್ರತಿ ವ್ಯಾಪಾರದಲ್ಲಿಯೂ ಸ್ಪರ್ಧೆಗೆ ಮಿತಿಯೇ ಇಲ್ಲ. ಈ ಸ್ಪರ್ಧೆಯು ಅವರ ಸಮಾಜದಲ್ಲಿ ದುಡ್ಡಿದ್ದವನೇ ದೊಡ್ಡಪ್ಪನಾದುದರಿಂದ ಸಮಾಜದಲ್ಲಿ ಅಲ್ಪಸಂಖ್ಯಾಕರೂ ಬಹು ಧನಾಢ್ಯರೂ ಆದ ಕೆಲವರು ಬಹುಸಂಖ್ಯಾಕರೂ ಬಡವರೂ ಆದ ಅನೇಕರನ್ನು ತಮ್ಮ ವಶವರ್ತಿಗಳನ್ನಾಗಿ ಮಾಡಿಕೊಂಡಿರುವರು. ಡೆಮಾಕ್ರೆಸಿ ಎಂತ ತತ್ವವೇನೋ ಎಲ್ಲರ ಮನಸ್ಸಿನಲ್ಲಿಯೂ ಇದೆ; ಆದರೆ ಆಡಳಿತವು ಧನವಂತರ ಸ್ವಾಧೀನವಾಗಿದೆ. ಪೂರ್ವದಲ್ಲಿ ರಾಜಪುರುಷರು ನಿಷ್ಠುರರೂ ಕಠೋರರೂ ಆದಾಗ ಇತರರು ಅವರನ್ನು ವಿರೋಧಿಸಬೇಕಾಯಿತು. ಈಗ ಐರೋಪ್ಯ ದೇಶಗಳಲ್ಲಿ ಬಡವರೆಲ್ಲರೂ ಸೇರಿ ಧನವಂತರನ್ನು ವಿರೋಧಿಸುವ ಸಂದರ್ಭ ಒದಗಿದೆ. ದೇವರು ಕೊಟ್ಟ ರಾಷ್ಟ್ರದ ಉತ್ಪತ್ತಿಯು ಎಲ್ಲರಿಗೂ ಸಮವಾಗಿ ಸೇರಬೇಕೆಂಬ ಲಕ್ಷ್ಯವುಳ್ಳ ಅನೇಕಾನೇಕ ವ್ಯವಸ್ಥೆಗಳನ್ನು ಯೋಚಿಸುತ್ತಲೂ ಪ್ರಯತ್ನಿಸುತ್ತಲೂ ಇದ್ದಾರೆ. ಈ ಬಗೆಯ ಪ್ರಯತ್ನವು ರಷ್ಯಾದೇಶದಲ್ಲಿ ಸೋವಿಯಟ್ ಎಂಬ ರೂಪವನ್ನು ತಾಳಿತು. ರಷ್ಯಾದೇಶಕ್ಕೂ ಇತರ ದೇಶಗಳಿಗೂ ಇರುವ ವ್ಯತ್ಯಾಸಗಳಲ್ಲಿ ಇದು ಮುಖ್ಯವಾದುದು.

ಈ ರೀತಿಯಲ್ಲಿ ರಾಷ್ಟ್ರೀಯತಾ, ಪ್ರಜಾತಂತ್ರ, ಔದ್ಯೋಗಿಕ ಪ್ರಾಬಲ್ಯ, ಸರ್ವತ್ರ ಸ್ಪರ್ಧೆ, ತಿಸ್ತು ಎಂಬುವು ಅಲ್ಲಿಯ ಸಮಾಜಗಳಲ್ಲಿ ಮುಖ್ಯ ಗುಣಗಳಾದವು. ಪೂರ್ವಕಾಲದಲ್ಲಿ ಭೃತ್ಯನಾದವನು ಸ್ವಾಮಿಯಲ್ಲಿ ಭಕ್ತಿಯನ್ನಿಡುವುದು ನಮ್ಮಲ್ಲಿದ್ದಂತೆಯೇ ಅವರಲ್ಲಿಯೂ ಇತ್ತು. ರಾಜರಿಗಾಗಿ ಪ್ರಾಣ ಕೊಡುವುದು ಸಾಮಾನ್ಯವಾಗಿತ್ತು. ರಾಜರು ಅದೃಶ್ಯವಾದನೇರೆ ರಾಜಭಕ್ತಿಯು ರಾಷ್ಟ್ರಭಕ್ತಿಯಾಗಿ ಪರಿಣಮಿಸಿತು. ಪ್ರಜಾಪ್ರಭುತ್ವವು ನೆಲೆಸಿದನೇಲಂತೂ ಪ್ರತಿ ವ್ಯಕ್ತಿಯೂ ಯತ್ಕಿಂಚಿತ್ ರಾಜಪುರುಷನೇ ಆದನು. ದೇಶದಲ್ಲಿ ೧೦ ಕೋಟಿ ಜನರಿದ್ದರೆ ರಾಜತ್ವದ ೧೦ ಕೋಟಿ ಅಂಶಗಳಲ್ಲಿ ಒಂದಂಶವು ಅನನದಾಯಿತು. ಅಧಿಕಾರ ಮತ್ತು ಕರ್ತವ್ಯ

ಲಾಠೀರಾಜ್ಯ, ಒಂದು ರುದ್ರದೃಶ್ಯ

ಗಳೆರಡೂ ಸಿದ್ಧಾಪಾದವು ರಾಜಕೀಯ ಕ್ಷೇತ್ರದಲ್ಲಿ. ಅವುಗಳನ್ನು ತಿಳಿದುಕೊಳ್ಳುವುದೂ, ಅವುಗಳನ್ನು ಸಮರ್ಪಕವಾಗಿ ಆಚರಿಸುವುದೂ ಅತ್ಯವಶ್ಯಕವಾಯಿತು. ಪ್ರಾತಿನಿಧ್ಯದ ವಿಧಾನದಲ್ಲಿ ವೋಟೆಂಬುದು ಅಧಿಕಾರಸೂಚಕವಾಯಿತು. ಆದ್ದರಿಂದಲೇ ವೋಟಿನ ಅಧಿಕಾರಕ್ಕಾಗಿ ಅವರ ಇತಿಹಾಸದಲ್ಲಿ ಗುದ್ದಾಟಗಳು.

ನಮ್ಮ ದೇಶದ ಇತಿಹಾಸವೇ ಬೇರೆ ಲಕ್ಷಣಗಳನ್ನು ಳೆದ್ದು. ಪಾಶ್ಚಾತ್ಯರು ಇನ್ನೂ ರೂಕ್ಷಾವಸ್ಥೆಯಲ್ಲಿ ದ್ದಾಗಲೇ ನಮ್ಮ ಪೂರ್ವಕರು ಅದ್ಭುತವಾದ ನಾಗರಿಕತೆಯನ್ನು ಕಟ್ಟಿ ಜಗತ್ತಿನಲ್ಲೆಲ್ಲ ಅಗ್ರಗಣ್ಯರಾಗಿದ್ದರು. ನಮಾಜದಲ್ಲಿ ಒಂದಲ್ಲ, ಎರಡಲ್ಲ, ಅನೇಕಾನೇಕ ಜನಸಮೂಹಗಳು; ಒಂದೊಂದು ಪಂಗಡಕ್ಕೂ ಒಂದೊಂದು ಅಂತಸ್ತಿನ ನಾಗರಿಕತೆ. ಪಾಶಾತ್ಯ ದೇಶಗಳಲ್ಲಿ ಜನರು ಒಂದೇ ಪಂಗಡ; ಇಲ್ಲಿ ಅನೇಕಾನೇಕ. ಇಷ್ಟು ಪಂಗಡಗಳನ್ನು ಒಂದು ಸಮಾಜದಲ್ಲಿ ಬಂಧಿಸಿದುದೇ ಪುರಾತನ ಭಾರತೀಯರ ಅದ್ವಿತೀಯ ಪ್ರಜ್ಞೆಯನ್ನು ತೋರುತ್ತದೆ. ಚಾತುರ್ವರ್ಣ್ಯ, ಶ್ರೇಣಿಗಳು ಅಥವಾ ವ್ಯಾಪಾರೋದ್ಯೋಗಗಳನ್ನವಲಂಬಿಸಿದವರ ಕೂಟಗಳು, ಸಂಘಗಳು ಅಥವಾ ವಿದ್ಯಾಂಸರ ಮತ್ತು ಮತಗುರುಗಳ ವ್ಯವಸ್ಥೆಗಳು, ಮತ್ತು ಗ್ರಾಮಕೂಟಗಳು ಅಥವಾ ಪಂಚಾಯಿತಿಗಳು ಭಾರತೀಯ ಸಮಾಜದ ಸ್ಥಾಣಸ್ಥಾನಗಳಾದವು. ಬ್ರಿಟಿಷರು ಆಡಳಿತವನ್ನು ವಹಿಸುವವರೆಗೆ ಆಡಳಿತದ ಹೆಚ್ಚು ಪಾಲು ಪ್ರಜೆಗಳ ಸ್ವಾಧೀನದಲ್ಲಿಯೇ ಇತ್ತು. ರಾಜಪುರುಷರಿಗಿದ್ದುದು ದೇಶದ ರಕ್ಷಣೆ, ದುಷ್ಟಶಿಕ್ಷಣೆ, ಮತ್ತು ಶಿಷ್ಟರ ಪೋಷಣೆ. ಸಂಚಾರ ಸೌಕರ್ಯಗಳು, ಶಿಕ್ಷಣ ಸೌಕರ್ಯಗಳು, ಆರೋಗ್ಯ ಸೌಕರ್ಯಗಳು ಮುಂತಾದವು ಪ್ರಜೆಗಳ ವಶದಲ್ಲಿಯೇ ಇದ್ದವು. ಆದ್ದರಿಂದಲೇ ಧರ್ಮಕಾರ್ಯಗಳಲ್ಲಿ ಸತ್ರಗಳು, ಸಾಲು ಮರಗಳು, ದೇವಸ್ಥಾನಗಳು, ಚಿಕಿತ್ಸಾಲಯಗಳು, ಕೆರೆಗಳು ಎಣಿಕೆಯಾಗುತ್ತಿದ್ದವು. ಸಂದರ್ಭವೊದಗಿದಂತೆ ರಾಜನೂ ಇವುಗಳನ್ನು ಕಟ್ಟಿಸುತ್ತಿದ್ದನು.

ಇತಿಹಾಸ ಪರಿಚಯ ಸಾಲದೆ ನಾವು ಆಗಾಗ "ನಮ್ಮಲ್ಲಿ ಡೆಮಾಕ್ರೆಸಿ ಎಂಬುದು ಯಾವಾಗಲಾದರೂ ಇದ್ದೀತೆ? ಪೊಲಿಟಿಕಲ್ ರೈಟ್ಸ್ ಅಥವಾ ಪ್ರಜೆಯ ರಾಜಕೀಯಾಧಿಕಾರಗಳು ಎಂಬುವು ಕನಸಿನಲ್ಲಾದರೂ ಬಿದ್ದಿದ್ದವೇ?" ಎಂದು ಕೇಳುತ್ತೇವೆ. ನಮ್ಮಲ್ಲಿ ರಾಜತ್ವವು ಸ್ಥಿರವಾಗಿ ನಿಂತದ್ದಕ್ಕೆ ನಮಗೆ ಬೇರೆ ತಿಳಿದಿರಲಿಲ್ಲವೆಂದು ಅರ್ಥವಲ್ಲ. ಹುಡುಕಿಕೊಂಡು ನೋಡಿದರೆ ನಮ್ಮ ಚರಿತ್ರೆಯಲ್ಲಿ ರಾಜರಹಿತವಾದ ಆಡಳಿತವು ಲಿಚ್ಛವಿ, ಯೌಧೇಯ, ಮಾಳವ

ಚಕ್ರಗೋಷ್ಠಿ, ಒಂದು ವಕ್ರದೃಶ್ಯ

ುಂತಾದ ಕುಲಗಳ ಆಧಿಪತ್ಯದಲ್ಲಿ ಕಾಣುತ್ತದೆ. ತರ ರೂಪಗಳನ್ನು ಅನುಭವಿಸಿ ನಮ್ಮ ಪೂರ್ವಜರು ಾಜತ್ವವನ್ನೇ ಭದ್ರವಾಗಿ ಹಿಡಿದರು. ಎರಡನೆ ್ರಶ್ನೆಗೆ ಇಲ್ಲಿ ಅವಕಾಶವೇ ಇಲ್ಲ. ಏಕಂದರೆ ರಾಜ ೀಯಾಧಿಕಾರಗಳು ಪ್ರಜೆಗೆ ಅವಶ್ಯಕವಾಗಿರಲಿಲ್ಲ. ್ರಜೆಗಳು ಅವುಗಳಿಗಾಸೆಪಟ್ಟು ಕೇಳಲೂ ಇಲ್ಲ; ಾಜರು ಇಲ್ಲವೆಂದು ಹೇಳಲೂ ಇಲ . ಅಧಿಕಾರ ಲ್ಲದಿದ್ದಾಗ ಅವುಗಳ ಪ್ರಸಂಗ ಬರುತ್ತದೆ. ಇದ್ದಾಗ ುವುದಿಲ್ಲ.

ರಾಜತ್ವ ಸ್ವರೂಪದಲ್ಲಿಯೂ ನಾವು ಮತ್ತೊಂದು ೋಷವನ್ನೆಣಿಸುತ್ತೇವೆ. ಇದಕ್ಕೆ ಐರೋಪ್ಯ ಚರಿತ್ರ ಾರರು ಕಾರಣ. ಅವರು ಪೌರಸ್ತ್ಯ ರಾಜತ್ವವೆನ್ನು ುದು ನಿರಂಕುಶ ಪ್ರಭುತ್ವಕ್ಕೆ ಸಮಾನವೆಂದು ಒತ್ತಿ ತ್ತಿ ಬರೆದರು; ಅದನ್ನು ನಾವು ವಿಚಾರಮಾಡದೆ ಪ್ಪಿಕೊಂಡೆವು. ವಾಸ್ತವವಾಗಿ ಹಿಂದೂಗಳಲ್ಲಿಯೂ ುಸಲ್ಮಾನರಲ್ಲಿಯೂ ರಾಜತ್ವವೆಂಬುದು ಬಹು ರ್ಬಂಧದ ಸಂಸ್ಥೆ. ಪಾಶ್ಚಾತ್ಯ ದೇಶಗಳಲ್ಲಿ ರಾಜರ ಾಷ್ಟ್ರ್ಯವನ್ನಡಗಿಸುವ ಪ್ರಯತ್ನದಲ್ಲಿ ಕೆಲವೆಡೆ ರಾಜ ವನ್ನೇ ನಾಶಗೊಳಿಸಿದರು, ಮತ್ತು ಕೆಲವೆಡೆ ರಾಜರ ಧಿಕಾರವನ್ನು ತಗ್ಗಿಸಿದರು. ನಮ್ಮ ದೇಶದಲ್ಲಿಯೂ ಂದಾನೊಂದು ಕಾಲದಲ್ಲಿ ದುಷ್ಟರೂ ಸ್ವಾರ್ಥಪರರೂ ಆದ ರಾಜರಿದ್ದರು. ಕೆಲವರು ಪ್ರಜೆಗಳ ಅಗ್ರಹಕ್ಕೆ ಸಿಕ್ಕಿ ದುರ್ಮರಣವನ್ನು ಹೊಂದಿದರು. ಆದರೆ ಪರಿ ಣಾಮದಲ್ಲಿ ರಾಜರು ಸಮಾಜದ ದಿವ್ಯಸೇವಕರಾದರು. ಶಾಸಕಾಧಿಕಾರವು ಅವರಿಗಿಲ್ಲದಾಯಿತು; ನ್ಯಾಯಾ ನ್ಯಾಯವನ್ನು ನಿರ್ಣಯಮಾಡತಕ್ಕವರು ವಿದ್ವಾಂಸ ರಾದರು. ರಾಜರು ಅವರು ಸ್ಥಾಪಿಸಿದ ಧರ್ಮಸೂ ತ್ರಗಳನ್ನು ಅನುಸರಿಸುವ ಅಧಿಕಾರಿಗಳಾದರು. ಹೀಗಿ ರುವಲ್ಲಿ ಹಿಂದೂರಾಜರು ಸರ್ವಸ್ವತಂತ್ರರೂ ಅಲ್ಲ, ನಿರಂಕುಶಾಧಿಕಾರಿಗಳೂ ಅಲ್ಲ. ಹಿಂದೂ ಸಮಾಜ ವ್ಯವಸ್ಥೆಯಲ್ಲಿ ರಾಜತ್ವವೆನ್ನುವುದು ದೇವಸ್ಥಾನಕ್ಕೆ ಕಳಶವಿದ್ದಂತೆ ಅಲಂಕಾರ ಸ್ವರೂಪ ಮಾತ್ರ.

ಹಿಂದೂಗಳಲ್ಲಿಯೂ ಮುಸಲ್ಮಾನರಲ್ಲಿಯೂ ದುಷ್ಟ ರಾಜರಿಗೆ ಆಚರಣೆಯಲ್ಲಿರುವ ಶಿಕ್ಷೆ ಏನು? ಅಧಿಕಾರ ಕಡಿಮೆಯಿರಬಹುದು. ಆದರೆ ರಾಜರು ಸುಖಪ್ರಿಯ ರಾಗಿ ಸ್ವಾರ್ಥಪರಾಯಣರಾದರೆ ಗತಿಯೇನು? ಈ ಪ್ರಶ್ನೆಗೆ ಚರಿತ್ರೆಯೇ ಉತ್ತರಕೊಡುತ್ತದೆ. ದುಷ್ಟ ರಾಜರು ಅರಮನೆಯಲ್ಲಿಯೇ ದುರ್ಮರಣಕ್ಕೆ ತುತ್ತಾಗಿ ಧ್ವಂಸವಾಗಿ ಬಿಟ್ಟಿದ್ದಾರೆ. ಆಡಳಿತದ ಬದಲಾವಣೆಯು ಒಂದ ಪಿತೂರಿಯಿಂದಲೇ ಸಾಧ್ಯ ನಾಗುತ್ತಿತ್ತು. ಈ ವಿಧವಾದ ವೃತ್ತಾಂತವೇ ನಮ್ಮ ದೇಶದ ಇತ್ತೀಚಿನ ಚರಿತ್ರೆಯಲ್ಲಿ ವಿಶೇಷ. ಆಡಳಿತದ

ಬಂದಿಯಾರು?

ಬದಲಾವಣೆಗೆ ದೊಡ್ಡ ರಾಜ್ಯಕ್ರಾಂತಿಯ ಅವಶ್ಯಕತೆ ಯಿರಲಿಲ್ಲ.

ಸಹಸ್ರಾರು ವರ್ಷಕಾಲ ಭಾರತೀಯ ಸಮಾಜವು ಉಳಿದಿರುವುದೆಲ್ಲಿ? ಭಾರತೀಯ ರಾಷ್ಟ್ರವ್ಯವಸ್ಥೆಯು ಸ್ಥಿರವಾದ, ಅಚಲವಾದ ಲಕ್ಷಣಗಳು ಯಾವುವು? ತಂಡತಂಡವಾಗಿ ಪರದೇಶಿಗರು ದಂಡೆತ್ತಿಬರುತ್ತಿದ್ದು ನೂರಾರು ವರ್ಷಕಾಲ ಪರಕೀಯರ ಆಳ್ವಿಕೆಯಲ್ಲಿದ್ದರೂ ಭಾರತೀಯರು ತಮ್ಮ ಸಂಸ್ಕೃತಿಯನ್ನು ರಕ್ಷಿಸಿ ಕೊಂಡಿರುವುದು ಯಾವ ಬಲದಿಂದ? ಇಸ್ಲಾಂಮತವು ಪ್ರಬಲವಾಹಿನಿಯಾಗಿ ಏಷ್ಯಾಖಂಡದ ಪಶ್ಚಿಮಭಾಗವನ್ನೂ, ಆಫ್ರಿಕಾಖಂಡದ ವಿಶೇಷಭಾಗವನ್ನೂ ಸ್ವಲ್ಪ ಕಾಲದಲ್ಲಿಯೇ ಆಕ್ರಮಿಸಿಕೊಂಡು ಅಲ್ಲಿಯ ಪೂರ್ವ ನಾಗರಿಕತೆಗಳನ್ನು ನಾಮಶೇಷವಾಗಿ ಮಾಡಿಡಲೂ ಹಿಂದೂಸ್ಥಾನದಲ್ಲಿ ಮಾತ್ರ ಅದೇ ವಿಧವಾದ ಜಯವನ್ನು ಪಡೆಯದೆ ಇದ್ದುದು ಏತಕ್ಕೆ? ಪೃಥ್ವಿಯ ಇತರ ಭಾಗಗಳಲ್ಲಿ ಇತಿಹಾಸವು ಮೊದಲಾಗುವದಕ್ಕೆ ಮುಂಚೆಯೇ ನಾಗರಿಕತೆಯನ್ನು ಕಟ್ಟಿದ ಭಾರತೀಯ ಸಮಾಜವು ಇಂದಿನವರೆಗೂ ತನ್ನ ಸ್ಥಿತಿಯನ್ನು ಕಾಪಾಡಿಕೊಂಡಿರುವದರಲ್ಲಿ ಮೂಲ ಬಲವೇನು? ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಒದಗಿಸಿದ ಹೊರತು ಭಾರತೀಯ ಸಮಾಜವ್ಯವಸ್ಥೆಯ ನಿಜವಾದ ರೂಪವು ನಮಗೆ ಗೋಚರವಾಗುವದಿಲ್ಲ.

ಅಥವಾ ಬೇರೊಂದು ಬಗೆಯಿಂದ ಕಾಣುವ. "ರಾಮೋಸ್ತಸ್ತಿ, ರಾವಣೋಸ್ತಸ್ತಿ" ಎಂಬ ನುಡಿಯು ನಮ್ಮಲ್ಲಿ ಪ್ರಸಿದ್ಧ; ಅಂತಹ ಭಾವನೆಯು ಇತರ ದೇಶಗಳಲ್ಲಿಲ್ಲ. ನಮ್ಮಲ್ಲಿ ಅಂತಹ ಭಾವನೆಯಿದ್ದುದರಿಂದಲೇ ಮುಸಲ್ಮಾನರ ಆಧಿಪತ್ಯವನ್ನು ಅಷ್ಟುಕಾಲ ನಾವು ಹೊತ್ತದ್ದು. ಆದರೆ ಅದರ ನಿಜವಾದ ಅರ್ಥ ಕುತ್ಸಿತವಾಗಿ ಯೂರೋಪಿನವರು ಕೆಲವರು ಹೇಳುವಂತೆ ಭಾರತೀಯರಿಗೆ ರಾಜಕೀಯ ವಿಷಯಗಳಲ್ಲಿ ಪ್ರಜ್ಞೆಯಾಗಲಿ, ಆಸಕ್ತಿಯಾಗಲಿ ಇಲ್ಲವೆಂದಲ್ಲ. ನಿಜವಾಗಿ ಅದರ ಅರ್ಥ ರಾಜನು ರಾಮನಾದರೂ ರಾವಣನಾದರೂ ಪ್ರಜೆಗಳ ಧರ್ಮವು ಎಂದಿನಂತೆಯೇ ನಡೆಯುವುದು ಎಂದು. ಗ್ರಾಮಜೀವನವೇ ಪ್ರಧಾನವಾದ ನಮ್ಮ ದೇಶದಲ್ಲಿ ಪ್ರಭುಗಳಾದವರಿಗೆ ಉದ್ಯೋಗ ಕೈಗಾರಿಕೆ, ವಾಣಿಜ್ಯ, ಶಿಕ್ಷಣ, ಏನೋದ ಮುಂತಾದ ವಿಷಯಗಳಲ್ಲಿ ನಿರ್ಬಂಧವಾದ ಕರ್ತವ್ಯವಿಲ್ಲ. ಅವುಗಳೆಲ್ಲವೂ ಪ್ರಜೆಗಳಿಗೆ ಸೇರಿದ್ದು. ಗ್ರಾಮಪಂಚಾಯತಿಗಳು, ಕಾರೆಗಾರರ ಮತ್ತು ವ್ಯಾಪಾರಸ್ಥರ ಶ್ರೇಣಿಗಳು, ಜಾತಿಕೂಟಗಳು ಈ ವಿಷಯಗಳ ವ್ಯವ



ಸತ್ಯಾಗ್ರಹ ವಿಜಯ

ಸ್ವಯಸ್ಸನ್ನು ಹೊಂದ್ದಿದ್ದವು. ಪ್ರಭುವು ಧರ್ಮಶಾಸ್ತ್ರ ಕ್ಕನುಸಾರವಾಗಿ ದೇಶದ ರಕ್ಷಣೆಯನ್ನು ಮಾಡುತ್ತಿದ್ದನು. ಧರ್ಮಶಾಸ್ತ್ರವೆನ್ನುವುದೇ ಲೆಜಿಸ್ಲೇಷನ್ ಅಥವಾ ಶಾಸನವಿಧಿ. ಆ ವಿಧಿಯನ್ನು ಬದಲಾಯಿಸಲು ಯಾವ ಪ್ರಭುವಿಗೂ ಅಧಿಕಾರವಿರಲಿಲ್ಲ. ಆದ್ದರಿಂದ ಬಂದುವೇಳೆ ನೀಚನಾದವನು ರಾಜನಾದರೂ ವಿಶೇಷ ತೊಂದರೆಯಾಗುತ್ತಿರಲಿಲ್ಲ. ಸಮಾಜ, ಮತ ಮತ್ತು ಸ್ಥಳೀಯ ಆಡಳಿತಗಳ ಗೋಜಿಗೆ ತುರುಕರೂ ಮುಘಲರೂ ಹೋಗಲಿಲ್ಲವಾದುದರಿಂದ ಅವರ ಆಳ್ವಿಕೆಯು ಅಷ್ಟುಕಾಲ ನಡೆಯಿತು.

ಇಂಗ್ಲೀಷರು ಪ್ರಬಲರಾದಂದಿನಿಂದ ಸರ್ಕಾರವೇ ಸರ್ವತ್ರ ಪ್ರವೇಶಿಸುವ ತತ್ವವು ಆಚರಣೆಗೆ ಬಂದಿತು. ಸ್ಥಳೀಯ ನಿರ್ವಾಹವು ಶಿಥಿಲವಾಯಿತು. ಪ್ರಾಚೀನ ನಾಗರಿಕತೆಯೇ ಬದಲಾವಣೆಗೆ ಮೊದಲಿಟ್ಟಿತು. ಇಷ್ಟಾದರೂ ಕೂಡ ಸತ್ರಗಳನ್ನೂ ದೇವಾಲಯಗಳನ್ನೂ ಕಟ್ಟಿಸುವವರೂ ಕೆರೆ ಭಾವಿಗಳನ್ನು ತೋಡಿಸುವವರೂ ಇಲ್ಲದೆ ಇಲ್ಲ. ಇಂಗ್ಲೀಷರ ರಾಜ್ಯಭಾರವು ವೃದ್ಧಿಯಾಗಿ ಪಾಶ್ಚಾತ್ಯ ಸಮಾಜ ವ್ಯವಸ್ಥೆಯೂ ರಾಜ್ಯತಂತ್ರವೂ ಭಾರತೀಯರಿಗೆ ತಿಳಿಯುತ್ತ ಬಂದಂತೆ ಡೆಮಾಕ್ರೆಸಿಯ ತತ್ವದಲ್ಲಿ ಅಭಿಮಾನವೂ ರಾಷ್ಟ್ರೀಯತೆಯಲ್ಲಿ ಮಮತೆಯೂ ಉಕ್ಕಿದವು. ಪ್ರಜಾಧರ್ಮವೆನ್ನುವುದು ಬದಲಾಯಿಸಬೇಕಾಯಿತು. ಪ್ರತಿಯೊಬ್ಬ ನಿವಾಸಿಯೂ ಯತ್ಕಿಂಚಿತ್ ರಾಜಪುರುಷನಾದಾಗ ಪ್ರತಿಯೊಬ್ಬನಿಗೂ ರಾಜ್ಯಾಂಗ ಪದ್ಧತಿಯ ಪರಿಚಯವೂ, ದೇಶದ ಹಿತಾಹಿತಗಳ ಜ್ಞಾನವೂ, ಸಮಾಜ ವ್ಯವಸ್ಥೆಯ ಮೂಲ ಮಂತ್ರದ ಅರಿವೂ ಅತ್ಯಾವಶ್ಯವಾಯಿತು.

ಈ ಕಾರಣಗಳಿಂದಲೇ ಈ ಕಾಲವನ್ನು ಕಾಲ ಬದಲಾಯಿಸುವ ಕಾಲವೆಂದು ಕರೆಯುವರು. ಭರತವರ್ಷವು ಕೂಪಮಂಡೂಕದಂತಿರದೆ ಪೃಥ್ವಿಯ ಕೋಲಾಹಲದಲ್ಲಿ ಭಾಗಿಯಾಗಬೇಕು; ಇತರ ದೇಶಗಳೊಡನೆ ಸ್ಪರ್ಧಿಸಬೇಕು. ಸ್ಪರ್ಧೆಯಲ್ಲಿ ಶಿಸ್ತು ಅತಿ ಪ್ರಧಾನವಾದುದು. ಶಿಸ್ತಿನಲ್ಲಿ ಅಧಿಕಾರ ಗುಣಗಳು ವೃದ್ಧಿಯಾಗಬೇಕು. ಆ ಗುಣಗಳು ಅಂಕುರವಾಗುವದು ರಾಷ್ಟ್ರೀಯ ಪ್ರಜೆಯಲ್ಲಿ; ವೃದ್ಧಿಯಾಗುವದು ಅಭ್ಯಾಸಬಲದಿಂದ. ಸಂದಕುಮಾರನಂತೆ ನಿಷ್ಠರಾಗಿದ್ದು ದೇಶದ್ರೋಹಮಾಡತಕ್ಕವರಿಗೆ ಇನ್ನುಮುಂದೆ ಆಸ್ಪದವಿರುವದಿಲ್ಲ. ಯುದ್ಧಕಾಲದಲ್ಲಾಗಲಿ ಶಾಂತಿ ಸಮಯದಲ್ಲಾಗಲಿ ತನ್ನ ದೇಶಕ್ಕೂ ಸಮಾಜಕ್ಕೂ ತಕ್ಕಂತೆ ಹೆಮ್ಮೆಯಿಂದಲೂ ಉತ್ಸಾಹದಿಂದಲೂ ವರ್ತಿಸುವಂತೆ ಮಾಡುವ ಧರ್ಮದ ಜ್ಞಾನವು ಬೇಕು. ಪೂರ್ವದ ಪಂಚಯಜ್ಞಗಳನ್ನು ಸ್ವಲ್ಪ ಬದಲಾಯಿಸಿ ಪ್ರತಿ ಭಾರತೀಯನೂ ತನ್ನ ಆತ್ಮ, ತನ್ನ ಕುಟುಂಬ, ತನ್ನ ನೆರೆಹೊರೆಯವರು, ತನ್ನ ದೇಶ ಮತ್ತು ತಾನು ಸೇರಿದ ಮಾನವರಾಶಿಗಳಿಗೆ ತಕ್ಕ ಧರ್ಮವನ್ನು ಪಾಲಿಸಬೇಕು. ರಾಷ್ಟ್ರಭಕ್ತನಾಗಿ ರಾಷ್ಟ್ರದ ಸ್ಥಿತಿಗತಿಗಳ ಅರಿವನ್ನು ಪಡೆದು ತನ್ನ ಅಧಿಕಾರ ಕರ್ತವ್ಯಗಳನ್ನು ನಿರ್ವಹಿಸಿ ಯೋಗ್ಯನೆನಿಸಬೇಕು. ಇದು ಎಲ್ಲರಿಗೂ ಸೇರಿದ ಪೌರಧರ್ಮ, ಸಮಾಜಜೀವನ.



ಗಾಂಧೀಜಿ

ಶ್ರೀಮತಿ ಕಸ್ತೂರಿಬಾಯಿ

ಭಾರತೀಯರ ಸ್ವಾತಂತ್ರ್ಯ ಸಾಧನೆ

(ಶ್ರೀ ಕೆ. ಸಂಪದ್ಗಿರಿರಾವ್, ಎಂ. ಎ., ದೇಶೀಯ ವಿದ್ಯಾಶಾಲಾ, ಬೆಂಗಳೂರು)

ಭಾರತದೇಶದ ಸ್ವಾತಂತ್ರ್ಯವನ್ನು ಸಾಧಿಸಲು ಈಗ ನಡೆಯುತ್ತಿರುವ ಉದ್ಯಮವು ಒಂದು ಅಪೂರ್ವಕಳೆಯಿಂದ ತುಂಬಿರುವುದು. ಎಲ್ಲ ಭಾರತೀಯರಿಗೂ ಸಹ ಅದರ ಮಹತ್ವವೂ, ದಿವ್ಯಭಾವವೂ ಸಂಪೂರ್ಣವಾಗಿ ಮನವರಿಕೆಯಾಗುವುದು ಕಠಿಣ. ಅನ್ಯದೇಶೀಯರಿಗೆ ಇದರ ಸ್ವರೂಪದ ನವ್ಯತೆಯನ್ನು ಕಂಡು ಭ್ರಮೆಯೋ, ಅದ್ಭುತದೃಶ್ಯವೆನ್ನುವ ಭಾವವೋ, ವರ್ಣಿಸಲಾಗದ ಕನಿಕರವೋ, ವಿಸ್ಮಯವೋ ಉಂಟಾಗಿವೆ. ಅನೇಕ ಶತಮಾನಗಳಿಂದ ಭಾರತದೇಶದ ವಿಷಯದಲ್ಲಿ ಪರಕೀಯರಿಗಿದ್ದ ಔದಾಸೀನ್ಯವೂ, ಸ್ವಾರ್ಥದೃಷ್ಟಿಯೂ ದೂರವಾಗಿ ಒಂದು ರೀತಿಯ ಸಹಾನುಭೂತಿಯೂ, ನೈಜವಾದ ಅಂತಃಕರಣವೂ ಇತ್ತೀಚೆಗೆ ತೋರುತ್ತಲಿದೆ.

ಈ ಅಪೂರ್ವ ಉದ್ಯಮವು ಇನ್ನೂ ಸಾಗುತ್ತಿರುವುದರಿಂದ, ಇದರ ಚರಿತ್ರೆಯನ್ನು ಬರೆಯುವ ಸಮಯವು ಇನ್ನೂ ಬಂದೊದಗಿಲ್ಲ. ಆದರೆ ಇದರ ಉತ್ಪತ್ತಿಯನ್ನೂ ಕ್ರಮವಾದ ವಿಕಾಸವನ್ನೂ ಕುರಿತು ನಾವು ಕೊಂಚ ವಿಚಾರಮಾಡಬಹುದು.

ಬ್ರಿಟಿಷರ ಪ್ರವೇಶ

ಬ್ರಿಟಿಷರು ಹಿಂದೂಸ್ಥಾನಕ್ಕೆ ಬಂದ ಕಾಲದಲ್ಲಿ ದೇಶವು ಪರಸ್ಪರ ಮತ್ಸರವನ್ನು ಸಾಧಿಸುತ್ತಿದ್ದ ರಾಜ-ಉಪರಾಜರ ಅಧೀನದಲ್ಲಿ ವಿಧವಿಧವಾಗಿತ್ತು. ಬ್ರಿಟಿಷರು ತಮ್ಮ ವ್ಯಾಪಾರದ ಸಾಹಸದಲ್ಲಿ ತಮ್ಮ ಕಾರ್ಯಪಟುತ್ವವನ್ನೂ, ಸೈನ್ಯದ ಬಲವನ್ನೂ ಅರಿತಿದ್ದರು. ದೇಶದಲ್ಲಿನ ಪರಿಸ್ಥಿತಿಯನ್ನು ಕಂಡು ನಮ್ಮ ದೇಶೀಯರ ವಿಚಾರದಲ್ಲಿ ಅವರಿಗೆ ತಿರಸ್ಕಾರ ಭಾವನೆ ಹುಟ್ಟಿತು. ಕ್ರಮೇಣ, ಅಂದರೆ ೫೦-೬೦ ವರುಷಗಳಲ್ಲಿ, ಭಾರತದೇಶದ ಬಹುಭಾಗವು ಅವರ ಕೈಸೇರಿತು. ಬ್ರಿಟಿಷ್ ಪಡೆಗಳು ಜಯಹೊಂದಿದಾಗೆಲ್ಲ ಅವರಲ್ಲಿ ಚಕ್ರಾಧಿಪತ್ಯವನ್ನು ಸ್ಥಾಪಿಸಬೇಕೆಂಬ ಸಂಕಲ್ಪವು ಇಲ್ಲದಿದ್ದರೂ ಅದು ಕ್ರಮೇಣ ರೂಪುಗೊಂಡಿತು. ಪ್ರಯತ್ನ ಪೂರ್ವಕವಾಗಿ ಈ ಚಕ್ರಾಧಿಪತ್ಯದ ಯಜ್ಞವನ್ನು ಪೂರ್ತಿಗೊಳಿಸಲು ಸ್ವಲ್ಪ ಆತುರದಿಂದಲೇ ಸಾಹಸಮಾಡಿದವನೆಂದರೆ ಡಾಲ್ಹೌಸಿ. ಪರಕೀಯರ, ಪರದೇಶದ ಸೈನ್ಯದ ಈ ಪ್ರಚಂಡದರ್ಪವನ್ನು ಎದುರಿಸಲು ನಿಲ್ಲಬಲ್ಲರಲ್ಲಿ ಒಂದು ವಿಪ್ಲವವು ಎದ್ದಿತು. ಅದು ತೀವ್ರವಾಗಿಯೇ ಮುರಿಯಲ್ಪಟ್ಟು ಹಿಂದೂಸ್ಥಾನವು ಇಂಗ್ಲೆಂಡಿನ ಚಕ್ರಾಧಿಪತ್ಯಕ್ಕೆ ಅಧೀನವಾಗಿರುವಂತೆ ಆಯಿತು. ವರ್ತಕಮಂಡಲಿಯು ಮೇಲ್ವಿಚಾರಣೆಗೆ ಬದಲಾಗಿ, ಇಂಗ್ಲೆಂಡಿನ ರಾಣಿಯೇ ರಾಜ್ಯದ ಮೇಲ್ವಿಚಾರಣೆ ಮಾಡತಕ್ಕದ್ದೆಂದು ನಿಷ್ಕರ್ಷೆಯಾಯಿತು.

ಆ ಕಾಲದಲ್ಲಿ ಇದೇ ಉತ್ತಮ ವ್ಯವಸ್ಥೆಯೆಂದು ತೋರಿತು. ಇಂಗ್ಲೆಂಡಿನ ರಾಜ್ಯಾಂಗ ಪದ್ಧತಿಯಲ್ಲಿ ಎಲ್ಲರಿಗೂ ಗೌರವವಿತ್ತು. ಇಂಗ್ಲೆಂಡಿನ ಸಾಹಸಕಾರ್ಯಗಳು ವಿಸ್ಮಯವನ್ನುಂಟುಮಾಡಿದ್ದರಿಂದ, ಆ ದೇಶದ ವಿಚಾರದಲ್ಲಿ ಒಂದು ರೀತಿಯ ಭಯಭಕ್ತಿಯು ಪ್ರಾಪ್ತವಾಗಿತ್ತು. ಇದೂ ಅಲ್ಲದೆ ವಿಕ್ಟೋರಿಯಾ ಮಹಾರಾಣಿಯು ಬಹಳ ಉದಾರ ಭಾವಗಳನ್ನೊಳಗೊಂಡ ಒಂದು ರಾಜಶಾಸನವನ್ನು ಪ್ರಸಿದ್ಧಪಡಿಸಿ ಹಿಂದೂಸ್ಥಾನದ ಯೋಗಕ್ಷೇಮದಲ್ಲಿಯೂ, ಭಾರತೀಯರ ಸುಖಶಾಂತಿ ಜೀವನದಲ್ಲಿಯೂ ಪ್ರೀತಿವಿಶ್ವಾಸಗಳನ್ನು ವ್ಯಕ್ತಪಡಿಸಿದ್ದಳು.

ಬಾಹ್ಯಜೀವನದ ಆಡಂಬರ

ಅನೇಕ ಆಶ್ರಿತ ಸ್ಥಳೀಯ ರಾಜ್ಯಗಳು, ಮತ್ತು ಬ್ರಿಟಿಷ್ ಹಿಂದೂಸ್ಥಾನ, ಈ ರೀತಿಯಾದ ಸ್ಥೂಲ ವಿಭಾಗವಾಗಿ ಬ್ರಿಟಿಷರ ಆಡಳಿತವು ಬಹಳ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲ್ಪಟ್ಟಿತು. ರೈಲು, ಪೋಸ್ಟು, ಸೇವಿಂಗ್ಸ್‌ಬ್ಯಾಂಕ್, ರಸ್ತೆಗಳು, ಆಸ್ಪತ್ರೆಗಳು, ಇವೆಲ್ಲವೂ ಈ ವೈಜ್ಞಾನಿಕಯುಗದ ಸರ್ವಸಾಮಾನ್ಯವಾದ ಚಿಹ್ನೆಗಳು; ಎಲ್ಲ ದೇಶಗಳಲ್ಲಿಯೂ ಸಿಗುವ ನಾಗರಿಕ

ಸಮಾಜದ ಲಕ್ಷಣಗಳು. ಬ್ರಿಟಿಷ್ ಪ್ರಭುತ್ವದ ಪ್ರಸಾದವೆಂದೇ ತೋರಿ, ಈ ಅನುಕೂಲ್ಯಗಳಿಗಾಗಿ ಕೃತಜ್ಞತಾಭಾವಪರಿಪೂರ್ಣರಾದ, ಸರಳಹೃದಯರಾದ ಭಾರತೀಯರಿಗೆ ಬ್ರಿಟಿಷ್ ಪ್ರಭುತ್ವದ ವಿಚಾರದಲ್ಲಿ ಅನನ್ಯ ಭಕ್ತಿಗೌರವಗಳು ಸಿದ್ಧವಾದುವು ಕಳ್ಳ ಕಾಕರ ಕಾಟದಿಂದ ತಪ್ಪಿಸಲು ಸರ್ಕಾರದವರು ತಕ್ಕ ಶಿಸ್ತನ್ನು ಮಾಡಿದುದರಿಂದ ಅನೇಕಕಾಲ ರಾಜ್ಯ ಕ್ರಾಂತಿಯನ್ನು ಅನುಭವಿಸಿದ್ದ ಜನರಿಗೆ ಸುಖಶಾಂತಿ ಗಳು ನೆಲೆಸಿದಂತೆ ತೋರಿತು. ಮೊನ್ನೆ ಮೊನ್ನೆಯ ವರೆಗೂ ಸರ್ವಸಾಮಾನ್ಯವಾಗಿ ನಮ್ಮ ಯುವಕರೂ ಹಿರಿಯರೂ, ವಿದ್ಯಾವಂತರೂ, ಪಠ್ಯಪುಸ್ತಕಗಳೂ ಬ್ರಿಟಿಷ್ ಪ್ರಭುತ್ವದ ಗುಣಗಾನ ಮಾಡುವುದರಲ್ಲಿ ಈ ಮೇಲೆ ಹೇಳಿದ ಅಂಶಗಳನ್ನೇ ಎತ್ತಿ, ಒತ್ತಿಹೇಳಿ ಹಾಡುವ ರೂಢಿಯಿತ್ತು.

ಇದೆಲ್ಲವೂ ಬಾಹ್ಯಜೀವನದ ಆಡಂಬರ. ಬ್ರಿಟಿಷ್ ಆಧಿಪತ್ಯದ ಪ್ರಭಾವವು ಇಂಗ್ಲಿಷ್ ಕಲಿತ ವಿದ್ಯಾವಂತರಲ್ಲಿಯೂ, ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ತೋರುತ್ತಿತ್ತು.

ಜೀವನಾಶ

ಇಂತಹ ಸೂಕ್ಷ್ಮದೃಷ್ಟಿಯಿದ್ದವರಲ್ಲಿ ದಾದಾಭಾಯ್ ನವರೋಜಿಯವರೂ, ರಮೇಶ ಚಂದ್ರದತ್ತರೂ ಪ್ರಮುಖರು. ಇವರಿಬ್ಬರೂ ಸೇರಿ ದೇಶದ ಆರ್ಥಿಕಸ್ಥಿತಿಯನ್ನು ಕೂಲಂಕಷವಾಗಿ ವಿಚಾರಮಾಡಿ ಅನೇಕ ಗ್ರಂಥಗಳನ್ನು ಬರೆದುದು ಮಾತ್ರವಲ್ಲದೆ, ಭಾರತೀಯರಲ್ಲಿಯೂ ಬ್ರಿಟಿಷರಲ್ಲಿಯೂ ಇದರ ತಿಳುವಳಿಕೆಯನ್ನು ಪ್ರಚಾರಮಾಡಲು ಬಹಳ ಪ್ರಯತ್ನಿಸಿದರು. ಇವರ ಶೋಧನೆಗಳ ಪ್ರಕಾರ ದೇಶವು ಆರ್ಥಿಕದೃಷ್ಟಿಯಿಂದ ಕ್ರಮೇಣ ತೀರ ಬಡವಾಗುತ್ತ ಬರುತ್ತಿದ್ದುದು ಗೋಚರವಾಯಿತು. ಇದೇ ಸಿದ್ಧಾಂತವನ್ನೇ ಡಿಗ್ಬೀ ಎಂಬ ಬ್ರಿಟಿಷ್ ಸರಕಾರದ ನೌಕರನೊಬ್ಬನು "ಪ್ರಾಸ್‌ಪರಸ್ ಬ್ರಿಟಿಷ್ ಇಂಡಿಯ" ಎಂಬ ಗ್ರಂಥವನ್ನು ಬರೆದು ಭಾರತದೇಶದ ವಿಷಯದಲ್ಲಿ ತನ್ನ ದೇಶೀಯರಿಗೂ ಕನಿಕರವುಂಟಾಗುವ ಹಾಗೆ ಮಾಡಿ, ದೇಶದ ನಿಜವಾದ ಆರ್ಥಿಕಸ್ಥಿತಿಯನ್ನು ತಿಳಿಸುವ ಸಲುವಾಗಿ ಬಹಳ ಕೆಲಸ ಮಾಡಿದನು. ಈ ಪುಸ್ತಕವನ್ನು ಓದಿದರೆ, ಸುವ್ಯವಸ್ಥಿತವಾದ ಚಕ್ರಾಧಿಪತ್ಯವು ದೇಶದ ಆರ್ಥಿಕಸ್ಥಿತಿಯನ್ನು ಮೆಲ್ಲನೆ ನಾಶಗೊಳಿಸುತ್ತಾ, ಜನರಿಗೇ ಕಾಣದಹಾಗೆ ಅವರ ಆರ್ಥಿಕಜೀವನವು ಕ್ರಮೇಣ ಕ್ಷಯವಾಗಿ, ದೇಶವು ಬಲಹೀನವಾಗಿ, ಈ ಕೇಡನ್ನು ಎದುರಿಸಲೂ ಅಶಕ್ತವಾಗುವ ದುಸ್ಥಿತಿಗೆ ಅವರನ್ನು ಇಳಿಸುವ ವಿಷಯವು ಚೆನ್ನಾಗಿ ಮುಂದಿಟ್ಟಾಗುವುದು. ಈರೀತಿ ಬ್ರಿಟಿಷ್ ದೇಶದವರೇ ಅವರ ಹುಳುಕುಗಳನ್ನು ಧೈರ್ಯವಾಗಿ ಎತ್ತಿಹಾಕುತ್ತಿದ್ದರೂ, ಭಾರತೀಯರಲ್ಲಿ ಪ್ರಮುಖರಾದವರು ಬ್ರಿಟಿಷರ ಆಡಳಿತದಲ್ಲಿ ಅವರಿಗಿದ್ದ ಒಂದು ಬಗೆಯ ಅಭಿಮಾನದಿಂದ ಹೀಗೆ ನಡೆಯುತ್ತಿದ್ದುದು ಬ್ರಿಟಿಷ್ ಸರಕಾರದ ಸ್ವಭಾವಗುಣವಲ್ಲವೇನು ಭಾವಿಸಿ, ಅವುಗಳ ವಿಷಯವಾಗಿ ಬರೆಯುವಾಗಲೂ ಸಹ ಬಹಳ ವಿನಯದಿಂದಲೂ, ಸೌಜನ್ಯದಿಂದಲೂ ಬರೆಯುತ್ತಿದ್ದರು; ಮತ್ತು ಆಡಳಿತದವರಿಗೆ ಈ ದೋಷ ನಿವಾರಣೆಯ ಉಪಾಯಗಳನ್ನು ಸಲಹೆಯ ರೂಪದಲ್ಲಿಯೇ ತೋರಿಸಿಕೊಡುತ್ತಿದ್ದರು. ಇದರ ನಿದರ್ಶನವಾಗಿ ದಾದಾಭಾಯಿನವರೋಜಿಯವರು ತಾವು ಒಂದು ಗ್ರಂಥ ಬರೆದು ದೇಶದಲ್ಲಿನ ದಾರಿದ್ರ್ಯವೂ ಮತ್ತು ಆ ದಾರಿದ್ರ್ಯಕ್ಕೆ ಕಾರಣವಾಗಿದ್ದ ಆಡಳಿತವೂ ಬ್ರಿಟಿಷರಿಗೆ ತಕ್ಕುದಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು.

ಬ್ರಿಟಿಷ್ ವಾಣಿಜ್ಯತಂತ್ರ

ಆದರೆ ನಿಜವಾಗಿ ವಿಚಾರಮಾಡುವುದಾದರೆ, ಇದು ಈಗಿನ ದೊಡ್ಡ ಯಂತ್ರಗಳ ಸಹಾಯದಿಂದ ನಡೆಸುವ ಕೈಗಾರಿಕೆಗಳಿಗೆ ತಕ್ಕ ವ್ಯಾಪಾರವಾಗಲು ಆಯಾ ದೇಶದ ಆಳರಸರು ತೀರ ಅನಿವಾರ್ಯವಾಗಿ ಮಾಡಬೇಕಾಗಿ ಬರುವ ಕೆಲಸವೆಂದು ವಿಶದವಾಗುತ್ತದೆ ಏಕೆಂದರೆ, ಒಂದು ದೇಶದಲ್ಲಿ ತನಗೆ ಎಷ್ಟು ಅವಶ್ಯಕವೋ ಆದಕ್ಕಿಂತ ಬಹಳ ಹೆಚ್ಚಾಗಿ ಸಾಮಾನುಗಳು ತಯಾರಾಗುವುದರಿಂದ ಅವುಗಳ ವ್ಯಾಪಾರಕ್ಕಾಗಿ ಬೇರೆ ದೇಶಗಳಿಗೆ ಹೋಗಬೇಕಾದ ಅವಶ್ಯಕತೆಯು ಬೀಳುತ್ತದೆ ಅಂತಹ ಸಮಯಗಳಲ್ಲಿ ಆ ದೇಶದವರು ತಮ್ಮ ಸರಕುಗಳು ಹೆಚ್ಚಾಗಿ ವ್ಯಾಪಾರವಾಗಲು ಇತರ ದೇಶಗಳನ್ನು ಆಕ್ರಮಣಮಾಡುವುದರಲ್ಲಿ ಬಹಳ ನಿಪುಣತೆಯನ್ನು ತೋರಿಸುವರು. ಈಗಿನ ಕಾಲದ ಕೈಗಾರಿಕತೆಯ ನಾಗರೀಕತೆಯ ಮುಖ್ಯ ಲಕ್ಷಣವೇ ಇದು. ಅದೇ ರೀತಿ ಇಂಗ್ಲೆಂಡುದೇಶವು, ತನ್ನ ದೇಶದಲ್ಲಿ ತಯಾರಾಗುವ ಸರಕುಗಳಿಗೆ ಭಾರತದೇಶವು ಒಳ್ಳೆಯ ವ್ಯಾಪಾರಕ್ಷೇತ್ರವಾಗಿರುವುದನ್ನು ಕಂಡು, ಭಾರತದೇಶವನ್ನು ತನಗೆ ಆರ್ಥಿಕತಃ ಅಧೀನವನ್ನಾಗಿ ಮಾಡಿಕೊಂಡಿತು. ಈ ರೀತಿ

ಯಾಗಿ ಬ್ರಿಟಿಷ್ ಸರಕಾರವು ತನ್ನ ವ್ಯಾಪಾರವು ಸುಲಲಿತವಾಗಿಯೂ, ನಿರಾತಂಕವಾಗಿಯೂ ನಡೆಯಲಿಕ್ಕೆ ಬೇಕಾದ ಚತುರವಾದ ಏರ್ಪಾಟುಗಳನ್ನು ಮಾಡಿಕೊಂಡು, ಅದರ ಮೂಲಕ ಇಂಡಿಯಾದೇಶದ ಆರ್ಥಿಕ ಸ್ಥಿತಿಯ ಸೂತ್ರವನ್ನು ತನ್ನ ಕೈಯಲ್ಲಿಯೇ ಹಿಡಿದುಕೊಂಡಿದೆ. ಈ ಉದ್ದೇಶದ ಸಾಧನೆಗಾಗಿ ಬ್ರಿಟಿಷ್ ಸರಕಾರವು ರೈಲ್ವೆ ಮತ್ತು ಹಡಗುಗಳ ದರಗಳ ಅನುಕೂಲ್ಯವನ್ನು ಪಡೆಯುತ್ತದೆ; ಒಂದು ಪೌನಿಗೆ ಇಷ್ಟು ರೂಪಾಯಿಗಳೆಂದು ನಿರ್ಧಾರಮಾಡುವಾಗ ಬ್ರಿಟಿಷ್ ವ್ಯಾಪಾರಿಗಳ ಹಿತವನ್ನೇ ಗಣಿಸುತ್ತದೆ; ಮತ್ತು ಬ್ರಿಟಿಷ್ ಬಂಡವಾಳಗಾರರಿಗೆ ದೇಶದಲ್ಲಿ ಯಥೇಚ್ಛವಾಗಿ ವ್ಯಾಪಾರಕ್ಕೆ ಸಾಕಾದಷ್ಟು ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಈ ಬಗೆಯ ಅನೇಕ ಕಾರಣಗಳಿಂದ ಬ್ರಿಟಿಷರು ಹಿಂದೂಸ್ಥಾನದಲ್ಲಿ ತಮ್ಮ ಹಿಡಿತವನ್ನು ಬಲಮಾಡಿಕೊಂಡಿರುವರು—ಮಾಡಿಕೊಳ್ಳುತ್ತಿರುವರು.

ದರಿದ್ರನಾರಾಯಣನ ಸೇವೆ

ಪ್ರಕೃತಲೋಕದಲ್ಲಿ ಎಲ್ಲೆಲ್ಲಿಯೂ ಕ್ರಾಂತಿಯಿರುವುದಕ್ಕೆ ಆರ್ಥಿಕ ಜೀವನದ ದುಸ್ಸಹವಾದ ಸ್ಥಿತಿಯೇ ಮುಖ್ಯಕಾರಣ. ಪೂರ್ವಕಾಲದಲ್ಲಿ ಸದಾ ಹಿಂದೂಸ್ಥಾನದ ಆರ್ಥಿಕ ಜೀವನವು ಸರ್ವಾಂಗ ಪುಷ್ಟವಾಗಿದ್ದಿತು. ಹೀಗೆ ಇದ್ದುದೇ ಪರದೇಶೀಯರ ಲೋಭಕ್ಕೂ, ಆಗಮನಕ್ಕೂ ಕಾರಣವಾಯಿತು. ಈಗ್ಗೆ ಹಿಂದೂಸ್ಥಾನವು ತೀರ ದಾರಿದ್ರ್ಯದಲ್ಲಿ ಸಿಕ್ಕಿ ಬಿದ್ದಿರುವುದರಿಂದ ಬೇರೆ ಕಾರಣಗಳು ಏನೆ ಇರಲಿ, ದಾದಾಭಾಯ್ ಮುಂತಾದವರು ದೇಶದ ದಾರಿದ್ರ್ಯವನ್ನು ನೀಗುವುದಕ್ಕಾಗಿ ಸ್ವರಾಜ್ಯವು ಬೇಕೆಂದು ಹಂಬಲಿಸಿದರು. ಈಗಲೂ ದರಿದ್ರನಾರಾಯಣನ ಸೇವೆಗೆ ಕಂಕಣಬದ್ಧರಾಗಿರುವ ಮಹಾತ್ಮಾಗಾಂಧಿಯವರೂ ಅದೇ ಮಾತನ್ನೇ ಹೇಳುವರು.

ರಾಷ್ಟ್ರಮಹಾಸಭೆ

ಇಂತಹ ಸ್ವರಾಜ್ಯವನ್ನು ಸಾಧಿಸಲು ರಾಷ್ಟ್ರಮಹಾಸಭೆಯು ಬಹುಕಾಲದಿಂದ ಪ್ರಯಾಸಪಡುತ್ತಿದೆ. ಇದು ೧೮೮೫ ರಲ್ಲಿ ಸ್ಥಾಪಿತವಾಯಿತು. ದೇಶದ ಅನೇಕ ವಿದ್ವಾಂಸರು ಇದಕ್ಕೆ ಸೇರಿ, ವರ್ಷಕ್ಕೊಮ್ಮೆ ಸಭೆಗೂಡಿ, ದೇಶದ ಕುಂದುಕೊರತೆಗಳನ್ನು ವಿಚಾರಮಾಡಿ ಸರಕಾರಕ್ಕೆ ಸಲಹೆಗಳನ್ನು ಕೊಡುವುದನ್ನೇ ಮುಖ್ಯ ಕೆಲಸವಾಗಿಟ್ಟುಕೊಂಡಿದ್ದರು. ಆದರೆ ಸ್ವರಾಜ್ಯವೇ ಎಲ್ಲ ಕೊರತೆಗಳನ್ನು ದೂರಮಾಡಲು ತಕ್ಕ ಉಪಾಯವೆನ್ನುವುದು ೧೯೦೭ ರಲ್ಲಿ ದಾದಾಭಾಯಿಯವರಿಂದ ಸಿದ್ಧಾಂತವಾಯಿತು. ಇದಕ್ಕೆ ಮೊದಲು ಈ ಮಾತನ್ನು ಹೇಳಲು ಸಹ ಯಾರೂ ಧೈರ್ಯಮಾಡಿರಲಿಲ್ಲ. ಆದರೆ ಕಲಿಕತ್ತೆಯಲ್ಲಿ ರಾಷ್ಟ್ರಮಹಾಸಭೆಯು ನೆರೆದಿದ್ದಾಗ (೧೯೦೬) ಕರ್ಜ್ ಪ್ರಭುಗಳ ದರ್ಪವೂ ದೌರ್ಜನ್ಯವೂ ಜನರಲ್ಲಿ ಬಹಳ ಅಸಮಾಧಾನ ಉಂಟುಮಾಡಿದ್ದವು. ಬಂಗಾಳಿವನ್ನು ವಿಭಜನೆ ಮಾಡಿದ್ದರಿಂದ ಆ ದೇಶದಲ್ಲಿ ಕಲ್ಲೋಲವೆದ್ದಿತ್ತು. ಬಂಗಾಳದಲ್ಲಿ ರಾಷ್ಟ್ರಪ್ರೇಮವು ಉಕ್ಕೇರಿ, ಉಗ್ರರೂಪವನ್ನು ತಾಳಿತ್ತು. ಆ ವರ್ಷ ಪರದೇಶೀ ಸಾಮಾನುಗಳ ಬಹಿಷ್ಕಾರ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣ, ಇವೇ ಮುಂತಾದ ತತ್ವಗಳನ್ನು ಸಮರ್ಥನಮಾಡುವ ತೀರ್ಮಾನಗಳಾದವು ರಾಜಕಾರಣದಲ್ಲಿ ವೀರಪಕ್ಷದವರ ನರ್ಜಸ್ಸು ಹೆಚ್ಚುತ್ತಿತ್ತು. ಈಗಿನ ರಾಜಕೀಯ ಚಳವಳಿಗೆಲ್ಲ ೧೯೦೬ ರಲ್ಲಿ ನಡೆದ ರಾಷ್ಟ್ರಮಹಾಸಭೆಯೇ ಅಂಕುರಾರ್ಪಣ ಮಾಡಿತೆಂದರೆ ಹೆಚ್ಚಿನ ಮಾತಲ್ಲ.

ಮುಂದಪಕ್ಷ—ವೀರಪಕ್ಷ

ಇನ್ನು ಮುಂದೆ ರಾಜಕೀಯ ಚಳವಳಿಗಳ ವಿಚಾರದಲ್ಲಿ ಎರಡು ಮತಗಳು ಹುಟ್ಟಿದುವು. ಬ್ರಿಟಿಷ್ ಅಳರಸರ ಮನೋಭೀಷ್ಟವನ್ನರಿತು, ಅವರು ದೇಶದ ಹಿತವನ್ನೇ ಬಯಸಿ ಯತ್ನಿಸುತ್ತಿರುವರೆಂದು ಪೂರ್ಣವಾಗಿ ನಂಬುಗೆಯನ್ನಿಟ್ಟುಕೊಂಡು, ನಮ್ಮ ಕೋರಿಕೆಗಳನ್ನು ಅವರ ಮುಂದೆ ಯುಕ್ತವಾದ ರೀತಿಯಲ್ಲಿ ಮಂಡಿಸುವುದರಿಂದ ಕ್ರಮೇಣ ನಮಗೆ ಸ್ವರಾಜ್ಯವು ಪ್ರಾಪ್ತವಾಗುವುದೆಂದು ಕೆಲವರು. ಇಂತಹ ವಿನಯದಿಂದ ಸಾಕಷ್ಟು ಉಪಯೋಗವಿಲ್ಲವೆಂತಲೂ, ನಿರ್ಭೀತರಾಗಿ ನಮ್ಮ ದೇಶದ ರಾಜ್ಯಸೂತ್ರಗಳನ್ನು ನಾವು ವಹಿಸಲು ತೀವ್ರ ಪ್ರಯತ್ನಗಳನ್ನು ನಡೆಸಬೇಕೆಂದು ಹೇಳುವವರು ಮತ್ತೊಂದು ಪಕ್ಷ. ಮೊದಲನೆಯ ವರ್ಗಕ್ಕೆ ಗೋಖಲೆಯವರನ್ನೂ, ಎರಡನೆಯ ವರ್ಗಕ್ಕೆ ಲೋಕಮಾನ್ಯತಿಲಕರನ್ನೂ ನಿದರ್ಶನಪುರುಷರನ್ನಾಗಿ ನಾವು ಭಾವಿಸಬಹುದು.

ತಿಲಕರು ಸ್ವರಾಜ್ಯವನ್ನು ನಾವು ಸಾಧಿಸಲು ಅರ್ಹರೆಂದು ನಿರೂಪಿಸುವ ಅಗತ್ಯವೇ ಇಲ್ಲವೆಂಬ ಸಿದ್ಧಾಂತವನ್ನು ಹೂಡಿ, ಒಂದು ಅಪೂರ್ವವಾದ ಸ್ವಾವಲಂಬನೆಯ ಚೈತನ್ಯವನ್ನು ತುಂಬಿದರು. "ಸ್ವರಾಜ್ಯವು

ನಪ್ಪ ಜನ್ಮಸಿದ್ಧವಾದ ಹಕ್ಕು'' ಎಂದ ಮೇಲೆ, ಇದರ ವಿಚಾರದಲ್ಲಿ ವಿಪ್ರಲವಾದ ಚರ್ಚೆಯನ್ನು ಮಾಡಿ ಹೇಗೆ ನಾವು ಸಮರ್ಥರೆಂದು ಆಳರಸರ ಮನಸ್ಸಿಗೆ ಬರುವಂತೆ ತೋರಿಸುವುದೇ ನಿರರ್ಥಕವೆಂಬುದು ಲೋಕಮಾನ್ಯರ ಸಿದ್ಧಾಂತ. ಹೀಗೆಂದ ಮಾತ್ರಕ್ಕೆ ಜನರು ಇದಕ್ಕೆ ಸಿದ್ಧರಾಗಿದ್ದಾರೆಂದು ಹೇಳಲಾಗದು. ''ದೇಶದಲ್ಲಿ ಅನೇಕ ಭಾಷೆಗಳು, ಮತಗಳು, ಆಚಾರವಿಚಾರಗಳು ಇವೆ. ಭಾರತೀಯರಲ್ಲಿ ಸಂಘಟನೆಯಿಲ್ಲ. ಕಾರ್ಯನಿರ್ವಹಣ ಶಕ್ತಿಯಿಲ್ಲ. ಸಿದ್ಧತೆಯನ್ನು ಹೊಂದಬೇಕು. ಆನಂತರ ಸ್ವರಾಜ್ಯವನ್ನು ಆಶಿಸಬಹುದು'' ಎನ್ನುವುದೇ ಸರಕಾರದವರ ವಾದ.

ಮಾಂಟೆಗ್ಯೂ ಸುಧಾರಣೆ

೧೯೧೪ ರಲ್ಲಿ ಯೂರೋಪಿನಲ್ಲಿ ಘೋರ ಯುದ್ಧವು ಪ್ರಾರಂಭವಾಯಿತು. ಆ ಸಮಯದಲ್ಲಿ ಆಳರಸರ ವೈಚಿತ್ರ್ಯವನ್ನು ಪಡೆಯುವಷ್ಟು ಸಹಾಯವನ್ನೂ, ಸಹಾನುಭೂತಿಯನ್ನೂ ಹಿಂದೂಸ್ಥಾನವು ಒದಗಿಸಿತು. ಆರುವರ್ಷ ಕಾರಾಗೃಹವಾಸದಲ್ಲಿದ್ದು ಆಗ ತಾನೆ ತಿಲಕರು ಹಿಂದಿರುಗಿದ್ದರು. ಆನಿಬೇಸಂಟಮ್ಮನವರು ತಮ್ಮ ಅಮೋಘವಾದ ವಾಣಿಯನ್ನೂ, ಅದ್ವಿತೀಯವಾದ ರಚನಾ ಶಕ್ತಿಯನ್ನೂ ದೇಶದ ರಾಜಕಾರಣಕ್ಕಾಗಿ ವಿನಿಯೋಗಿಸಿ ಜನಜಾಗೃತಿಯನ್ನುಂಟುಮಾಡಿದರು. ಬ್ರಿಟಿಷ್ ಮಂತ್ರಿವರ್ಯರೂ ಆಶಾಜನಕವಾದ ಮಾತುಗಳನ್ನಾಡಿದ್ದರಿಂದ, ಯುದ್ಧವು ಮುಗಿದನಂತರ ಸ್ವರಾಜ್ಯವು ಪ್ರಾಪ್ತವಾಗುವುದೆಂಬ ಲವಲವಿಕೆಯು ಎಲ್ಲೆಲ್ಲಿಯೂ ಹಬ್ಬಿ, ದೇಶದ ಮುಖಂಡರೆಲ್ಲರೂ ಒಟ್ಟುಗೂಡಿ ಸ್ವರಾಜ್ಯರಚನೆಯನ್ನು ನಿಷ್ಕರ್ಷಿಸುವುದರಲ್ಲಿ ನಿರತರಾದರು. ಎಲ್ಲ ರಾಜಕೀಯ ಪಂಗಡವರೂ ಈ ಕೆಲಸಕ್ಕೆ ಸೇರಿದರು. ೧೯೦೭ ರಲ್ಲಿ ಸ್ಥಾಪಿತವಾಗಿ ಇದುವರೆಗೂ ಭಿನ್ನವಾಗಿಯೇ ಇದ್ದ ಮುಸ್ಲಿಮ್ (ಲೀಗ್) ಸಭೆಯವರೂ, ರಾಷ್ಟ್ರಮಹಾಸಭೆಯವರೊಂದಿಗೆ ಸಹಕರಿಸಿದರು. ಇದರ ಫಲರೂಪವಾಗಿ ೧೯೧೯ ರಲ್ಲಿ ಹೊಸ ರಾಜ್ಯಶಾಸನವು ಆಚರಣೆಗೆ ಬಂತು.

ತಿರಸ್ಕಾರದ ಪರಮಾವಧಿ

ಆದರೆ ಅನೇಕ ಕಾರಣಗಳಿಂದ ಇದು ದೇಶದ ವೀರ ಪಕ್ಷದವರಿಗೆ ಸಮರ್ಪಕವಾಗಿ ತೋರಲಿಲ್ಲ. ಭಾರತೀಯರಲ್ಲಿ ಬಹಳ ಅಸಮಾಧಾನವುಂಟಾಗಿದ್ದಿತು. ಭಾರತೀಯರ ಆತ್ಮಗೌರವವನ್ನು ಬ್ರಿಟಿಷರು ಸ್ವಲ್ಪವೂ ಲಕ್ಷ್ಯದಲ್ಲಿಡುವುದಿಲ್ಲವೆಂದು ದೇಶದ ಮುಖಂಡರಿಗೆ ನಿಸ್ಸಂಶಯವಾಗಿ ಗೋಚರವಾಗುತ್ತಿತ್ತು. ಹಿಂದುಸ್ಥಾನದ ಜನರು ಅನ್ಯದೇಶಗಳಲ್ಲಿ ಬ್ರಿಟಿಷ್ ಅಥವಾ ಅವರ ಬಂಧುವರ್ಗದವರ ದಬ್ಬಾಳಿಕೆಗೆ ಗುರಿಯಾಗುವುದು ದಕ್ಷಿಣ ಆಫ್ರಿಕಾ, ಫಿಜಿ, ಮಲೆಯೊ, ಕಾನಡಾ ಮುಂತಾದ ಪ್ರದೇಶಗಳಿಂದ ಬರುವ ವರ್ತಮಾನಗಳಿಂದ ವೇದ್ಯವಾಗುತ್ತಿತ್ತು. ನಮ್ಮ ದೇಶದಲ್ಲಿಯೇ ರೈಲುಗಾಡಿಗಳಲ್ಲಿಯೂ, ಬ್ರಿಟಿಷರು ವ್ಯಾಪಾರವಾಡುವ ಕೋಟಗಳಲ್ಲಿಯೂ, ಕೋರ್ಟು ಕಛೇರಿಗಳಲ್ಲಿನ ತೀರ್ಪುಗಳಲ್ಲಿಯೂ, ಭಾರತೀಯರೆಂದರೆ ಆಳರಸರಿಗೆ ಇರುವ ತಿರಸ್ಕಾರ ಬುದ್ಧಿಯು ಅನೇಕ ನಿದರ್ಶನಗಳಿಂದ ಗೋಚರವಾಗಿ, ಜನರಲ್ಲಿದ್ದ ಶಾಂತಿಸಮಾಧಾನವನ್ನೂ, ಬ್ರಿಟಿಷರ ವಿಷಯದಲ್ಲಿದ್ದ ಭಕ್ತಿಯನ್ನೂ ಮುರಿಯುವಂತಿದ್ದವು. ಈ ಸಮಯಕ್ಕೆ ಐರೋಪ್ಯ ಯುದ್ಧವು ನುಗಿದು ಸಂಧಿಯಾಗಿತ್ತು. ಆದರೆ ತುರ್ಕೀದೇಶಕ್ಕೆ ಐರೋಪ್ಯದೇಶದವರು ಮಾಡಿದ ಅಪಮಾನವನ್ನು ತುರ್ಕಿಯ ವೀರನಾಯಕನಾದ ಕೆಮಾಲ್‌ಪಾಷಾ ತನ್ನ ದೇಶದ ಯಶಸ್ಸನ್ನು ಉಳಿಸಲು ಮಾಡಿದ ಸಾಹಸವನ್ನು ಕೇಳಿ ಪೌರ್ವಾತ್ಯ ಜನಾಂಗದವರಿಗೆ, ಹಿಂದೆ ಜರ್ಮನ್ ದೇಶದವರು ರಷ್ಯಾದೇಶದವರ ಧಾಳಿಯನ್ನು ಮುರಿದಾಗ ಎಷ್ಟು ಹರ್ಷವುಂಟಾಗಿತ್ತೋ ಅದಕ್ಕಿಂತಲೂ ಇಮ್ಮಡಿಯಾಗಿ ಉಂಟಾಯಿತು. ವಿಶೇಷವಾಗಿ ಹಿಂದೂಸ್ಥಾನದ ಮುಸಲ್ಮಾನರಿಗೆ ಬ್ರಿಟಿಷರಲ್ಲಿ ಬಹಳ ಆಸಮಾಧಾನತೋರಿ, ಅದು ರೋಷಾವೇಶದಲ್ಲಿ ಪರಿಣಮಿಸಿತು. ಇದೇ ಸಮಯದಲ್ಲಿ ದೇಶದ ಯುವಕರು ಗುಪ್ತ ಸಭೆಗಳನ್ನು ಮಾಡಿಕೊಂಡು ಗುಂಡು ಮದ್ದುಗಳನ್ನು ಶೇಖರಿಸಿ, ರಾಜದ್ರೋಹವನ್ನು ಬಯಸಿ, ಭಯಾನಕರೀತಿಯಲ್ಲಿ ಕ್ರಾಂತಿಕರವಾದ ಉದ್ಯಮಗಳನ್ನು ಮಾಡುತ್ತಿರುವರೆಂದು ಸರಕಾರದವರಿಗೆ ತೋರಿದುದರಿಂದ ಇಂತಹ ಉದ್ಯಮಗಳನ್ನು ನಿರ್ಮೂಲಮಾಡಲು ತಕ್ಕ ಶಾಸನಗಳನ್ನು ವಿಧಿಸಲು ಒಂದು ಸಮಿತಿಯನ್ನು ಏರ್ಪಾಟು ಮಾಡಿದರು. ಈ ರೌಲೆಟ್ ಸಮಿತಿಯ ವರದಿಯನ್ನು ಸರಕಾರದವರು ಸ್ವೀಕರಿಸಿ ಅದಕ್ಕನುಗುಣವಾಗಿ ಕಾನೂನನ್ನು ಮಾಡಲುಪಕ್ರಮಿಸಿದಾಗ ಶಾಸನಸಭೆಯಲ್ಲೂ ಇಡೀ ದೇಶದಲ್ಲೂ ಪ್ರಚಂಡವಾದ ಚಳವಳಿಯುಂಟಾಗಿ ಗಾಂಧೀಜಿಯವರು ಮೊದಲು ಮಾಡಿದ ಸತ್ಯಾಗ್ರಹಕ್ಕೆ ಕಾರಣವಾಯಿತು. ಹರತಾಳಗಳ ಆಚರಣೆಯನ್ನು ಈ ಕಾಲದಲ್ಲೇ ಭಾರತೀಯರು ಮೊದಲು ಮಾಡಿದರು.

ಪಂಜಾಬ ಸರಕಾರದವರು ಈ ಸತ್ಯಾಗ್ರಹವನ್ನು ಹೀ ಯಾಳಿಸಿ ಅಮೃತಸರದಲ್ಲಿ ಸಭೆಸೇರಿದ್ದ ಜನರನ್ನು ಘೋ ರವಾದ ರೀತಿಯಲ್ಲಿ ಕೊಲೆಗೆ ಗುರಿಮಾಡಿದುದೇ ಜನರ ವಿಷಯದಲ್ಲಿ ಸರಕಾರಕ್ಕಿದ್ದ ತಿರಸ್ಕಾರ ಭಾವದ ಪರ ಮಾವಧಿಯೆನ್ನಬಹುದು.

ಅಸಹಕಾರ

೧೯೧೯ ರಲ್ಲಿ ಅಮೃತಸರದಲ್ಲೇ ಪಂಡಿತ ಮೋತೀ ಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ನಡೆದ ರಾಷ್ಟ್ರ ಮಹಾಸಭೆಯಲ್ಲಿ ಹಿಂದೂಸ್ಥಾನಕ್ಕೆ ಬ್ರಿಟಿಷ್ ಪಾರ್ಲಿ ಮೆಂಟಿನವರು ದಯಪಾಲಿಸಿದ್ದ ಹೊಸ ಸುಧಾರಣೆಗಳು ಸಾಲದೆಂದೂ, '' ಅತೃಪ್ತಿಕರವೆಂದೂ, ನಿರಾಶಾಜನಕ ವೆಂದೂ '' ತೀರ್ಮಾನಮಾಡಿದುದೇನೂ ಆಶ್ಚರ್ಯವಲ್ಲ. ಆದರೆ ಚಿತ್ತರಂಜನದಾಸ, ತಿಲಕ್ ಮುಂತಾದವರು ಈ ವೀರಪಕ್ಷವನ್ನು ಪಹಿಸಿದಾಗ್ಯೂ, ಮಹಾತ್ಮ ಗಾಂಧಿಯ ವರು ಬ್ರಿಟಿಷರ ನ್ಯಾಯಬುದ್ಧಿಯಲ್ಲಿ ತಮಗಿದ್ದ ನಂಬು ಗೆಯನ್ನು ತ್ಯಜಿಸಲಿಲ್ಲ. ಆದರೆ ಅಮೃತಸರದ ರಾಕ್ಷ ಸೀಕೃತ್ಯಗಳ ವೃತ್ತಾಂತವು ಹೊರಬಿದ್ದುವು. ಸರಕಾರ ದಿಂದ ನೇಮಿಸಲ್ಪಟ್ಟ ವಿಚಾರಣಾಸಮಿತಿಯ ವರದಿಯು ತಡವಾಗಿ ಪ್ರಕಟವಾದುದಲ್ಲದೆ ಪಾರ್ಲಿಮೆಂಟಿನಲ್ಲಿ ಅದರ ಮೇಲಿನ ಚರ್ಚೆಗಳು ಆಳರಸರ ಅಂತರಂಗವನ್ನು ತೋರಿಸಿ ನಿರಾಶೆಯನ್ನುಂಟುಮಾಡಿದುವು. ೧೯೨೦ ರಲ್ಲಿ ಮಹಾತ್ಮಾಗಾಂಧಿಯವರು 'ಅಸಹಕಾರ' ಚಳವಳಿಯ ನ್ನು ಪ್ರಾರಂಭಮಾಡಿದರು. ಅಂದಿನಿಂದ ಇದುವರೆಗೂ ಈ ಚಳವಳಿಯ ಪ್ರಭಾವವೇ ಗೋಚರವಾಗಿಯೂ, ಅಗೋಚರವಾಗಿಯೂ ಎಲ್ಲೆಲ್ಲೂ ಆವರಿಸಿದೆ.

ಅಸಹಕಾರ ತತ್ವದ ವಿಚಾರವಾಗಿ ಈ ಕಾಲದಲ್ಲಿ ಹೆಚ್ಚು ಬರೆಯುವ ಅಗತ್ಯವಿಲ್ಲ. ಆದರೆ ಈ ಹತ್ತು ವರ್ಷಗಳಲ್ಲಿ ಈ ಮಾರ್ಗದ ಅವಲಂಬನೆಯಿಂದ ದೇಶ ದಲ್ಲಿ ಉದ್ಭವಿಸಿರುವ ನವಚೈತನ್ಯವೂ, ಜನಜೀವನದಲ್ಲಿ ಕಂಡುಬರುವ ಅದ್ಭುತವಾದ ಪರಿವರ್ತನೆಯೂ ಗಾಂಧಿ ಯವರ ಅಸದೃಶವಾದ ಶಕ್ತಿಗೂ, ತಪೋಬಲಕ್ಕೂ ಸಾ ಕ್ಷಿಯಾಗಿವೆ. ಜನರಲ್ಲಿ ಅಂತರ್ಗತವಾದ ಶಕ್ತಿಯು ಸಾತ್ವಿಕರೀತಿಯಲ್ಲಿ ಪರಿಣಾಮಗೊಂಡು ದೇಶದಲ್ಲಿ ನೂರಾರು ವರ್ಷಗಳಿಂದ ಕಳೆಗುಂದಿದ್ದ ಯಶಸ್ಸು, ಸಾ ಮರ್ಥ್ಯ, ಕಾರ್ಯಸಾಹಸ ಇವುಗಳು ಮತ್ತೆ ನವತೇಜಸ್ಸಿ ನಿಂದ ಬೆಳಗುತ್ತಲಿವೆ.

ಜನಪದ ಶಕ್ತಿ ಸಂಚಯನ

ಸ್ವರಾಜ್ಯವು ಜನ್ಮಸಿದ್ಧವಾದ ಹಕ್ಕು ಹೌದು; ನ ಮ್ಮಲ್ಲಿ ಅನೇಕ ಕುಂದುಕೊರತೆಗಳಿರುವುದೂ ನಿಜ. ಈ ಪೂರ್ವಾಪರಪಕ್ಷಗಳನ್ನು ನಮ್ಮ ದೇಶದ ಹಿಂದಿನ ಮು ಖಂಡರೂ, ಸರಕಾರದವರೂ, ಕ್ರಮವಾಗಿ ವಹಿಸಿ, ಅ ನಾದ್ಯಂತವಾದ ಚರ್ಚೆಗಳಲ್ಲಿಯೂ, ಅವಿಶ್ರಾಂತವಾದ ಬೇಡಿಕೆಗಳಲ್ಲಿಯೂ, ಅಲ್ಪಸ್ವಲ್ಪ ರಾಜಕೀಯ ಸುಧಾ ರಣೆಗಳಲ್ಲಿಯೂ ಕೊನೆಗಾಣಿಸಿದರು. ಆದರೆ ಗಾಂಧಿ ಯವರು ಎರಡುಪಕ್ಷಗಳ ಮತವನ್ನೂ ಸಮನ್ವಯ ಮಾಡುವ ರೀತಿಯಲ್ಲಿ ರಾಷ್ಟ್ರನಿರ್ಮಾಣಕಾರ್ಯಕ್ಕೆಂ ದು ಜನತೆಯ ಕರ್ತವ್ಯವನ್ನು ಸೂಚಿಸಿ ಜನರ ಆತ್ಮ ಗೌರವವನ್ನೂ, ಶಕ್ತಿಯನ್ನೂ ಬಲಪಡಿಸುವ ಮಾರ್ಗ ವನ್ನು ತೋರಿಸಿಕೊಟ್ಟರುವರು. ಸರಕಾರವು ಜನರ ಹೇಳಿಕೆಯನ್ನು ಲಾಲಿಸದಿದ್ದರೆ, ಪ್ರಾರ್ಥನೆಗಳು ನಿಷ್ಫ ಲವಾದಾಗ ತಮ್ಮ ಸಂಘಟಿತ ಶಕ್ತಿಯಿಂದ ಶಾಂತರೀತಿ ಯಲ್ಲಿ ಸರಕಾರವನ್ನು ಬಗ್ಗಿಸಬೇಕೆಂಬುದೇ ಅಸಹಕಾ ರದ ಗುರಿ, ಈ ತತ್ವವನ್ನು ಭಾರತೀಯರ ಮುಂದೆ ೧೯೨೧ ರಲ್ಲಿ ಪ್ರಚಾರಮಾಡಿದಾಗ ಜನರ ಉತ್ಸಾಹವು ಯಾವರೀತಿಯಿಂದ ಉಕ್ಕಿಬಂತೆಂಬುದು ಚಿರಸ್ಮರಣೀ ಯವಾದ ವಿಷಯ. ದೇಶದಲ್ಲಿ ಜನರು ಮಾಡಿದ ಸ್ವಾ ರ್ಥತ್ಯಾಗವೂ, ತೋರಿಸಿದ ನಿರ್ಭಯವೂ ಸರಕಾರದವ ರನ್ನು ಬೆಚ್ಚಿಬೀಳುವಂತೆ ಮಾಡಿದುವು. ಸರಕಾರದ ಶಾಸನ ಸಭೆಗಳಿಗೂ, ಕೋರ್ಟುಗಳಿಗೂ, ಶಾಲೆಗಳಿಗೂ ಬಹಿಷ್ಕಾರ ಹಾಕಿ, ಇವಕ್ಕೆ ಬದಲಾಗಿ ನಮ್ಮ ಸ್ವಂತ ಏರ್ಪಾಡುಗಳನ್ನೇ ಮಾಡಬೇಕೆಂಬ ತೀರ್ಮಾನವಾಯಿ ತು. ದೇಶದ ಸುಸಂಘಟನಕ್ಕಾಗಿ ಹಿಂದು ಮಸಲ್ಮಾ ನ್ ಮುಂತಾದ ಪಂಗಡಗಳ ಐಕ್ಯತೆಯೂ, ಅಸ್ಪೃಶ್ಯತಾ ನಿವಾರಣೆಯೂ, ಆರ್ಥಿಕಜೀವನದ ಸುಧಾರಣೆಗಾಗಿ ಮದ್ಯಪಾನ ನಿಷೇಧವೂ, ಖದ್ದರ್ ಮತ್ತು ಚರಕಾಪ್ರ ಚಾರವೂ ರಾಷ್ಟ್ರರಚನೆಯ ಕ್ರಮಗಳೆಂದು ಗಾಂಧಿಯ ವರು ಬೋಧಿಸಿದರು. ರಾಷ್ಟ್ರಸಭೆಯೂ ಹೊಸ ರೂಪು ಹೊಂದಿ, ಭಾಷಾನುಸಾರ ಪ್ರಾಂತಗಳು ವಿಂಗಡಿಸಲ್ಪ ಟ್ಟು, ಪ್ರತಿನಿಧಿಗಳನ್ನು ಕ್ಲಿಷ್ಟರೀತಿಯಲ್ಲಿ ಚುನಾಯಿ ಸುವಂತೆಯೂ, ವ್ಯವಸ್ಥಿತವಾಗಿಯೂ ನಿಷ್ಕರ್ಷಿತವಾದ ರೀತಿಯಲ್ಲಿಯೂ ರಾಷ್ಟ್ರಕಾರ್ಯವು ಎಲ್ಲ ಕಡೆಯಲ್ಲಿ ನಡೆಯುವಂತೆಯೂ ಏರ್ಪಾಡಾಯಿತು. ಇನ್ನು ಮುಂದೆ ರಾಷ್ಟ್ರಸಭೆಯು ಚರ್ಚೆಯ ಸಭೆ ಮಾತ್ರವಾಗಿರದೆ, ಎಲ್ಲರ ಆದರಕ್ಕೆ ಪಾತ್ರವಾಗಿ, ರಾಷ್ಟ್ರನಿರ್ಮಾಣಕಾರ್ಯ

ಕ್ಕೆಂದು ಹೊರಟು, ಜನತೆಯ ಶಕ್ತಿಸಂಚಯನದ ಕಡೆ ಲಕ್ಷ್ಯವನ್ನಿಟ್ಟಿತು. ಈ ಕಾರ್ಯಗಳನ್ನು ಸಾಧಿಸುವು ದರಲ್ಲಿ ಸರಕಾರದವರು ಅನೇಕ ನಿರ್ಬಂಧಗಳನ್ನು ತಂ ದೊಡ್ಡಿದರೂ, ದೇಶಸೇವಕರು ಹಿಂಜರಿಯದೆ ಕಾರಾಗೃ ಹವಾಸಕ್ಕೆ ಸಿದ್ಧರಾದರು. ಆಗಿನ ಚಳವಳಿಯಲ್ಲಿ ಸುಮಾರು ೪೦,೦೦೦ ಜನರು ಈ ರೀತಿ ಶಿಕ್ಷೆಗೆ ಗುರಿ ಯಾದರು. ಕ್ರಮೇಣ ತೆರಿಗೆಯನ್ನು ಕೊಡುವುದಿಲ್ಲ ವೆನ್ನುವಷ್ಟು ಧೈರ್ಯವೂ, ಐಕಮತ್ಯವೂ, ಅದರಿಂದಾಗ ಬಹುದಾದ ಕಷ್ಟನಷ್ಟಗಳನ್ನು ತಡೆಯುವಷ್ಟು ಸ್ಥೈರ್ಯ ವೂ, ಶಾಂತಬುದ್ಧಿಯೂ, ವೀರತ್ಯಾಗವೂ ಹುಟ್ಟುವಂತೆ ಕೆಲವು ಪ್ರದೇಶಗಳನ್ನು ಸಿದ್ಧ ಮಾಡುವ ಸಂಕಲ್ಪವು ಗಾಂಧಿಯವರಿಗಿತ್ತು. ಇದರ ಮೂಲಕ ಸರಕಾರದವ ರು ಬಗ್ಗಿ, ಜನರ ಅಭೀಷ್ಟಗಳನ್ನು ನೆರವೇರಿಸಿ, ಸ್ವರಾ ಜ್ಯವು ಒಂದು ವರ್ಷದಲ್ಲೇ ಪ್ರಾಪ್ತವಾಗಬಹುದೆಂದು ಗಾಂಧಿಯವರು ದೃಢವಾಗಿ ನಂಬಿದ್ದರು.

ದೂರದೃಷ್ಟಿಯಿಲ್ಲ

ಈ ಪ್ರಚಂಡವಾದ ಆಂದೋಳನವನ್ನು ಕಂಡು ಸರ ಕಾರದವರಿಗೆ ವಿಸ್ಮಯವಾಗಿ, ಅದನ್ನು ಹೀಯಾಳಿಸಲಾ ರಂಭಿಸಿದರು. ಬ್ರಿಟಿಷ್ ಆಡಳಿತದ ವಿಚಾರದಲ್ಲಿ ಜನಸಾಮಾನ್ಯದಲ್ಲಿ ಬೆಳೆಯುತ್ತಿರುವ ಅವಿಶ್ವಾಸವನ್ನು ಕಂಡು ಸರಕಾರದವರಿಗೆ ಚಿಂತೆ ಹಿಡಿಯಿತು. ಈ ಚಳವಳಿಯನ್ನು ನಿಲ್ಲಿಸುವುದಕ್ಕೆ ಎಲ್ಲ ಉಪಾಯಗಳನ್ನು ಮಾಡಿದರು. ದೇಶದ ಕೆಲವು ಸ್ಥಳಗಳಲ್ಲಿ ನಡೆದ ಜನರ ಅತ್ಯಾಚಾರವನ್ನೂ, ಕ್ರೌರ್ಯವನ್ನೂ ಕಂಡು ಎದೆ ಗುಂದಿ ಬರ್ದೋಲಿಯಲ್ಲಿ ನಡೆಯುತ್ತಿದ್ದ ಉದ್ಯಮ ವನ್ನೂ ನಿಲ್ಲಿಸಿದ ಗಾಂಧಿಯವರನ್ನೇ ಹಿಡಿದು ಆರು ವರ್ಷ ಶಿಕ್ಷೆಗೆ ಗುರಿಮಾಡಿ ಎಲ್ಲವೂ ಸಮಾಪ್ತವಾಯಿ ತೆಂದು ಸಮಾಧಾನಗೊಂಡರು. ಲೌಕಿಕಜ್ಞಾನವಿಲ್ಲದ ಕೇವಲ ಫಕೀರನ ಹುಚ್ಚುಮಾತನ್ನು ಕೇಳಿ ಮರುಳು ಹೋಗುತ್ತಿದ್ದ ಭಾರತೀಯರು ಹತೋಟಿಗೆ ಬಂದ ರೆಂದು ಸಂತೋಷಪಟ್ಟರು.

ಸ್ವರಾಜ್ಯಪಕ್ಷ—ರಚನಾಕಾರ್ಯಕ್ರಮ

ಗಾಂಧಿಯವರಿಗೆ ಸೆರೆಮನೆಯವಾಸ ಪ್ರಾಪ್ತವಾದ ಮೇಲೆ ದೇಶದಲ್ಲಿಯೂ ಒಂದು ರೀತಿಯ ಆಲಸ್ಯ, ನಿರಾಶೆ, ಅಂತಃಕಲಹಗಳು ತಲೆದೋರಿದುವು. ಬಿರು ಗಾಳಿಯಂತೆ ಬಂದ ಉತ್ಸುಕತೆಯು ಸ್ಥಿರವಾಗಿ ನಿಲ್ಲ ಲಿಲ್ಲ. ಹುಚ್ಚುಹೊಳೆಯ ಪ್ರವಾಹದಂತೆ ಜನರ ಉತ್ಸಾಹವು ಕಾಡುಬೀಡುಗಳನ್ನು ತೋಯಿಸಿ ಭೂಮಿ ಯನ್ನು ಮೃದುವಾಗಿ ಮಾಡಿದ್ದಾಗ್ಯೂ, ಸಾಕಷ್ಟು ಶಿಸ್ತು ಮತ್ತು ವ್ಯವಸ್ಥೆಯಿಲ್ಲದೆ ಇದ್ದುದರಿಂದ ಗೋಚ ರವಾದ ರೀತಿಯಲ್ಲಿ ಫಲಕಾರಿಯಾಗಿರಲಿಲ್ಲ. ಶಾಸನ ಸಭೆಗಳನ್ನು ತ್ಯಜಿಸಿದುದು ತಪ್ಪೆಂದು ಕೆಲವರಿಗೆ ತೋ ರಿತು. ರಾಷ್ಟ್ರಸಭೆಯಲ್ಲಿ ಎರಡು ಪಕ್ಷಗಳಾಗಿ ಕೆಲ ವರು ಪಂಡಿತ ಮೋತೀಲಾಲ್‌ನೆಹರು, ಚಿತ್ತರಂಜನ ದಾಸರ ನೇತೃತ್ವದಲ್ಲಿ, ಶಾಸನಸಭೆಗಳನ್ನು ಪ್ರವೇಶ ಮಾಡಿ ಅವು ಟೊಳ್ಳೆನ್ನುವುದನ್ನು ಲೋಕಕ್ಕೆ ಎತ್ತಿತೋ ರಿಸಬೇಕೆಂದು ಪ್ರಯತ್ನಮಾಡಿದರು. ೧೯೨೪ರಲ್ಲಿ ಗಾಂಧಿಯವರಿಗೆ ಅನಾರೋಗ್ಯದ ನಿಮಿತ್ತದಿಂದ ಬಿಡು ಗಡೆಯಾಯಿತು. ಆಗ ಅವರು ನೆಹ್ರುದಾಸ್ ಮುಂ ತಾದ ಸ್ವರಾಜ್ಯಪಕ್ಷದವರೊಡನೆ ಮನಸ್ತಾಪವನ್ನು ಬೆಳೆಸುವುದರಿಂದ ದೇಶಕ್ಕೆ ಕೇಡಾಗುವುದೆಂದು ಎಣಿಸಿ, ಅವರಿಗೆ ಬೇಕಾದ ಸಹಾನುಭೂತಿಯನ್ನು ನೀಡಿ, ಹಿಂ ದಿನ ಅಸಹಕಾರತತ್ವದಲ್ಲಿ ತೋರಿಸಿದ ಪೂರ್ಣಶ್ರದ್ಧೆ ಯನ್ನೇ ತನ್ನ ಅನುಯಾಯಿಗಳು ರಚನಾತ್ಮಕ ಕಾರ್ಯಗಳಲ್ಲಿ ತೋರಿಸಬೇಕೆಂದು ಬೋಧಿಸಿ, ಕೇವಲ ಖಾದೀಪ್ರಚಾರಕ್ಕೆಂದು ಒಂದು ಸಮಿತಿಯನ್ನು ನಿರ್ಮಾ ಟುಮಾಡಿ, ಇದರ ಕಾರ್ಯಭಾರವನ್ನೂ ಅವರೇ ವಹಿಸಿ ದೇಶದಲ್ಲಿ ಖಾದಿಯ ಉಪಯೋಗದ ಸಲುವಾಗಿಯೂ ಮದ್ಯಪಾನನಿಷೇಧ, ಅಸ್ಪೃಶ್ಯತಾನಿವಾರಣೆ ಮುಂತಾದ ವಿಷಯಗಳಲ್ಲಿಯೂ ಲೇಖನಗಳನ್ನೂ ವಾಖ್ಯಾನಗ ಳನ್ನೂ ಮಾಡುತ್ತ, ರಾಜಕೀಯ ವಿಷಯಗಳಿಂದ ನಿವೃತ್ತಿಹೊಂದಿದವರಂತೆಯೇ ವರ್ತಿಸಿದರು. ಕೇವಲ ನೈತಿಕಮಾರ್ಗವನ್ನೇ ಬೋಧಿಸುವ ಈ ಸನ್ಯಾಸಿಯ ವಿಚಾರದಲ್ಲಿ ಸರಕಾರಕ್ಕಿದ್ದ ಸಂಶಯವೂ ಭಯವೂ ದೂರವಾಗಿ ಈತನ ವ್ಯಾಪಕತ್ವವು ಕಡಮೆಯಾಗಿರು ವುದೆಂದು ಗುಪ್ತವಾಗಿ ಹರ್ಷಗೊಂಡರು.

ಆದರೆ ದೇಶದ ರಾಜಕಾರಣದಲ್ಲಿ ಶಾಂತತೆಯು ತೋರಲಿಲ್ಲ. ೧೯೧೯ರಲ್ಲಿ ಜಾರಿಗೆ ಬಂದಿದ್ದ ಸುಧಾ ರಣೆಗಳನುಸಾರ ಎಲ್ಲ ಪ್ರಾಂತಗಳಲ್ಲಿಯೂ ಮಂತ್ರಿಗಳಿ ದ್ದರೂ, ಅವರಿಗೆ ನಿಜವಾದ ಅಧಿಕಾರವಿಲ್ಲದೆ ಜನರ ಹಿತಕ್ಕಾಗಿ ಸಾಕಷ್ಟು ಪ್ರಯತ್ನಗಳನ್ನು ಮಾಡಲು ಅಶ ಕ್ತರಾದರು. ಕೋಮುವಾರು ಕಲಹಗಳೂ ದ್ವೇಷಾ ಸೂಯೆಗಳೂ ವೃದ್ಧಿಯಾದುವು. ಒಮ್ಮೆ ಸಿದ್ಧವಾಗಿ ದ್ದಂತೆ ತೋರಿದ ಹಿಂದು ಮುಸಲ್ಮಾನರ ಐಕ್ಯವು ಮುರಿ

ದುಬಿದ್ದು ಗಾಂಧಿಯವರಿಗೆ ಸಹ ಸಮಾಧಾನಮಾಡಲು ಅಶಕ್ಯವೆಂದು ತೋರಿತು. ಮುಸಲ್ಮಾನರು ತಮ್ಮ ಸಂಘಟನೆಯನ್ನು ನಡೆಸಿಕೊಂಡಂತೆ ಹಿಂದುಮಹಾಸಭೆಯವರೂ ಸಂಘಟನೆಗೆ ಪ್ರಯತ್ನಮಾಡಿ, ಅಸ್ಪೃಶ್ಯತಾನಿವಾರಣೆಗಾಗಿಯೂ, ಶಾರೀರಕ ಶಿಕ್ಷಣಕ್ಕೂ, ಶುದ್ಧಿಗೂ, ಹೆಚ್ಚುಗಮನವನ್ನು ಕೊಟ್ಟರು. ದೇಶದಲ್ಲಿ ಅನೇಕ ಸ್ಥಳಗಳಲ್ಲಿ ಹಿಂದುಮುಸಲ್ಮಾನರ ಕಲಹಗಳು ತಲೆದೋರಿ ಪರಸ್ಪರ ರೋಷಾವೇಶಕ್ಕೂ, ಪರರ ಅವಹೇಳನಕ್ಕೂ ದೇಶವು ಗುರಿಯಾಯಿತು. ಆದರೆ ರಾಷ್ಟ್ರರಚನಾಕಾರ್ಯಗಳು ಹೆಚ್ಚಿನ ವ್ಯವಸ್ಥೆಯಿಂದಲೂ ಸದ್ದಿಲ್ಲದೆಯೂ ಮುಂದೆ ಸಾಗುತ್ತಿದ್ದುದೆನ್ನುವುದನ್ನು ನಾವು ಮರೆಯಬಾರದು. ಇಂತಹವುಗಳಲ್ಲಿ ಯುವಕ ಸಂಸ್ಥೆಗಳೂ, ಕೂಲಿಗಾರರಸಂಘಗಳೂ, ಅಖಿಲಭಾರತ ಚರಖಾಸಂಘ, ಹಿಂದುಸ್ತಾನಿ ಸೇವಾದಳ, ಹಿಂದಿ ಪ್ರಚಾರಸಭಾ, ರಾಷ್ಟ್ರಸೇವಕರನ್ನು ಸಿದ್ಧಮಾಡುವ ಅನೇಕ ಸಮಿತಿಗಳು, ಆಶ್ರಮಗಳು ಮುಖ್ಯವಾದುವು. ಈ ಮೇಲೆ ಹೇಳಿದ ಸಂಸ್ಥೆಗಳ ಜನಸಹಾಯದಿಂದಲೇ ಈಗಿನ ಸ್ವಾತಂತ್ರ್ಯೋದ್ಯಮವು ಬಹುಮಟ್ಟಿಗೆ ಮುಂದುವರಿದಿರುವುದು.

ಪೂರ್ಣಸ್ವರಾಜ್ಯವಾದ

ಜನಾಬ್ದಾರೀ ಸರಕಾರವನ್ನು ಕ್ಷಿಪ್ರದಲ್ಲಿಯೇ ಬ್ರಿಟಿಷ್ ಹಿಂದೂಸ್ಥಾನದಲ್ಲಿ ಸ್ಥಾಪಿಸುವ ಪ್ರಯತ್ನವನ್ನು ಪಂಡಿತ ಮೋತೀಲಾಲ್ ನೆಹರೂ ಅವರ ನೇತೃತ್ವದಲ್ಲಿ ಸ್ವರಾಜ್ಯ ಪಕ್ಷದವರು ಎಡೆಬಿಡದೆ ೧೯೨೩ರಿಂದ ಶಾಸನ ಸಭೆಗಳಲ್ಲಿ ಮಾಡುತ್ತಿದ್ದರು. ಆದರೆ ಈ ವಾಗ್ವಾದನೆಗೆ ಸಾಕಷ್ಟು ಗಮನವನ್ನು ಸರಕಾರದವರು ಕೊಡದಿರುವುದು ಮಾತ್ರವಲ್ಲದೆ, ಅನೇಕ ಸುಧಾರಣೆಗಳ ವಿಚಾರದಲ್ಲಿ (ಅಂದರೆ ಸೈನ್ಯದ ಖಾತೆ, ದೇಶದ ನಾಣ್ಯ ಮತ್ತು ಅದರ ವಿನಿಮಯ, ಉಪ್ಪಿನ ತೆರಿಗೆ) ಉದಾಸೀನತೆಯನ್ನು ತೋರಿಸುತ್ತಿದ್ದಂತೆ ತೋರಿತು. ೧೯೨೯ರಲ್ಲಿ ಮದರಾಸಿನಲ್ಲಿ ನಡೆದ ಮಹಾಸಭೆಯಲ್ಲಿ ಪೂರ್ಣಸ್ವರಾಜ್ಯವೇ ದೇಶದ ಧ್ಯೇಯವೆಂದು ನಿಷ್ಕರ್ಷೆಯಾಯಿತು. ಬ್ರಿಟಿಷರ ಅಧೀನದಿಂದ ಸಂಪೂರ್ಣ ನಿವೃತ್ತವಾಗುವುದೇ ರಾಷ್ಟ್ರಗೌರವವನ್ನೂ, ಬೆಳವಣಿಗೆಯನ್ನೂ ಸಾಧಿಸಲು ಉತ್ತಮವಾದ ಮಾರ್ಗವೆಂದು ಅನೇಕರಿಗೆ ತೋರಿತು. ಸರಕಾರದವರೊಡನೆ ಸಹಕರಿಸಿ ದೇಶಾಭ್ಯುದಯವನ್ನು ಒದಗಿಸಿಕೊಳ್ಳಬೇಕೆಂದು ಬಯಸುವ ಮಂದ (ಲಿಬರಲ್) ಪಕ್ಷದವರೂ ೧೯೧೯ರಲ್ಲಿ ಬಂದ ಸುಧಾರಣೆಗಳನ್ನು ವಿಮರ್ಶೆಮಾಡುವುದಕ್ಕೆಂದು ಪಾರ್ಲಿಮೆಂಟಿನಿಂದ ನೇಮಿಸಲ್ಪಟ್ಟ ಸಮಿತಿಯಲ್ಲಿ ಧಾರಣೀಯರಿಗೆ ಸ್ಥಳದೊರೆಯದೆ ಇದ್ದುದನ್ನು ಕಂಡು ನಿರಾಶರಾದರು. ಪಂಡಿತ ಮೋತೀಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಸ್ವರಾಜ್ಯರಚನೆಯನ್ನು ಸಿದ್ಧಮಾಡಲು ಸ್ಥಾಪಿಸಲ್ಪಟ್ಟ ಸಮಿತಿಯೊಂದಿಗೆ ಸಹಕರಿಸಿದರು. ಆಗೂ ಸರಕಾರದವರು ಸೈಮನ್‌ಸಮಿತಿಯ ಕೆಲಸವನ್ನು ಹಟದಿಂದ ಪೂರ್ತಿಗೊಳಿಸಲು ಅನುವಾದುದನ್ನು ನೋಡಿ ದೇಶದ ರಾಜಕಾರಣದಲ್ಲಿ ನುರಿತ ಎಲ್ಲ ಪಕ್ಷದವರಿಗೂ ಬಹಳ ಅಸಮಾಧಾನವುಂಟಾಯಿತು. ೧೯೨೮ರಲ್ಲಿ ಕಲಕತ್ತೆಯಲ್ಲಿ ನೆರೆದ ರಾಷ್ಟ್ರಮಹಾಸಭೆಯಲ್ಲಿ ಸಂಪೂರ್ಣ ಸ್ವರಾಜ್ಯವೇ ನಮ್ಮ ಗುರಿಯಾಗಿರತಕ್ಕದ್ದೆಂದು ವಾದಿಸುವವರು ಬಹಳ ಪ್ರಬಲರಾದರು. ದೇಶದ ಎಲ್ಲ ಸ್ಥಿತಿಗತಿಗಳನ್ನೂ, ಭಾರತೀಯರ ಪ್ರಾರ್ಥನೆಗಳ ವಿಚಾರದಲ್ಲಿ ಬ್ರಿಟಿಷ್ ಪ್ರಭುತ್ವದವರು ತೋರಿಸುವ ಔದಾಸೀನ್ಯವೂ ರಾಷ್ಟ್ರಮಹಾಸಭೆಯಲ್ಲಿ ಸಂಪೂರ್ಣ ಸ್ವರಾಜ್ಯವನ್ನು ಸಾಧಿಸಲು ತೀವ್ರವೇ ಉಪಕ್ರಮಿಸಬೇಕೆಂಬ ಮತಕ್ಕೆ ಪುಷ್ಟಿಯನ್ನು ಕೊಟ್ಟವು. ಇದು 'ದುಡುಕು ತನ'ವಾಗಿ ಪರಿಣಮಿಸಿ, ಇಂತಹ ತೀರ್ಮಾನದಿಂದ ದೇಶಕ್ಕೆ ಕೇಡಾಗಬಹುದೆಂದು ಕೆಲವರಿಗೆ ಶಂಕೆಯು ತೋರಿತು. ಈ ಸಂದರ್ಭದಲ್ಲಿ ಸರ್ವಾದರಣೀಯ ಮಾರ್ಗವನ್ನು ಸೂಚಿಸುವ ಭಾರವನ್ನು ಇಷ್ಟು ದಿನ ಪ್ರತ್ಯೇಕರೀತಿಯಲ್ಲಿ ರಾಜಕಾರಣದಲ್ಲಿ ಭಾಗವನ್ನು ತೆಗೆದುಕೊಳ್ಳದೆ ದೂರಸರಿದಿದ್ದ ಮಹಾತ್ಮಾ ಗಾಂಧಿಯವರೇ ವಹಿಸಬೇಕಾಯಿತು. ಕಲಕತ್ತೆಯಲ್ಲಿ ಗಾಂಧಿಯವರು ನಡೆಸಿದ ಶಾಂತಿಸಂಧಾನವೂ, ಭಿನ್ನಾಭಿಪ್ರಾಯಗಳನ್ನು ಪರಿಶೀಲಿಸಿ ಸಮನ್ವಯಗಳನ್ನು ಬಿಡಿಸಿ ಸುಗಮವಾದ ರೀತಿಯಲ್ಲಿ ಮುಂದಿನ ಕಾರ್ಯಗಳು ಎಲ್ಲರ ಬೆಂಬಲದಿಂದಲೂ ನಡೆಯುವಂತೆ ಅವರು ತೋರಿಸಿದ ಕೌಶಲ್ಯವೂ, ವಿಚಕ್ಷಣೆಯೂ, ನಿಧಾನವೂ ಎಲ್ಲರನ್ನೂ ಮುಗ್ಧಗೊಳಿಸಿದುವು. ಹಿಂದುಸ್ಥಾನದ ರಾಜಕಾರಣದಲ್ಲಿ ಮತ್ತೆ ಗಾಂಧಿಯವರು ನಿರ್ವಿವಾದರೀತಿಯಲ್ಲಿ ಚಕ್ರವರ್ತಿಯಾದರೆಂದು ಕಲಕತ್ತೆಯ ರಾಷ್ಟ್ರಮಹಾಸಭೆಯ ಕಾರ್ಯಕಲಾಪಗಳಿಂದ ಬೋಧೆಯಾಯಿತು. ಒಂದು ವರ್ಷ ತಡೆದು ನೋಡಿ, ಬ್ರಿಟಿಷ್ ಪ್ರಭುತ್ವದವರಿಗೆ ಅಂತ್ಯಾವಧಿಯನ್ನು ಕೊಟ್ಟು, ಅನಂತರ ಅಗತ್ಯವಿದ್ದರೆ ಸಂಪೂರ್ಣಸ್ವರಾಜ್ಯದ ಉದ್ಯಮವನ್ನು ಉಪಕ್ರಮಿಸಬೇಕೆನ್ನುವ ತೀರ್ಮಾನವು ಅಂಗೀಕೃತವಾಯಿತು.

ಚಕ್ರಗೋಷ್ಠಿ, ಲಾಹೋರ್ ನಿರ್ಧಾರ

೧೯೨೯ರಲ್ಲಿ ಸೈಮನ್ ಸಪ್ತತಿಯವರ ಅಂಗೋಪಾಂಗಗಳ ನಿರರ್ಥಕವಾದ ಧೋರಣೆ ನಡೆಯಿತು ಸರ್ವಪಕ್ಷೀಯ ಪರಿಷತ್ತಿನವರು ಸ್ವರಾಜ್ಯ ರಚನೆಯ ವಿಷಯದಲ್ಲಿ ಉದ್ಯುಕ್ತರಾಗಿದ್ದರು. ಗಾಂಧಿಯವರಂತೂ ಅನೇಕ ಪ್ರಾಂತಗಳಲ್ಲಿ ಪ್ರವಾಸ ಮಾಡುತ್ತಾ ಜನತೆಯ ನೈಜಬಲವನ್ನು ಪರಿಶೀಲಿಸುತ್ತಿದ್ದಂತೆ ತೋರಿತು. ಪರದೇಶೀ ವಸ್ತ್ರಗಳ ಬಹಿಷ್ಕಾರ ಮುಂತಾದ ಕಾರ್ಯಕ್ರಮಗಳು ಚುರುಕಿನಿಂದ ಸಾಗಿದುವು. ಹಿಂದೂಸ್ಥಾನೀ ಸೇವಾದಳದಿಂದ ಉಪಕ್ರಮಿಸಲ್ಪಟ್ಟ ರಾಷ್ಟ್ರಧ್ವಜ ವಂದನೆಯ ಪದ್ಧತಿಯು ಎಲ್ಲೆಲ್ಲಿಯೂ ಉತ್ಸಾಹದಿಂದ ಆಚರಿಸಲ್ಪಡುತ್ತಿತ್ತು. ಈ ರೀತಿಯ ಜಾಗೃತಿಯು ದೇಶದಲ್ಲಿ ಕಂಡುಬರುವ ವೇಳೆಗೆ ವೈಸರಾಯರು ೩೧ನೇ ಅಕ್ಟೋಬರ್ ತಿಂಗಳಿನಲ್ಲಿ ಲಂಡನ್ ನಗರದಲ್ಲಿ ಚಕ್ರಗೋಷ್ಠಿಯು ಸೇರುವಂತೆ ಏರ್ಪಾಡಾಗುವುದೆಂದೂ, ಭಾರತೀಯರು ಅದರೊಂದಿಗೆ ಸಹಕರಿಸಿ ತಮ್ಮ ಇಷ್ಟಾರ್ಥಗಳನ್ನು ಪೂರ್ಣಗೊಳಿಸಬೇಕೆಂದೂ ಒಂದು ಮುಖ್ಯವಾದ ಭಾಷಣ ಮಾಡಿದರು. ದೇಶದ ಮುಖಂಡರು ಸೇರಿ ಇದಕ್ಕೆ ಪ್ರತ್ಯುತ್ತರವಾಗಿ ರಾಷ್ಟ್ರಪಕ್ಷದವರಿಗೆ ಹೆಚ್ಚಿನ ಪ್ರಾತಿನಿಧ್ಯವಿರಬೇಕೆಂದೂ ರಾಜಕೀಯ ಚಳವಳಿಗಳಲ್ಲಿ ಸೆರೆಮನೆಗೆ ಹೋದವರನ್ನು ಬಿಡುಗಡೆ ಮಾಡಬೇಕೆಂದೂ, ಲಂಡನ್ ಸಭೆಯು ಸೇರುವುದರ ಉದ್ದೇಶವು ಸ್ವರಾಜ್ಯ ರಚನೆಯನ್ನು ನಿಸ್ಕರ್ಷಿಸುವುದೇ ಆಗಬೇಕೆಂದೂ ಸೂಚಿಸಿ ಪ್ರಜಾ ಪಕ್ಷದಲ್ಲಿರುವ ಸಂಶಯಗಳು ದೂರವಾಗುವಂತೆ ಸರಕಾರದವರು ಮುಂದೆ ವರ್ತಿಸಬೇಕೆಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಇದಕ್ಕೇನೂ ಫಲದೊರೆಯಲಿಲ್ಲ. ಲಾಹೋರ್ ನಗರದಲ್ಲಿ ರಾಷ್ಟ್ರಮಹಾಸಭೆಯು ಸೇರುವುದಕ್ಕೆ ಮುಂಚಿತವಾಗಿ ಪಂಡಿತ ಮೋತೀಲಾಲ್ ನೆಹರು ಅವರೂ, ಗಾಂಧಿಯವರೂ ವೈಸರಾಯರನ್ನು ಸಂದರ್ಶಿಸಿದರು. ಆದರೆ ಇದರಿಂದಲೂ ಈ ಮುಖಂಡರಿಗೆ ಲಂಡನ್ ಸಭೆಯ ಕಡೆ ಮನವೊಲಿದಂತೆ ಆಗಲಿಲ್ಲ. ಲಾಹೋರ್ ರಾಷ್ಟ್ರಮಹಾಸಭೆಯಲ್ಲಿ ಪೂರ್ಣ ಸ್ವರಾಜ್ಯವನ್ನು ಸಾಧಿಸುವುದೇ ದೇಶದ ಮುಂದಿನ ಕಾರ್ಯಕ್ರಮವೆಂದು ನಿರ್ಧರವಾಗಿ ಇದರ ಸಲುವಾಗಿ ಪ್ರಯತ್ನಗಳನ್ನು ನಡೆಸುವ ಭಾರವನ್ನು ರಾಷ್ಟ್ರಮಹಾಸಭೆಯ ವರ್ಕಿಂಗ್ ಕಮಿಟಿಯವರು ವಹಿಸಬೇಕೆಂದು ತೀರ್ಮಾನವಾಯಿತು. ೧೯೩೦ನೇ ಜನವರಿ ೧೯ನೆಯ ತಾರೀಖು ಅವರು ಹಿಂದೆ ಸೂಚಿಸಿದ್ದಂತೆ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಪಕ್ಷದವರಾದರು.

ಸ್ವಾತಂತ್ರ್ಯ ಸಂಗ್ರಾಮ

ರಾಷ್ಟ್ರಮಹಾಸಭೆಯ ವರ್ಕಿಂಗ್ ಕಮಿಟಿಯವರು ಜನವರಿ ೨೬ನೆಯ ತಾರೀಖು ಸಂಪೂರ್ಣ ಸ್ವರಾಜ್ಯ ದಿನವನ್ನಾಗಿ ಆಚರಿಸಬೇಕೆಂದೂ, ಆದಿನ ರಾಷ್ಟ್ರಧ್ವಜಾರೋಹಣ ಮಾಡಿ ಸಾರ್ವಜನಿಕ ಸಭೆಗಳಲ್ಲಿ ಸಂಪೂರ್ಣ ಸ್ವರಾಜ್ಯದ ತೀರ್ಮಾನವನ್ನು ಓದಿ ಪುಷ್ಟೀಕರಿಸಬೇಕೆಂದೂ ನಿರ್ಣಯಿಸಿದರು. "ಬ್ರಿಟಿಷ್ ಸರಕಾರದವರು ಭಾರತೀಯರ ಸ್ವಾತಂತ್ರ್ಯವನ್ನು ಅಪಹರಿಸಿದುದು ಮಾತ್ರವಲ್ಲದೆ ಜನಸಾಮಾನ್ಯದ ಅಶಕ್ತತೆಯನ್ನೂ ತಮ್ಮ ಸ್ವಂತ ಪ್ರಯೋಜನಕ್ಕೆ ಉಪಯೋಗಿಸಿಕೊಂಡು ಹಿಂದೂಸ್ಥಾನವನ್ನು ಆರ್ಥಿಕ ದೃಷ್ಟಿಯಿಂದಲೂ, ರಾಜಕೀಯ ದೃಷ್ಟಿಯಿಂದಲೂ, ಸಾಂಸ್ಕೃತಿಕ ದೃಷ್ಟಿಯಿಂದಲೂ, ಆಧ್ಯಾತ್ಮಿಕ ದೃಷ್ಟಿಯಿಂದಲೂ ನಾಶಕ್ಕೆ ಗುರಿಮಾಡಿರುವರು" ಎನ್ನುವುದೇ ಈ ತೀರ್ಮಾನದ ಮುಖ್ಯ ಪಲ್ಲವಿ. ದೇಶದಲ್ಲೆಲ್ಲ ಈ ತೀರ್ಮಾನವು ಬಹು ವಿಶ್ವಾಸದಿಂದಲೂ, ಉತ್ಸಾಹದಿಂದಲೂ ಅಂಗೀಕಾರವಾಯಿತು. ಆದರೂ ಹಿಂದೂ ಮುಸಲ್ಮಾನ ಐಕ್ಯವು ಸಾಕಷ್ಟು ಕಂಡುಬರಲಿಲ್ಲ. ಲಂಡನ್ ಚಕ್ರಗೋಷ್ಠಿಗೆಂದು ಸನ್ನಾಹಗಳು ನಡೆಯುತ್ತಿದ್ದುವು. ಮತ್ತೆ ಗಾಂಧಿಯವರ ನೇತೃತ್ವದಲ್ಲಿ ಎಂತಹ ನಿಪಾತಗಳಾಗುವುವೋ ಎನ್ನುವ ಭಯದೊಂದಿಗೆ, ಗಾಂಧಿಯವರಿಗೂ ಬೆಳಕು ಹೊಳೆಯದೆ ತಟಸ್ಥರಾಗಿದ್ದುದರಿಂದ ಏನು ಮಾಡುವರೋ ಎನ್ನುವ ಶಂಕೆಯು ಬಹಳ ತೋರಿತು. ಅನಂತರ ಉಪ್ಪಿನ ಕಾಯಿದೆಯನ್ನು ಮುರಿಯುವ ತೀರ್ಮಾನವಾಯಿತು. ಕೆಲವು ಪ್ರದೇಶಗಳಲ್ಲಿ ಕಾಡಿನ ಆಡಳಿತದಲ್ಲಿರುವ ನಿರ್ಬಂಧಗಳನ್ನು ತೊಡೆದುಹಾಕುವ ಪ್ರಯತ್ನವನ್ನೂ, ಸರ್ವತ್ರವೂ ಪರದೇಶೀ ವಸ್ತ್ರ ಬಹಿಷ್ಕಾರ, ಮದ್ಯಪಾನ ನಿರೋಧ, ಈಚಲಮರಗಳನ್ನು ಕಡಿದುಹಾಕುವಿಕೆ ಮುಂತಾದ ಕಾರ್ಯಗಳನ್ನೂ ಉಪಕ್ರಮಿಸಬೇಕೆಂದು ತೀರ್ಮಾನವಾಯಿತು.

ಮುಂದಿನ ಕಥೆಯನ್ನು ಹೇಳುವ ಅವಶ್ಯಕತೆಯಿಲ್ಲ. ಇಂತಹ ದೊಡ್ಡ ಉದ್ಯಮಕ್ಕೆ ಕಾಲವು ಪ್ರಶಸ್ತವಾಗಿಲ್ಲವೆಂದು ತೋರಿದಾಗ್ಯೂ, ಗಾಂಧಿಯವರು ತಮ್ಮ

ಶಾಂತಸೇನೆಯೊಂದಿಗೆ ಸಬರಮತಿ ಆಶ್ರಮವನ್ನು ಬಿಟ್ಟು ಸಂಪೂರ್ಣ ಸ್ವರಾಜ್ಯವನ್ನು ಸ್ಥಾಪಿಸದೆ ಹಿಂದಿರುಗುವುದಿಲ್ಲವೆಂಬ ಶಪಥಮಾಡಿ ದಂಡೀ ಗ್ರಾಮಕ್ಕೆ ಕಾಲು ನಡಿಗೆಯಿಂದಲೇ ನಡೆದುಹೋದುದೇ ಪೂರ್ವಕಾಲದ ಯಾವುದೋ ಮಹಾಕಾವ್ಯವೊಂದರ ಸನ್ನಿವೇಶದಂತಿದೆ. ಒಂದು ತಿಂಗಳಲ್ಲಿ ದೇಶದಲ್ಲಿ ವ್ಯಾಪಿಸಿದ ಅಪ್ರತಿಹತವಾದ ಶಕ್ತಿಯೂ, ತೇಜಸ್ಸೂ, ಲೋಕವನ್ನೇ ಎಚ್ಚರಿಸಿ, ಹಿಂದೂಸ್ಥಾನದ ಅದ್ಭುತ ಸಾಹಸವನ್ನು ಎಲ್ಲರೂ ಮೆಚ್ಚುವಂತೆ ಮಾಡಿತು.

ಸತ್ಯಾಗ್ರಹ ವಿಜಯ

ರಾಜದ್ರೋಹದ ಪ್ರವಾಹವನ್ನು ಎದುರಿಸಲು ಸರಕಾರದವರು ಸರ್ವ ಪ್ರಯತ್ನವನ್ನೂ ಮಾಡಿದರು. ಸರಕಾರದ ಶಾಸನಗಳನ್ನು ನಿರಾಕರಣ ಮಾಡುವವರಿಗೂ ಸರಕಾರಕ್ಕೂ ಈಗ ಒಂದು ವರ್ಷದಿಂದ ನಡೆದ ಯುದ್ಧದ ಧರ್ಮಾಧರ್ಮಗಳು, ಜಯಾಪಜಯಗಳು, ಈ ಯುದ್ಧದ ಪರಿಣಾಮ, ಇವುಗಳನ್ನು ಪರಿಶೀಲಿಸುವ ಕಾಲವಿನ್ನೂ ಒದಗಿಲ್ಲ. ಆದರೆ ಕಾಂಗ್ರೆಸ್ಸಿನ ಧ್ಯೇಯಗಳಿಂದ ಉತ್ಸಾಹಗೊಂಡು ಜನತೆಯು ಹೇಗೆ ತನ್ನ ದಾರಿಯನ್ನೇ ಹಿಡಿದು ನಡೆದಿದೆಯೋ ಹಾಗೆಯೇ ಸರಕಾರವೂ ತನ್ನ ದಾರಿಯನ್ನೇ ಹಿಡಿದು ನಡೆದಿದೆಯೆಂದು ಸೂಕ್ಷ್ಮವಾಗಿ ಹೇಳಬಹುದು. ಲಂಡನ್ನಿನ ಚಕ್ರಗೋಷ್ಠಿ, ಬ್ರಿಟಿಷರಲ್ಲಿ ಕಂಡು ಬರುತ್ತಿರುವ ಪರಿವರ್ತನ, ಲಂಡನ್ನಿಗೆ ಹೋಗಿಬಂದ ಭಾರತೀಯ ಮುಖಂಡರ ಮತ್ತು ರಾಜರ ಸದಾಕಾಂಕ್ಷೆಗಳು, ಗಾಂಧಿ-ಇರ್ವಿನ್ ಭೇಟಿ, ಇದರಿಂದಾದ ಒಪ್ಪಂದ ಇವ ನಮ್ಮ ರಾಜಕೀಯ ಅಭ್ಯುದಯದ ಚರಿತ್ರೆಯ ಚಲನಚಿತ್ರದ ದೃಶ್ಯಗಳಂತೆ ಒಂದರ ಹಿಂದೆ ಒಂ ಬಹು ಶೀಘ್ರವಾಗಿ ಸಂಭವಿಸಿವೆ. ಮುಂದಿನ ಸಂ ಟನೆಗಳು ಹೇಗೆ ಆಗುವುವೋ ಹೇಳುವುದಕ್ಕಾಗದು.

ಜಗತ್ತಿಗೇ ಮಂಗಳ

ಆದರೆ ಈ ೧೦ ವರ್ಷಗಳಲ್ಲಿ ಹಿಂದೂಸ್ಥಾನದ ನಡೆದ ಪರಿವರ್ತನವು ಅದ್ಭುತವಾದ ಸನ್ನಿವೇಶ ಸರಿ. ಭಾರತೀಯರಲ್ಲಿ ಆತ್ಮಗೌರವ, ಆತ್ಮಶ ಸ್ವಾವಲಂಬನೆ ಬೆಳೆದು ಈ ದೊಡ್ಡ ದೇಶವು ಹೊ ಜೈತನ್ಯದಿಂದ ಪ್ರೇರಿತವಾಗಿ ಕ್ರಿಯಾಶಕ್ತಿಯಿಂದ ಮಳಗೊಳ್ಳುತ್ತಲಿದೆ ಈ ಶಕ್ತಿಯು ಫಲಕಾರಿಯ ಗಿಯೂ ಯಶಸ್ವಿಯಾಗಿಯೂ ಆಗುವುದು ರಾಷ್ಟ್ರ ಮುಖಂಡರ ವಿಚಕ್ಷಣೆಯಮೇಲೂ, ಜನರ ಶಿಸ್ತು ಯಮಗಳಮೇಲೂ ಅವಲಂಬಿಸಿದೆ. ಪ್ರಪಂಚವೇ ಶಾಂತಿಯುದ್ದಪ ಸನ್ನಿವೇಶಗಳನ್ನು ಬಹು ಆತ ದಿಂದಲೂ, ವಿಶ್ವಾಸದಿಂದಲೂ ನೋಡುತ್ತಿದೆಯ ದರೆ ಅತ್ಯುಕ್ತಿಯಲ್ಲ. ಈ ಅಪೂರ್ವ ರೀತಿಯ ಒಂದು ದೇಶದ ಸ್ವಾತಂತ್ರ್ಯವನ್ನು ಸಾಧಿಸುವುದಿಂ ಮಾನವನ ಇತಿಹಾಸದ ಪ್ರಗತಿಗೂ ಅಭ್ಯುದಯಕ ಒಂದು ನೂತನವಾದ ಮಾರ್ಗವನ್ನು ಹಾಕಿಕೊಟ್ಟಂ ಆಯಿತು ಹಿಂದೂಸ್ಥಾನದ ಜಯದಿಂದ ಜಗತ್ತಿ ಮಂಗಳವಾಗುವುದೆನ್ನುವ ವಿಶ್ವಾಸವು ತೋರಿಬರುತ್ತಿ

ಸಾ ಹಿ ತ್ಯ

೧. ಆಂಗ್ಲ ಸಾಹಿತ್ಯ ಪರಿಚಯ

ಶ್ರೀ ಎ. ಎನ್. ಮೂರ್ತಿರಾವ್, ಎಂ. ಎ., ಮಹಾರಾಜಾ ಕಾಲೇಜ್, ಮೈಸೂರು

೨. ತಮಿಳು ಸಾಹಿತ್ಯ ಕಥಾ ಪರಿಚಯ

ರಾವ್ ಬಹದ್ದೂರ್ ಡಾಕ್ಟರ್ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಎಂ. ಎ., ಮದರಾಸ್

೩. ಆಂಧ್ರ ವಾಙ್ಮಯ ಚರಿತ್ರಸಂಗ್ರಹ

ಶ್ರೀ ರಾಳ್ಳಪಲ್ಲಿ ಅನಂತಕೃಷ್ಣಶರ್ಮಗಾರು, ಮಹಾರಾಜಾ ಕಾಲೇಜ್, ಮೈಸೂರು

೪. ಮಲಯಾಳ ವಾಙ್ಮಯ ವಿಚಾರ

ಕೇರಳೀಯ

೫. ಮರಾಠಿ ವಾಙ್ಮಯ ಪರಿಚಯ

ಶ್ರೀ ರಾ. ಗೋ. ಭಿಡೆ, ಉಪಸಂಪಾದಕ 'ಕೇಸರಿ', ಪುಣೆ

೬. ಹಿಂದೀ ವಾಙ್ಮಯ ವಿಸ್ತಾರ

ಶ್ರೀ ಜೆ. ಎನ್. ಭಿಡೆ, ಹಿಂದೀ ಪ್ರಚಾರಕ, ಬೆಂಗಳೂರು

೭. ವಂಗ ವಾಙ್ಮಯ ಕಥಾನಕ

ಶ್ರೀ ಬಾಬು ಮೋಹಿತಕುಮಾರ ಬಾನರ್ಜಿ, ಶಾಂತಿನಿಕೇತನ

೮. ಆಧುನಿಕ ಕನ್ನಡ ವಾಙ್ಮಯ

ಶ್ರೀ ಕೆ. ವಿ. ಪುಟ್ಟಪ್ಪ ಎಂ., ಎ., ಇಂಟರ್ ಕಾಲೇಜ್, ಮೈಸೂರು

ಆಂಗ್ಲ ಸಾಹಿತ್ಯ ಪರಿಚಯ

(ಶ್ರೀ ಎ. ಎನ್. ಮೂರ್ತಿರಾವ್, ಎಂ. ಎ., ಮಹಾರಾಜಾ ಕಾಲೇಜ್, ಮೈಸೂರು)

ಆಂಗ್ಲೋ-ಸ್ಯಾಕ್ಸನ್ ಸಾಹಿತ್ಯ

ಇಂಗ್ಲಿಷ್ ಸಾಹಿತ್ಯವು ಸುಮಾರು ಕ್ರಿ. ಶ. ನಾಲ್ಕನೆಯ ಶತಮಾನದ ಕೊನೆಯಲ್ಲಿ ಪ್ರಾರಂಭವಾಗಿರಬಹುದು. ಆದರೆ ಈಗ ಸಾಹಿತ್ಯಾಭಿಮಾನಿಗಳು ಬಹುಮಟ್ಟಿಗೆ ಹದಿನಾಲ್ಕನೆಯ ಶತಮಾನದ ಸಾಹಿತ್ಯದಿಂದ ತಮ್ಮ ಅಧ್ಯಯನವನ್ನು ಪ್ರಾರಂಭಿಸಿರುವರು. ಆ ಶತಮಾನಕ್ಕೆ ಮುಂಚೆ ಬರೆಯಲ್ಪಟ್ಟ ಕಾವ್ಯಗಳೇನೋ ಅನೇಕ ಸಿಕ್ಕುವವು; 'ಬೆಯೊವುಲ್ಫ್' ಎಂಬ ಕಾವ್ಯ ಸಂಥ ಉತ್ತಮವರ್ಗದ ಕಾವ್ಯಗಳೂ ಕೆಲವು ಸಿಕ್ಕುವವು. ಆದರೆ ಆಗಿನ ಸಾಹಿತ್ಯಕ್ಕೆ ರಸದೃಷ್ಟಿಯಿಂದ ಪ್ರಾಮುಖ್ಯತೆಯಿಲ್ಲವೆಂದು ಹೇಳಲಾಗುವುದಿಲ್ಲವಾದರೂ ಒಟ್ಟಿನಲ್ಲಿ ಚರಿತ್ರಕಾರರ ದೃಷ್ಟಿಯಿಂದಲೇ ಪ್ರಾಮುಖ್ಯತೆ ಹೆಚ್ಚು. ಆ ಕಾಲದಲ್ಲಿ ಇಂಗ್ಲಿಷರು ಶತ್ರುಗಳೊಡನೆ ಹೋರಾಡಿ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದರಲ್ಲಿಯೂ ತಮ್ಮ ದೇಶದ ಏಕೀಕರಣದಲ್ಲಿಯೂ ನಿರತರಾಗಿದ್ದರು. ಇದರಮೇಲೆ ಬರಹಗಾರರಿಗೆ ಕಾವ್ಯವಸ್ತುಗಳು ಹೆಚ್ಚಾಗಿರಲಿಲ್ಲ; ಒದುವವರು ಕಡಿಮೆ; ಅಥವಾ ಇವೆರಡೂ ಇದ್ದರೂ ಲ್ಯಾಟಿನ್ನಿನಲ್ಲಿ ಬರೆದು ಕೀರ್ತಿಯನ್ನು ಸಂಪಾದಿಸಬೇಕೆಂಬ ಆಸೆ. ನಮ್ಮಲ್ಲಿ ಕೆಲವರು ಸಂಸ್ಕೃತದ ಮೇಲಿನ ಮೋಹದಲ್ಲಿ ಕನ್ನಡವನ್ನು ಮರೆತಂತೆ ಅವರು ಲ್ಯಾಟಿನ್ ಮೇಲಿನ ಮೋಹದಲ್ಲಿ ಇಂಗ್ಲಿಷನ್ನು ಮರೆತರು. ಇಷ್ಟಾದರೂ ಆ ಆಂಗ್ಲೋ-ಸ್ಯಾಕ್ಸನ್ ಜನರು ಸೃಷ್ಟಿಸಿರುವ ಸಾಹಿತ್ಯವನ್ನು ನೋಡಿದರೆ ಆ ಕಾಲದಲ್ಲಿ ಅವರು ಅಷ್ಟು ಕೆಲಸಮಾಡಿದ್ದು ಹೆಚ್ಚೆಂದೇ ಹೇಳಬೇಕಾಗುವುದು. ಆಂಗ್ಲೋ-ಸ್ಯಾಕ್ಸನ್ ಜನರು ಸ್ವಲ್ಪ ಒರಟರು; ಅವರ ಮನೋಭಾವ ಹೆಚ್ಚು ಸಂತೋಷದ ಮನೋಭಾವವಲ್ಲ; ಅವರಿಗೆ ಹಾಸ್ಯಶಕ್ತಿ ಕಡಿಮೆ. ಆದರೆ ಜೀವನದ ಕಷ್ಟನಿಷ್ಠುರಗಳು, ತಮ್ಮ ವಿರೋಧಿಗಳೊಡನೆಯೂ ಪ್ರಕೃತಿಯೊಡನೆಯೂ ಹೋರಾಡುವುದು—ಇವುಗಳನ್ನು ಕೆಲವೆಡೆಗಳಲ್ಲಿ ಉತ್ಸಾಹದಿಂದ ವರ್ಣಿಸಿರುವರು. ಅವರ ಸಾಹಿತ್ಯದ ವಿಷಯ ಇನ್ನು ಹೆಚ್ಚು ಬರೆಯಲು ಇಲ್ಲಿ ಸಾಧ್ಯವಿಲ್ಲ.

ಛಾಸರ್

ನಮ್ಮ ದೇಶದ ವಿದ್ಯಾರ್ಥಿಗಳ ಭಾಗಕ್ಕೆ ಸಾಧಾರಣವಾಗಿ ಇಂಗ್ಲಿಷ್ ಸಾಹಿತ್ಯವು ಪ್ರಾರಂಭವಾಗುವುದೆಂದರೆ ಹದಿನಾಲ್ಕನೆಯ ಶತಮಾನದಲ್ಲಿ ಜೀವಿಸಿದ್ದ ಛಾಸರ್ ಕವಿಯಿಂದ. ಈತನು ಬರೆಯಲು ಪ್ರಾರಂಭಿಸುವ ವೇಳೆಗೆ ಇಂಗ್ಲಿಷರಿಗೂ ಯೂರೋಪಿನ ಇತರ ದೇಶದವರಿಗೂ ಬಳಕೆ ಹೆಚ್ಚಾಗಿದ್ದುದರಿಂದಲೂ, ಫ್ರೆಂಚ್ ಭಾಷೆಯ ಸಂಸರ್ಗದಿಂದಲೂ, ಇಂಗ್ಲಿಷ್ ಭಾಷೆಯಲ್ಲಿ ಹೊಸ ಸ್ಫೂರ್ತಿಯು ಬಂದಿದ್ದಿತು. ಗ್ರೀಸ್, ರೋಮ್, ಪೂರ್ವದೇಶಗಳು—ಈ ಕಡೆಗಳಿಂದ ಕಾವ್ಯವಸ್ತುಗಳು ಬೇಕಾದಷ್ಟು ಸಂಗ್ರಹಿಸಲ್ಪಟ್ಟಿದ್ದವು. ಯೂರೋಪಿನಲ್ಲಿ ಪ್ರಚಾರದಲ್ಲಿದ್ದ 'ರೊಮಾನ್ಸ್' ಕಾವ್ಯಗಳನ್ನನುಸರಿಸಿ ಇಂಗ್ಲೆಂಡಿನಲ್ಲಿಯೂ ಬಹುಜನರು 'ರೊಮಾನ್ಸ್' ಕಾವ್ಯಗಳನ್ನು ಬರೆದಿದ್ದರು. ಆದರೆ ಆಗ ಇನ್ನೂ ಬದಲಾವಣೆಯ ಸ್ಥಿತಿಯಲ್ಲಿದ್ದ ಇಂಗ್ಲಿಷ್ ಭಾಷೆಯನ್ನು ಕಾವ್ಯಕ್ಕೆ ಹೊಂದಿಸಿಕೊಂಡು ಬರೆಯುವ ಶಕ್ತಿ ಈ ಜನರಿಗೆ ಇರಲಿಲ್ಲ. ಆ ಕಾಲದ ಭಾವಗಳಿಗೆ ಉತ್ತಮ ಸಾಹಿತ್ಯರೂಪವನ್ನು ಕೊಟ್ಟವನು ಛಾಸರ್. "ಕ್ಯಾಂಟರ್ ಬರಿಯ ಕಥೆಗಳು" ಎಂಬ ಆತನ ಪ್ರಸಿದ್ಧ ಕಾವ್ಯದಲ್ಲಿ ಕಂಡುಬರುವ ಅಸಾಧಾರಣವಾದ ಕಥೆಹೇಳುವ ಕೌಶಲ, ಹಾಸ್ಯಶಕ್ತಿ, ಆ ಕಾವ್ಯದ ಪ್ರಸ್ತಾವನೆಯಲ್ಲಿ ಆತನು ನಿರ್ಮಿಸಿರುವ ಪಾತ್ರಚಿತ್ರಗಳು, ಆತನ ವೃತ್ತಗಳ ಅಪೂರ್ವ ಶಬ್ದಮಾಧುರ್ಯ—ಇವೆಲ್ಲವೂ ಕವಿತೆಯಲ್ಲಿ ಆತನ ಮೇಲ್ಮೆಯನ್ನು ತೋರಿಸುವುವು. ಛಾಸರು ಇಂಗ್ಲಿಷ್ ಸಾಹಿತ್ಯಕ್ಕೆ ಬಹಳ ಉಪಕಾರ ಮಾಡಿದನು. ಆಂಗ್ಲೋ-ಸ್ಯಾಕ್ಸನ್ನರು

ಉಪಯೋಗಿಸುತ್ತಿದ್ದ ಈಚೆಗೆ ಜಿಲವಾಗಿದ್ದ ಛಾಸರಿನ ಸಮಕಾಲೀನನಾದ ಲಾಂಗ್ಲೆಂಡು ಉಪಯೋಗಿಸುತ್ತಿದ್ದ ಅನುಷ್ಟಾನಕ್ಕಿಂತಲೂ ಕಾವ್ಯದಲ್ಲಿ ಛಂದಸ್ಸನ್ನು ಉಪಯೋಗಿಸುವುದು ಎಷ್ಟು ಉತ್ತಮವಾದುದೆಂದು ಆತನು ತೋರಿಸಿಕೊಟ್ಟನು. ಇಂಗ್ಲಿಷ್ ಸಾಹಿತ್ಯದಲ್ಲಿ ಅದುವರೆಗೂ ಅಪರೂಪವಾಗಿದ್ದ ಹಾಸ್ಯಧ್ವನಿಯನ್ನು ತನ್ನ ಕಾವ್ಯಗಳಲ್ಲಿ ತುಂಬಿದನು. ಈಚಿನ ಇಂಗ್ಲಿಷ್ ಕವಿಗಳನೇಕರು ತಾವು ಆತನಿಂದ ಉಪಕೃತರೆಂದು ಒಪ್ಪಿಕೊಂಡಿರುವರು. ಟೆನಿಸನ್ನನು ಆತನನ್ನು ''ಗಾನದ ಪ್ರಭಾತ ತಾರೆ'' ಎಂದು ಕರೆದಿರುವನು.

ಛಾಸರ್ ಅನಂತರ

ಹದಿನೈದನೆಯ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯವು ಅವನತಸ್ಥಿತಿಗೆ ಬಂದಿತು. ಛಾಸರಿನಂಥ ಕವಿಯ ಮೇಲ್ಪಂಕ್ತಿ ದೊರೆತರೂ ಒಳ್ಳೆಯ ಕವಿಗಳು ಯಾರೂ ಉದಯಿಸಲಿಲ್ಲ. ಲಿಡ್‌ಗೇಟ್, ಆಕ್ಲೀವ್ ಮೊದಲಾದ ಹದಿನೈದನೆಯ ಶತಮಾನದ ಕವಿಗಳೆಲ್ಲರೂ ತಾವು ಛಾಸರಿನ ಶಿಷ್ಯರೆಂದು ಹೇಳಿಕೊಂಡು ಕಾವ್ಯಗಳನ್ನು ಬರೆದರು. ಆದರೆ ಅವರು ತಮ್ಮ ಗುರುವಿಗೆ ಮಾನ ತರುವಂಥ ಶಿಷ್ಯರಲ್ಲ. ಅವರಿಗೆ ಕವಿತಾಶಕ್ತಿಯಿರಲಿಲ್ಲ; ಅವರ ಕಾವ್ಯಗಳು ನೀತಿಗರ್ಭಿತವಾದ ಆಖ್ಯಾಯಿಕೆಗಳು ಆ ಕಾವ್ಯಗಳಲ್ಲಿನ ಪಾತ್ರಗಳು ಹೆಸರಿಗೆ ಮಾತ್ರ ಮನುಷ್ಯರೆನ್ನಿಸಿಕೊಳ್ಳುವ ಧರ್ಮ, ಜ್ಞಾನ, ಕಾಮ, ಲೋಭ ಮೊದಲಾದ ಸದ್ಗುಣ ದುರ್ಗುಣಗಳು. ಈ ಪಾತ್ರಗಳು ನಿಜವಾಗಿಯೂ ಮನುಷ್ಯರಲ್ಲ; ರಕ್ತಮಾಂಸಗಳಿಲ್ಲದ, ಶರೀರವಿಲ್ಲದ, ನಿರ್ಜೀವಿಗಳಾದ ನೆರಳುಗಳು; ಗಾಳಿಯ ಆಕೃತಿಗಳು. ಇನ್ನು ಈ ಕಾವ್ಯಗಳು ಎಷ್ಟು ರಸಭರಿತವಾಗಿರಬೇಕು? ಛಾಸರಿಗೆ ತಕ್ಕ ಶಿಷ್ಯರು ಇಂಗ್ಲೆಂಡಿನಲ್ಲಿ ಸಿಕ್ಕಲಿಲ್ಲ. ಸ್ಕಾಟ್ಲೆಂಡಿನಲ್ಲಿ ಕೆಲವರು ಪ್ರತಿಭಾಶಾಲಿಗಳಾದ ಕವಿಗಳು ಛಾಸರಿನ ಸಂಪ್ರದಾಯವನ್ನು ಸ್ವಲ್ಪಮಟ್ಟಿಗೆ ಕಾಪಾಡಿದರು. ಒಟ್ಟಿನಲ್ಲಿ ಆಗಿನ ಕಾಲದ ಲಾವಣಿಗಳು, ಗೀತೆಗಳು ಇವುಗಳನ್ನೂ, ಸ್ಕಾಟ್ಲೆಂಡಿನವರ ಕಾವ್ಯಗಳನ್ನೂ ಬಿಟ್ಟರೆ, ಈ ಶತಮಾನದಲ್ಲಿ ಉತ್ತಮ ಸಾಹಿತ್ಯವು ಬಹಳ ಕಡಿಮೆ.

ಎಲಿಜಬೆತ್ ಯುಗ

ಹದಿನೈದನೆಯ ಶತಮಾನದ ಕೊನೆಯಲ್ಲಿಯೇ ಕೆಲವು [illegible] ಅಸಮಾಧಾನವೂ ಹುಟ್ಟಿ ಹೊಸ ಪದ್ಧತಿಗಳಿಗೆ ಕೈಹಾಕಬೇಕೆಂಬ ಆಸೆ ಹುಟ್ಟಿತ್ತು. ಎಲಿಜಬೆತ್ ಕಾಲದಲ್ಲಿ ಸಾಹಿತ್ಯಕ್ಕೆ ಹೊಸಹುರುಪು ಬಂದಿತು. ಇಟಲಿಯಿಂದ ಹೊಸ ಪದ್ಯರೂಪಗಳು ಬಂದವು. ಇಂಗ್ಲಿಷ್ ಕವನದಲ್ಲಿ ಬಹು ಮುಖ್ಯವೃತ್ತವಾದ 'ಬ್ಲ್ಯಾಂಕ್‌ವರ್ಸ್' (ಈಗ ಕನ್ನಡದಲ್ಲಿ ಪ್ರಚಾರಕ್ಕೆ ಬರುತ್ತಿರುವ ಬಿಡಿವೃತ್ತ ಅಥವಾ ಸರಳರಗಳೆಯು ಈ ವೃತ್ತನನ್ನು ಹೋಲುತ್ತದೆ.) ಎಂಬುದು ಉಪಯೋಗಕ್ಕೆ ಬಂದಿತು. ಈ ಎಲಿಜಬೆತ್ ಕಾಲವು ನಾಟಕಕ್ಕೆ ಅಭ್ಯುದಯ ಕಾಲ. ಸುಮಾರು ಹದಿನಾಲ್ಕನೆಯ ಶತಮಾನದಿಂದಲೂ ಇಂಗ್ಲೆಂಡಿನಲ್ಲಿ ಏರಿಕಲ್ ನಾಟಕಗಳು—ಅಂದರೆ ಬೈಬಲಿನಿಂದ ವಿಷಯಗಳನ್ನು ತೆಗೆದು ಬರೆದ ನಾಟಕಗಳು ಪ್ರಚಾರದಲ್ಲಿದ್ದವು. ಈ ನಾಟಕಗಳಿಂದ 'ಮೊರಾಲಿಟಿ' ಗಳು ಎಂಬ ನೀತಿಬೋಧಕವಾದ ನಾಟಕಗಳು ಹೊರಟವು. ಇವು ಬಹುಮಟ್ಟಿಗೆ ಆ ಕಾಲದ ನೀತಿಗರ್ಭಿತ ಪದ್ಯಗಳಂತೆಯೇ ನೀರಸವಾದವು. ಈ ನಾಟಕಗಳು ಜನರಂಜಕವಾಗುವಂತೆ ಅವುಗಳ ಜೊತೆಗೆ ಒಂದೊಂದು ತಮಾಷೆಯ ದೃಶ್ಯವನ್ನೂ ಸೇರಿಸುತ್ತ ಬಂದರು. ಹೀಗೆ ಗಂಭೀರವಾದ ನಾಟಕ, ಹಾಸ್ಯ ನಾಟಕ, ಎರಡೂ ಒಟ್ಟಿಗೆ ಬೆಳೆಯುತ್ತ ಬಂದವು. ನಾಟಕಕ್ಕೆ ಈ ಕಾಲದಲ್ಲಿ ಹೊರಗಿನಿಂದಲೂ ಸಹಾಯವೊದಗಿತು. ಇಟಲಿಯವರು ಪುರಾತನ ಗ್ರೀಕರ ನಾಟಕ ಸೂತ್ರಗಳನ್ನು ತಮಗೆ ತಿಳಿದಮಟ್ಟಿಗೆ ಅನುಸರಿಸಿ ತಾವೂ ನಾಟಕಗಳನ್ನು ಬರೆದಿದ್ದರು. ಇವುಗಳ ಪ್ರಭಾವವು ಇಂಗ್ಲಿಷ್ ನಾಟಕಗಳ ಮೇಲೆ ಬಿದ್ದಿತು.

ಷೇಕ್ಸ್‌ಪಿಯರ್

ಇಂಗ್ಲಿಷರ ಸ್ವಂತ ಸಂಪ್ರದಾಯ, ಗ್ರೀಕರ–ಅಥವಾ ಗ್ರೀಕರ ಅನುಕರಣಕಾರರ ಸಂಪ್ರದಾಯ, ಇವೆರಡೂ ಸೇರಿ ಎಲಿಜಬೆತನ್ ನಾಟಕವು ಉತ್ಪನ್ನವಾಯಿತು. ಈ ಕಾಲದ ನಾಟಕಕಾರರಲ್ಲಿ ಷೇಕ್ಸ್‌ಪಿಯರು ಅತ್ಯಂತ ಪ್ರಸಿದ್ಧನು. ಆತನಿಗಿಂತ ಮುಂಚೆಯೇ ಕಿಡ್, ಮಾರ್ಲೊ ಮೊದಲಾದವರು ತಕ್ಕಮಟ್ಟಿಗೆ ಉತ್ತಮವಾದ ನಾಟಕಗಳನ್ನು ಬರೆದು, ಬಿಡಿವೃತ್ತವನ್ನು ನಾಟಕದಲ್ಲಿ ಉಪಯೋಗಿಸಿ ಹದಕ್ಕೆ ತಂದಿದ್ದರು. ಈ ಕೆಲಸದಲ್ಲಿಯೂ ನಾಟಕ ರಚನೆಯಲ್ಲಿಯೂ ಮಾರ್ಲೊವಿನಿಂದ ಇಂಗ್ಲಿಷ್ ಸಾಹಿತ್ಯಕ್ಕೆ ಬಹಳ ಉಪಕಾರವಾಯಿತು. ಮಾರ್ಲೊ ಮೊದಲಾದವರು ದಾರಿಯನ್ನು ಸಮ

ಮೂಡಿದಮೇಲೆ ಷೇಕ್ಸ್‌ಪಿಯರ್ ಮಹಾಕವಿಯು ಬಂದನು. ಆಗ ಪುರಾತನ ಗ್ರೀಕರ ಸೂತ್ರಗಳನ್ನನುಸರಿಸಿ ನಾಟಕವನ್ನು ಬರೆಯಬೇಕೇ ಅಥವಾ ಹೊಸ ಪದ್ಧತಿಗಳನ್ನು ಅನುಸರಿಸುವ ಸ್ವಾತಂತ್ರ್ಯ ಕವಿಗೆ ಇರುವುದೇ ಎಂಬ ಚರ್ಚೆಯಿತ್ತು. ಷೇಕ್ಸ್‌ಪಿಯರು ಹೊಸ ಪದ್ಧತಿಗಳನ್ನೇ ಅನುಸರಿಸಿ ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ನಾಟಕಗಳನ್ನು ಬರೆದನು. ಈ ನಾಟಕಗಳಲ್ಲಿರುವ ವಸ್ತು ಸಂವಿಧಾನ, ಕವಿತಾಶಕ್ತಿ, ಪಾತ್ರ ನಿರ್ಮಾಣಶಕ್ತಿ, ಮೊದಲಾದುವುಗಳನ್ನು ಎಷ್ಟು ಹೊಗಳಿದರೂ ತೀರದು. ಮಾನವನ ಹೃದಯವನ್ನು ಷೇಕ್ಸ್‌ಪಿಯರಿಗಿಂತ ಚೆನ್ನಾಗಿ ಮತ್ತಾರೂ ಅರಿಯರೆಂದರೆ ಅತ್ಯುಕ್ತಿಯಾಗಲಾರದು. ಈತನು ಪ್ರಪಂಚದ ಮಹಾ ಪುರುಷರಲ್ಲಿ ಒಬ್ಬನು. ಈತನು ರುದ್ರ ನಾಟಕಗಳನ್ನೂ, ಹಾಸ್ಯನಾಟಕಗಳನ್ನೂ, ಚರಿತ್ರ ನಾಟಕಗಳನ್ನೂ ಬರೆದನು. ಹ್ಯಾಮ್ಲೆಟ್, ಲಿಯರ್, ಒಥೆಲೊ, ಮ್ಯಾಕ್‌ಬೆತ್, ಟಿಂಪೆಸ್ಟ್—ಇವು ಈತನ ಪ್ರಸಿದ್ಧ ನಾಟಕಗಳಲ್ಲಿ ಕೆಲವು.

ಮಿಲ್ಟನ್

ಈ ಕಾಲದಲ್ಲಿ ಅಚ್ಚ ಕವಿತೆಯನ್ನು ಬರೆದು ಪ್ರಸಿದ್ಧಿ ಪಡೆದವರಲ್ಲಿ ಸ್ಪೆನ್ಸರ್ ಎಂಬಾತನದೇ ಮೊದಲನೆಯ ಹೆಸರು. ಈತನ ಪ್ರಖ್ಯಾತ ಕಾವ್ಯವು "ಫೇರಿ ಕ್ವೀನ್" ಎಂಬುದು. ಬೆನ್ ಜಾನ್‌ಸನ್ ಎಂಬಾತನು ನಾಟಕ ಬರೆಯುವುದಲ್ಲಿಯೂ ಕವಿತೆಯಲ್ಲಿಯೂ ಪ್ರಸಿದ್ಧನು. ಇವರಲ್ಲದೆ ಶ್ರೇಷ್ಠ ಕವಿಗಳು ಇನ್ನೂ ಅನೇಕರಿದ್ದರು. ಆದರೂ ಸ್ಪೆನ್ಸರ್ ಆದ ಮೇಲೆ ಅಚ್ಚ ಕವಿತೆಯಲ್ಲಿ ಮಿಲ್ಟನ್ ಎಂಬ ಕವಿಯು ಬಹು ಪ್ರಸಿದ್ಧನು. (ಎಲಿಜಬೆತನ್ ಸಾಹಿತ್ಯವು ಎಲಿಜಬೆತ್ ಬದುಕಿದ್ದ ಕಾಲದ ಸಾಹಿತ್ಯ ಮಾತ್ರವೆಂದು ಭಾವಿಸಲಾಗದು. ಮಿಲ್ಟನ್ನನು ಕ್ರಾಮ್‌ವೆಲಿನ ಕಾಲದವನಾದರೂ ಒಂದು ವಿಧದಲ್ಲಿ ನೋಡಿದರೆ ಸಾಹಿತ್ಯ ಚರಿತ್ರೆಯ ಸಿಂಹಾವಲೋಕನದಲ್ಲಿ ಎಲಿಜಬೆತ್ ಕಾಲಕ್ಕೇ ಸೇರುವನು). ಎಲಿಜಬೆತ್ ಕಾಲದ ಸಾಹಿತ್ಯದ ಆವರಣ, ಪ್ಯೂರಿಟನ್ ಪಂಗಡದವರ ಮನೋವೃತ್ತಿ, ಗ್ರೀಕ್, ಮತ್ತು ಲ್ಯಾಟಿನ್ ಸಾಹಿತ್ಯದ ಪ್ರಭಾವ—ಇವೆಲ್ಲವೂ ಮಿಲ್ಟನ್ನಿನಲ್ಲಿ ಸೇರಿವೆ. 'ಪ್ಯಾರಡೈಸ್ ಲಾಸ್ಟ್' ಎಂಬುದು ಈತನ ಮಹಾಕಾವ್ಯ. ಈತನ ಶೈಲಿ, ಕಾವ್ಯದ ಗಾಂಭೀರ್ಯ, ಛಂದಸ್ಸಿನ ಕೌಶಲ, ಪಾತ್ರ ರಚನಾಶಕ್ತಿ—ಇವು ಅದ್ಭುತವಾದುವು. ಈತನು ಇಂಗ್ಲೆಂಡಿನ ಮಹಾಕವಿಗಳಲ್ಲಿ ಒಬ್ಬನು.

ವಸಂತ ಕಾಲ

ಎಲಿಜಬೆತ್ ಕಾಲದಲ್ಲಿ ಉತ್ತಮ ಕವಿತಾಶಕ್ತಿಯೂ ನಾಟಕ ರಚನಾಶಕ್ತಿಯೂ ಇದ್ದವರು ಅನೇಕರು ಉದಯಿಸಿದರು. ಇಂಗ್ಲೆಂಡಿನ ಸಾಹಿತ್ಯಕ್ಕೆ ಆದು ವಸಂತ ಕಾಲ. ಆಗ ಜೀವನದ ಎಲ್ಲಾ ಭಾಗಗಳಲ್ಲಿಯೂ ಉತ್ಸಾಹವು ತುಂಬಿ ತುಳುಕುತ್ತಿತ್ತು. ಎಲ್ಲಾ ಕಡೆಗಳಲ್ಲೂ ಹೊಸ ದಾರಿಗಳನ್ನು ಹುಡುಕುವ, ಅಸಾಧ್ಯವಾದುದನ್ನು ಸಾಧ್ಯಮಾಡಲು ಯತ್ನಿಸುವ, ಮುಗಿಲು ಮುಟ್ಟುವ ಉತ್ಸಾಹ. ದೇಶದಲ್ಲಿ ನವಜೀವನ ಪ್ರವಾಹವು ಎರಡು ಕರೆಗಳನ್ನೂ ತುಂಬಿ, ಕರೆಗಳನ್ನು ಒಡೆದು, ಉಕ್ಕಿ ಹರಿಯುತಲಿತ್ತು. ಈ ನವಜೀವನವು ಕಾವ್ಯರೂಪದಲ್ಲಿ ಹೊರಹೊಮ್ಮಿ ಎಲಿಜಬೆತನ್ ಸಾಹಿತ್ಯವಾಯಿತು. ಇಂತಹ ಯುಗಗಳು ಬರುವುದು ಅಪರೂಪ.

ಸ್ವಚ್ಛಂದ ವೃತ್ತಿ

ಮಿಲ್ಟನ್ನಿನ ಕಾಲದ ನಂತರ ಬಂದ ಕವಿಗಳು ಬಹು ಸ್ವಾರಸ್ಯವಾದ ಕವನಗಳನ್ನು ಬರೆದರೂ ಅವರಲ್ಲಿ ಎಲಿಜಬೆತ್ ಕಾಲದ ಪ್ರತಿಭೆಯ ಔನ್ನತ್ಯವು ಕಡಿಮೆಯಾಗುತ್ತ ಬಂದಿತು. ಷೇಕ್ಸ್‌ಪಿಯರ್, ಮಿಲ್ಟನ್ ಮೊದಲಾದವರಲ್ಲಿ ಪ್ರತಿಭೆಯು ಅವರ ಅದ್ಭುತ ಕಲ್ಪಾಜ್ಞಾನದ ಹಿಡಿತಕ್ಕೆ ಸಿಕ್ಕಿ, ನಭೋಮಾರ್ಗದಲ್ಲಿ ಹೋದರೂ ದಾರಿ ತಪ್ಪದಂತೆ ನಡೆಯಿಸಲ್ಪಡುತ್ತಿದ್ದಿತು. ಆದರೆ ಆ ಕಾಲವು ಕೊನೆಗಾಣುತ್ತ ಬಂದಹಾಗೆ ಪ್ರತಿಭೆಯು ಲಗಾಮು ಕಿತ್ತ ಕುದುರೆಯಂತೆ ಹೊರಡಲಾರಂಭಿಸಿ, ಕಾವ್ಯದಲ್ಲಿ ಯಾರೂ ಕಾಣದ್ದು, ಕೇಳದ್ದು, ಅಪೂರ್ವವಾದ ಜಾಡು, ವಿಚಿತ್ರವಾದ ಅಲಂಕಾರಗಳು ಇವುಗಳನ್ನು ಹುಡುಕಿಕೊಂಡು ಹೋಗುವ ಅಭ್ಯಾಸ ಹೆಚ್ಚಾಗುತ್ತ ಬಂತು. ಛಂದಸ್ಸಿನಲ್ಲಿಯೂ ಅವನತ ಸ್ಥಿತಿಯೇ ಕಂಡುಬರುತ್ತಿತ್ತು. ಸ್ವಾತಂತ್ರ್ಯಕ್ಕೆ ಬದಲಾಗಿ ಸ್ವಚ್ಛಂದ ವೃತ್ತಿಯೇ ಹೆಚ್ಚಿ ಸಾಹಿತ್ಯದಲ್ಲಿ ಅರಾಜಕಸ್ಥಿತಿಯು ಬರಬಹುದೆಂಬ ಶಂಕೆಯುಂಟಾಯಿತು. ಬಿಗಿ, ಹಿಡಿತ, ತಪ್ಪಿಲ್ಲದ ಬರವಣಿಗೆ, ಗಾಂಭೀರ್ಯ, ಸ್ಪಷ್ಟತೆ, ನಿಯಮಗಳ ಕಟ್ಟು—ಇವುಗಳ ಅವಶ್ಯಕತೆ ಹೆಚ್ಚಾಯಿತು. ಫ್ರಾನ್ಸ್ ದೇಶದಲ್ಲಿ ಸಾಹಿತ್ಯಾಭಿಮಾನಿಗಳು ಈ ಗುಣಗಳನ್ನು ಪ್ರಧಾನವಾಗಿಟ್ಟು

ಕೊಂಡೇ ಕಾವ್ಯಗಳನ್ನು ಬರೆಯಬೇಕೆಂದು ಸಾರುತ್ತಿದ್ದರು. ಅವರ ಅಭಿಪ್ರಾಯಗಳು ಇಂಗ್ಲೆಂಡಿಗೂ ಬಂದು ಹೊಸ ತರದ ಕಾವ್ಯಗಳು ಹೊರಡಲಾರಂಭವಾಯಿತು.

ಹೊಸ ಕಾವ್ಯ ಜೀವನ

ಈ ಹೊಸ ಅಭಿಪ್ರಾಯಗಳೂ ಹೊಸ ಪದ್ಧತಿಗಳೂ ಡ್ರೈಡನ್ ಎಂಬ ಕವಿಯ ಬರವಣಿಗೆಯಲ್ಲಿ ಕಂಡುಬರುವುವು. ಈತನನ್ನು ಆ ಕಾಲದ ಪ್ರತಿನಿಧಿಯಾಗಿ ತೆಗೆದುಕೊಳ್ಳಬಹುದು. ಈತನು ಹೊಸಯುಗದ ಮೊದಲನೆಯ ಕವಿ. ಪದ್ಯ, ಗದ್ಯ, ನಾಟಕ—ಎಲ್ಲದರಲ್ಲಿಯೂ ಪ್ರಸಿದ್ಧಿ ಪಡೆದವನು. ಅಬ್ಸಲೋಮ್ ಮತ್ತು ಅಕಿಟೋಫೆಲ್, ಮ್ಯಾಕ್‌ಫ್ಲೆಕ್ನೊ ಎಂಬುವು ಈತನಿಗೆ ಬಹಳ ಹೆಸರು ತಂದ ಕವನಗಳು. ಇವು ಕಟು ಹಾಸ್ಯದ ಕಾವ್ಯಗಳು; ಹಿಂದಿನಿಂದಲೂ ಉಪಯೋಗದಲ್ಲಿದ್ದು ಆಗತಾನೆ ಪ್ರಬಲವಾಗುತ್ತಿದ್ದ ಕಪ್ಲೆಟ್ (ಎರಡೆರಡು ಸಾಲಿನ ಪ್ರಾಸಬದ್ಧವಾದ ಪದ್ಯಗಳು) ಎಂಬ ವೃತ್ತದಲ್ಲಿ ಬರೆದುವು. ಡ್ರೈಡನ್ನನು ಈ ಕವನಗಳನ್ನೂ ಕೆಲವು ಹಾಸ್ಯ ನಾಟಕಗಳನ್ನೂ ಬರೆದುದಲ್ಲದೆ ಹೆರೊಯಿಕ್ ನಾಟಕ ಎಂಬುದೊಂದು ಹೊಸ ಮಾದರಿಯ ನಾಟಕವನ್ನು ಪ್ರಚಾರಕ್ಕೆ ತಂದನು. ಆದರೆ ಈ ನಾಟಕಗಳಲ್ಲಿ ಶೈಲಿಯೂ ಪಾತ್ರಗಳೂ ಅಸ್ವಾಭಾವಿಕವಾಗಿದ್ದುದರಿಂದ ಆ ನಾಟಕದ ಸಂಪ್ರದಾಯವು ಇಂಗ್ಲೆಂಡಿನಲ್ಲಿ ಬೇರೂರಲಿಲ್ಲ.

ಹೆರೋಯಿಕ್ ನಾಟಕದ ಪ್ರಾಬಲ್ಯ ಕಡಿಮೆಯಾಗುವ ವೇಳೆಗೆ ಇಂಗ್ಲೆಂಡಿನಲ್ಲಿ ಹೊಸ ತರದ ಹಾಸ್ಯ ನಾಟಕವೊಂದು ಏಳಿಗೆಗೆ ಬರುತ್ತಿತ್ತು. ಈ ತರದ ನಾಟಕವನ್ನು ಬರೆದವರಲ್ಲಿ ವೈಚರ್ಲಿ, ಕಾಂಗ್ರೀವ್ ಎಂಬವರು ಮುಖ್ಯಸ್ಥರು. ಇವರ ನಾಟಕಗಳಲ್ಲಿ ಕೆಲವು ದೃಶ್ಯಗಳು ಚಮತ್ಕಾರವಾಗಿವೆ; ವಾಕ್ಚಾತುರ್ಯವು ಬಹು ಸೊಗಸಾಗಿದೆ. ಆದರೆ ನೀತಿಯ ದೃಷ್ಟಿಯಿಂದ ನೋಡಿದರೆ ಈ ನಾಟಕಗಳು ಅಸಹ್ಯವನ್ನುಂಟುಮಾಡುತ್ತವೆ. ಅವುಗಳ ದುರ್ನೀತಿಯನ್ನು ಖಂಡಿಸಿ ಕಾಲಿಯರ್ ಎಂಬಾತನು ಒಂದು ಪುಸ್ತಕವನ್ನು ಬರೆದನು. ಅಲ್ಲಿಂದಾಚೆಗೆ ಹೊರಟ ಹಾಸ್ಯ ನಾಟಕಗಳು ನೀತಿಯ ವಿಷಯದಲ್ಲಿ ಅಷ್ಟು ಕೆಟ್ಟಿಲ್ಲದಿದ್ದರೂ ಕಲಾದೃಷ್ಟಿಯಿಂದ ಸಮರ್ಪಕವಾಗಿರಲಿಲ್ಲ. ಹದಿನೆಂಟನೆಯ ಶತಮಾನದ ನಾಟಕದ ವಿಷಯವಾಗಿಯೂ ಹೆಚ್ಚು ಬರೆಯಬೇಕಾಗಿಲ್ಲ. ನಾಟಕವು ಆ ಕಾಲದಲ್ಲಿ ಹೀನಸ್ಥಿತಿಗೆ ಒಂಟಿತು. ಮೇಲು ದರ್ಜೆಗೆ ಸೇರುವ ನಾಟಕಗಳನ್ನು ಬರೆದವರು ಷೆರಿಡನ್, ಗೋಲ್ಡ್‌ಸ್ಮಿತ್ ಎಂಬವರಿಬ್ಬರೇ.

ಹದಿನೆಂಟನೆಯ ಶತಮಾನದ ಪದ್ಯಗಳ ವಿಷಯ ಇನ್ನೂ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಡ್ರೈಡನ್ನನು ಕಪ್ಲೆಟ್ ವೃತ್ತದಲ್ಲಿ ತನ್ನ ಕಾವ್ಯಗಳನ್ನು ಬರೆದನಂತರ ಇಂಗ್ಲೀಷ್ ಕವನಗಳಿಗೆ ಅದೇ ಮುಖ್ಯ ವೃತ್ತವಾಗಿ ಹೋಯಿತು. ಆ ಶತಮಾನದಲ್ಲಿ ಹೆಸರು ಪಡೆದ ಕವಿಗಳೆಲ್ಲರೂ ತಮ್ಮ ಮುಖ್ಯ ಕಾವ್ಯಗಳಲ್ಲಿ ಆ ವೃತ್ತವನ್ನೇ ಉಪಯೋಗಿಸಿದರು. ಈ ಶತಮಾನದ ಕವಿಗಳಲ್ಲಿ ಪೋಪ್ ಎಂಬಾತನು ಬಹಳ ಹೆಸರುಗೊಂಡನು. ಈತನು ಗ್ರೀಕ್ ಕವಿಯಾದ ಹೋಮರಿನ ಕಾವ್ಯಗಳನ್ನು ಭಾಷಾಂತರಿಸಿದ್ದಲ್ಲದೆ ಕೆಲವು ಸ್ವಾರಸ್ಯವಾದ ಕಟುಹಾಸ್ಯ ಕಾವ್ಯಗಳನ್ನೂ ಬರೆದನು. ಗೋಲ್ಡ್‌ಸ್ಮಿತ್, ಜಾನ್ಸನ್ ಮೊದಲಾದವರೂ ತಮ್ಮ ಶ್ರೇಷ್ಠ ಕವನಗಳನ್ನು ಕಪ್ಲೆಟ್ ವೃತ್ತದಲ್ಲಿಯೇ ಬರೆದರು. ಈ ಹದಿನೆಂಟನೆಯ ಶತಮಾನದ ಕವಿಗಳಲ್ಲಿ ಒಟ್ಟಿನಲ್ಲಿ ಪ್ರತಿಭಾಶಕ್ತಿ ಕಡಿಮೆ.

ಗದ್ಯಕಾವ್ಯ

ಈ ಪ್ರಬಂಧದಲ್ಲಿ ಇದುವರೆಗೆ ಗದ್ಯಕಾವ್ಯದ ಮಾತನ್ನೇ ಎತ್ತಿಲ್ಲ. ಆದರೆ ಗದ್ಯಕಾವ್ಯ ಹದಿನೆಂಟನೆಯ ಶತಮಾನದವರೆಗೂ ಇಂಗ್ಲೆಂಡಿನಲ್ಲಿ ಇರಲೇ ಇಲ್ಲವೆಂದಲ್ಲ. ಹದಿನಾಲ್ಕು ಹದಿನೈದನೆಯ ಶತಮಾನದಲ್ಲಿಯೂ ಉತ್ತಮವಾದ ಗದ್ಯ ಕಾವ್ಯಗಳನ್ನು ಮ್ಯಾಂಡೆವಿಲ್, ಮೇಲೊರಿ ಮೊದಲಾದವರು ಬರೆದಿದ್ದರು; ಇನ್ನು ಸ್ವಲ್ಪ ಕಾಲದಮೇಲೆ ಬಹು ಸೊಗಸಾದ ಶೈಲಿಯಲ್ಲಿ ಬರೆದಿರುವ ಇಂಗ್ಲೀಷ್ ಬೈಬಲು ಬಂದಿತು. ಹದಿನೇಳನೆಯ ಶತಮಾನದಲ್ಲಿ ಜಾನ್, ಮಿಲ್ಟನ್, ಬ್ರೌನ್ ಮೊದಲಾದವರು ಅದ್ಭುತವಾದ ಲಯ, ಸೌಂದರ್ಯ, ಪಾಥುರ್ಯಗಳನ್ನುಳ್ಳ ಗದ್ಯ ಶೈಲಿಯಲ್ಲಿ ಬರೆದಿದ್ದರು. ಆದರೆ ಅವರ ಶೈಲಿಯು ಸಾಧಾರಣ ಜನರ ಕೈಗೆ ಸಿಕ್ಕುವಂಥದಲ್ಲ. ಅವರ ಕೈಯಲ್ಲಿಯೇ ಕೆಲವುವೇಳೆ ಕೆಟ್ಟುಹೋಗುತ್ತಿದ್ದಿತು. ಅದಲ್ಲದೆ ಚರಿತ್ರೆ, ಪ್ರಬಂಧ, ತತ್ತ್ವಶಾಸ್ತ್ರ, ಕಾದಂಬರಿ ಮೊದಲಾದ ಕಾವ್ಯಗಳಿಗೆ ಈ ಶೈಲಿಯು ಸುಲಭವಾಗಿ ಹೊಂದುವುದಿಲ್ಲ. ಮಿಲ್ಟನ್ ಮೊದಲಾದವರ ವಾಕ್ಯ

ಪಿಂಡದ ಸ್ಕ್ಯಾನಿಂಗ್

ਸ੍ਰੀ ਹਰਿਮੰਦਰ ਸਾਹਿਬ

ਦਰਬਾਰ ਸਾਹਿਬ

ಗಳು ಬಹು ದೀರ್ಘವಾದುವು; ವಾಕ್ಯರಚನೆಯಲ್ಲಿ ತೊಡಕು ಹೆಚ್ಚು; ಸುಲಭವಾಗಿ ಅರ್ಥವಾಗುವುದಿಲ್ಲ. ಈ ತೊಂದರೆಗಳಿಲ್ಲದಿರುವ, ಅನೇಕತರಹ ಕಾವ್ಯಗಳಿಗೆ ಹೊಂದುವ ಆಧುನಿಕ ಇಂಗ್ಲಿಷ್ ಗದ್ಯ ಶೈಲಿಯು ಹದಿನೆಂಟನೆಯ ಶತಮಾನದಲ್ಲಿ ಪ್ರಚಾರಕ್ಕೆ ಬಂದಿತು. ನಾವು ಮೊದಲು ವರ್ಣಿಸಿದ ಹಿಂದಿನ ಶೈಲಿಯನ್ನು ಅಲಂಕಾರಿಕ ಶೈಲಿಯೆಂದೂ, ಹೊಸ ಶೈಲಿಯನ್ನು ಸರಳ ಶೈಲಿಯೆಂದೂ ಕರೆಯಬಹುದು. ಈ ಸರಳ ಶೈಲಿಯು ಹಿಂದೆ ಇರಲೇ ಇಲ್ಲವೆಂದು ಹೇಳಲಾಗುವುದಿಲ್ಲ. ಅದನ್ನು ಅದು ಉನ್ನತಸ್ಥಿತಿಗೆ ಬಂದದ್ದು ಡ್ರೈಡನ್ನಿನ ಕಾಲದಿಂದೀಚೆಗೆ. ಈ ಶೈಲಿಯಲ್ಲಿ ಅಲಂಕಾರ ಹೆಚ್ಚಾಗಿಲ್ಲ; ಲ್ಯಾಟಿನ್ ಪದಗಳು ಕಡಿಮೆ; ವಾಕ್ಯಗಳು ಚಿಕ್ಕವು; ಬರೆಯುವವನ ಅಭಿಪ್ರಾಯವು ಓದುವವನಿಗೆ ಸುಲಭವಾಗಿ ಅರ್ಥವಾಗುವುದು. ಈ ಶೈಲಿಯನ್ನು ಡೀಫೋ ಎಂಬಾತನು ತನ್ನ ಕಥೆಗಳಲ್ಲಿಯೂ, ಸ್ವಿಫ್ಟ್ ಎಂಬಾತನು ತನ್ನ ಕಟುಹಾಸ್ಯ ಕಾವ್ಯಗಳಲ್ಲಿಯೂ, ಅಡಿಸನ್, ಸ್ಟೀಲ್, ಗೋಲ್ಡ್‌ಸ್ಮಿತ್ ಮೊದಲಾದವರು ತಮ್ಮ ಪ್ರಬಂಧಗಳಲ್ಲಿಯೂ ಬಹು ಸ್ವಾರಸ್ಯವಾಗಿ ಉಪಯೋಗಿಸಿರುವರು. ಈ ಶತಮಾನದಲ್ಲಿ ಇನ್ನು ಕೆಲವರು—ಬರ್ಕ್, ಗಿಬ್ಬನ್ ಮೊದಲಾದವರು — ಅಲಂಕಾರಿಕ ಶೈಲಿಯಲ್ಲಿಯೇ ಉತ್ತಮವಾದ ಕಾವ್ಯಗಳನ್ನು ಬರೆದರು. ಇವರ ಶೈಲಿಯೂ ಬಹಳ ಮನೋರಂಜಕವಾಗಿರುವುದು.

೧೮ನೇ ಶತಮಾನ

ಒಟ್ಟಿನಲ್ಲಿ ಹದಿನೆಂಟನೆಯ ಶತಮಾನವು ಕಪ್ಲೆಟ್ ವೃತ್ತದ ಪದ್ಯಗಳಿಗೆ, ಕಟುಹಾಸ್ಯ ಕಾವ್ಯಗಳಿಗೆ, ಮತ್ತು ಗದ್ಯಕಾವ್ಯಗಳಿಗೆ ಏಳಿಗೆಯ ಕಾಲ. ಅನೇಕರು ಇದನ್ನು ಗದ್ಯದ ಶತಮಾನವೆಂದೇ ಕರೆದಿರುವರು. ಅಡಿಸನ್, ಸ್ಟೀಲ್, ಗೋಲ್ಡ್‌ಸ್ಮಿತ್ ಮೊದಲಾದವರು ಪ್ರಬಂಧವನ್ನು ಉನ್ನತಸ್ಥಿತಿಗೆ ತಂದರು. ಗಿಬ್ಬನ್ನನು ರೋಮನ್ ಚಕ್ರಾಧಿಪತ್ಯದ ವಿಷಯವಾಗಿ ಹಿಂದು ಗದ್ಯ ಮಹಾ ಕಾವ್ಯವನ್ನು ಬರೆದನು. ಬಾರ್ಕ್ಲೆಯು ತನ್ನ ಸೊಗಸಾದ ಶೈಲಿಯಿಂದ ತತ್ವಶಾಸ್ತ್ರವನ್ನು ಸಾಹಿತ್ಯವಾಗಿ ಮಾಡಿದನು. ಇದಲ್ಲದೆ ಈ ಕಾಲದಲ್ಲಿ ಕಾದಂಬರಿಯೆಂಬ ಹೊಸತರದ ಗದ್ಯಕಾವ್ಯವು ಮುಂದಕ್ಕೆ ಬಂದಿತು. ಈ ಕಾದಂಬರಿಯ ಕುರುಹುಗಳು ಹಿಂದಿನ ಕೆಲವು ತರದ ಕಾವ್ಯಗಳಲ್ಲಿಯೇ ಕಂಡುಬಂದಿದ್ದವು. ಆದರೆ ಈ ಕಾಲದಲ್ಲಿ ರಿಚರ್ಡ್‌ಸನ್, ಫೀಲ್ಡಿಂಗ್ ಮೊದಲಾದ ಪ್ರಸಿದ್ಧ ಕಾದಂಬರಿಕಾರರು ಹುಟ್ಟಿ ಕಾದಂಬರಿಗೆ ಪೂರ್ಣರೂಪವನ್ನು ಕೊಟ್ಟರು.

ಸ್ವಾತಂತ್ರ್ಯಾಭಿಲಾಷೆ

ಹದಿನೆಂಟನೆಯ ಶತಮಾನದ ಜನರಿಗೆ ಕಾವ್ಯಗಳಲ್ಲಿ ಪ್ರತಿಭೆಯು ಹೆಚ್ಚು ಬೇಕಾಗಿರಲಿಲ್ಲ; ಶುದ್ಧತೆ, ಲಾಲಿತ್ಯ, ಏಚಾರಪಕ್ತಿ, ಗ್ರೀಕರ ಕಾಲದಿಂದ ಬಂದ ಸಾಹಿತ್ಯ ನಿಯಮಗಳನ್ನು ವಿಾರದೆ ಇರುವುದು—ಇವೇ ಸಾಹಿತ್ಯದಲ್ಲಿ ಮುಖ್ಯ ಗುಣಗಳಾಗಿದ್ದವು. ಅವರು ಗ್ರೀಕರ ಸಂಪ್ರದಾಯವನ್ನು ಸ್ವಲ್ಪ ತಪ್ಪುತಪ್ಪಾಗಿ ಅರ್ಥಮಾಡಿಕೊಂಡಿದ್ದರು. ಕವಿಗಳು ಸ್ವತಂತ್ರರಾಗದೆ ಹಳೆಯ ಸಂಪ್ರದಾಯಕ್ಕನುಸಾರವಾಗಿಯೇ ಕಾವ್ಯಗಳನ್ನು ಬರೆಯಬೇಕೆಂಬ ಅವರ ನಂಬಿಕೆ. ಆವರ ಕಾವ್ಯಗಳಲ್ಲಿ ಪ್ರಕೃತಿಯ ಸೌಂದರ್ಯಕ್ಕೇ ಆಗಲಿ, ಮಾನವನ ಹೃದಯದ ರಹಸ್ಯ ಜೀವನಕ್ಕೇ ಆಗಲಿ ಹೆಚ್ಚು ಸ್ಥಾನವಿರಲಿಲ್ಲ. ಅವರು ಪ್ರಕೃತಿಯ ಆರಾಧಕರಲ್ಲ; ಪಟ್ಟಣವಾಸದವರು. ಪ್ರಕೃತಿಯ ವಿಷಯ ಬರೆಯಲೇ ಬೇಕಾಗಿ ಬಂದರೆ ಏನೋ ಲೋಕಾಭಿರಾಮವಾದ ನಾಲ್ಕೈದು ಮಾತು ಬರೆದುಬಿಡುತ್ತಿದ್ದರು. ಇದರ ಮೇಲೆ ಉತ್ತಮವಾದ ಪದ್ಯಕಾವ್ಯಗಳಿಗೆ ಕಪ್ಲೆಟ್ ವೃತ್ತವೇ ಅವಶ್ಯಕವೆಂದು ಇವರ ಭಾವನೆ. ಈ ಪದ್ಧತಿಗಳೆಲ್ಲ ಸ್ವಲ್ಪ ಕಾಲ ಪ್ರಚಾರದಲ್ಲಿದ್ದಮೇಲೆ ಜನಗಳಿಗೆ ಅವುಗಳಲ್ಲಿ ಜುಗುಪ್ಸೆಯುಂಟಾಯಿತು. ಆ ಶತಮಾನದ ಕವಿಗಳಲ್ಲಿಯೇ ಕೆಲವರು ಸೂತ್ರಗಳನ್ನು ವಿಾರಿ ಬರೆದವರೆಷ್ಟೆ ವರು; ಕೆಲವರು ಪ್ರಕೃತಿಯ ಸೌಂದರ್ಯವನ್ನು ನೋಡಿ ಆನಂದಪಟ್ಟು ವರ್ಣಿಸಿರುವರು; ಇನ್ನು ಕೆಲವರು ಕಪ್ಲೆಟ್ ವೃತ್ತವನ್ನು ಬಿಟ್ಟು ಬೇರೆ ವೃತ್ತದಲ್ಲಿಯೂ ಇತರ ವೃತ್ತಗಳಲ್ಲಿಯೂ ಕವನಗಳನ್ನು ಬರೆದಿರುವರು. ಹೀಗೆ ಆ ಕಾಲದ ಸಂಪ್ರದಾಯಗಳಲ್ಲಿ ಅಸಮಾಧಾನ ತೋರುತ್ತಿದ್ದಾಗ, ಹದಿನೆಂಟನೆಯ ಶತಮಾನದ ಕೊನೆಯಲ್ಲಿ, ಫ್ರಾನ್ಸ್‌ದೇಶದಲ್ಲಿ ದೊಡ್ಡ ಏಪ್ಲವವುಂಟಾಯಿತು. ಆಗ ಯೂರೋಪಿನಲ್ಲೆಲ್ಲಾ ಸ್ವಾತಂತ್ರ್ಯದ ಕೂಗೇ ಕೂಗು. ಈ ಸ್ವಾತಂತ್ರ್ಯಾಭಿಲಾಷೆ ಸಾಹಿತ್ಯದಲ್ಲಿಯೂ ಕಂಡುಬಂದಿತು. ಈ ಕಾಲದ ಕವಿಗಳು 'ಸಾಹಿತ್ಯದಲ್ಲಿ ಸೂತ್ರಗಳೂ ನಿಯಮಗಳೂ ಹಾಗಿರಲಿ; ಪ್ರತಿಭೆ, ಭಾವಗಳು, ಇವು ಮುಖ್ಯವಾದುವು' ಎಂದು ಸಾರಿದರು. ವರ್ಡ್ಸ್‌ವರ್ತ್ ಮತ್ತು ಕೋ

ಲ್‌ರಿಜ್ ಎಂಬವರು ಹೊರಡಿಸಿದ "ಗೀತೆಗಳು ಮತ್ತು ಲಾವಣಿಗಳು" ಎಂಬ ಪುಸ್ತಕವೇ ಆಗಿನ ಕವಿಗಳ ದಂಗೆಯ ಹೊರಚಿಹ್ನೆ. ಈ ಪುಸ್ತಕವು ಪ್ರಕಟವಾದ ಮೇಲೆ ಬಂದೀಖಾನೆಯ ಸಲಾಕೆಗಳು ಸಡಿಲಿದಂತಾಗಿ, ಹೊಸ ಉತ್ಸಾಹವು ತಲೆದೋರಿ, ಹೊಸ ಕಾವ್ಯವಸ್ತುಗಳು, ಹೊಸ ಛಂದಸ್ಸು, ಪ್ರತಿಭೆ ಮತ್ತು ಭಾವನಾಶಕ್ತಿ, ಇವುಗಳನ್ನುಳ್ಳ ಕಾವ್ಯಗಳು ಬರತೊಡಗಿದವು. ಈ ಕಾಲದ ಸಾಹಿತ್ಯ ಚರಿತ್ರೆಯನ್ನೋದುವಾಗ ಈಗ ನಮ್ಮ ಕನ್ನಡದಲ್ಲಿ 'ಶ್ರೀ'ಯವರ 'ಇಂಗ್ಲಿಷ್ ಗೀತೆ'ಗಳು ಪ್ರಕಟವಾದ ಮೇಲೆ ಹೊಸ ಉತ್ಸಾಹ ತಲೆದೋರಿರುವುದು ನೆನಪಿಗೆ ಬರುವುದು.

ಈ ಕಾಲದಲ್ಲಿ ಮಹಾ ಕವಿಗಳನೇಕರು ಉದಯಿಸಿದರು. ಪ್ರಕೃತಿಯ ರಹಸ್ಯಜೀವನದ ವಿಷಯವನ್ನೂ ಆತ್ಮದ ವಿಷಯವನ್ನೂ ಕುರಿತು ಬರೆದ ವರ್ಡ್ಸ್‌ವರ್ತ್; ಮಾಮ್ಮೆಯ ಮೊಬ್ಬಿಳಕಿನಲ್ಲಿ ಭಯಾಶ್ಚರ್ಯ ಜನಕಗಳಾದ ದೃಶ್ಯಗಳನ್ನು ನಿರ್ಮಿಸಿ ವಿಚಿತ್ರಮಾಧುರ್ಯವುಳ್ಳ ಲಯದಲ್ಲಿ ಕವಿತೆಗಳನ್ನು ಬರೆದ ಕೋಲ್‌ರಿಜ್; ಈ ಪ್ರಪಂಚವನ್ನು ಬಿಟ್ಟು ಗಗನಕ್ಕೆ ಹಾರಿ, ಅಲ್ಲಿ ಪ್ರತಿಭೆಯದೊಂದು ಪ್ರಪಂಚವನ್ನು ನಿರ್ಮಿಸಿ, ಅಲ್ಲಿಂದ ಬಾನಾಡಿಯಂತೆ ಹಾಡಿದ ಷೆಲ್ಲಿ; ಸೌಂದರ್ಯವೂ ಸತ್ಯವೂ ಒಂದೇ ಎಂದು ಸಾರಿದ ಕೀಟ್ಸ್; ಈ ಕವಿಗಳಷ್ಟು ಶುದ್ಧವಾದ ವಾಣಿಯಿಲ್ಲದಿದ್ದರೂ, ಸೊಗಸಾದ ಪ್ರತಿಭೆಯು ಹೊಳಪ್ಪಿನಿಂದ ಕೂಡಿದ ಕಟುಹಾಸ್ಯಕಾವ್ಯವನ್ನು ಬರೆದು ಜನಗಳನ್ನು ಮರುಳುಮಾಡುವಂಥ ಕಳ್ಳಗಾಶನಾದ ಬೈರನ್—ಇವರೆಲ್ಲರೂ ಈ ಕಾಲದವರು. ಇಷ್ಟು ಜನ ಮಹಾ ಕವಿಗಳು ಒಟ್ಟಿಗೆ ಒಂದು ಕಾಲದಲ್ಲಿ ಬರುವುದು ಅಪರೂಪ. ಈ ಪ್ರಬಂಧದಲ್ಲಿ ಇವರ ಹೆಸರುಗಳನ್ನು ಮಾತ್ರ ಹೇಳಿ ಮುಗಿಸಬೇಕಾಗಿದೆ.

ಈ ಕಾಲದ ಗದ್ಯಕಾವ್ಯಗಳೂ ಬಹಳ ಮಹತ್ವವುಳ್ಳವು. ಕೋಲ್‌ರಿಜ್ ಮತ್ತು ವರ್ಡ್ಸ್‌ವರ್ತರ ವಿಮರ್ಶೆಗಳು, ಲ್ಯಾಂಬ್ ಮತ್ತು ಹೆಸ್ಲಿಟ್ಟರ ಎಂದಿಗೂ ಪುರೆಯಲಾಗದ ಪ್ರಬಂಧಗಳು. ಡಿಕ್ವಿನ್ಸಿಯ ಅಫೀಮು ಕನಸುಗಳು, ಸ್ಕಾಟನ ಮತ್ತು ಜೇನ್ ಆಸ್ಟೆನ್ನಿನ ಕಾದಂಬರಿಗಳು ಇವುಗಳನ್ನು ಎಷ್ಟು ಸಾರಿ ಓದಿದರೂ ಮನವು ದಣಿಯುವುದಿಲ್ಲ. ಈ ಕಾಲದ ಸಾಹಿತ್ಯವು ಮಹತ್ವದಲ್ಲಿ ಎಲಿಜಬೆತ್ ಕಾಲದ ಸಾಹಿತ್ಯಕ್ಕೆ ಎರಡನೆಯದಾಗಿದೆ.

ವಿಕ್ಟೋರಿಯಾ ಯುಗ

ಇನ್ನು ಉಳಿದಿರುವುದು ವಿಕ್ಟೋರಿಯಾ ರಾಣಿಯ ಕಾಲದ ಸಾಹಿತ್ಯ. ಈ ಕಾಲದಲ್ಲಿ ಟೆನಿಸನ್ ಮತ್ತು ಬ್ರೌನಿಂಗ್ ಎಂಬವರೇ ಮುಖ್ಯಕವಿಗಳು. ಟೆನಿಸನ್ನನು ಇಂಗ್ಲಿಷರಿಗೆ ಬ್ರೌನಿಂಗಿಗಿಂತ ಹೆಚ್ಚು ಮೆಚ್ಚಿಕೆಯ ಕವಿಯೆಂದು ತೋರುವುದು. ಆತನ ಕಾವ್ಯಗಳಲ್ಲಿಯ ವಿಷಯಗಳು ಸರ್ವರಿಗೂ ತಿಳಿಯುವಂಥವು; ಶೈಲಿಯು ತಿಳಿಯಾಗಿದು; ವೃತ್ತಗಳು ಬಹು ಮಧುರವಾದವು. ಆತನು ಕವಿಗೆ ಇಂಪಾಗಿಲ್ಲದಿರುವ ಚರಣವೊಂದನ್ನೂ ಬರೆಯಲಿಲ್ಲವೆನ್ನಬಹುದು. ಬ್ರೌನಿಂಗ್ ಚರಣಗಳು ಅನೇಕವೇಳೆ ಕವಿಗೆ ಹಿತವಾಗಿರುವುದಿಲ್ಲ. ಶೈಲಿಯು ಸ್ವಲ್ಪ ಕಠಿಣ, ಎಲ್ಲರಿಗೂ ಸುಲಭವಾಗಿ ಅರ್ಥವಾಗುವುದಿಲ್ಲ; ಆತನ ಕಾವ್ಯವಸ್ತುಗಳೂ ಕೂಡ ಅನೇಕರ ಮನಸ್ಸನ್ನು ಆಕರ್ಷಿಸುವಂಥವಲ್ಲ. ಈ ಕಾರಣಗಳಿಂದ ಬಹುದಿನಗಳವರೆಗೆ ಜನಗಳು ಆತನ ಕಾವ್ಯಗಳನ್ನು ಮೆಚ್ಚಲಿಲ್ಲ. ಆದರೆ ಆತನ ಪದ್ಯಗಳಲ್ಲಿರುವ ವಿಚಾರ ಶಕ್ತಿ, ಮನುಷ್ಯರ ಮನೋವೃತ್ತಿಯ ವಿಷಯವಾಗಿ ತಿಳಿವಳಿಕೆ, ಭಾವನಾಶಕ್ತಿ, ಕೆಲವು ಪದ್ಯಗಳ ಇಂಪು—ಇವುಗಳಿಂದ ಆತನ ಹೆಸರು ಮುಂದಕ್ಕೆ ಬಂದಿತು. ಈಚೆಗೆ ಟೆನಿಸನ್ನಿನ ಮೇಲೆ ಜನಗಳ ಪ್ರೇಮ ಸ್ವಲ್ಪ ಕಡಿಮೆಯಾದರೂ ಬ್ರೌನಿಂಗಿನ ಕೀರ್ತಿ ಕಡಿಮೆಯಾಗಿಲ್ಲ.

ಮಾರಿಸ್, ರಾಸೆಟ್ಟಿ, ಸ್ವಿನ್ಬರ್ನ್ ಮೊದಲಾದವರೂ ಈ ಕಾಲದ ಪ್ರಸಿದ್ಧ ಕವಿಗಳು. ಸ್ಥಳ ಸಂಕೋಚದಿಂದ ಇಲ್ಲಿ ಇವರ ವಿಷಯ ಹೆಚ್ಚು ಹೇಳಲು ಸಾಧ್ಯವಿಲ್ಲ.

ಹದಿನೆಂಟನೆಯ ಶತಮಾನದಲ್ಲಿ ಮೊದಲು ಪೂರ್ಣರೂಪವನ್ನು ಹೊಂದಿದ ಕಾದಂಬರಿಯನ್ನು ಸ್ಕಾಟ್ ಜೇನ್ ಆಸ್ಟೆನ್ ಮೊದಲಾದವರು ಬೆಳೆಯಿಸುತ್ತ ಬಂದರು. ಈ ಕಾಲದಲ್ಲಿ ಡಿಕನ್ಸ್ ಎಂಬಾತನು ತನ್ನ ಹಾಸ್ಯಕಾದಂಬರಿಗಳನ್ನು ಬರೆದು ಜನಗಳಿಗೆ ಹಾಸ್ಯದ ಹಬ್ಬವನ್ನು ಮಾಡಿದನು. ಥ್ಯಾಕರೆ, ಮೆರಿಡಿತ್ ಮೊದಲಾದವರು ಸಮಾಜದ ಹುಳುಕುಗಳನ್ನು ಎತ್ತಿಹಾಕಿ ಅಸಾಧಾರಣವಾದ ಪಾತ್ರರಚನಾ ಕೌಶಲವನ್ನು ತೋರಿ ಕಾದಂಬರಿಗಳನ್ನು ಬರೆದರು. ನಮ್ಮ ಕಾಲದವರೂ ಕೆಲವು ವರ್ಷಗಳು ಜೀವಿಸಿದ್ದ ಥಾಮಸ್ ಹಾರ್ಡಿ ಎಂಬವನೂ ಬಹು ಪ್ರಸಿದ್ಧನಾದ ಕಾದಂಬರಿಕಾರನು. ಇವರೆಲ್ಲರೂ ಇಂಗ್ಲಿಷ್ ಕಾದಂಬರಿಕಾರರಲ್ಲಿ ಶ್ರೇಷ್ಠ ಪದವಿಯನ್ನು ಪಡೆದವರು.

ಹತ್ತೊಂಬತ್ತನೆಯ ಶತಮಾನದ ಮೊದಲನೆಯ ಭಾಗದಲ್ಲಿಯೇ ಅದರ ಹಿಂದಿನ ಶತಮಾನದ ಸರಳ ಶೈಲಿಯಲ್ಲಿ ಜನಗಳಿಗೆ ಉಪೇಕ್ಷೆ ಹುಟ್ಟಿ, ಆಲಂಕಾರಿಕ ಶೈಲಿಗೆ ಪ್ರಾಶಸ್ತ್ಯ ಬಂದಿತ್ತು. ಈ ಕಾಲದವರಿಗೂ ಸರಳಶೈಲಿಯಲ್ಲಿ ಹೆಚ್ಚು ಆದರವಿಲ್ಲ. ಕಲೆಯ ವಿಚಾರವಾಗಿ ಬರೆದ ರಸ್ಕಿನ್, ಚರಿತ್ರೆ ಮುಂತಾದ ವಿವಿಧ ವಿಷಯಗಳನ್ನು ಕುರಿತು ಬರೆದ ಕಾರ್ಲೈಲ್, ಮತ ವಿಚಾರವಾಗಿ ಬರೆದ ನ್ಯೂಮನ್—ಇವರೆಲ್ಲರೂ ಈ ಕಾಲದಲ್ಲಿ ಪ್ರಸಿದ್ಧರಾದ ಗದ್ಯಕವಿಗಳು. ಈ ಕಾರ್ಲೈಲ್, ರಸ್ಕಿನ್ ಮೊದಲಾದವರು ಗದ್ಯದಲ್ಲಿ ಪ್ರತಿಭೆಗೆ ಹೆಚ್ಚು ಸ್ಥಾನವನ್ನು ಕೊಟ್ಟರು. ಕೆಲವುವೇಳೆ ಅವರ ಗದ್ಯದಲ್ಲಿ ಪದ್ಯ ಕಾವ್ಯದ ಮಹತ್ವವೇ ಕಂಡು ಬರುವುದು.

ವಿಕ್ಟೋರಿಯಾ ರಾಣಿಯ ಕಾಲದಿಂದೀಚಿನ ಸಾಹಿತ್ಯದ ವಿಷಯ ಈಗ ಹೆಚ್ಚು ಬರೆಯಲಾಗುವುದಿಲ್ಲ. ಬ್ರೌಡ್ಜಸ್ ಮೊದಲಾದವರ ಪದ್ಯಕಾವ್ಯಗಳು, ಗ್ಯಾಲ್ಸ್‌ವರ್ದಿ, ಬೆರ್ನಾರ್ಡ್‌ಷಾ ಮೊದಲಾದವರ ನಾಟಕಗಳು, ಕಾನ್ರಾಡ್, ವೆಲ್ಸ್, ಗ್ಯಾಲ್ಸ್‌ವರ್ದಿ ಇವರ ಕಾದಂಬರಿಗಳು ನೆನಪಿಗೆ ಬರುತ್ತವೆ. ಉತ್ತಮ ತರದ ಸಾಹಿತ್ಯ ಸೃಷ್ಟಿಗೆ ಇದು ಕಾಲವೇ ಅಲ್ಲವೆಂದು ಕೆಲವರು ಹೇಳುತ್ತಾರೆ. ಈ ವಿಷಯದಲ್ಲಿ ಈಗ ಏನನ್ನೂ ಕಂಠೋಕ್ತವಾಗಿ ಹೇಳಲಾಗುವುದಿಲ್ಲ. ಕಾದಂಬರಿಗಳು, ಸಣ್ಣ ಕಥೆಗಳು, ನಾಟಕಗಳು, ಪದ್ಯಗಳು—ಎಲ್ಲವೂ ಪ್ರತಿ ತಿಂಗಳು ಪ್ರಕಟವಾಗುತ್ತಲೇನೊ ಇವೆ.

ಮುಕ್ತಾಯ

ಅಪಾರವಾದ ಇಂಗ್ಲಿಷ್ ಸಾಹಿತ್ಯಸಾಗರವನ್ನು ಒಂದು ಸಲ ಆವೋಶನ ತೆಗೆದುಕೊಳ್ಳುವುದಾಗಲಿ, ಇತರರಿಗೆ ಆವೋಶನ ಹಾಕುವುದಾಗಲಿ ಅಸಾಧ್ಯವೆಂದು ಹೇಳಬೇಕಾಗಿಲ್ಲ. ಇಂಗ್ಲಿಷ್ ಸಾಹಿತ್ಯವು ಪ್ರಪಂಚದ ಸಾಹಿತ್ಯದಲ್ಲಿ ಬಹಳ ಉನ್ನತ ಸ್ಥಾನವನ್ನು ಪಡೆದಿದೆ. ಇಂಗ್ಲಿಷರು ಹೊಸ ಸಂಪ್ರದಾಯಗಳು ಬಂದರೆ ಏನಾಗುವುದೊ ಎಂಬ ಅಂಜುಬುರುಕತನವಿಲ್ಲದೆ, 'ಹೊರಗಿನವರಿಂದ ಕಲಿಯುವುದೇನು ನಮ್ಮಲ್ಲಿ ಸಾಹಿತ್ಯವಿಲ್ಲವೆ' ಎಂಬ ಜಂಬವಿಲ್ಲದೆ, ಇತರ ದೇಶದವರಿಂದ ತಮಗೆ ಅನುಕೂಲವಾದುದನ್ನೆಲ್ಲ ತೆಗೆದುಕೊಂಡಿರುವರು; ಹೀಗೆ ತೆಗೆದುಕೊಂಡದ್ದನ್ನು ತಮ್ಮ ಸರಕಿನೊಡನೆ ಜೆರಸಿ ಅದನ್ನು ತಮ್ಮ ಸ್ವಂತ ಪದಾರ್ಥವಾಗಿ ಮಾಡಿಕೊಂಡಿರುವರು. ಸ್ವಾತಂತ್ರ್ಯ ಹೆಚ್ಚಿ ಕಾವ್ಯಗಳು ಕೆಟ್ಟಾಗ ನಿಯಮಕ್ಕೆ ಕಟ್ಟುಬಿದ್ದಿರುವರು; ನಿಯಮದ ಆಳ್ವಿಕೆಯು ಹೆಚ್ಚಾಗಿ ದಾಸ್ಯತ್ವ ಬರುವುದೆಂದು ತೋರಿದಾಗ ಸ್ವಾತಂತ್ರ್ಯವನ್ನು ವಹಿಸಿಕೊಂಡಿರುವರು. ಈಗ ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಕನ್ನಡ ಸಾಹಿತ್ಯವು ಇಂಗ್ಲಿಷ್ ಸಾಹಿತ್ಯಪರಿಚಯದಿಂದ ಬಹುಮಟ್ಟಿಗೆ ಲಾಭವನ್ನು ಹೊಂದಬಹುದು.

ತಮಿಳು ಸಾಹಿತ್ಯ ಕಥಾ ಪರಿಚಯ

(ರಾವ್ ಬಹದ್ದೂರ್ ಡಾಕ್ಟರ್ ಎಸ್. ಕೃಷ್ಣಸ್ವಾಮಯ್ಯಂಗಾರ್ ಎಂ. ಎ., ಮದರಾಸು)

ದ್ರಾವಿಡ ಭಾಷಾಗಣ

ದಕ್ಷಿಣ ಹಿಂದೂಸ್ಥಾನದಲ್ಲಿ ಎಷ್ಟೋ ಭಾಷೆಗಳಿವೆ. ಸಾಹಿತ್ಯದ ಪ್ರಾಚೀನತೆ ಮತ್ತು ಆ ಭಾಷೆಯಲ್ಲಿರುವ ಅಪಾರ ಸಾಹಿತ್ಯವೈನಿಧ್ಯ ಇವೆರಡೂ ದೃಷ್ಟಿಯಿಂದಲೂ ತಮಿಳು ಉಚ್ಚಸ್ಥಾನವನ್ನು ಆಕ್ರಮಿಸಿದೆ. ಸಾಹಿತ್ಯ ರಾಶಿಯನ್ನು ಲಕ್ಷ್ಯದಲ್ಲಿರಿಸಿಕೊಂಡರೆ, ದ್ರಾವಿಡ ಭಾಷೆಗಳಲ್ಲೆಲ್ಲ ತಮಿಳು ಬಹಳ ಪುರಾತನವಾದುದೆಂದು ನಿಸ್ಸಂಶಯವಾಗಿ ಹೇಳಬಹುದು. ಕನ್ನಡ, ಮಲಯಾಳ, ಮತ್ತು ತೆಲುಗು ಇವೂ ಸಹ ತಮಿಳಿಗೆ ಸರಿಸಮಾನವಾಗಿ ನಿಲ್ಲುತ್ತವೆ. ಆದರೆ ಇವೆಲ್ಲ ದ್ರಾವಿಡ ಭಾಷೆಗಳಿಗೂ ತಮಿಳೇ ಮೃಭಾಷೆಯೆಂದು ವಾದ ಹೂಡುವುದು ಕಷ್ಟಸಾಧ್ಯವೇ ಸರಿ. ಅದು ಹೇಗಾದರೂ ಇರಲಿ. ತಮಿಳು ಸಾಹಿತ್ಯದ ಪ್ರಾಚೀನತೆಯು ಬಹಳ ಹಿಂದಕ್ಕೆ ಹೋಗುತ್ತದೆ. ಈಗ ಇರುವ ಸಾಧನ ಸಂಪತ್ತಿನ ಸಾಕ್ಷ್ಯದಮೇಲೆ ವಿಚಾರ ಮಾಡಿ ನೋಡಿದರೆ ತಮಿಳು ಬಹಳ ಪುರಾತನವಾದುದು. ಅವಾದನಂತರ ಕಾಲಮಾನದ ದೆಶೆಯಿಂದ

ಎರಡನೆಯ ಸ್ಥಾನವು ಕನ್ನಡ ಸಾಹಿತ್ಯಕ್ಕೆ ಹೋಗುತ್ತದೆ.

ತಮಿಳು ಸಾಹಿತ್ಯ ಪ್ರಾಚೀನತೆ

ಯಾವ ಭಾಷೆಯೇ ಆಗಲಿ, 'ಸಂಸ್ಕೃತವಾದುದು' ಎಂಬ ಹೆಸರನ್ನು ಪಡೆಯಲು ಯೋಗ್ಯತೆ ಸಂಪಾದಿಸ ಬೇಕಾದರೆ, ಆ ಭಾಷೆಯಲ್ಲಿ ಬರೆದವುಗಳಿಗೆ ಸಾಹಿತ್ಯ ಸ್ಥಾನಗೌರವವು ಸಿಗಬೇಕಾದರೆ, ಆ ಗ್ರಾಂಥಿಕಾವಸ್ಥೆಗೆ ಬರುವುದಕ್ಕಿಂತ ಬಹಳ ಹಿಂದಣ ಕಾಲದಿಂದಲೂ ಭಾಷೆಯು ಜೀವಂತವಾಗಿ ಇದ್ದೇ ಇರಬೇಕೆಂದು ನಾವು ಭಾವಿಸಬಹುದು. ಅನೇಕ ಶತಮಾನಗಳಿಂದ ತಮಿಳು ಭಾಷೆಯು ಇದ್ದಿರಬಹುದೆಂದು ಭಾವಿಸೋಣ. ಆದರೆ ನಮಗೆ ಈಗ ದೊರೆತಿರುವ ತಮಿಳು ಸಾಹಿತ್ಯದ ಸಾಧನಗಳು ಕ್ರಿಸ್ತಪೂರ್ವ ೪ನೆಯ ಶತಮಾನದವರೆಗೂ ನಮ್ಮನ್ನು ಕರೆದೊಯ್ಯುತ್ತವೆ. ಲಭ್ಯವಾಗಿರುವ ಸಾಹಿತ್ಯವು ಈ ಕಾಲಕ್ಕಿಂತ ಹಿಂದಕ್ಕೆ ಖಂಡಿತವಾಗಿ ಕರೆದೊಯ್ಯಲಾರದು. ಆದರೆ ಆ ಸಾಹಿತ್ಯ ವಿಶೇಷಗಳನ್ನು ಕ್ರಿಸ್ತಶಕದ ಪೂರ್ವಭಾಗಕ್ಕೊಂದಷ್ಟು ಉತ್ತರ ಭಾಗಕ್ಕೊಂದಷ್ಟು ಸೇರಿಸಬಹುದು.

'ತೊಲ್‌ಗಾಪ್ಪಿಯಂ'

ಪರಂಪರೆಯಾಗಿ ಲಬ್ಧವಾಗಿರುವ ತಮಿಳು ಇತಿವೃತ್ತದಲ್ಲಿ 'ತೊಲ್‌ಗಾಪ್ಪಿಯಂ' ಎಂಬ ವ್ಯಾಕರಣವೇ ತಮಿಳಿನಲ್ಲಿ ತಿಳಿದುಬಂದಿರುವ ಪುರಾತನ ಗ್ರಂಥ. 'ತೊಲ್‌ಗಾಪ್ಪಿಯಂ' ಅಂದರೆ 'ಹಳೆಯ ಕಾವ್ಯ' ಎಂ ದರ್ಥ. ತಮಿಳು ಭಾಷೆಯ ಪುರಾತನ ವ್ಯಾಕರಣವಿದೇ. ಇಂತಹ ವ್ಯಾಕರಣವೊಂದಿತ್ತು ಅಂದಕೂಡಲೇ ಅದಕ್ಕೆ ಹಿಂದೆ ಕೊಂಚ ಸಾಹಿತ್ಯರಾಶಿಯು ಇದ್ದೇ ಇರಬೇಕಷ್ಟೆ. ವಿವೇಕಯುತವಾದ ಪರಿಶೋಧನೆ ನಡೆಸಿದಾಗ 'ತೊಲ್‌ಗಾಪ್ಪಿಯಂ' ಎಂಬುದೇ ತಮಿಳಿನಲ್ಲಿ ಬರೆದ ಗ್ರಂಥಗಳಲ್ಲಿ ಮೊಟ್ಟಮೊದಲನೆಯದೆಂದು ಹೇಳಿದರೆ ಅದನ್ನು ನಂಬುವುದು ಕಷ್ಟ. ಈ ವ್ಯಾಕರಣ ರಚನೆಯ ಕಾಲವನ್ನು ತಕ್ಕಮಟ್ಟಿಗೆ ಹಿಂದೆಯೇ ಇಡಬೇಕಾಗುತ್ತದೆ. ಮತ್ತು ಅದಕ್ಕೆ ಮೊದಲೇ ಉಚಿತ ಪ್ರಮಾಣದಲ್ಲಿ ತಮಿಳು ಸಾಹಿತ್ಯ ಸೃಷ್ಟಿಯಾಗಿತ್ತೆಂದೂ ಊಹಿಸಬೇಕಾದುದು ಸಹಜವಾಗಿರುತ್ತದೆ. ಪೂರ್ವದಲ್ಲಿದ್ದ ಸಾಹಿತ್ಯವೇ ಈ ವ್ಯಾಕರಣ ರಚನೆಗೆ ಆಧಾರವಾಗಿದ್ದಿರಬೇಕು. ಹಿಂದಿನ ಸಾಹಿತ್ಯವೆಲ್ಲ ಈ ವ್ಯಾಕರಣ ವಿಧಿಗನುಸಾರವಾಗಿದೆಯೆಂಬ ಮತವು ರೂಢಿಯಲ್ಲಿದೆ.

ಸಂಗಂ ಸಾಹಿತ್ಯ

ಬಹಳ ಪ್ರಾಚೀನ ಗ್ರಂಥಸಮುದಾಯಕ್ಕೆ 'ಸಂಗಂ ಕಾವ್ಯರಾಶಿ' ಎಂದೂ ಹೆಸರಿಡಬಹುದು. ಅಂದರೆ ಈ ಕಾವ್ಯಗಳೆಲ್ಲವೂ ಪುರಾತನ ಮಾರ್ಗದ ಗ್ರಾಂಥಿಕ ಶೈಲಿಯಲ್ಲಿ ಬರೆಯಲ್ಪಟ್ಟು ಮಧುರೆಯ ಪಾಂಡ್ಯ ರಾಜರ ಸಭೆಯನ್ನಲಂಕರಿಸಿದ್ದ ಪಂಡಿತ ಶ್ರೇಣಿಯು ಅಂಗೀಕಾರ ಮುದ್ರೆ ಬಿದ್ದ ಗ್ರಂಥಗಳಿಗೆ ಸರಿಸಮಾನವೆಂದು ಗಣಿಸಲ್ಪಟ್ಟವೆಂದರ್ಥ. ಈ ಪಂಡಿತ ಶ್ರೇಣಿಯು ಮುದ್ರೆ ಬೆತ್ತೆಂದರೆ ಆ ಕಾವ್ಯಗಳಿಗೆ ಒಂದು ಅಪೂರ್ವ ಅಧಿಕಾರವೂ ಬೆಲೆಯೂ ಬಂದಹಾಗೆ. ಕಾಲವು ಕಳೆದ ಹಾಗೆಲ್ಲ ಈ ಕಾವ್ಯ ರಾಶಿಯು ಒಂದು ಸ್ಥಾನವನ್ನಾಕ್ರಮಿಸಿತು. ಮುಂದಿನ ಸಾಹಿತ್ಯಕ್ಕೆಲ್ಲ ಒಂದು ಪೂರಾದರಿಯಾಯಿತು. ಆದಕಾರಣವೇ ಅದಕ್ಕೆ 'ಸಂಗಂ ಸಾಹಿತ್ಯ' ವೆಂದು ಹೆಸರಾಯಿತು. ಈ ಸಾಹಿತ್ಯವು ಅಪಾರವಾಗಿದೆ. ಕೆಲವು ಒಂದೇ ಛಂದಸ್ಸಿನ ದೀರ್ಘ ಕಾವ್ಯಗಳು. ಈ ಛಂದೋರೂಪಗಳ ಲಕ್ಷಣಗಳೆಲ್ಲ ಮೇಲೆ ಹೇಳಿದ ವ್ಯಾಕರಣದಲ್ಲಿ ವಿಪುಲವಾಗಿ ವರ್ಣಿತವಾಗಿವೆ.

ಸದ್ಯಕ್ಕೆ ಈ ಸಾಹಿತ್ಯವು ಹಲವು ಕಾವ್ಯಮಾಲೆಯ ರೂಪದಲ್ಲಿ ಸಿಗುತ್ತವೆ. ಅವುಗಳಲ್ಲಿ ಎಂಟು ಬಹಳ ಮುಖ್ಯವಾದುವು. ಸಾಮಾನ್ಯವಾಗಿ ಈ ಕಾವ್ಯಮಾಲೆಯನ್ನು ಪರೀಕ್ಷಿಸೋಣದರಿಂದ ಅವುಗಳೆಲ್ಲ ಕ್ರಿಸ್ತಪೂರ್ವದಿಂದ ಕ್ರಿಸ್ತಶಕ ೪ನೆಯ ಶತಮಾನದವರೆಗಿನ ಕಾಲಕ್ಕೆ ಸಂಬಂಧಿಸಿದವೆಂದು ಧೈರ್ಯವಾಗಿ ಹೇಳಬಹುದು.

ಆ ಕಾವ್ಯರಾಶಿಯಲ್ಲಿ ಕೃತಿಭರ್ತರ ಗುಣಗಾನಗಳಿವೆ. ಸಾಧಾರಣವಾಗಿ ಇವೆಲ್ಲ ಕ್ಷಾತ್ರರಸಭೂಯಿಷ್ಠವಾದಂತಹವು. ರಾಜರ ಮತ್ತು ರಾಜಮನೆತನದವರ ಕೀರ್ತಿ ವಿಸ್ತಾರವೇ ಸಾಮಾನ್ಯವಾಗಿ ಕಾವ್ಯವಸ್ತು. ಆಮೇಲೆ ಹುಟ್ಟಿದ ಪುರಾಣಕಾವ್ಯಗಳಲ್ಲಿ ಕಾಣಬರುವ ಲಕ್ಷಣಗಳ ಬೀಜಾಂಕುರಗಳೆಲ್ಲ ಈ ಕಾವ್ಯಗಳಲ್ಲಿ ಕಾಣಬರುತ್ತವೆ. ರಾಮಾಯಣ ಭಾರತಾದಿ ಪುರಾಣಗಳು ಹುಟ್ಟುವುದಕ್ಕೆ ಮೊದಲು ಅನೇಕ ನಾಯಕ ನಾಯಕಿಯರ ಗುಣಗಾನ ಸಂಬಂಧವಾಗಿ ಕವಿಗಳನೇಕರು ಹಾಡಿರಬೇಕಷ್ಟೆ. ಅಂತ ಹಹಾಡುಗಳ ಕವಿತೆಗಳಿಗೆ ಸಮವೆನ್ನಿಸಿ ಮೇಲೆ ಸೂಚಿಸಿದ ಸಾಹಿತ್ಯ

ರಾಶಿ. ಅನೇಕ ಕಾವ್ಯಮಾಲೆಗಳ ರೂಪದಲ್ಲಿ ಸಾಹಿತ್ಯವು ಸಿಗುತ್ತದೆಂದು ಹೇಳಿದ್ದಾಯಿತು. ಈ ಕಾವ್ಯಮಾಲೆಗಳೂ ಸಹ ವಿಷಯ ಮತ್ತು ಛಂದಸ್ಸುಗಳಿಗನುಸಾರವಾಗಿ ವಿಭಾಗಿಸಲ್ಪಟ್ಟಿವೆ. ಮೀರ್ಘಕಾವ್ಯಗಳೇ ಒಂದು ಗುಂಪು. ಇನ್ನು ಬೇರೆ ಕಾವ್ಯಗಳೇ ಒಂದು ಗುಂಪು. 'ಅಹನಾನೂರು', 'ಪುನನಾನೂರು' ಮತ್ತು 'ಪದಿಟ್ರುಪತ್ತು' ಎಂಬುವು ಇಂತಹ ಕಾವ್ಯಮಾಲೆಗಳಿಗೆ ಕೆಲವು ಉದಾಹರಣೆಗಳು.

ಪ್ರೌಢ ಕಾವ್ಯ ಯುಗ

ಈ ಕಾವ್ಯರಾಶಿ ಬಿಟ್ಟು ಮುಂದೆ ಹೊರಟರೆ ಬಹಳ ಸರಳವಾದ ಭಾಷೆಯಲ್ಲಿ ಬರೆದ ಬೋಧಕ ವಿಚಾರಗಳನ್ನು ಕುರಿತ ಕವಿತೆಗಳು ಸಿಗುತ್ತವೆ. ಸಂಪ್ರದಾಯವಾಗಿ ಬಂದ ಪೂರ್ವಪದ್ಧತಿಯು ತಮಿಳು ಶಿಕ್ಷಣ ವ್ಯವಸ್ಥೆಯಲ್ಲಿ ಈ ಕವಿತೆಗಳೇ ಪ್ರಥಮ ಪಾಠಗಳು. ಈ ಸರಳ ಶೈಲಿಯಲ್ಲಿ ತಮಿಳು ಭಾಷೆಯ ಸುಂದರ ಶಬ್ದ ಸಂಪತ್ತಿಯು ಕಾಣಬರುತ್ತದೆ.

ಅಲ್ಲಿಂದಾಚೆಗೆ ಭಕ್ತಿಪರವಾದ ಕವಿತೆಗಳೇ ಹೆಚ್ಚು, ಈ ದೈವಭಕ್ತಿ ಸಾಹಿತ್ಯದಲ್ಲಿ ಪೂರ್ವಾಚಾರದ ಲಕ್ಷಣಗಳಧಿಕ; ಸಂಸ್ಕೃತದ ಪ್ರಭಾವ ಹೆಚ್ಚು; ಅಲ್ಲದೆ ಇದರಿಂದ ಆ ಕಾಲದ ಜನರ ಮನಸ್ಸೆಲ್ಲ ಒಂದೊಂದು ಇಷ್ಟದೇವತಾರಾಧನೆಯಲ್ಲಿ ಲೀನವಾಗಿ ಹೋಗಿದ್ದಂತೆ ತಿಳಿಯಬರುತ್ತದೆ

ಸಾಧಾರಣವಾಗಿ ಕ್ರಿಸ್ತಶಕ ೪ನೆಯ ಶತಮಾನದವರೆಗೆ ಬೋಧಕವಿಚಾರವೇ ಸ್ಫೂರ್ತಿಯಾಗಿ ಉಳ್ಳ ಪ್ರೌಢ ಕಾವ್ಯಯುಗವೆಂದು ಕರೆಯಬಹುದು. ಈ ಯುಗದ ಎಲ್ಲ ಕಾವ್ಯಗಳೂ ಭಕ್ತಿಪರವಾಗಿಯೇ ಇದ್ದವೆಂದು ಹೇಳಲಾಗದು. ಆದರೆ ಹಿಂದಿನ ಸಾಂಪ್ರದಾಯಿಕ ರೂಪವು ಮೂಲೆಗೆ ಬಿದ್ದು ರಂಜಕವಾದ ಹೊಸ ಸಾಹಿತ್ಯಸ್ವರೂಪವು ಎಲ್ಲ ಕಾವ್ಯಗಳಲ್ಲೂ ಕಾಣಬರುತ್ತಿತ್ತು. 'ಶಿಲಪ್ಪದಿಕಾರಂ', 'ಮಣಿಮೇಖಲೈ' ಎಂಬ ಕಾವ್ಯಗಳನ್ನು ಕೊಂಚ ಹಿಂದಿನ ಕಾಲಕ್ಕೆ ಒಯ್ಯಬಹುದಾದರೂ 'ಚಿಂತಾಮಣಿ' ಎಂಬ ಕಾವ್ಯವು ಈ ಯುಗದ ಕವಿಕರ್ಮಕ್ಕೆ ಉತ್ತಮವಾದ ಉದಾಹರಣೆ. ಇದೇ ಯುಗದಲ್ಲೇ ಶೈವ, ವೈಷ್ಣವ ಸಾಧು ಸಂತರು ಭಕ್ತಿಪರವಶರಾಗಿ 'ತೇವಾರಂ', 'ತಿರುವಾಚಕ' ಗಳನ್ನೂ 'ತಿರುವಾಯಿಮೊಳಿ' ಯನ್ನೂ ಹಾಡಿದರು. ಇದೇ ಕಾಲದಲ್ಲೇ ಮಹಾಭಾರತವೂ ಬರೆಯಲ್ಪಟ್ಟಿತು. 'ಭಾರತವೆಣ್ಬಾ' ಎಂಬ ಕಾವ್ಯದ ಕೆಲವು ಭಾಗಗಳು ಮಾತ್ರ ಈಗ ಉಪಲಬ್ಧವಾಗಿವೆ.

ಸ್ವರ್ಣಯುಗ

ಅನಂತರ ನಾವು ತಮಿಳುಸಾಹಿತ್ಯದ ಸ್ವರ್ಣಯುಗಕ್ಕೆ ಕಾಲಿಡುತ್ತೇವೆ. ಮಹಾಕವಿತೆಗಳ ಕಾಲವಿದು. 'ಕಂಬಾವತಾಯಣಂ', 'ವಿಲ್ಲಿಪುತ್ತೂರಾರ್ ಭಾರತಂ' ಎಂಬೆರಡೂ ಉತ್ತಮ ಕಾವ್ಯಗಳಿಗೆ ಉದಾಹರಣೆಗಳು. ಈ ಕಾಲದಲ್ಲಿ ಇನ್ನೂ ಅನೇಕ ಕಾವ್ಯಗಳಿವೆ. ಸಾಹಿತ್ಯರಾಶಿಯ ಸೃಷ್ಟಿಯು ಪ್ರಮಾಣದೃಷ್ಟಿಯಲ್ಲಿ ಈ ಕಾಲವನ್ನು ಮತ್ತಾವುದೂ ಮೀರಿಸಿಲ್ಲ. ಶೃಂಗಾರ ಕವಿತೆಗಳೂ, ಪ್ರೇಮಗೀತೆಗಳೂ, ಇನ್ನೂ ನಾನಾತರದ ಕವಿತೆಗಳೂ ಈ ಕಾಲದಲ್ಲಿ ಸಿಗುತ್ತವೆ. ಸಾಹಿತ್ಯಜೀವನದಲ್ಲಿದು ಬಹಳ ಚುರುಕಿನಯುಗ.

ಗದ್ಯ ವಾಙ್ಮಯ

ಕವಿತೆಯೊಂದಿಗೆ ಗದ್ಯವೂ ವೃದ್ಧಿಯಾಗುತ್ತ ಬಂತು. ಹಿಂದಿನ ಕಾಲದಿಂದಲೂ ಗದ್ಯವಿತ್ತು. ಹಲವು ಪುರಾಣಗಳಲ್ಲಿ ಅಲ್ಲಲ್ಲಿ ಗದ್ಯಗಳಿವೆ. ಆದರೆ ಅವೆಲ್ಲ ಪ್ರಾಸಬದ್ಧವಾದವು. ಟೀಕಾಕಾರರೂ, ವ್ಯಾಖ್ಯಾನಕಾರರೂ ನಿಜವಾಗಿ ಗದ್ಯ ಬರೆಯಲಾರಂಭಿಸಿದರು. ಹಲವು ವ್ಯಾಖ್ಯಾನಗಳ ಗದ್ಯಶೈಲಿಯು ಬಹಳ ಪ್ರೌಢವಾಗಿದೆ. ಟೀಕಾಕಾರರ ಪ್ರೌಢಶೈಲಿಯು ಗದ್ಯಕ್ಕೂ ಸಾಮಾನ್ಯ ಜನರ ಸಾಮರಶೈಲಿಗೂ ಮಧ್ಯಸ್ಥವಾದ ಶೈಲಿಯೊಂದಿದೆ. ಆ ಶೈಲಿಯ ಗದ್ಯವು ತಮಿಳು ಶಾಸನಗಳಲ್ಲಿದೆ.

ಬಹಳ ಪ್ರಾಚೀನಕಾಲದ ತಮಿಳು ಶಾಸನಗಳೆಂದರೆ ಅವು ಕ್ರಿಸ್ತಶಕ ೬ನೆಯ ಶತಮಾನದ ಮಧ್ಯಕಾಲಕ್ಕೆ ಸಂಬಂಧಪಟ್ಟವು. ಪಲ್ಲವರಾಜ ವಂಶೀಯರ ಶಾಸನಗಳೇ ಹಳೆಯವು. ಅನಂತರ ಎರಡು ತಲೆಮಾರಿನ ಮೇಲೆ ಪಾಂಡ್ಯರಾಜಮನೆತನದವರ ಶಾಸನಗಳು ಕಾಣಬರುತ್ತವೆ. ಆ ಶಾಸನ ಸಾಹಿತ್ಯದಲ್ಲಿ ಕಾಣಬರುವ ಶಕ್ತಿಯೂ, ಜೀವಕಳೆಯೂ, ಶಬ್ದಪ್ರಯೋಗದಲ್ಲಿನ ಚಾತುರ್ಯವೂ ಅಪೂರ್ವವಾಗಿದೆ. ಈ ಸಾಹಿತ್ಯವನ್ನೇ ಒಂದು ವರ್ಗಕ್ಕೆ ಸೇರಿಸಬೇಕಾಗುತ್ತದೆ. ಈ ಸಾಹಿತ್ಯದ ಸುಲಕ್ಷಣಗಳು ಕೊಂಚಮಟ್ಟಿಗೆ ಕೈಬಿಟ್ಟುಹೋದುವಲ್ಲಾ ಎಂಬದಾಗಿ ವ್ಯಸನವಾಗುತ್ತದೆ. ಆಧುನಿಕ ಗದ್ಯಲೇಖಕರು ಎಷ್ಟು ಪ್ರಯಾಸಪಟ್ಟರೂ ಪೂರ್ವಕಾ

ದ ಗದ್ಯಶಾಸನ ಶೈಲಿಗೆ ಸಮನಾದ ಶಕ್ತಿಯನ್ನು ೋರಿಸಲಾದರು.

ಆದರೆ ಮೇಲೆ ಸೂಚಿಸಿದ ಮೂರನೆಯ ಕಾಲಕ್ಕೆ ರುವ ವೇಳೆಗೆ ಶಾಸನ ಸಾಹಿತ್ಯರಾಶಿಯು ಅಪಾರ ಾಗಿ ಸಿಗುತ್ತದೆ. ಈ ಸಾಹಿತ್ಯಕ್ಕೇ ಒಂದು ಸ್ಥಾನ ಲ್ಪಿಸಬೇಕಾಗಿದೆ.

ಇದೇ ಕಾಲದಲ್ಲೇ ಪ್ರಖ್ಯಾತ ಟೀಕಾಕಾರರನೇಕರು ುಟ್ಟಿದರು. ತಮಿಳು ಮಹಾಕಾವ್ಯಗಳಮೇಲೆ ವ್ಯಾ ್ಯಾನಗಳನ್ನು ಬರೆದರು. ಈ ವ್ಯಾಖ್ಯಾನಗಳ ರಚನೆ ುಲ್ಲಿ ವಿಶೇಷ ಲಕ್ಷಣಯುತವಾದ ಗದ್ಯಶೈಲಿಯೊಂ ನ್ನು ನಿರ್ಮಿಸಿದರು. ಈ ಕಾಲವು ಹತ್ತನೆಯ ಶತ ಮಾನದಿಂದ ಹದಿನಾಲ್ಕನೆಯ ಶತಮಾನದ ರೆಗೂ ವಿಸ್ತರಿಸುತ್ತದೆಂದು ಹೇಳಬಹುದು. ಇತ್ತೀಚೆಗೆ ಾವ್ಯವೆಂದರೆ ವಿಜಯನಗರದ ಇಮ್ಮಡಿ ದೇವರಾಯನ ಂತನಾಮಕರಲ್ಲೊಬ್ಬನಾದ ಇರಿಗನ ರಾಜಾಶ್ರಯ ುಲ್ಲಿ ರಚಿಸಿದ 'ಮೇರುಮಂದರಪುರಾಣಂ' ಎಂಬ ಜೈನ ್ರಂಥ. ಮಲ್ಲಿಕಾರ್ಜುನ ಮತ್ತು ಕೃಷ್ಣದೇವರಾ ುನ ಕಾಲದಲ್ಲೂ ಅನೇಕ ಗ್ರಂಥಗಳು ಬರೆಯ ಪಟ್ಟವು.

ಅವನತಿ

ಅನಂತರ ಅವನತಿಯ ಕಾಲ ಪ್ರಾಪ್ತವಾಯಿತು. ಸಾಹಿತ್ಯಕ್ಕೆ ರಾಜಾಶ್ರಯವು ಕಡಿಮೆಯಾಯಿತು. ದಕಾರಣ ಗ್ರಂಥರಚನೆಗೇ ಕ್ಷಾಮ ಬಂತು. ಅವನ ಯುಂಟಾಗದೆ ಮತ್ತೇನು? ಈ ಕಾಲದಲ್ಲೇ ವುಗಳ್ ೀಂದಿ ಎಂಬಾತನು ತಮಿಳು ಮಹಾಕಾವ್ಯಗಳಲ್ಲೊಂ ಾದ 'ನಳ ದಮಯಂತಿ'ಯನ್ನು ರಚಿಸಿದನು. ಒಟ್ಟ ಕೂತ್ತರೆಂಬವರು ಅನೇಕ ಕಾವ್ಯಗಳನ್ನು ಬರೆದರು. ವುಗಳಲ್ಲಿ 'ದಕ್ಷಯಾಗಪರಣಿ' ಯೆಂಬುದೇ ಅತ್ಯುತ್ತ ಮವಾದುದು. (ಶ್ರೀ ಪಿ. ಸ್ವಾಮಿನಾಥಯ್ಯರವರ ಈ ಗ್ರಂಥವನ್ನು ಪ್ರಕಟಿಸಿದ್ದಾರೆ). 'ತಿರುಪುಹಲ್' ಮತ್ತು ಪಿಳ್ಳೈ ಪೆರುಮಾಳ್ ಅಯ್ಯಂಗಾರ್ಯರ ಗ್ರಂಥ ಗಳೂ ಈ ಕಾಲದಲ್ಲೇ ಆದುವು. ಅಯ್ಯಂಗಾರ್ಯರ ಗ್ರಂಥಗಳಲ್ಲಿ 'ಅಷ್ಟಪ್ರಬಂಧ' ವೆಂಬುದೇ ಹೆಸರುವಾ ಯಾದುದು.

ಭವಿಷ್ಯ ನಿರೀಕ್ಷಣೆ

ತಮಿಳು ಸಾಹಿತ್ಯದಲ್ಲೂ (ಇತರ ಭಾಷೆಗಳಂತೆಯೇ ಹೊಸಯುಗದಾರಂಭದ ಪ್ರಭಾತ ಚಿಹ್ನೆಗಳು ಕಾಣ ತ್ತಿವೆ. ಆದರೆ ಬಂಗಾಳದಲ್ಲೂ, ಮಹಾರಾಷ್ಟ್ರದಲ್ಲ ಸಾಹಿತ್ಯ ಜೀವನದಲ್ಲಿ ಕಾಣಬರುತ್ತಿರುವ ಉತ್ಸಾ ವಾಗಲಿ, ರಜನಾಶಕ್ತಿಯಾಗಲಿ ತಮಿಳುನಾಡಿನಲ್ಲಿ ಇಲ್ಲ ಅನ್ನೇ. ಅಲ್ಲ ಈ ಕಾಲದಲ್ಲಿ ಎಷ್ಟೋ ಗ್ರಂಥಗಳ ರಚ ಯಾಗಿದೆ. ಸಾಹಿತ್ಯವು ನಾನಾರೂಪುಗೊಂಡು ಅವತಾ ಮಾಡುತ್ತಿದೆ. ಆದರೆ ಇಂದು ಹುಟ್ಟಿರುವ ಸಾಹಿತ್ಯ 'ಯೋಗ್ಯ' ಸಾಹಿತ್ಯವೆಂದು ಹೇಳಲಿಕ್ಕಾಗುವುದಿಲ್ಲ ಆದರೆ ಸಾಹಿತ್ಯ ಪ್ರಪಂಚದಲ್ಲಿ ನಿಜವಾದ 'ನವೋದಯ' ವಾಗುತ್ತಿದೆ. ಆ ಉದಯದ ಫಲಪ್ರಾಪ್ತಿಯ ಕುರು ಹುಗಳೂ ತೋರಿಬರುತ್ತಿವೆ. ಜನಜೀವನದಲ್ಲಿ ಅಲ್ಲೋಲ ಕಲ್ಲೋಲವಾಗಿದೆ. ಹೃದಯಗಳೆಲ್ಲ ಕಲಕಿದಂತಾ ಗಿದೆ. ದೇಶ ಭಾಷೆಗಳಲ್ಲಿ ಸಾಮಾನ್ಯವಾಗಿ ಪಾಶ್ಚಾತ್ಯ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಪಟ್ಟ ಪುಸ್ತಕಗಳೇ ಇಲ್ಲ. ಅಂತಹ ವಿಜ್ಞಾನ ಗ್ರಂಥಗಳ ರಚನೆಯಾಗಬೇ ಕೆಂಬ ಆಶೆಯೂ ಆತುರವೂ ಪ್ರಬಲವಾಗಿದೆ. ಈ ಹೊಸಯುಗದ, ಹೊಸ ಆಶೆಯ ಮತ್ತು ಆದರ್ಶದ ಫಲವಾಗಿ ಹೊಸದಾರಿಯ, ಹಿತ ಸಾಹಿತ್ಯವು ಹುಟ್ಟೇ ತೆಂದೂ, ಆ ಸಾಹಿತ್ಯವು ಹಿಂದಿನ ತಮಿಳು ಸಾಹಿತ್ಯಕ್ಕೆ ಸರಿಸಮನಾಗಿ ನಿಂತೀತೆಂದೂ ನಿರೀಕ್ಷಿಸಲಾಗಿದೆ.

ಆಂಧ್ರಸಾಹಿತ್ಯದ ಚರಿತ್ರಸಂಗ್ರಹ

(ರಾಳ್ಳಪಲ್ಲಿ ಶ್ರೀ ಅನಂತಕೃಷ್ಣ ಶರ್ಮ, ಮಹಾರಾಜಾ ಕಾಲೇಜು, ಮೈಸೂರು)

ಆದಿಕವಿ

ನಮಗೆ ತಿಳಿದಮಟ್ಟಿಗೆ ತೆಲುಗು ಭಾಷೆಯಲ್ಲಿ ಸಾಹಿತ್ಯವು ನೊದಲಾದದ್ದು ಕ್ರಿ. ಶ. ೧೧ನೆಯ ಶತಕದ ಆದಿಯಲ್ಲಿ. ಆದಕ್ಕೆ ಹಿಂದೆ ಸುಮಾರು ಮುನ್ನೂರು ಸಾನೂರು ವರ್ಷಗಳಿಂದಲೂ ಸಲಕ್ಷಣವಾದ ಪದ್ಯ ರಚನೆಯು ನಡೆದು ಬರುತ್ತಿದ್ದಂತೆ ಶಾಸನಗಳ ಆಧಾರದಿಂದ ನಿಶ್ಚಯಿಸಬಹುದಾಗಿದ್ದರೂ, ಸಂಪೂರ್ಣವಾದ ಯಾವ ಕಾವ್ಯದ ಹೆಸರಾಗಲಿ, ಕವಿಯ ಹೆಸರಾಗಲಿ ನಮಗೆ ತಿಳಿದುಬಂದಿಲ್ಲ. ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ವಾಲ್ಮೀಕಿಯ ಹಾಗೆ, ಆಂಧ್ರಭಾಷೆಯಲ್ಲಿ ಹನ್ನೊಂದನೆಯ ಶತಕದ ಆರಂಭದಲ್ಲಿದ್ದ "ನನ್ನಯ ಭಟ್ಟಾರಕ" ನೆಂಬ ಕವಿಯೇ 'ಆದಿಕವಿ' ಯೆಂಬ ಪಾಡಿಕೆಯು ಬಹುಕಾಲದಿಂದಲೂ ಇರುವುದು. ಆತನೇ ಆಂಧ್ರಭಾಷೆಯನ್ನು ಕಾವ್ಯ ಪುರಾಣಾದಿ ರಚನೆಗೆ ಉಪಯೋಗವಾಗುವಂತೆ ಸಂಸ್ಕರಿಸಿ ಮೊಟ್ಟಮೊದಲು ವ್ಯಾಕರಣವನ್ನು ಬರೆದನೆಂದೂ ಪ್ರವಾದವುಂಟು.

ಆದರೆ, ಹನ್ನೊಂದನೆಯ ಶತಕದ ಹಿಂದೆ ದಕ್ಷಿಣ ದೇಶದಲ್ಲಿ ಬಹಳ ಪ್ರಬಲರಾಗಿದ್ದು ಇತರ ಭಾಷೆಗಳಲ್ಲಿ ಅನೇಕ ಮಹಾ ಗ್ರಂಥಗಳನ್ನು ಬರೆದ ಜೈನರು ಆಂಧ್ರ ಭಾಷೆಯಲ್ಲೂ ಬರೆಯದೇಯಿದ್ದಿರಲಾರರೆಂದೂ, ಆಂಧ್ರ ದೇಶದಲ್ಲಿ ಆದ್ವೈತಿಗಳೂ ಶೈವರೂ ವೈಷ್ಣವರೂ ಒಂದೊಂದುಕಡೆ ಪ್ರಬಲರಾಗಿ ಅದರಿಂದೀಚೆಗೆ ಜೈನರನ್ನು ದೇಶದಲ್ಲಿಯೇ ಇರಗೊಡಿಸದೆ ಹೊರಡಿಸಿದುದರಿಂದ, ಅವರು ಇತರ ದೇಶಗಳಿಗೆ ವಲಸೆ ಹೋದ ಕಾಲದಲ್ಲಿ ತಮ್ಮ ಗ್ರಂಥಗಳನ್ನೂ ಹಿಂದೆಯೇ ತೆಗೆದುಕೊಂಡು ಹೋಗಿರಬೇಕೆಂದೂ, ಕಾಲಕ್ರಮದಲ್ಲಿ ಇತರ ಭಾಷೆಗಳವರಿಗೆ ಈ ಗ್ರಂಥಗಳಲ್ಲಿ ಶ್ರದ್ಧೆಯಿಲ್ಲದೆ ಅವು ನಷ್ಟವಾಗಿರಬೇಕೆಂದೂ, ಕೆಲವರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಬೆಂಬಲವಾಗಿ ಆಂಧ್ರ ದೇಶದಲ್ಲಿ ಜೈನರ ಸಂಖ್ಯೆಯು ಅತಿಸ್ವಲ್ಪವಾಗಿರುವುದೂ, ಇದುವರೆಗೆ ಒಂದು ಜೈನ ಗ್ರಂಥವಾದರೂ ತೆಲುಗಿನಲ್ಲಿ ಕಣ್ಣಿಗೆ ಬೀಳದೆ ಇರುವುದೂ, ವಿಚಾರಾರ್ಹವಾಗಿದೆ.

ಶಿಥಿಲಮತಾವೇಶ

ಜೈನರನ್ನು ಓಡಿಸುವುದರಲ್ಲಿ ಹೀಗೆ ಶೈವರೂ ವೈಷ್ಣವರೂ ಅದ್ವೈತಿಗಳೂ ಏಕಮತ್ಯದಿಂದ ಸೇರಿ ಕೆಲಸ ಮಾಡಿ ಕೃತಕೃತ್ಯರಾದರೂ, ಕೊನೆಗೆ ಅದ್ವೈತ ಮತವೇ ಉಳಿದ ಎರಡನ್ನೂ ಅಡಗಿಸಿ ಆಂಧ್ರ ಸಾಹಿತ್ಯದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿತು. ಬಸವೇಶ್ವರನ ಕಾಲದಲ್ಲಿ ಕೆಲವು ವೀರಶೈವ ಗ್ರಂಥಗಳೂ, ವಿಜಯನಗರದ ಅರಸರ ಕಾಲದಲ್ಲಿ ಕೆಲವು ವೀರವೈಷ್ಣವ ಗ್ರಂಥಗಳೂ ಹುಟ್ಟಿದರೂ ಮೊತ್ತದಲ್ಲಿ ಶಿವಕೇಶವರಲ್ಲಿ ಸಾಮ್ಯದೃಷ್ಟಿಯುಳ್ಳ ಗ್ರಂಥಗಳೇ ತೆಲುಗಿನಲ್ಲಿ ಹೆಚ್ಚಾಗಿ ಕಾಣಬರುವವು. ಈಗಲೂ ವೀರಶೈವರಿಗಾಗಲಿ, ವೀರವೈಷ್ಣವರಿಗಾಗಲಿ ತಮಿಳು ಕನ್ನಡ ದೇಶಗಳಲ್ಲಿರುವಷ್ಟು ಸಂಖ್ಯಾಬಲವು ತೆಲುಗು ದೇಶದಲ್ಲಿಲ್ಲ. ಇನ್ನು ಬೌದ್ಧಮತವು ಬಹುಕಾಲದ ಹಿಂದೆಯೇ ನಮ್ಮ ದೇಶದಲ್ಲಿ ಅಂತರ್ಧಾನವಾಗಿತ್ತು. ಈಚೆಗೆ ಬಂದ ಮಹಮ್ಮದೀಯ ಕ್ರಿಸ್ತ ಮತಗಳಿಗೆ ಸಂಸ್ಕಾರಿಗಳಾದ ಉತ್ತಮ ಜಾತಿಯವರು ಬಹಳಾಗಿ ಸೇರದೇಯಿರುವುದರಿಂದ, ಸೇರಿದವರ ದೃಷ್ಟಿಯು ಉರ್ದು, ಇಂಗ್ಲೀಷು ಭಾಷೆಗಳಲ್ಲಿಯೇ ಇನ್ನೂ ನೆಟ್ಟಿರುವುದರಿಂದ, ಆ ಮತಗಳಿಗೆ ತೆಲುಗು ಭಾಷೆಯ ಸಾಹಿತ್ಯವನ್ನು ಸೃಷ್ಟಿಮಾಡುವ ಶಕ್ತಿಯು ಇನ್ನೂ ಬಂದಿಲ್ಲ.

ಆಂಧ್ರಾದ್ವೈತಬ್ರಾಹ್ಮಣರಲ್ಲಿ ವೈದಿಕರೆಂದೂ ನಿಯೋಗಿಗಳೆಂದೂ ಎರಡು ಮುಖ್ಯವಾದ ಪಂಗಡಗಳುಂಟು. ಮೊದಲನೆಯವರು ಶ್ರೌತಸ್ಮಾರ್ತ ಕರ್ಮಗಳಲ್ಲಿ ನಿರತರಾಗಿ ಸಂಸ್ಕೃತ ಸಾಹಿತ್ಯ ಸೇವೆಯಲ್ಲಿ ಹೆಚ್ಚು ಅಭಿಮಾನವುಳ್ಳವರು. ಎರಡನೆಯ ನಿಯೋಗಿ

ಗಳು ನೂತನ ಸಂಸ್ಕಾರಪ್ರಿಯರು; ಮತ್ತು ರಾಜಕೀಯ ತಂತ್ರಗಳಲ್ಲಿ ನಿಪುಣರು. ಆದಕಾರಣ ದೇಶ ಭಾಷೆಯಲ್ಲಿ ಇವರಿಗೆ ಪಾಂಡಿತ್ಯವೂ ಅಭಿಮಾನವೂ ಹೆಚ್ಚು. ಆದುದರಿಂದ ಆಂಧ್ರ ಸಾರಸ್ವತದಲ್ಲಿ ಮುಕ್ಕಾಲು ಪಾಲು ಇವರು ಬರೆದ ಗ್ರಂಥಗಳೇ ಹೇರಳವಾಗಿರುವವು. ಹೀಗೆ ಜೈನರು, ಬೌದ್ಧರು ಮುಂತಾದ ಅನ್ಯೈದಿಕ ಮತದವರು ಆಂಧ್ರದೇಶವನ್ನೇ ಬಿಟ್ಟು ಹೋದುದರಿಂದಲೂ, ಮತಪ್ರಚಾರಕರಾದ ಬ್ರಾಹ್ಮಣರೆಲ್ಲಾ ಪ್ರಾಯಶಃ ಆಸ್ಥಾನಾಶ್ರಿತರಾಗಿದ್ದುದರಿಂದಲೂ, ಇತರರಿಗೆ ಶಿವನೆಲ್ಲಾಗಲಿ ವಿಷ್ಣುವಿನಲ್ಲಾಗಲಿ ಹತದ ಭಕ್ತಿದ್ವೇಷಗಳುಂಟಾಗಲು ಹೆಚ್ಚು ಅವಕಾಶವಿಲ್ಲದೆ, ಆಂಧ್ರ ಸಾಹಿತ್ಯದಲ್ಲಿ ಮತಾವೇಶದ ಬೆಂಬಲವು ಕಡಮೆಯಾಯಿತು. ವೀರಶೈವನಾದ ಪಾಲ್ಕುರಿಕಿ ಸೋಮನ ಬಸವಪುರಾಣ, ವೀರವೈಷ್ಣವನಾದ ವಿಜಯನಗರ ಚಕ್ರವರ್ತಿ ಕೃಷ್ಣದೇವರಾಯನ 'ಆಮುಕ್ತಮಾಲ್ಯದ' ನುಮಾರು ಹದಿನೇಳನೆಯ ಶತಮಾನದಿಂದೀಚೆಗೆ ಬ್ರಾಹ್ಮಣರ ಬಡಾವಣೆಯನ್ನು ಪ್ರತಿಭಟಿಸಿ ಜಾತಿ ಭೇದಾದಿಗಳಿಗೆ ವಿರೋಧವಾಗಿ ಸರ್ವಸಮತ್ವವನ್ನೂ ಆತ್ಮಾನುಸಂಧಾನವನ್ನೂ ಬೋಧಿಸಿದ 'ವೇಮನ್ನ' ನ ಪದ್ಯಗಳು—ಇಂಥ ಕೆಲವನ್ನು ಬಿಟ್ಟರೆ, ಇತರ ಬ್ರಾಹ್ಮಣರು, ಬ್ರಾಹ್ಮಣೇತರರು ಬರೆದ ಗ್ರಂಥಗಳೆಲ್ಲೆಲ್ಲಾ ಅವರು ವಂಶಪರಂಪರೆಯಾಗಿ ಶೈವರೊ ವೈಷ್ಣವರೊ ಆಗಿದ್ದರೂ, ತ್ರಿಮೂರ್ತಿ ಸ್ತುತಿ, ಗಣಪತಿ ಪೂಜೆ ಮುಂತಾದ ಪರಿಹರಾದ್ವೈತಮತಚಿಹ್ನೆಗಳು ಪ್ರಾಯಶಃ ಸ್ಪಷ್ಟವಾಗಿ ಕಂಡುಬರುವವು.

ರಾಜಾಶ್ರಯ

ಹೀಗೆ ಸಾಮಾನ್ಯವಾಗಿ ದೇಶಭಾಷೆಗಳಲ್ಲಿ ಗ್ರಂಥರಚನೆಗೆ ಮುಖ್ಯಕಾರಣವಾದ ಮತಾವೇಶವು ಶಿಥಿಲವಾದುದರಿಂದ, ತೆಲುಗಿನಲ್ಲಿ ಬಹಳವಾಗಿ ಗ್ರಂಥರಚನೆಗೆ ಕೀರ್ತಿ, ದ್ರವ್ಯ ಮುಂತಾದ ಇತರ ಕಾರಣಗಳೇ ಮೂಲವಾಗಿ ಪರಿಣಮಿಸಿದವು. ಸಾಮಾನ್ಯವಾಗಿ ಕೀರ್ತಿ ದ್ರವ್ಯಗಳೆರಡೂ ಅರಸರ ಕೈಯ್ಯಲ್ಲಿದ್ದ ವಸ್ತುಗಳಾದುದರಿಂದ, ಕವಿಗಳು ರಾಜಾಶ್ರಯವನ್ನು ವಿಧಿಯಿಲ್ಲದೆ ಮಾಡಬೇಕಾಗಿ ಬಂದಿತು. ಆದರೆ ರಾಜರಿಗೆ ಕವಿಗಳನ್ನಾಶ್ರಯಿಸಬೇಕಾದ ನಿರ್ಬಂಧವು ಒದಗಿದ ಹೊರತು ಇವರಿಂದ ಅವರಿಗೆ ಲಾಭವುಂಟಾಗಲಾರದಲ್ಲವೆ? ಆದುದರಿಂದ, ಸಪ್ತಸಂತಾನಗಳಲ್ಲಿ ಪ್ರಬಂಧರಚನೆ ಮುಖ್ಯವಾಗಿ ಪರಿಗಣಿಸಬೇಕೆಂದೂ, ಈ ಶಾಸ್ತ್ರವು ಪ್ರಬಂಧವನ್ನು ಬರೆದವನಿಗಂತಲೂ ಬರೆಯಿಸಿದವನಿಗೆ ಹೆಚ್ಚಾಗಿ ಅನ್ವಯಿಸುವುದೆಂದೂ, ಅರಸನ ಮನಸ್ಸಿನಲ್ಲಿ ನಾಟುವಂತೆ ಕವಿಗಳು ಬೋಧಿಸಿದರು. ಈ ಕಾರಣದಿಂದ ಆಂಧ್ರಸಾಹಿತ್ಯದಲ್ಲಿ ಬಹುಭಾಗವು ಅರಮನೆಗಳ ನೆರಳಿನಲ್ಲಿಯೇ ತಯಾರಾಯಿತು. ಮತ್ತು ಪೂರ್ವಕಾಲದಲ್ಲಿ ಅರಸನ ಕೈಕೆಳಗಿನ ಅಧಿಕಾರಿಗಳೂ ಯಥಾಶಕ್ತಿಯಾಗಿ ಎಲ್ಲಾ ವಿಧದಲ್ಲೂ ಅರಸರ ಹಾಗೆಯೇ ವರ್ತಿಸುತ್ತಿದ್ದುದರಿಂದ, ಅವರೂ ಕವಿಗಳನ್ನು ಬರಮಾಡಿಕೊಂಡು ಕೈಲಾದಷ್ಟು ಬಹುಮಾನಿಸಿ ಅವರಿಂದ ಗ್ರಂಥಗಳನ್ನು ಬರೆಯಿಸಿದರು. ತಮಗಿಷ್ಟುಆಶ್ರಯವನ್ನು ಕೊಟ್ಟು ಪೋಷಿಸಿದ 'ಕೃತಿಭರ್ತ'ರ ಹೆಸರನ್ನು ಶಾಶ್ವತವಾಗಿ ಮಾಡಲು 'ಕೃತಿಕರ್ತ'ರು ತಾವು ಬರೆದ ಗ್ರಂಥದಲ್ಲಿನ ವಿಷಯವನ್ನೆಲ್ಲಾ ಪ್ರತ್ಯಕ್ಷವಾಗಿ ಅವರಿಗೆ ಪುರಾಣ ಹೇಳುವಂತೆ ಆಶ್ವಾಸಾದ್ಯಂತಗಳಲ್ಲಿ ಅವರನ್ನು ಕೃತಜ್ಞತಾಭಕ್ತಿಗಳಿಂದ ಸಂಬೋಧಿಸಿ ಬರೆದು, ಹೊಸದಾದ ಅಂಕಿತ ಪದ್ಧತಿಯೊಂದನ್ನು ನೆಲೆಗೊಳಿಸಿದರು. ಹೀಗೆ ಧನಿಕನಾದ ಒಬ್ಬ ವ್ಯಕ್ತಿಯ ಆಶ್ರಯದಲ್ಲಿ ಗ್ರಂಥರಚನೆಯನ್ನು ಮಾಡುವ ಪದ್ಧತಿಯು ಈಗಲೂ ತೆಲುಗರಲ್ಲಿ ಹೋಗಿಲ್ಲ. ಆಂಧ್ರದೇಶದಲ್ಲಿ ಈಗಲೂ ರಾಜರೂ ಸಾಳೇಗಾರರೂ ಜಮೀನ್‌ದಾರರೂ ಹಲವು ಮಂದಿ ಇರುವರು. ಈಗಲೂ ತೆಲುಗು ಬರಹಗಾರರಿಗೆ ಅವರ ಆಶ್ರಯವನ್ನು ಬಿಡುವುದು ಸಾಧ್ಯವಾಗಿಲ್ಲ.

ಆದರೆ ರಾಜರ ಆಶ್ರಯದಲ್ಲಿ ಎಲ್ಲಾ ಸುಖಮಯವೆಂದು ಯಾರು ಹೇಳಲಾಪರು? ಕೆಲವರಿಗೆ ಅದು ಲಭ್ಯವಲ್ಲ; ಮತ್ತೆ ಕೆಲವರಿಗೆ ಲಭಿಸಿದರೂ ಅವರ ಸೇವೆಯು ಒಗ್ಗಿಬರುವುದಿಲ್ಲ. ಜವಾನನ ಮೊದಲು ದಿವಾನನ ವರೆಗೂ ಒಂದೇ ವಿಧವಾಗಿ ತಲೆ ಬಾಗಿಸಿ ಸೇವೆ ಮಾಡದಿದ್ದರೆ ಆಸ್ಥಾನದಲ್ಲಿ ಪ್ರವೇಶವೇ ಸಾಧ್ಯವಲ್ಲ. ಸಾಧ್ಯವಾದರೂ ಫಲಕಾರಿಯಾಗುವುದಿಲ್ಲ. ಆದುದರಿಂದ ಆಂಧ್ರಕವಿಗಳಲ್ಲಿ ಕೆಲವರು ಅಂಥಾ ದೈನ್ಯಕ್ಕೆ ತಲೆಗೊಡದೆ ಸ್ವತಂತ್ರರಾಗಿ ತಮ್ಮ ಇಷ್ಟದೇವತೆಗಳಿಗೆ ಅಂಕಿತವಾಗಿ ಗ್ರಂಥರಚನೆಯನ್ನು ಮಾಡಿದರು. ರಾಜರಿಗೆ ಅಂಕಿತವಾಗಿ ಗ್ರಂಥಗಳನ್ನು ಬರೆಯುವುದು ನರಕಕ್ಕೆ ದಾರಿಯೆಂದೂ ಕೆಲವರು ನಂಬಿದರು! ಆದರೂ ಒಟ್ಟಿನಲ್ಲಿ ಆಂಧ್ರಸಾಹಿತ್ಯಕ್ಕೆ ಜೀವವನ್ನು ತುಂಬಿ, ನಡೆಯಿಸಿದವರು ಅರಸರೇ ಎಂದು ಧಾರಾಳವಾಗಿ

ಹೇಳಬಹುದು. ತಮಗೆ ಅಂಕಿತವಾಗಿ ಗ್ರಂಥಗಳನ್ನು ಬರೆಯಿಸುವುದು ರಾಜಧರ್ಮಗಳಲ್ಲೊಂದೆಂಬ ನಂಬಿಕೆ ಅರಸರಿಗೆಲ್ಲಾ ಇದ್ದುದರಿಂದಲೇ ಹದಿನಾರನೆಯ ಶತಕದಲ್ಲಿ 'ಇಬ್ರಾಹಿಂ ಮಲ್ಕ್' ಎಂಬ ಗೋಲಕೊಂಡದ ಮಹಮ್ಮದೀಯ ಸುಲ್ತಾನನೂ ಕೂಡ ಇಬ್ಬರಾಂಧ್ರ ಕವಿಗಳನ್ನು ಪೋಷಿಸಿ ಎರಡು ಉತ್ತಮ ಕಾವ್ಯಗಳನ್ನು ತನಗೆ ಅಂಕಿತವಾಗಿ ಬರೆಯಿಸಿಕೊಂಡಿರುವನು! ಕೆಲವರು ತೆಲುಗು ಅರಸರು ಸ್ವತಂತ್ರವಾಗಿ ಗ್ರಂಥರಚನೆಯನ್ನು ಮಾಡಿರುವರು. ಕೆಲವರು ಇತರರಿಂದ ಬರೆಯಿಸಿ ತಮ್ಮ ಹೆಸರಿನಲ್ಲಿ ಪ್ರಕಟಿಸಿಕೊಂಡಿರುವುದನ್ನು ಕಾಣಬಹುದು.

ಹೀಗೆ ರಾಜಾಶ್ರಯವನ್ನೇ ಹೆಚ್ಚಾಗಿ ನೆಚ್ಚಿಕೊಂಡಿದ್ದ ಆಂಧ್ರಸಾರಸ್ವತವು, ಹಿಂದೆ ಹೇಳಿದಂತೆ ಹನ್ನೊಂದನೆಯ ಕ್ರಿಸ್ತಶತಕದಲ್ಲಿ ವೆಂಗಿದೇಶದ ರಾಜಧಾನಿಯೊದ ರಾಜಮಹೇಂದ್ರವರದಲ್ಲಿ ಪೂರ್ವ ಚಾಳುಕ್ಯ ವಂಶಕ್ಕೆ ಸೇರಿದ ರಾಜರಾಜ ನರೇಂದ್ರನ ಆಸ್ಥಾನದಲ್ಲಿ ತಲೆದೋರಿ, ಅಲ್ಲಿಂದ ಕಾಕತೀಯರು, ರೆಡ್ಡಿಗಳು, ವಿಜಯನಗರದ ಅರಸರು, ಮುಂತಾದವರ ಸಾಮ್ರಾಜ್ಯಗಳಲ್ಲಿ, ಅವರ ಕೈಕೆಳಗಿನ ಸಣ್ಣಸಣ್ಣ ತೆಲುಗು ರಾಜ್ಯಗಳಲ್ಲಿ ಅಭಿವೃದ್ಧಿಗೆ ಬಂದು, ಕ್ರಮವಾಗಿ ಮಧುರೆ, ತಂಜಾವೂರು, ಮೈಸೂರು, ಪುದುಕೋಟೆ ಮುಂತಾದ ಆಂಧ್ರೇತರ ರಾಜ್ಯಗಳಲ್ಲಿಯೂ ಶಾಖೋಪಶಾಖೆಗಳಾಗಿ ಬೆಳೆಯಿತು.

ಶಾಸ್ತ್ರಸಾಹಿತ್ಯ

ಆಂಧ್ರ ವಾಙ್ಮಯದಲ್ಲಿ ವೈದ್ಯ, ಜ್ಯೋತಿಷ, ಗಣಿತ, ಧರ್ಮ, ಸಾಮುದ್ರಿಕ, ಯೋಗ ಮುಂತಾದ ಶಾಸ್ತ್ರಗಳಲ್ಲಿ ಗ್ರಂಥಗಳು ಆದಿಯಿಂದಲೂ ಬರೆಯಲ್ಪಟ್ಟಿದ್ದರೂ ಅವುಗಳ ಸಂಖ್ಯೆಯೂ ಸ್ವಲ್ಪ; ಪ್ರಾಮಾಣ್ಯವೂ ಕಡಿಮೆ ಇನ್ನು ತರ್ಕವೇದಾಂತಾದಿ ಚರ್ಚಾಶಾಸ್ತ್ರಗಳು ಕೇವಲ ಸಂಸ್ಕೃತ ಪರಿಭಾಷೆಯಿಂದ ತುಂಬಿರುವುದರಿಂದಲೂ, ಅವುಗಳಲ್ಲಿ ಕೆಲವು ದೇಶಭಾಷೆಯಲ್ಲಿ ಜನಸಾಮಾನ್ಯಕ್ಕೆ ತಿಳಿಸಬಾರದ ಪವಿತ್ರ ಗ್ರಂಥಗಳೆಂಬ ಭಾವನೆಯಿದ್ದುದರಿಂದಲೂ, ಅವುಗಳು ಸಂಸ್ಕೃತ ಪೀಠದಿಂದ ಕೆಳಕ್ಕಿಳಿದು ಬರಲಿಲ್ಲ ಬಂದಿರುವ ಗ್ರಂಥಗಳೂ ಮುಖ್ಯವಾದ ತತ್ವವಿಷಯಗಳನ್ನು ಮಾತ್ರ ಸೂಚಿಸುತ್ತವೆಯೇ ಹೊರತು ವಿಸ್ತರವಾಗಿ ವಿಷಯ ಚರ್ಚೆಯನ್ನು ಮಾಡುವುದಿಲ್ಲ. ಹೀಗಾಗಿ ತೆಲುಗಿನಲ್ಲಿ ಬರೆದಿರುವ ಶಾಸ್ತ್ರಗ್ರಂಥಗಳೆಲ್ಲಾ ಮುಖ್ಯ ವಿಷಯಗಳು ಮರೆತುಹೋಗದೆ ಇರುವುದಕ್ಕಾಗಿ ಮಾಡಿಕೊಂಡಿರುವ ಗುರ್ತಿನ ಕಡತಗಳೆಂದು ಮಾತ್ರ ಹೇಳಬಹುದಾಗಿದೆ. ಮಲ್ಲಿನಾಥ, ಅನ್ನಂಭಟ್ಟ, ಪಂಡಿತ ರಾಜಜಗನ್ನಾಥ, ಲಕ್ಷ್ಮೀಧರ, ಮುಂತಾದ ಮಹಾ ಪ್ರತಿಭಾವಂತರಾದ ಶಾಸ್ತ್ರಜ್ಞರು ಆಂಧ್ರರಲ್ಲಿದ್ದರೂ ಅವರ ಪ್ರತಿಭೆಯೆಲ್ಲಾ ಸಂಸ್ಕೃತ ಭಾಷೆಯಲ್ಲಿ ಹೊರ ಡೋರುವುದೇ ಹೊರತು ತೆಲುಗಿನಲ್ಲಿ ಅದರ ಸುಳಿವೇ ಕಾಣುವುದಿಲ್ಲ.

ಪುರಾಣಯುಗ

ಆಂಧ್ರರ ಪ್ರತಿಭೆಯು ಆಂಧ್ರಭಾಷೆಯಲ್ಲಿ ಪುರಾಣ ಕಾವ್ಯಗಳ ರೂಪದಲ್ಲಿಯೇ ಹರಿಯಿತು. ಕಾವ್ಯ ಪ್ರಬಂಧದಲ್ಲಿಯೂ ನಾಟಕಗಳ ಗೋಜಿಗೆ ಅವರು ಹೋಗಲಿಲ್ಲ. ಸಂಸ್ಕೃತ ಕಾವ್ಯಪದ್ಧತಿಯನ್ನು ಆಮೂಲಾಗ್ರವಾಗಿ ಅನುಕರಿಸಿಕೊಂಡು ಬರೆದ ತೆಲುಗು ಕವಿಗಳಿಗೆ ಆ ಭಾಷೆಯಲ್ಲಿ ಬಹಳ ಅಭಿವೃದ್ಧಿಗೆ ಬಂದಿದ್ದ ನಾಟಕಗಳನ್ನು ತಮ್ಮ ಭಾಷೆಗೆ ತಂದುಕೊಳ್ಳಬೇಕೆಂಬ ಆಶೆಯು ಏಕೆ ಹುಟ್ಟಲಿಲ್ಲವೆಂಬುದು ಪ್ರತ್ಯುತ್ತರವಿಲ್ಲದ ಪ್ರಶ್ನೆಯಾಗಿರುವುದು ಮತ್ತು ಶಾಕುಂತಲ, ಪ್ರಬೋಧಚಂದ್ರೋದಯ ಮುಂತಾದ ನಾಟಕಗಳನ್ನು ತೆಲುಗಿನಲ್ಲಿ ಪದ್ಯಕಾವ್ಯದ ರೂಪದಲ್ಲಿ ಬರೆದುಕೊಂಡವರಿರುವರು. ಆದರೆ ಅವುಗಳನ್ನು ನಾಟಕ ರೂಪವಾಗಿಯೇ ಪರಿವರ್ತನೆ ಮಾಡುವುದಕ್ಕಾದರೂ ಮೊನ್ನೆಮೊನ್ನೆವರೆಗೆ ಯಾರೂ ಪ್ರಯತ್ನಿಸಲಿಲ್ಲ. ಮತ್ತು ಕಾವ್ಯರಚನೆಗೆ ಬೇಕಾದ ಅಲಂಕಾರ, ಛಂದಸ್ಸು, ರಸ, ವ್ಯಾಕರಣ, ಇವುಗಳ ವಿಷಯವಾಗಿ ಕೆಲವು ಗ್ರಂಥಗಳಿದ್ದರೂ ಅವೂ ಕೂಡ ಮೇಲೆ ಹೇಳಿದ ಇತರ ಶಾಸ್ತ್ರಗ್ರಂಥಗಳಿಗಿಂತ ಹೆಚ್ಚು ಉತ್ತಮಸ್ಥಿತಿಯಲ್ಲಿರುವುವೆಂದು ಹೇಳಲಾಗುವುದಿಲ್ಲ.

ವಿಷಯಪ್ರಧಾನವಾದುದು ಪುರಾಣ; ರಚನಾಪ್ರಧಾನವಾದುದು ಕಾವ್ಯ. ಸುಲಭವಾದ ಶೈಲಿಯಲ್ಲಿ ಕಥೆ, ಧರ್ಮ, ನೀತಿ ಮುಂತಾದ ವಿಷಯಗಳನ್ನು ಸಾಮಾನ್ಯ ಜನರ ತಿಳುವಳಿಕೆಗಾಗಿ ಬೋಧಿಸುವುದೇ ಪೌರಾಣಿಕರ ಕರ್ತವ್ಯ ಕಾವ್ಯದವರು ಹಾಗಲ್ಲದೆ ಮೇಲ್ಕಂಡ ವಿಷಯಗಳನ್ನಾಧಾರವಾಗಿಟ್ಟುಕೊಂಡು ಅದರ ಮೂಲಕ ಶಬ್ದಾರ್ಥಾಲಂಕಾರ ರಚನೆಯಲ್ಲಿ ತಮಗಿರುವ ಸಾಮರ್ಥ್ಯವನ್ನು ಪ್ರಕಟಿಸಬೇಕೆಂದು ಪ್ರಯತ್ನಿಸುವರು ಈ ಕಾವ್ಯ ಶೈಲಿಗೆ 'ಪ್ರಬಂಧ ಶೈಲಿ' ಯೆಂದು ಈಚಿನ ಆಂಧ್ರರು ಹೆಸರಿಟ್ಟಿರು

ವರು. ನಿಜವಾದ ಕಾವ್ಯಧರ್ಮಗಳನ್ನು ಪರಿಶೀಲಿಸಿದರೆ ಕಾವ್ಯವೆಂಬ ಹೆಸರು ಪುರಾಣಗಳಿಗೇ ಸಲ್ಲಬೇಕಾಗಿದ್ದರೂ, ಕೆಲವು ಪುರಾಣಗಳಲ್ಲಿ ಕಾವ್ಯಶೈಲಿಯೂ ಕಾವ್ಯಗಳಲ್ಲಿ ಪುರಾಣಶೈಲಿಯೂ ಬೆರಕೆಯಾಗಿದ್ದರೂ, ಈ ಪುರಾಣಕಾವ್ಯ ವಿಭಾಗವು ಸಾಮಾನ್ಯ ವ್ಯವಹಾರದಲ್ಲಿ ಹೇಗೋ ಬಂದು ನಿಂತಿರುವುದು. ಆಂಧ್ರಸಾಹಿತ್ಯವು ಉಪಕ್ರಮವಾದಕಾಲದಲ್ಲಿಯೇ ಆದರ್ಶಭೂತವಾದ ಸಂಸ್ಕೃತ ವಾಙ್ಮಯದಲ್ಲಿ ಮೇಲ್ಕಂಡ ಎರಡು ತರಗತಿಯ ರಚನೆಗಳೂ ಬಹಳ ಪ್ರಾಮುಖ್ಯಕ್ಕೆ ಬಂದಿದ್ದವು. ಆದುದರಿಂದ ತೆಲುಗಿನಲ್ಲಿ ಸಾಹಿತ್ಯರಚನೆಗೆ ಕೈಹಾಕಿದ ಪಂಡಿತರಿಗೆ ಮೊದಲಿಂದಲೂ ಈ ಎರಡರಮೇಲೂ ದೃಷ್ಟಿಯು ಪ್ರಸರಿಸಿತು. ಆದರೆ ಸಂಸ್ಕೃತಭಾಷೆಯಲ್ಲಿನ ಮಹಾಭಾರತಾದಿ ಗ್ರಂಥಗಳನ್ನು ಪಂಡಿತರಿಂದ ಓದಿಸಿ ದೇಶಭಾಷೆಯಲ್ಲಿ ನಿತ್ಯವೂ ಪುರಾಣವನ್ನು ಕೇಳುವ ಸಾಮಾನ್ಯ ಜನರಿಗೆ ಆ ಗ್ರಂಥಗಳಲ್ಲಿ ಉಂಟಾಗುವಷ್ಟು ಅಭಿಮಾನವೂ ಅಭಿರುಚಿಯೂ ಕಾವ್ಯದ ಕಸರತ್ತುಗಳಲ್ಲಿ ಉಂಟಾಗುವುದಿಲ್ಲ. ಆದುದರಿಂದ ಆಂಧ್ರಕವಿಗಳಲ್ಲಿ ಬಹುಜನರು ಮೊದಲು ಮಹಾಭಾರತಾದಿ ಪುರಾಣಗಳನ್ನು ಸಂಗ್ರಹವಾಗಿ, ಯಥೋಚಿತವಾದ ಬದಲಾವಣೆಗಳೊಡನೆ ಅನುವಾದಮಾಡಲುಪಕ್ರಮಿಸಿದರು.

ಕವಿತ್ರಯ

ರಾಜರಾಜನರೇಂದ್ರನ ಆಸ್ಥಾನ ಪಂಡಿತನಾದ ನನ್ನಯಭಟ್ಟಾರಕನೇ ಮಹಾಭಾರತದ ಭಾಷಾಂತರೀಕರಣವನ್ನುಪಕ್ರಮಮಾಡಿ ಅರಣ್ಯಪರ್ವದಲ್ಲಿ ಸ್ವಲ್ಪ ಭಾಗದವರೆಗೆ ನಡೆಯಿಸಿ ಕಾಲಾಧೀನನಾದನು. ಅಮೇಲೆ ಸುಮಾರು ಹದಿಮೂರನೆಯ ಶತಕದ ಮಧ್ಯಭಾಗದಲ್ಲಿ ನೆಲ್ಲೂರು ಸಂಸ್ಥಾನದಲ್ಲಿ ಮಂತ್ರಿಯಾಗಿದ್ದ ತಿಕ್ಕನ್ನನೆಂಬ ಸೋಮಯಾಜಿಯು ವಿರಾಟಪರ್ವದಿಂದ ಮೊದಲುಮಾಡಿ ೧೫ ಪರ್ವಗಳನ್ನು ಪೂರ್ತಿಮಾಡಿದನು. ಈತನಿಗೆ ಕವಿಬ್ರಹ್ಮನೆಂಬ ಬಿರುದುಂಟು. ಆಂಧ್ರಸಾಹಿತ್ಯದಲ್ಲಿ ಆ ಬಿರುದಿಗೆ ಈತನ ಹೊರತು ಮತ್ತಾರೂ ತಕ್ಕವರಿಲ್ಲವೆಂದು ಧಾರಾಳವಾಗಿ ಹೇಳಬಹುದು. ತರುವಾಯ ಹದಿನಾಲ್ಕನೆಯ ಶತಕದಲ್ಲಿ ಶಂಭುದಾಸನೆಂಬ ಕವಿಯು ಆರಣ್ಯಪರ್ವಶೇಷವನ್ನು ಪೂರ್ತಿಗೊಳಿಸಿದನು. ಈ ಮೂವರಿಗೂ ಕವಿತ್ರಯವೆಂಬ ಕೀರ್ತಿಯುಂಟು. ಇವರ ಪ್ರಯೋಗಗಳೇ ನೈಯಾಕರಣರಿಗೆ ಪರಮಪ್ರಮಾಣವಾಗಿ ನಿಂತಿರುವುವು.

ಹೀಗೆ ಉಪಕ್ರಮವಾದ ಪುರಾಣರಚನೆಯು ಸುಮಾರು ೧೬ನೆಯ ಶತಕದವರೆಗೂ ಬೆಳೆಯಿತು. ರಾಮಾಯಣ, ಭಾಗವತ, ಹರಿವಂಶ, ಬಸವಪುರಾಣ, ಮಾರ್ಕಂಡೇಯ ಪುರಾಣ, ವಿಷ್ಣುಪುರಾಣ ಮೊದಲಾದ ಹಲವು ಪುರಾಣಗಳು ತರ್ಜುಮೆಯಾದವು. ಮತ್ತು ರಾಮಾಯಣ ಮೊದಲಾದ ಕೆಲವನ್ನು ಬೇರೆ ಬೇರೆಯಾಗಿ ಹಲವರು ಬರೆದರು. ಇವರಲ್ಲಿ ೧೫ನೇ ಶತಕದಲ್ಲಿ ಭಾಗವತವನ್ನು ಬರೆದ ಬಮ್ಮೆರಪೋತರಾಜನು ಬಹಳ ಪ್ರಖ್ಯಾತನು. ಭಕ್ತಿರಸಪ್ರಧಾನವಾದ ಈತನ ಗ್ರಂಥಕ್ಕೆ ಇರುವಷ್ಟು ವ್ಯಾಪ್ತಿಯು ಇನ್ನಾವ ತೆಲುಗು ಗ್ರಂಥಕ್ಕೂ ಕಾಣುವುದಿಲ್ಲ. ರಾಜಾಶ್ರಯವನ್ನು ತಿರಸ್ಕರಿಸಿ, ಸ್ವತಂತ್ರಿಸಿ, ಬಡತನದಲ್ಲೇ ಕಾಲಕ್ಷೇಪಮಾಡಿದ ತೆಲುಗು ಕವಿಗಳಲ್ಲಿ ಈತನು ಅಗ್ರಗಣ್ಯನು. ಕೆಲವರು ಹೀಗೆ ಪೂರ್ತಿಯಾಗಿ ಪುರಾಣಗಳನ್ನು ಬರೆಯುವುದಕ್ಕೆ ಬದಲು ಅವುಗಳಲ್ಲಿನ ಕೆಲವು ಉಪಾಖ್ಯಾನಗಳನ್ನು ಮಾತ್ರ ತೆಗೆದು ಬರೆದರು. ಇಂತಹವರಲ್ಲಿ ೧೫ನೇ ಶತಕದ ಶ್ರೀನಾಥನೆಂಬ ಕವಿಯು ಸುಪ್ರಸಿದ್ಧನಾಗಿರುವನು. ಈ ಐದಾರು ಶತಮಾನಗಳನ್ನು 'ಪುರಾಣಯುಗ' ವೆಂದು ಆಧುನಿಕರು ಕರೆಯುವರು.

ಚಿತ್ರಕವಿತ್ವ

ಈ ಯುಗದಲ್ಲಿಯೂ ಕಾವ್ಯರಚನೆಯ ಮೇಲೆ ಕೆಲವರ ದೃಷ್ಟಿಯು ಹೋಗದೆ ಇರಲಿಲ್ಲ. ಕುಮಾರಸಂಭವವೆಂಬ ವರ್ಣನಾಪ್ರಧಾನವಾದ ಕಾವ್ಯವೂ, ವಿದ್ವಾಂಸರಿಗೆ 'ಔಷಧ' ವಾದ ನೈಷಧದ ಆಂಧ್ರೀಕರಣವೂ ಈ ಕಾಲದಲ್ಲಿಯೇ ಹುಟ್ಟಿದವು. ದಶಕುಮಾರಚರಿತ್ರೆ, ಭೋಜರಾಜೀಯ, ಮುಂತಾದ ಪುರಾಣವೂ ಕಾವ್ಯವೂ ಅಲ್ಲದ ಮೃದುಕಥಾಗ್ರಂಥಗಳೂ ಕೆಲವರಿಂದ ಬರೆಯಲ್ಪಟ್ಟವು. ರಾಘವಪಾಂಡವೀಯವೆಂಬ ದ್ವ್ಯರ್ಥಕಾವ್ಯವೂ ಈ ಯುಗದ ಆದಿಯಲ್ಲೇ ಭೀಮಕವಿಯೆಂಬವನಿಂದ ರಚಿಸಲ್ಪಟ್ಟತಂತೆ. ಆದರೆ ಅದು ಯಾವಕಾರಣದಿಂದಲೋ ನಷ್ಟವಾಗಿ ಹೋಯಿತು. ಕಲ್ಪನಾಪ್ರಧಾನವಾಗಿ, ಅಲಂಕಾರಮಯವಾಗಿ, ಕವಿಯ ಪಾಂಡಿತ್ಯವನ್ನೂ ಶಕ್ತಿಯನ್ನೂ ಪ್ರಕಟಿಸುವುದರ ಸಲುವಾಗಿಯೇ ಮುಖ್ಯವಾಗಿ ಹೊರಟ ಪ್ರಬಂಧ ಶೈಲಿಯು ಪುರಾಣ ಶೈಲಿಯಿಂದ ಸ್ಪಷ್ಟವಾದ ಭೇದವನ್ನು ಹೊಂದಿ ಪ್ರಾಮುಖ್ಯವನ್ನು ಪಡೆಯಬೇಕಾದರೆ, ಹದಿನಾಲ್ಕನೆಯ ಶತಮಾನ

ವಿಜಯನಗರ ಸಾಮ್ರಾಜ್ಯದ ಶ್ರೀ ಕೃಷ್ಣದೇವರಾಯ ಚಕ್ರವರ್ತಿಯ ಪ್ರೋತ್ಸಾಹವು ಸಿಗುವನರಿಗೂ ಕಾಯ ಬೇಕಾಯಿತು. ರಾಯರು ಕವಿಸಂಡಿತಾಭಿಮಾನಿಯೂ ಸ್ವತಃ ಬಹುಭಾಷಾಪ್ರವೀಣನೂ, ಆಂಧ್ರ ಸಂಸ್ಕೃತ ಗಳಲ್ಲಿ ಉತ್ತಮ ಕವಿಯೂ ಆಗಿದ್ದುದರಿಂದಲೂ, ದಕ್ಷಿಣ ಭರತಖಂಡದಲ್ಲೆಲ್ಲಾ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿ ಶಾಂತಿಯನ್ನು ನೆಲೆಗೊಳಿಸಿದುದರಿಂದಲೂ, ಮಹೋದಾರನಾದುದರಿಂದಲೂ, ಆತನ ಆಸ್ಥಾನದಲ್ಲಿ ತೆಲುಗು ಕವಿಗಳನೇಕರು ಸೇರಿ ಪರಸ್ಪರ ಸ್ಪರ್ಧೆಯಿಂದ ಕಾವ್ಯರಚನೆ ಮಾಡಲು ಅವಕಾಶವೊದಗಿತು. ಪುರಾಣ ರಚನೆಯು ಎಷ್ಟು ರಸವಂತವಾಗಿ ಹೃದಯಂಗಮ ವಾಗಿದ್ದರೂ ಸ್ಪರ್ಧಾಮಯವಾದ ಸನ್ನಿವೇಶದಲ್ಲಿ ಅದು ಸಪ್ಪೆಯಾಗಿ ತೋರುವುದು ಸಹಜ. ಅದುದ ರಿಂದ ಆ ಕಾಲದಲ್ಲಿ ಕಾವ್ಯದ ತತ್ತ್ವಪರೀಕ್ಷೆಯಲ್ಲಿ ಕವಿಯು ಪಟ್ಟುರುವ ಕಷ್ಟವು ಮುಖ್ಯಸಾಧನವಾಯಿತು. ಕ್ಲಿಷ್ಟವಾದ ನಡೆಯಿಂದ, ಚಕ್ರ, ನಾಗ, ಮುರಜ, ಮುಂತಾದ ಬಂಧಗಳ ರೂಪವಾಗಿ ರಚಿಸುವುದು; ನಿರೋಷ್ಠ್ಯ, ಏಕಾಕ್ಷರ, ದ್ವ್ಯಕ್ಷರ, ಮೊದಲಾದ ನಿಯ ಮಗಳನ್ನಿಟ್ಟುಕೊಂಡು ಪದ್ಯಗಳನ್ನು ಹೊಸೆಯುವುದು; ಒಂದು ವೃತ್ತದಲ್ಲಿ ಮತ್ತೊಂದೋ ಹಲವೋ ವೃತ್ತ ಗಳನ್ನು ಗರ್ಭೀಕರಿಸಿ ಬರೆಯುವುದು; ಪಳಿಗೆಗಿಷ್ಟ ಪದ್ಯವೆಂದು ಅಶುಧಾರೆಯಿಂದ ಹೇಳುವುದು—ಹೀಗೆ ಬಂಧ, ಚಿತ್ರ, ಗರ್ಭ, ಅಶುಭೇದಗಳಿಂದ ಕವಿತ್ವವು ನಾಲ್ಕು ವಿಧವೆಂದು ಪ್ರಸಿದ್ಧಿಗೆ ಬಂದಿತು! ರಾಯರ ಆಸ್ಥಾನ ಕವಿಗಳಲ್ಲಿ ಅಗ್ರಗಣ್ಯನಾದ ಪೆದ್ದನ್ನ ಎಂಬ ಕವಿಯು, ತನ್ನ 'ಮನುಚರಿತ್ರೆ'ಯಲ್ಲಿ ಇಂಥಾ ರಚನೆಯೊಂದೂ ವಾಡದೆ ಸರಸವಾಗಿ ಬರೆದಿದ್ದರೂ ತನಗೆ ಈಗ 'ಚತುರ್ವಿಧ ಕವಿತಾ ಮತಲ್ಲಿಕೆ' ವಶ ವಾಗಿರುವುದೆಂದು ಹೇಳಿಕೊಂಡಿರುವನು! ಈ ಕಾಲ ದಲ್ಲಿ ಹುಟ್ಟಿದ ಅನೇಕ ಗ್ರಂಥಗಳಲ್ಲಿ, ಪ್ರತಿ ಪದ್ಯ ದಲ್ಲಿಯೂ ಏನಾದರೊಂದು ಚಮತ್ಕಾರವಾದ ಶಬ್ದಾ ರ್ಥಕಲ್ಪನೆಯುಳ್ಳ 'ವಸುಚರಿತ್ರೆ' ಎಂಬ ಒಬ್ಬ ಶೂದ್ರ ಕವಿಯ ಕಾವ್ಯವೂ, ಹಿಂದೆ ನಷ್ಟವಾದ ರಾಘವಪಾಂ ಡವೀಯಕ್ಕೆ ಪ್ರತಿಯಾಗಿ ಸೂರಣ್ಣನೆಂಬ ಬ್ರಾಹ್ಮಣ ಕವಿಯು ಬರೆದ ಅದೇ ಹೆಸರಿನ ದ್ವ್ಯರ್ಥಕಾವ್ಯವೂ ಮುಂದೆ ಬರುವ ಕವಿಗಳಿಗೆ ಮಾರ್ಗದರ್ಶಕವಾಗಿ ಪರಿ ಣಮಿಸಿದವು. ಅನೇಕರು ತಮ್ಮ ಗ್ರಂಥಗಳಿಗೆ 'ಮರಿ ವಸುಚರಿತ್ರೆ'ಗಳೆಂಬ ಹೊಗಳಿಕೆ ಬಂದರೆ ಸಾಕೆಂ ಬಾಶೆಯಿಂದ ಬರೆದರು. ರಾಘವಪಾಂಡವೀಯದ ಹಾಗೆ ಎರಡು, ಮೂರು ಕಡೆಗೆ ನಾಲ್ಕೂ ಅರ್ಥ ಗಳುಳ್ಳ 'ಕಾವ್ಯ'ಗಳು ಹೊರಟವು! ನಿರೋಷ್ಠ್ಯವಾಗಿ-ಎಂದರೆ ಪ, ಫ, ಬ, ಭ, ಮ, ವ, ಎಂಬ ಅಕ್ಷರ ಗಳನ್ನೇ ಬಿಟ್ಟು ಕೆಲವು ಪ್ರಬಂಧಗಳು ಹೊರಬಿದ್ದವು! ಒಬ್ಬನು ಅಪಂಚವರ್ಗೀಯವಾಗಿ—ಎಂದರೆ ಕಕಾರದ ಮೊದಲು ಮಕಾರದವರೆಗೆ ಇರುವ ೨೫ ಅಕ್ಷರಗಳನ್ನೇ ಬಿಟ್ಟು 'ಶೇಷ ಶ್ಲೇಷಲೀಲೆ' ಎಂಬ ಕಾವ್ಯವನ್ನು ಬರೆದನಂತೆ! ರಸ, ಭಾವ, ಪಾತ್ರವ್ಯಕ್ತೀಕರಣ, ಪ್ರಕೃತಿಸೌಂದರ್ಯಾನುಭವ ಮೊದಲಾದ ಕಾವ್ಯಜೀವ ತತ್ತ್ವಗಳೆಲ್ಲಾ ಹಿಂದುಳಿದು, ಶಬ್ದಾರ್ಥಗಳನ್ನು ನಾನಾ ವಿಧವಾಗಿ ಕಡಿದು, ಮುರಿದು, ಹೊಸೆದು, ಹೊಲೆದು ಮಾಡುವ ಕ್ಲಿಷ್ಟರಚನೆಯು ಮಿತಿಯಿಲ್ಲದೆ ಹರಿಯಲು ಪಕ್ರಮಿಸಿತು. ಚಿತ್ರಕವಿತ್ವದ ಅದ್ಭುತ ರಚನೆ ಗಳನ್ನು ನೋಡಿ ದಣಿಯುವೇಕಾದರೆ ಅದಕ್ಕೆ ಹದಿನಾ ರನೆಯ ಶತಕದಿಂದೀಚಿನ ಆಂಧ್ರ ಸಾಹಿತ್ಯದಲ್ಲಿರು ವಷ್ಟು ಅವಕಾಶವು ನನಗೆ ತಿಳಿದಮಟ್ಟಿಗೆ ಇನ್ನಾವ ಸಾಹಿತ್ಯದಲ್ಲಿಯೂ ಇಲ್ಲ. ಈ ತೆರದ ರಚನೆಯು ಅಖಂಡವಾಗಿ ಹದಿನೈದನೆಯ ಶತಕದ ಕೊನೆಯ ವರೆಗೂ ನಡೆದುಬಂದಿತು. ಇನ್ನೂ ಪೂರ್ತಿಯಾಗಿ ನಿಂತುಹೋಯಿತೆಂದು ಹೇಳಲಾಗುವುದಿಲ್ಲ.

ಇವೆಲ್ಲಾ ಪ್ರಾಯಶಃ ಗದ್ಯಪದ್ಯಾತ್ಮಕವಾದ ಚಂಪೂ ಗ್ರಂಥಗಳೇ. ಸಂಸ್ಕೃತ ಛಂದಸ್ಸಿನ ಅಕ್ಷರವೃತ್ತಗಳಾದ ಚಂಪಕಮಾಲೆ ಮೊದಲಾದವುಗಳಲ್ಲಿಯೂ, ದೇಶೀಯ ಛಂದಸ್ಸಿಗೆ ಸೇರಿದ್ದರೂ ಶಾಸ್ತ್ರಕಾರರಿಂದ ಅಂಗೀಕೃತ ವಾಗಿರುವ ಸೀಸ, ಗೀತ, ಕಂದ, ಅಪರೂಪವಾಗಿ ಅಕ್ಕ ರಿ ಮುಂತಾದ ಪದ್ಯಗಳಲ್ಲಿಯೂ ಬರೆಯಲ್ಪಟ್ಟಿರುವುವು. ಕೇವಲ ಪದ್ಯಗ್ರಂಥಗಳೂ ಅಪರೂಪವಾಗಿ ದೊರೆಯು ವುವು. ಕೇವಲ ಗದ್ಯದಲ್ಲಿ ಬರೆದ ಗ್ರಂಥಗಳು ಪೂರ್ವ ಕಾಲದಲ್ಲಿ ಸಿಗುವುದಿಲ್ಲ. ಸುಮಾರು ಹದಿನೇಳನೆಯ ಶತಮಾನದಿಂದೀಚೆಗೆ ಕೆಲವುತಲೆದೋರುವುವು. ಆದರೆ ಅವುಗಳಿಗೆ ಪ್ರಾಮುಖ್ಯವು ಬರಲಿಲ್ಲ. ಬರಬೇಕಾದ ಷ್ಟು ಯೋಗ್ಯತೆಯೂ ಅವುಗಳಿಗೆ ಇಲ್ಲ.

ಪಾಮರ ಸಾಹಿತ್ಯ

ಇದೆಲ್ಲವೂ ಪಂಡಿತ ಸಾಹಿತ್ಯದ ವಿಷಯ. ಪಂ ಡಿತರ ಮೆಚ್ಚುಗೆಯೇ ಪ್ರಧಾನಫಲವಾಗಿ ಅವರೇರ್ಪ ಡಿಸಿದ ವ್ಯಾಕರಣ, ಛಂದಸ್ಸು, ಅಲಂಕಾರ, ಸಂಪ್ರ ದಾಯ, ಮುಂತಾದ ನಿಯಮಗಳಿಗನುಸಾರವಾಗಿ ಬರೆ

ಯಲ್ಪಟ್ಟವು. ಇಂಥ ರಚನೆಗೆ ಬೇಕಾದ ಪಾಂಡಿತ್ಯ ವಿಲ್ಲದೆ, ಅಥವಾ ಅದನ್ನು ಸಂಪಾದಿಸುವುದಕ್ಕೆ ಇಷ್ಟ ವಿಲ್ಲದೆ, ಇರುವ 'ಪಾಮರ'ರಾದ ಸ್ತ್ರೀಶೂದ್ರಾದಿ ಗಳು ಕೇವಲ ಜಿಹ್ವಾಚಾಪಲ್ಯದಿಂದ ಪರೋಪದೇಶ ಕ್ಕಾಗಿ, ಆತ್ಮಾನಂದಕ್ಕಾಗಿ, ರಚಿಸಿದ ಸಾಹಿತ್ಯವು ಹೇರಳವಾಗಿರುವುದು. ಹದಿನಾರನೆಯ ಶತಕದಿಂದೀ ಜೆಗೆ ನಾಲ್ಕೈದು ಮಂದಿ ಮಹಿಳೆಯರು ಪಂಡಿತ ಸಾಹಿ ತ್ಯಕ್ಕೆ ಕೈಹಾಕಿದವರಿದ್ದರೂ ಒಟ್ಟಿನಲ್ಲಿ ತೆಲುಗಿನಲ್ಲಿ ಸ್ತ್ರೀಯರು ಈ 'ಪಾಮರ' ಸಾಹಿತ್ಯಕ್ಕೇ ಹೆಚ್ಚಾಗಿ ಸೇವೆ ಮಾಡಿರುವರು. ಈ ಸಾಹಿತ್ಯವು ಪಂಡಿತ ಸಾಹಿ ತ್ಯಕ್ಕಿಂತಲೂ ಪ್ರಾಚೀನತೆಯಲ್ಲಿ ಕನಿಷ್ಠಪಕ್ಷ ಕಡಮೆ ಯಾದುದಲ್ಲವೆಂದು ಹೇಳಬಹುದು. ಆದರೆ ಇದು ಪೊರೆಗಳ ಆಶ್ರಯದಲ್ಲಿ ಬೆಳೆದುದಲ್ಲವಾದುದರಿಂದ, ಶಾಸನಾದ್ಯಾಧಾರವಿಲ್ಲವಾಗಿ, ಇದರ ಕವಿಗಳ ಕಾಲ ವನ್ನು ಸ್ಪಷ್ಟವಾಗಿ ನಿರ್ಣಯಿಸುವುದು ಅಸಾಧ್ಯವಾ ಗಿದೆ. ಇದರಲ್ಲಿ ಅನೇಕಕರ್ತರ ಹೆಸರೇ ತಿಳಿದು ಬಂದಿಲ್ಲ. ಹಾಡಿನ ರೂಪದಲ್ಲಿರುವ ರಾಮಾಯಣ ಭಾ ರತಾದಿ ಪುರಾಣಗಳು, ಉಪಾಖ್ಯಾನಗಳು, ದೇಶೀಯ ವೀರರ ಕತೆಗಳು, ಯಕ್ಷಗಾನಗಳು, ಭಕ್ತಿರಸಪ್ರಧಾನ ವಾದ ಭಜನೆ ಕೀರ್ತನೆಗಳು, ಮದುನೆಯ ಹಾಡು, ಜೋಗುಳಗಳು, ಆಧ್ಯಾತ್ಮವನ್ನು ಬೋಧಿಸುವ ತತ್ತ್ವ ಗಳೆಂಬ ಹಾಡುಗಳು, ಎಲ್ಲಕ್ಕಿಂತ ಹೆಚ್ಚಾಗಿ ಶೃಂಗಾರ ರಸಮಯವಾದ ಪದ, ಜಾವಡಿ ಮುಂತಾದವೂ, ಈ ತರಗತಿಗೆ ಸೇರುವವು ಇವುಗಳಲ್ಲಿ ಕೆಲವು ನೀರಸ ವಾಗಿಯೂ ಅಸಹ್ಯವಾಗಿಯೂ ಇದ್ದರೂ, ಮತ್ತೆಹಲವು ತೀಕ್ಷ್ಣವಾದ ರಸಧಾರೆಯಿಂದಲೂ, ಮುಚ್ಚುಮರೆಯಿ ಲ್ಲದ ನೇರವಾದ ನಡೆಯಿಂದಲೂ, ಹಾಡುವವರ, ಕೇಳುವವರ ಹೃದಯವನ್ನು ಭೇದಿಸಬಲ್ಲವು.

ಈ ಪಂಡಿತ ಪಾಮರ ಸಾಹಿತ್ಯಗಳೆರಡಕ್ಕೂ ಸೇರಿ ಯೂ ಸೇರದೆಯಿರುವ ಮಧ್ಯಸಾಹಿತ್ಯವು ಸಹಜವಾಗಿ ಎಲ್ಲಾ ಭಾಷೆಗಳಲ್ಲಿಯೂ ಇರುವುದು. ಪಾಮರ ಜನರು ಇದನ್ನು ಸುಲಭವಾಗಿ ಗ್ರಹಿಸಿ ಉದಾರ ರಸಭಾವ ಗಳನ್ನು ಸವಿಯಬಹುದಾದುದರಿಂದ, ಅವರಿಗೆ ಇದ ರಲ್ಲಿ ಭಕ್ತಿಯೂ ಅಭಿಮಾನವೂ ಉಂಟಾಗುವುದು. ಸಾಮಾನ್ಯವಾದ ಸಾಹಿತ್ಯ ನಿಯಮಗಳಿಗೊಳಪಟ್ಟೇ ಇರುವುದರಿಂದಲೂ, ರಸವಂತವಾಗಿರುವುದರಿಂದಲೂ, ಮುದುಕಿಗೆ ಕಷ್ಟವನ್ನು ಕೊಡದಿದ್ದರೂ ಪಂಡಿತರಿಗೂ ಇದನ್ನು ಪೂರ್ತಿಯಾಗಿ ತಿರಸ್ಕಾರ ಮಾಡಲು ಸಾಧ್ಯ ವಿಲ್ಲ. ಭಕ್ತಿ, ಶೃಂಗಾರ, ವೇದಾಂತ, ನೀ ತಿ, ಹಾಸ್ಯ, ಲೋಕಾನುಭವ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವ ರಚನೆಗಳು ಈ ಜಾತಿಗೆ ಸೇರತಕ್ಕವು; ಲೆಕ್ಕವಿಲ್ಲದೆ ತೆಲುಗಿನಲ್ಲಿರುವುವು. ಕನ್ನಡದಲ್ಲಿ ಸರ್ವಜ್ಞನಂತೆ ತೆಲುಗಿನಲ್ಲಿ ಬಹು ಪ್ರಸಿದ್ಧನಾದ, ಪ್ರಾಯಶಃ ಅವನ ಸಮಕಾಲಿಕನಾದ, ವೇಮನ್ನನ ಪದ್ಯಗಳು ಈ ತೆರದವು. ದ್ವಿಪದಿ ಛಂದಸ್ಸಿನಲ್ಲಿ ಬರೆದ ರಾಮಾಯಣ, ಭಾರತ ಮುಂತಾದ ಪುರಾಣ ಗಳೂ, ನಳಚರಿತ್ರೆ, ಹರಿಶ್ಚಂದ್ರ ಚರಿತ್ರೆ ಮೊದ ಲಾದ ಉಪಾಖ್ಯಾನಗಳೂ ಈ ಜಾತಿಯವೇ. ಕನ್ನಡ ದಲ್ಲಿ ಷಟ್ಪದಿ ಕಾವ್ಯಗಳ ಹಾಗೆ ತೆಲುಗಿನಲ್ಲಿ ಈ ದ್ವಿಪದಿ ಕಾವ್ಯಗಳು ಮೊದಲಿಂದಲೂ ಬಹಳ ವ್ಯಾಪ್ತಿಗೆ ಬಂದಿರುವವು. ಕೆಲವರು "ದ್ವಿಪದಕಾವ್ಯ, ಮುದಿ ಸೂಳೆ....." ಇತ್ಯಾದಿಯಾಗಿ ನಿರುಪಯೋಗ ಪದಾ ರ್ಥಗಳ ಪಟ್ಟಿಯಲ್ಲಿ ಸೇರಿಸಿ ನಕಲಿ ಮಾಡಿದರೂ, ಮತ್ತೆ ಕೆಲವರು ಪಂಡಿತರೇ, ಜನಸಾಮಾನ್ಯಕ್ಕೆ ಇವು ಗಳಲ್ಲಿರುವ ಅಭಿಮಾನವನ್ನರಿತು, ಈ ಛಂದಸ್ಸಿನಲ್ಲಿ ಗ್ರಂಥಗಳನ್ನು ಬರೆದರು. ಇದಲ್ಲದೆ ಚಂಪೂ ಮಾರ್ಗ ದಲ್ಲಿಯೇ ಬರೆಯಲ್ಪಟ್ಟ ಶುಕಸಪ್ತತಿ, ಹಂಸವಿಂ ಶತಿ ಮೊದಲಾದ ಕಥಾಕಾವ್ಯಗಳು ಈ ಸಾಹಿತ್ಯಕ್ಕೆ ಸೇರಬೇಕಾದುವು. ಮತ್ತು ಸಂಸ್ಕೃತದ ಹಾಗೆ ತೆಲುಗಿ ನಲ್ಲಿಯೂ ಅಸಂಖ್ಯಾತವಾಗಿರುವ 'ಚಾಟು ಪದ್ಯ ಗಳು' ಈ ತೆರದ ಸಾಹಿತ್ಯವೇ ಆಗುವುದು. ಚಾಟು ಪದ್ಯಗಳೆಂದರೆ, ಕವಿಗಳು ಪ್ರಸ್ತಾವವಶವಾಗಿ ತಮಗೆ ತೋರಿದ ವಿಷಯದಮೇಲೆ ಆಯಾ ಸಮಯಗಳಲ್ಲಿ ಆಶುಧಾರೆಯಾಗಿಯೊ, ಆಲೋಚನೆಮಾಡಿಯೊ ಮಾಡಿ ಹಾಡಿದ ಪದ್ಯಗಳು. ಇವು ಪ್ರಾಯಶಃ ಬಾಯಿಂದ ಬಾಯಿಗೆ, ಅವುಗಳಿಗೆ ಸಂಬಂಧಿಸಿದ ಕಥೆ, ಬರೆದವರ ಹೆಸರು ಮುಂತಾದ ವಿಷಯಗಳೊಡನೆ, ಅಗೋಚರ ವಾಗಿ ಇಳಿದುಬಂದಿರುವುವು. ಈಚೆಗೆ 'ಚಾಟು ಪದ್ಯ ಮಣಿಮಂಜರಿ' ಎಂಬ ಹೆಸರಿನಿಂದ ಕೆಲವನ್ನು ಸಂಗ್ರ ಹಿಸಿ ಒಬ್ಬ ವಿದ್ವಾಂಸರು ಪ್ರಕಟಿಸಿರುವರು. ಆದರೆ ಇವು ಗಳ ನಿಜವಾದ ಸಂಖ್ಯೆ ಕೆಲವು ಸಾವಿರಗಳಿಗೆ ಕಡಮೆ ಯಿರಲಾರದೆಂದು ಧಾರಾಳವಾಗಿ ಹೇಳಬಹುದು. ಇವುಗ ಳಲ್ಲಿ ಎಲ್ಲಾ ವಿಧ ಭಾವಗಳೂ ರಚನೆಗಳೂ ಸಿಗುವವು.

ಇಂಗ್ಲಿಷ್ ಸಾಹಿತ್ಯದ ಬಿರುಗಾಳಿ

ಇದೆಲ್ಲಾ ಇಂಗ್ಲೀಷು ಸಾಹಿತ್ಯದ ವಾಸನೆಯು ನೋಡುವುದಕ್ಕೆ ಮುಂಚೆ ನಡೆದ ತೆಲುಗು ಸಾಹಿತ್ಯದ

ಮುಖ್ಯ ವಿಷಯಗಳ ಸಂಗ್ರಹ ಸೂಚನೆ. ಇಂಗ್ಲೀಷು ಸಾಹಿತ್ಯದ ಸರ್ವವ್ಯಾಪಿಯಾದ ಸ್ವರೂಪವನ್ನರಿತವರು ಈಚೆಗೆ, ಎಂದರೆ ಹತ್ತೊಂಬತ್ತನೆಯ ಶತಕದ ಕೊನೆಯ ಭಾಗದಿಂದೀಚೆಗೆ ಆ ಸಾಹಿತ್ಯದ ಬಿರುಗಾಳಿಯ ಬಲೆಗೆ ಬಿದ್ದು ಬೆರಗಾದ ದೇಶಭಾಷಾ ಪ್ರಪಂಚವು ಎಷ್ಟೆಷ್ಟು ವಿಧವಾಗಿ ಕುಣಿದು, ಹಾರಿ, ಬಿದ್ದು, ಎದ್ದು, ನಾಟ್ಯವಾಡಬಲ್ಲದೊ ಊಹಿಸಬಹುದು. ಎಲ್ಲಾ ವಿಧವಾದ ಕಥೆ, ಕಾದಂಬರಿ, ನಾಟಕ, ನಕಲಿ, ಜರ್ಜಿ, ಚರಿತ್ರೆ ಮುಂತಾದ ಸಾಹಿತ್ಯದ ಕೆಲಸಗಳಲ್ಲಿಯೂ ಸೊಸ ಹೊಸ ಪ್ರಯತ್ನಗಳು ನಡೆಯುತ್ತಿರುವವು. ಹಳೆಯ ಸಂಪ್ರದಾಯಗಳೆಲ್ಲವೂ ದಿನೇ ದಿನೇ ಯುಕ್ತಾಯುಕ್ತ ವಿವೇಚನೆಯಿಲ್ಲದೆ ಕ್ಷೀಣವಾಗುತ್ತಿರುವುವು. ಹಾಗೆಯೇ ಇಂಗ್ಲೀಷು ಸಾಹಿತ್ಯದ ಸಾರ್ಥಕವಾದ, ನಿರರ್ಥಕವಾದ, ಅನರ್ಥಕವಾದ ಸಂಪ್ರದಾಯಗಳೆಲ್ಲವೂ ಬಂದು ತುಂಬುತ್ತಿರುವುವು. ಪದ್ಯಕ್ಕಿಂತ ಗದ್ಯಕ್ಕೆ ಹೆಚ್ಚು ಪ್ರಾಮುಖ್ಯವು ಏರ್ಪಡುತ್ತಿರುವುದರಿಂದ ಸಹಜವಾಗಿ ಭಾಷೆಯು ವ್ಯಾಕರಣದ ಸಂಕೋಲೆಗಳನ್ನು ಸಡಿಲಮಾಡಿಕೊಂಡು ವ್ಯಾವಹಾರಿಕ ರೂಪಕ್ಕೆ ಸಮೀಪವಾಗಿ ಬರುತ್ತಿರುವುದು. ಭಾಷಾದೇವಿಗೆ ಹೊಸ ಹೊಸ ಅಲಂಕಾರಗಳನ್ನೊದಗಿಸಬೇಕೆಂಬ ಆತುರವು ಎಲ್ಲೆಲ್ಲಿಯೂ ಮಿತಿಮೀರುತ್ತಿರುವುದು.

ಒಟ್ಟಿನಲ್ಲಿ ನೋಡಿದರೆ ಈಗಿನ ಆಂಧ್ರಸಾಹಿತ್ಯದಲ್ಲಿ ಸ್ವತಂತ್ರ ರಚನೆಯು ಬಹು ಸ್ವಲ್ಪ. ಸ್ವಾತಂತ್ರ್ಯ ಬುದ್ಧಿಯು ದಿನೇ ದಿನೇ ಹೆಚ್ಚುತ್ತಿದ್ದರೂ ಸ್ವತಂತ್ರ ಕಾರ್ಯವು ಇನ್ನೂ ನಡೆದಿಲ್ಲ. ನಮ್ಮ ಸ್ವತಂತ್ರ ಬುದ್ಧಿಯು ಪಾಶ್ಚಾತ್ಯ ಸಂಪ್ರದಾಯಗಳಿಗೆ ಪರತಂತ್ರವಾಗುವುದರಲ್ಲಿ ಪ್ರಬಲವಾಗುತ್ತಿದೆಯೇ ಹೊರತು ಪ್ರಪಂಚದ ನಾಗರಿಕತೆಗೆ ನಮ್ಮದೇ ಒಂದು ಹೊಸ ಕಾಣಿಕೆಯನ್ನು ಸಮರ್ಪಣೆ ಮಾಡಬೇಕೆನ್ನುವ ಆಶೆಯಾಗಲಿ, ಪ್ರಜ್ಞೆಯಲ್ಲಿ ಪ್ರತಿಭೆಯಲ್ಲಿ ನಾವಿತರರಿಗಿಂತಲೂ ಕಡಿಮೆಯಲ್ಲವೆಂಬ ಭರವಸೆಯಾಗಲಿ ಇನ್ನೂ ನಮ್ಮಲ್ಲಿ ತಲೆದೋರಲಿಲ್ಲ. ಇದು ಈಗಿನ ಭರತ ಖಂಡದವರ ಸಾಮಾನ್ಯ ಧರ್ಮವಾಗಿದೆ. ಈಗಿನ ತೆಲುಗು ಸಾಹಿತ್ಯದಲ್ಲೂ ಈ ಲಕ್ಷಣವು ಸ್ಪಷ್ಟವಾಗಿ ಕಾಣಬಹುದು. ಮತ್ತು ಸಮರ್ಥರಾದವರೆಲ್ಲಾ ಪ್ರಾಯಿಕರಾಗಿ ರಾಜಕೀಯ ರಣರಂಗದಲ್ಲಿ ಹೋರಾಡುತ್ತಿರುವುದರಿಂದ ಉತ್ತಮಾಂಧ್ರ ಪ್ರತಿಭಾಶಕ್ತಿಯ ಪ್ರಚಾರಕ್ಕೆ ಅವಕಾಶವಿಲ್ಲದೆ ಸಾಹಿತ್ಯದ ಏಳಿಗೆಯು ಹಿಂದುಬಿದ್ದಿರುವುದು. ಆದರೆ ಜನರಲ್ಲಿ ಬಣ್ಣವಿಲ್ಲದೆ ಬರೀ ಹಾಕಿಕೊಂಡು ಇತರರನ್ನು ತೃಪ್ತಿಪಡಿಸಿ ಆ ಮೂಲಕ ತಾವು ಕೃತಕೃತ್ಯರಾದೆವೆಂದು ನಂಬುವ ಲಕ್ಷಣವು ದಿನದಿನಕ್ಕೆ ಕ್ಷೀಣವಾಗುತ್ತಿರುವುದು ಶುಭ ಸೂಚನೆ. ಆದುದರಿಂದ ಆಂಧ್ರಭಾಷೆಯಲ್ಲಿ ಉತ್ತಮ ಸ್ವತಂತ್ರ ಸಾಹಿತ್ಯವು ಹೊರಡುವ ಕಾಲವು ಮುಂದಿರುವುದೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಎಷ್ಟು ಮುಂದೆ?

ಶ್ರೀ ಗುರು ಜಾಡ ಅಪ್ಪಾರಾವ್

'ಕನ್ಯಾಶುಲ್ಕ'ವೆಂಬ ಸಾಮಾಜಿಕ ಗದ್ಯ ರೂಪಕಕರ್ತರು

ಇವರು. ಆಧುನಿಕ

ತೆಲುಗು ಸಾಹಿತ್ಯದ

'ಜೀವ' ಮತ್ತು 'ಬಲ'ದ

ಪರಿಚಯವಾಗಬೇಕಾದರೆ

ಈ ನಾಟಕವನ್ನು

ಓದಬೇಕು.

ಮಲಯಾಳ ವಾಙ್ಮಯ ಪರಿಚಯ

(ಡಾಕ್ಟರ್ ಕೆ. ಕುನ್ನಿಕಣ್ಣನ್ ಎಂ.ಎ., ಪಿ.ಹೆಚ್.ಡಿ., ಬೆಂಗಳೂರು)

ದ್ರಾವಿಡಭಾಷಾ ಸಂತತಿಯಲ್ಲಿ ಮಲಯಾಳ ಭಾಷೆಯು ಎಲ್ಲಕ್ಕಿಂತಲೂ ಕಿರಿಯದು. ಇದು ತಮಿಳಿನಿಂದ ಹುಟ್ಟಿತೆಂಬುದಾಗಿ ರೂಢಮೂಲವಾದ ನಂಬಿಕೆ ಇದೆ. ಕ್ರಿಸ್ತಶಕ ೭ನೆಯ ಶತಮಾನದವರೆಗೆ ಮಲಯಾಳಕ್ಕೆ ಸ್ವಂತ ಅಕ್ಷರಮಾಲೆ ಇರಲಿಲ್ಲ. ಆದರೂ ಮಲಯಾಳದಲ್ಲಿ ವಾಙ್ಮಯವಿದೆ. ಅದು ವಸ್ತುವಿಸ್ತಾರದಲ್ಲೂ ಗುಣಗಾರವದಲ್ಲೂ ಇತರ ದ್ರಾವಿಡಭಾಷೆಗಳಿಗೆ ಸರಿಸಮಾನವಾಗಿಯೇ ಇದೆ.

ದೇಶ, ಸಮಾಜ ವ್ಯವಸ್ಥೆ

ಮಲಯಾಳ ವಾಙ್ಮಯವು ಇಷ್ಟು ಬೇಗ ಬೆಳೆದು ಹೇಗೆ ವೃದ್ಧಿಹೊಂದಿತೆಂಬುದನ್ನು ತಿಳಿಯಬೇಕಾದರೆ ಮಲಯಾಳದೇಶದ ಸ್ವರೂಪ ಪರಿಚಯವು ಕೊಂಚ ಬೇಕು. ಆ ದೇಶದ ಜನರು ಮತ್ತು ಅಲ್ಲಿನ ಸಮಾಜ ವ್ಯವಸ್ಥೆಯ ಜ್ಞಾನವು ಅವಶ್ಯಕ. ದಕ್ಷಿಣಭಾರತವನ್ನೂ ಪಶ್ಚಿಮ ಸಮುದ್ರತೀರವನ್ನೂ ಪಶ್ಚಿಮಘಟ್ಟಗಳು ಪ್ರತ್ಯೇಕಿಸುತ್ತಿವೆ. ಈ ತೀರಪ್ರದೇಶವು ಬಹಳ ವಿಶಾಲವಾಗಿರುವ ಕಡೆಯೆಂದರೆ ೫೦–೬೦ ಮೈಲಿಗಳ ಅಗಲಕ್ಕಿಂತ ಹೆಚ್ಚಿಲ್ಲ. ತೀರಪ್ರದೇಶ ನಿವಾಸಿಗಳಿಗೂ, ಅಂತರ್ದೇಶ ನಿವಾಸಿಗಳಿಗೂ ನಿಕಟ ಸಂಬಂಧ ಬೆಳೆಯಲು ಘಟ್ಟಗಳಲ್ಲಿ ದುರ್ಗಮವಲ್ಲದ ಅನೇಕ ದಾರಿಗಳಿವೆ. ಘಟ್ಟಗಳು ಕೆಲವುಕಡೆ ಸರಿ ಸುಮಾರು ೬–೭ ಸಾವಿರ ಅಡಿಗಳ ಮೇಲೆದ್ದು ಮೇಘಮಂಡಲವನ್ನು ಭೇದಿಸುತ್ತವೆ. ಇದರ ಫಲವೆಂದರೆ ಈ ಪ್ರಾಂತ್ಯದಲ್ಲಿ ೧೫೦ ರಿಂದ ೧೪೦ ಹದದವರೆಗೆ ಮಳೆಯಾಗುತ್ತದೆ. ಘಟ್ಟಗಳಲ್ಲಿ ಅನೇಕ ನದಿಗಳು ಹುಟ್ಟಿ, ಬೇಡದ ನೀರನ್ನೆಲ್ಲ ಸಮುದ್ರಕ್ಕೊಯ್ಯುತ್ತವೆ. ಅಂದರೆ ಈ ನದಿಗಳು ತೀರಪ್ರದೇಶವನ್ನೆಲ್ಲ ನಾನಾಖಂಡಗಳನ್ನಾಗಿ ಕಡಿದು, ಪ್ರತಿಯೊಂದನ್ನೂ ಪ್ರತ್ಯೇಕಮಾಡಿವೆ. ವರ್ಷಾಕಾಲದಲ್ಲಂತೂ ಈ ಸಣ್ಣಸಣ್ಣ ವಿಭಾಗಗಳೊಂದೊಂದಕ್ಕೂ ಸಂಬಂಧವೇ ಇಲ್ಲದಂತಾಯಿತು. ಒಂದೊಂದು ವಿಭಾಗವೂ ಒಂದೊಂದು ಪುಟ್ಟ ಸಂಸ್ಥಾನವಾಗಿ ಪರಿಣಮಿಸಿತು. ಈ ಪುಟ್ಟ ಸಂಸ್ಥಾನಗಳ ಪುರುಷಾರ್ಥವೆಲ್ಲ ಯಾದೃಚ್ಛಿಕಲಹದಲ್ಲಿ ಮುಕ್ತಾಯವಾಯಿತು. ಹಲ ಕೆಲವು ಸಣ್ಣಪುಟ್ಟ ಸಂಸ್ಥಾನಗಳೊಂದಾಗಿ ದೊಡ್ಡ ರಾಜ್ಯವೆನಿಸಿದರೂ ಪುಟ್ಟಪುಟ್ಟ ಸಂಸ್ಥಾನಗಳು ತಮ್ಮ ವ್ಯಕ್ತಿತ್ವವನ್ನು ತ್ಯಾಗಿಕ್ಕೊಳ್ಳಲಿಲ್ಲ; ಅವರವರೆ ರಾಜತ್ವವನ್ನುಳಿಸಿಕ್ಕೊಂಡವು. ಈ ಅನೇಕ ಸಂಸ್ಥಾನಿಕರ ಕೈತಳಗೆ ಶಸ್ತ್ರೋಪಜೀವಿಗಳಾಗಿ ನಾಯರ್ ಎಂಬ ಕುಲಪರು ವೃದ್ಧಿಂಗತರಾಗುತ್ತ ಬಂದರು. ಸಂಸ್ಥಾನಿಕರಿಗೆ ನಾಯರರು ಕ್ಷಾತ್ರಸೇವೆ ಮಾಡಿದ್ದಕ್ಕೆ ಪ್ರತಿಫಲವಾಗಿ ಸಂಸ್ಥಾನಿಕರು ಇವರನ್ನು ದೊಡ್ಡದೊಡ್ಡ ಜಮೀನುದಾರರನ್ನಾಗಿ ಮಾಡಿದರು. ನಾಯರಕುಲಕ್ಕಿಂತ ಕನಿಷ್ಠ ಜಾತಿಯವರು ಆ ಭೂಮಿಗಳನ್ನು ಉತ್ತು, ಬಿತ್ತಿ, ಬೆಳೆಯುತ್ತ ಬಂದರು. ಮಧ್ಯವರ್ತಿಗಳಾದ ನಾಯರರು ತಮ್ಮ ಕೀರ್ತಿಪ್ರತಿಷ್ಠೆಗಳನ್ನು ಕಾಪಾಡಿಕ್ಕೊಳ್ಳುವುದಕ್ಕಾಗಿಯೂ, ದುಡಿದು ಬೆಳೆತೆಗೆದ ರೈತನಿಂದ ದವಸಧಾನ್ಯಗಳಲ್ಲಿ ಪ್ರಧಾನಾಂಶ ಕಿತ್ತುಕ್ಕೊಳ್ಳುವುದಕ್ಕಾಗಿಯೂ ಕೈಕೆಳಗಿನ ರೈತರನ್ನು ಕೇವಲ ಶೋಚನೀಯಾವಸ್ಥೆಯಲ್ಲೇ ಇಡುತ್ತ ಬಂದರು. ಇನ್ನು ಕೆಲವುಕಡೆ ಈ ಸಂಸ್ಥಾನಿಕರ ಸ್ಥಾನವನ್ನು ನಂಬೂದರಿ ಬ್ರಾಹ್ಮಣರು ಅಕ್ರಮಿಸಿದರು. ಇವರ ಕಯ್ಯಲ್ಲಿ ಅಪಾರವಾದ ಭೂಮಿಕಾಣಿಗಳಿದ್ದವು. ಆ ಭೂಮಿಗಳನ್ನು ಅವರು ಸಂಸ್ಥಾನಿಕರಂತೆಯೇ ನಾಯರುಗಳಿಗೆ ಕಂದಾಯಕ್ಕೆ ಕೊಟ್ಟರು. ತಮ್ಮ ಆಸ್ತಿಪಾಸ್ತಿಗಳು ಛಿದ್ರವಾಗದೆ, ಅವಿಭಕ್ತವಾಗಿ ಬೆಳೆಯುತ್ತಾ ಬರಲೆಂಬ ಉದ್ದಿಶ್ಯದಿಂದ ಒಂದು ಸಂಸಾರದಲ್ಲಿ ಜ್ಯೇಷ್ಠ ಪುತ್ರನೊಬ್ಬನೇ ಮದುವೆಯಾಗಬೇಕೆಂದು ವಿಧಿಸಿದರು. ಉಳಿದ ಪುರುಷಸಂತಾನದವರೆಲ್ಲ ನಾಯರು ಸ್ತ್ರೀಯರೊಂದಿಗೆ ಕೂಡಿಕೆ ಮಾಡಿಕೊಳ್ಳಬಹುದೆಂದು ಅವಕಾಶ ಕಲ್ಪಿಸಿದರು. ಅಂತಹ ಕೂಡಿಕೆಯ ಫಲವಾಗಿ ಆದ ಮಕ್ಕಳಿಗೆ ತಂದೆಯು ಆಸ್ತಿಯಲ್ಲಿ

ಯಾವುದೇ ಕಾರಣದಿಂದ ಸಕ್ಕು ಇಲ್ಲವೆಂದು ಸ್ಥಿರವಾಯಿತು. ಈ 'ಮರುಮಕತಾಯಂ' (ಅಳಿಯಸಂತಾನ) ಎಂಬ ಪದ್ಧತಿಯು ಮಲಯಾಳದ ನಾಯರು ಸ್ತ್ರೀಯರಿಗೆ ಒಂದು ಸ್ಥಾನವನ್ನೂ ಬಲವನ್ನೂ ಕೊಟ್ಟಿತು. ಭರತಖಂಡದ ಮತ್ತಾವ ಕಡೆಯೂ ಸ್ತ್ರೀಯರಿಗೆ ಈ ಸ್ಥಾನ ಬಲವಿಲ್ಲ. ತಮ್ಮ ಮಕ್ಕಳ ಮರಿಗಳ ಭವಿಷ್ಯವು ಕಟ್ಟಿಕ್ಕೊಂಡ ಗಂಡನ ಆಸ್ತಿಪಾಸ್ತಿಗಳ ಮೇಲೆ ಅವಲಂಬಿಸದೆ, ತಮ್ಮ ತಂದೆತಾಯಿಗಳ ಪಿತ್ರಾರ್ಜಿತದ ಮೇಲೆ ಅವಲಂಬಿಸಿತು. ಈ ಕಾರಣದಿಂದ ನಾಯರು ಸ್ತ್ರೀಯರು ಸ್ವಂತವಾಗಿ ತಮಗೆ ಇಷ್ಟಬಂದವನನ್ನು ಪತಿಯನ್ನಾಗಿ ಆರಿಸಿ, ಸ್ವೀಕರಿಸಲು ಸಾಧ್ಯವಾಯಿತು. ನಂಬೂದರಿಗಳ ಮತ್ತು ನಾಯರರ ಆಸ್ತಿಪಾಸ್ತಿಗಳು ಹಂಚಿ ಹೋಗದೆ, (ಅವರನುಸರಿಸಿದ ವ್ಯವಸ್ಥೆಯಿಂದ) ಸುರಕ್ಷಿತವಾದವು.

ಸಾಹಿತ್ಯಸೃಷ್ಟಿಗೆ ಅನುಕೂಲ ಪರಿಸ್ಥಿತಿ

ಅಂದರೆ ಮಲೆಯಾಳ ಸಮಾಜವ್ಯವಸ್ಥೆಯಲ್ಲಿ ರಾಜರ ಅಧೀನಕ್ಕೊಳಗಾದ ಶ್ರೀಮಂತರನೇಕರುಂಟಾದರು. ಅವರಿಗಿಂತ ಅಧಿಕಸಂಖ್ಯಾಬಲವುಳ್ಳ ಮಧ್ಯವರ್ತಿ (ನಾಯರ್) ಪಂಗಡವೊಂದೇರ್ಪಟ್ಟಿತು. ಅವರ ಕೈ ಕೆಳಗೆ ಜನಸಾಮಾನ್ಯವಿತ್ತು. ಸ್ತ್ರೀಯರಾದರೋ ವಿಶೇಷ ಸ್ವಾತಂತ್ರ್ಯವನ್ನು ಅನುಭವಿಸುತ್ತ ಬಂದರು. ಗಂಡನ ಮನೆಗೆ ಹೋಗಿ, ಅವನ ಆಸ್ತಿಪಾಸ್ತಿಗಳ ಮೇಲೆಯೇ ಜೀವನವನ್ನೆಲ್ಲ ಅವಲಂಬನ ಮಾಡಿ, ಯಾವ ಕ್ಷಣದಲ್ಲಿ ಏನು ವಿಪತ್ತೋ ಎಂದು ಕಾತರಿಸುವ ಭರತಖಂಡದ ಇತರ ಭಾಗಗಳ ಸ್ತ್ರೀಯರಂತಲ್ಲದೆ ತಮ್ಮ ಪಿತ್ರಾರ್ಜಿತಕ್ಕೆ ತಾವೂ ತಮ್ಮ ಮಕ್ಕಳೂ ಹಕ್ಕುದಾರರಾಗಿ ನಿರುಪಾಧಿಕವಾಗಿ ಜೀವನವನ್ನು ನಡೆಸುತ್ತ ಬಂದರು. ಸಾಕಾದಷ್ಟು ವಿರಾಮ ಸುಖವನ್ನು ಅನುಭವಿಸುವ ಸಮಾಜವೆಲ್ಲುಂಟೋ ಅಲ್ಲೇ ಸಾಹಿತ್ಯಾಭಿವೃದ್ಧಿಯಾಗುವದೆಂಬ ಅಂಶವನ್ನು ಅನೇಕರು ಸಾಕಾದಷ್ಟು ತಿಳಿದಿಲ್ಲ. ಕವಿಗಳೂ, ಪ್ರಖ್ಯಾತ ಲೇಖಕರೂ ಸಾಮಾನ್ಯವಾಗಿ ಸಮಾಜದ ಕನಿಷ್ಟವರ್ಗದಲ್ಲೇ ಹುಟ್ಟುವುದು ನಿಜ. ಆದರೆ ಅವರ ಪ್ರತಿಭೆಯು ವಿಕಾಸವಾಗಬೇಕಾದರೆ ಸಮಾಜದಲ್ಲೊಂದು ಸ್ಥಾನಗೌರವ ಪಡೆದಿರುವವರಿಂದ ಉಚಿತ ಪ್ರೋತ್ಸಾಹವು ಅವಶ್ಯಕ. ಅವರು ಉದಾರಾಶ್ರಯವನ್ನಿತ್ತರಂದರೆ ಲೇಖಕನ ಮರ್ಯಾದೆಯೂ ಹೆಚ್ಚುವುದು. ಅವರ ಐಹಿಕ ಜೀವನದ ಅನುಕೂಲಗಳೂ ಹೆಚ್ಚುವವು. ಸಮಾಜ ವ್ಯವಸ್ಥೆಯು ಶ್ರೇಣೀಬದ್ಧವಾಗಿರಬೇಕು; ಭಾಗ್ಯವೂ ಬಡತನವೂ, ಸುಖಲೋಲುಪತೆಯೂ ದುಃಖಯಾತನೆಯೂ ಅಕ್ಕಪಕ್ಕದಲ್ಲಿ ಕಾಣಬಂದಲ್ಲಿ, ಶ್ರೇಷ್ಠಕನಿಷ್ಠ ಭಾವನೆಯು ಬಲವಾಗಿ, ಉಗ್ರಸ್ವರೂಪದಲ್ಲಿ ಬಯಲಾಗಲು ಜನರಿಗೆ ಸಮಾಜದ ಅನ್ಯಾಯ ವ್ಯವಸ್ಥೆಯ ಜ್ಞಾನವು ಜನ್ಯವಾಗಿ ಮುಂದಟ್ಟಾಗುತ್ತದೆ. ಸಮಾಜದಲ್ಲಿ ತಾವು ಬಹುಕೀಳೆಂಬ ಪರಿಜ್ಞಾನವುಂಟಾಗುತ್ತಲೆ ಉನ್ನತಿಯ ಬಯಕೆಯು, ಅದನ್ನು ಸಾಧಿಸುವ ಸಾಹಸೇಚ್ಛೆಯು ಅವರ್ಣನೀಯವಾಗಿ ತೋರಿಬರುತ್ತದೆ. ಮಲಯಾಳದ ಸಮಾಜರಚನೆ; ಭೋಗಭಾಗ್ಯಗಳಿಂದ ಬೀಗುತ್ತಿರುವ ಜೀವನವೊಂದು ಕಡೆ, ಬಡತನ ಮತ್ತು ಅಧಃಪತನದ ನರಕಯಾತನೆಯ ಜೀವನವೊಂದು ಕಡೆ; ಈ ಪರಿಸ್ಥಿತಿ ಕ್ಷೇತ್ರವು ಪ್ರತಿಭಾವಂತರಾದ ಲೇಖಕರ ಸಾಹಿತ್ಯಸೃಷ್ಟಿಗೆ ಬಹಳ ಹುಲುಸಾಗಿದೆ. ಜೀವನ ಸುಖವಸತಿಗಳಿಗೆಲ್ಲ ಒಡೆಯರಾಗಿ ಶ್ರೀಮಂತ ಪಂಗಡದವರು ಲೋಲರಾಗಿದ್ದರು. ಈ ವಿರಾಮ ವೈಭವಜೀವಿಗಳ ಮನಸ್ಸಿನ ಉಲ್ಲಾಸಕ್ಕಾಗಿ ಏನಾದರೂ ಕೆಲಸಬೇಕಷ್ಟೆ. ಸಹಜವಾಗಿ ಇವರು ಸಾಹಿತ್ಯವ್ಯವಸಾಯವನ್ನು ಪ್ರೋತ್ಸಾಹಿಸುತ್ತ ಬಂದರು; ಪೋಷಿಸುತ್ತ ಬಂದರು. ಅತ್ತಲಾಗಿ ಬಡತನದಲ್ಲಿ ಬೆಂದು, ಸಮಾಜದಲ್ಲಿ ಕೀಳು ಕ್ರಿಮಿಗಳೆಂದು ನೊಂದು, ಜಾಣರ ಬುದ್ಧಿಯು ಬಹಳ ಚುರುಕಾಯಿತು, ಹರಿತವೆಳೆದ್ದಾಯಿತು. ಇವರು ಸಮಾಜದ ಶ್ರೇಷ್ಠವರ್ಗದವರ ಪ್ರೀತಿಗೌರವಗಳನ್ನು ಸಂಪಾದಿಸಿದರು.

ಕವಿತೆ

ವಿರಾಮಜೀವಿಗಳು ಕೂಡ ಗೊಡ್ಡುಗಳಾಗಿ ಕೂತಿರಲಿಲ್ಲ. ಮಲಯಾಳದಲ್ಲಿ ಸಂಸ್ಕೃತ ಮಹಾಕಾವ್ಯಗಳ, ನಾಟಕಗಳ ಭಾಷಾಂತರಗಳಿವೆ. ಇವುಗಳಿಗೆಲ್ಲ ಈ ವಿರಾಮಜೀವಿಗಳೇ ಕಾರಣ. ಮಲಯಾಳದ ಸಣ್ಣಪುಟ್ಟ ಸಂಸ್ಥಾನಿಕರನೇಕರೂ ಸಹ ಉಚಿತವಾದ ಸಾಹಿತ್ಯಸೇವೆ ಮಾಡಿದ್ದಾರೆ. ಮೂಕನಾಟಕಗಳು ಮಲಯಾಳ ದೇಶದ ವಿಶೇಷ ಲಕ್ಷಣ; ಇವರೇ ಈ ನಾಟಕಗಳ ಸೃಷ್ಟಿಕರ್ತರು. ಆದರೆ ಮಲಯಾಳ ಸಾಹಿತ್ಯದ ತಿರುಳು ನಿಜವಾಗಿ ಕನಿಷ್ಟ ಕುಲಪುತ್ರರಿಂದಲೇ ಸೃಷ್ಟವಾಯಿತೆಂದು ಹೇಳಬೇಕು. ಮಲಯಾಳ ಕವಿ ಸಾರ್ವಭೌಮನೆನಿಸಿದವನು ನಂಬೂದರಿಬ್ರಾಹ್ಮಣ

ಮತ್ತು ಬಡಗಿಯ ಕುಲಸ್ತ್ರೀ ಇವರಿಬ್ಬರ ಕೂಡಿಕೆಯ ಸಂತಾನ. ಇವನೇ ಮಲಯಾಳಕ್ಕೊಂದು ಲಿಪಿಯನ್ನು ಕೊಟ್ಟವನು. ರಾಮಾಯಣ, ಮಹಾಭಾರತ, ಭಾಗವತಗಳೇ ಅವನ ಮಹಾ ಕಾವ್ಯಗಳು. ಸಂಸ್ಕೃತ ಮೂಲವೇ ಇವನ ಸ್ಫೂರ್ತಿವಸ್ತುವೆಂಬುದು ನಿಜ. ಆದರೂ ಈ ಕಾವ್ಯಗಳ ಪ್ರತ್ಯಂಗದಲ್ಲೂ ಕವಿಯ ಸ್ವತಂತ್ರ ರಚನಾಕೌಶಲವೂ ಪ್ರತಿಭೆಯೂ ಕಾಣಬರುತ್ತದೆ. ಮೂಲದಿಂದ ಕತೆಗಳ ರೂಪುರೇಖೆಗಳನ್ನು ಮಾತ್ರ ತೆಗೆದುಕೊಂಡಿದ್ದಾನೆ. ವರ್ಣನಾ ವೈಚಿತ್ರ್ಯ, ಕಥಾಸರಣಿಯಲ್ಲಿ ಜಾಣತನದಿಂದ ಹೆಣೆದಿರುವ ವೇದಾಂತ ವಿದ್ಯುನ್ಮಾಲಾರುಚಿ ಇವೆಲ್ಲ ಅವನವೇ. ಇವಲ್ಲದೆ ನೂರಾರು ಸಣ್ಣಸಣ್ಣ ಕವಸಗಳನ್ನು ಬರೆದಿದ್ದಾನೆ. ಬಾಲಕಬಾಲಕಿಯರು ಹಾಡುವುದಕ್ಕೆ ಅನುಕೂಲವಾಗಿ ರಚಿಸಲ್ಪಟ್ಟ ಗೀತೆಗಳಿವು. ಈ ಕವಿಯು ಸರಿಸುಮಾರು ೧,೦೦,೦೦೦ ಪಾದಗಳನ್ನು ರಚಿಸಿದ್ದಾನೆ.

ಇವನ ತರುವಾಯ ಉಲ್ಲೇಖನಯೋಗ್ಯ ಕವಿಯೆಂದರೆ ಕುಂಜನ್ ನಂಬಿಯಾರ್ ಎಂಬೊಬ್ಬ ಬಡನಾಯರು. ಇವನು ಕ್ಷಾತ್ರಯುಗದ ವೀರಶಿಖಾಮಣಿಗಳ ಸಾಹಸಗಳನ್ನೆಲ್ಲ ಲಾವಣಿಗಳಲ್ಲಿ ಚಿತ್ರಿಸಿದ್ದಾನೆ. ಈ ಲಾವಣಿಗಳು ಆ ಕಾಲದ ಚಿತ್ರವನ್ನು ಕಣ್ಣಿಗೆದುರಿಗೆ ಕಟ್ಟಿದಂತೆ ತೋರಿಸುತ್ತವೆ. ವಿಚಿತ್ರವಾಗಿ ವೇಷಹಾಕಿಕೊಂಡು, ನಾಟ್ಯಕ್ಕೂ, ಶಟದ ನಡಿಗೆಗೂ ಮಧ್ಯಸ್ಥವಾದೊಂದು ಬಗೆಯ ಅಭಿನಯದೊಂದಿಗೆ ಒಬ್ಬನು ಈ ಲಾವಣಿಗಳನ್ನು ನೂರಾರು ಮಂದಿಗೆ ಹಾಡುತ್ತಾನೆ. ಈ ಸಂದರ್ಭಗಳಲ್ಲಿ ಸ್ಥಳೀಯ ಸಾಮಾಜಿಕ ಕೊರತೆಗಳನ್ನೂ, ದೋಷಗಳನ್ನೂ ಉದ್ಘಾಟನಮಾಡದೆ ಇರುವುದಿಲ್ಲ. ಇಂತಹ ಲಾವಣಿಗಳು ಸುಮಾರು ೬೦ ಇವೆ; ಸುಮಾರು ೬೦,೦೦೦ ಪಾದಗಳಾಗುತ್ತವೆ. ಇವಲ್ಲದೆ 'ರುಕ್ಮಿಣೀ ಸ್ವಯಂವರಂ', 'ಭಗವದ್ಭೂತಂ', 'ಭಾಗವತಂ', 'ನಲಚರಿತಂ', 'ಶೀಲವತಿ', 'ಚಾಣಕ್ಯಸೂತ್ರಂ' ಎಂಬ ಪ್ರತ್ಯೇಕ ಜಾತಿಯ ಲಾವಣಿಗಳಿವೆ.

ಕುಂಜನ್ ನಂಬಿಯಾರ್ ಕವಿತೆಯ ವಿಶೇಷ ಲಕ್ಷಣವೆಂದರೆ ಅದು ಸಂಸ್ಕೃತದಿಂದ ಸ್ವತಂತ್ರವಾಗಿದೆ. ಮಲಯಾಳದಲ್ಲಿ ೧೦,೦೦೦ ಶಬ್ದಗಳಿಗಿಂತ ಹೆಚ್ಚಾಗಿಲ್ಲ. ಆದಕಾರಣ ಮಲಯಾಳವು ಶಬ್ದಸಂಪತ್ತಿಗಾಗಿ ಸಂಸ್ಕೃತವನ್ನು ಆಶ್ರಯಿಸಲೇಬೇಕಾಯಿತು. ಸಂಸ್ಕೃತ ಭಾಷಾಜ್ಞಾನದ ಹೆಮ್ಮೆಯಿಂದಲೂ, ಆ ಭಾಷಾಪ್ರಚಾರವು ಬಹಳಮಟ್ಟಿಗೆ ಜನತೆಯಲ್ಲಿ ಆಗಿದ್ದ ಕಾರಣದಿಂದಲೂ ಲೇಖಕರು ಅವಶ್ಯಕತೆ ಕಂಡು ಬಂದಪ್ಪಕ್ಕಿಂತ ಹೆಚ್ಚಾಗಿಯೇ ಸಂಸ್ಕೃತ ಶಬ್ದಗಳನ್ನು ಉಪಯೋಗಿಸುತ್ತಬಂದರು. ಮಲಯಾಳವು ಸಂಸ್ಕೃತದಿಂದ ಸ್ವತಂತ್ರವಾಗಿ, ತನ್ನ ವ್ಯಕ್ತಿತ್ವವನ್ನು ಸ್ಥಾಪಿಸಲು ಪ್ರಯತ್ನಮಾಡಿತು. ಈ ಪ್ರಯತ್ನದಲ್ಲಿ ಕುಂಜನ್ ನಂಬಿಯಾರನ ಸಾಹಸವು ಅಷ್ಟಿಷ್ಟಲ್ಲ.

ಅನಂತರ 'ಕೃಷ್ಣಲೀಲಾ' ಎಂಬ ೧೦,೦೦೦ ಪಾದಗಳುಳ್ಳ ಜೋಗುಳವನ್ನು ಹಾಡಿದ ನಂಬೂದರಿ ಬ್ರಾಹ್ಮಣನೇ ಗಣನಾರ್ಹನಾದ ಕವಿ. ಒಬ್ಬ ರಾಜನ ಆರಮನೆಯಲ್ಲಿ ಕವಿಯೊಂದಿಗೆ ಜಡುರಂಗವಾಟಕ್ಕಾಕ್ಕರಂಭಿಸಿದ. ರಾಜನು ಸೋಲುವಂತಾಯಿತು. ರಾಣಿಯು ತನ್ನ ಕೂಸನ್ನು ತೊಟ್ಟಿಲಲ್ಲಿಟ್ಟು ತೂಗುತ್ತ ಜೋಗುಳ ಹಾಡುತ್ತಿದ್ದಳು. ರಾಜನು ಸೋಲುವ ಸಮಯದಲ್ಲಿ ಬಹು ಯುಕ್ತಿಯಿಂದ ಜೋಗುಳದ ಚರಣಗಳೊಂದಿಗೊಂದು ಸೂಚನೆ ಕೊಟ್ಟು ರಾಜನ ಪ್ರಾಣವುಳಿಸಿದಳು. ಈ ಸನ್ನಿವೇಶವೇ ಕವಿಯಕಾವ್ಯಕ್ಕೆ ಕಾರಣವಾಯಿತು. ಈ ಕಾವ್ಯದ ಉಪಮೆಗಳು ಪರ್ಣನಾತೀತವಾದವು. ಕೆಲವಂತೂ ಶುದ್ಧ ಸ್ವತಂತ್ರವಾದುವು. ಸರಳಶೈಲಿ. ಮಲಯಾಳ ಸ್ತ್ರೀಯರಿಗಂತೂ ಈ ಕಾವ್ಯದಲ್ಲಿ ಬಹಳ ಪ್ರೇಮ.

ಮಲಯಾಳ ಧಾರ್ಮಿಕ ಕವಿತೆಯು ಅಳವಾದ ಭಾವನೆಯುಳ್ಳದ್ದೂ, ಭಕ್ತಿರಸಾವೇಶವುಳ್ಳದ್ದೂ ಆಗಿದೆ. ವಾರಿಯರ್ ಕುಲದವನೊಬ್ಬನಿಂದ ರಚಿತವಾದ 'ನಾರಾಯಣೀಯಂ' ಎಂಬ ಗ್ರಂಥಕ್ಕೆ ಮೊದಲನೆಯ ಸ್ಥಾನವನ್ನು ಕೊಡಬೇಕು. ಆದರೆ ಇದು ಸಂಸ್ಕೃತಪುಂಜ.

ಇನ್ನು ಮಲಯಾಳದ ಕವಿತಾವಾಙ್ಮಯದಲ್ಲಿ ಉಳಿದುದೆಲ್ಲ ಸಾಮಾನ್ಯವಾಗಿ 'ಕಥಕಳಿ'ಗಳು, ರೂಪಕಗಳು ಮತ್ತು ಲಾವಣಿಗಳು. ನಾಟಕಗಳಿಗೆಲ್ಲ ಸಂಸ್ಕೃತ ಮಹಾಕಾವ್ಯಗಳೇ ಸ್ಫೂರ್ತಿವಸ್ತುಗಳು. ಕೆಲಸ ಮಾಡುವಾಗಲೆಲ್ಲ ಜನರು ಹಾಡುಗಳನ್ನು ಹಾಡುತ್ತಾರಷ್ಟೆ. ಅವುಗಳಲ್ಲೆಲ್ಲ ಸಾಧಾರಣವಾಗಿ ಸಣ್ಣಪಣ್ಣ ಸಂಸ್ಥಾನಿಕರ, ವೀರರ ಶೌರ್ಯಸಾಹಸಗಳ ವರ್ಣನೆಯೇ ತುಂಬಿರುತ್ತದೆ. ಕೆಲವು ವರ್ಣನಾವೈಭವದಿಂದಲೂ, ಶೈಲಿಯ ಸರಳತೆಯಲ್ಲಿಯೂ

ಉತ್ಕೃಷ್ಟ ಕಾವ್ಯಗಳ ಸ್ಥಾನಮರ್ಯಾದೆ ಹೊಂದಿವೆ. ಈ ಹಾಡುಗಬ ಗಳೊಂದರಲ್ಲಿ ಒಬ್ಬ ಹೆಂಗಸನ್ನು ಮುಸಲ್ಮಾನ ಸಾಳಯುಗಾರನೊಬ್ಬನು ತನ್ನ ಜನಾನಾಕ್ಕೆ ಸೆಳೆಯಲು ಪ್ರಯತ್ನಸಡುತ್ತಾನೆ. ಆಗ ಆ ಹೆಂಗಸು ಮುಸಲ್ಮಾನ ಸೈನ್ಯವನ್ನೇ ಹೇಗೆ ಧ್ವಂಸ ಮಾಡಿದಳೆಂಬ ಕೀರ್ತಿ ಎಸಾತ್ರ ವರ್ಣನೆಯಿದೆ.

ಗದ್ಯ ವಾಙ್ಮಯ

ಗದ್ಯಗ್ರಂಥಗಳೇ ಇಲ್ಲ. ಇಂಗ್ಲೀಷು ವಿದ್ಯಾಭ್ಯಾಸಮಾಡಿದ ಗುಂಪಿನವರು ತಮ್ಮ ಯೋಗ್ಯತೆ ಸುತ್ತು ಜಬಾಬ್ದಾರಿಗೆ ಉಚಿತವಾಗಿ ಸಾಹಿತ್ಯಸೇವೆ ಲಕ್ಷ್ಯ ಮಾಡಲಿಲ್ಲ. ಅವರಿಗೆ ಸೇವೆಯ ಸಂಸಾರ, ಕಚೇರಿಯ ತಾಪತ್ರಯ ಇಷ್ಟರಲ್ಲೇ ಅವರ ಜೀವನ ವೆಲ್ಲ ಮುಕ್ತಾಯವಾಯಿತು. ಇದರಮೇಲೆ ಅವರಿಗೆ ದೇಶಭಾಷೆಗಳಲ್ಲಿ ಅಭಿಮಾನದ ಮಾತಿರಲಿ ಅಭಿರುಚಿಯೇ ಕಡಿಮೆಯಾಯಿತು. ಇನ್ನು ಅದರ ವ್ಯವಸಾಯವೆಲ್ಲಿಂದ ಬಂತು. 'ಇಂದುಲೇಖಾ' ಎಂಬುದೇ ಮಲಯಾಳ ಭಾಷೆಯಲ್ಲಿ ಸರ್ವಜನ ಸಮ್ಮತವಾದ ಕಾದಂಬರಿ. ಇದನ್ನು ಬರೆದವರೊಬ್ಬ ಸರಕಾರಿ ಅಧಿಕಾರಿಗಳು. ಇದರಲ್ಲಿ ಮಲಯಾಳದೇಶದ ನಾಯರ್ ನಂಬೂದರಿ ಸಂಬಂಧದ ಸಮಾಜ ಚಿತ್ರವಿದೆ. ಈ ಕಾದಂಬರಿಯು ನಾಯರ ಸಮಾಜಹೃದಯ ತಂತ್ರಿಗಳನ್ನು ಏಟಿತು. ನಂಬುದರಿ ಬ್ರಾಹ್ಮಣ ಕುಲಾಚಾರದ ನಿಗಡಬಂಧನದಿಂದ ಮುಕ್ತರಾಗಲೆಳಸಿದ ನಾಯರ ಕುಲದ ಸ್ವಾತಂತ್ರ್ಯಸಾಧನೆಗೀಕಾದಂಬರಿಯು ಬಹಳ ಸಹಾಯಕವಾಯಿತು. ಇನ್ನೂ ಅನೇಕ ಕಾದಂಬರಿಗಳು ಹುಟ್ಟಿದವು. ಆದರೆ ಮಲಯಾಳ ಜನಾಂಗ ಜೀವನಕ್ಕೂ ಅವುಗಳಿಗೂ ಬಹಳ ದೂರವಾದ್ದರಿಂದ 'ಇಂದುಲೇಖೆ'ಯ ಸರ್ವವ್ಯಾಪಕತೆಯು ಅವುಗಳಲ್ಲಿಲ್ಲ. ಕಾದಂಬರಿಯ ಉದ್ದಿಶ್ಯವೇನೆಂಬುದಿನ್ನೂ ಸ್ಪಷ್ಟವಾಗಿಲ್ಲ. ಪ್ರಾಚೀನ ಸಂಪ್ರದಾಯದ ಹಿಡಿಯಲ್ಲೇ ಸಮಾಜವಿನ್ನೂ ಸಿಕ್ಕಿರುವಾಗ ಕಾದಂಬರಿಗಳನ್ನು ಬರೆಯುವುದು ಸುಲಭವಲ್ಲ- ಸಮಾಜದಲ್ಲಿ ಕೀಳುಮೇಲುಗಳೂ, ಸ್ವತಂತ್ರಪರತಂತ್ರಘರ್ಷಣಗಳೂ ಪ್ರಬಲವಾಗಿದ್ದಾಗಲೇ ಕಾದಂಬರಿಗಳ ಪರಿಣಾಮವು ಜನತೆಯ ಮೇಲೆ ಪೂರ್ಣ ಫಲಕಾರಿಯಾಗಬೇಕಾದರೆ. ಮಲಯಾಳದಲ್ಲಿ ಆ ಪರಿಸ್ಥಿತಿಯಿನ್ನೂ ಉಂಟಾಗಿಲ್ಲ. ಕಾದಂಬರಿಗಳಲ್ಲಿ ಸಾಮಾನ್ಯವಾಗಿ ರಸವೆಂದರೆ ಶೃಂಗಾರ. ಅದೂ ಭಾರತೀಯ ಹೃದಯಕ್ಕೆ ಹಿತವೆನಿಸುವ ರೀತಿಯಲ್ಲಿ ಈ ಶೃಂಗಾರರಸ ಪೋಷಣವಾಗಿಲ್ಲ; ಐರೋಪ್ಯ ರೀತಿರಂಗಕ್ಕನುಗುಣವಾಗಿ ಆಗಿದೆ. ಆಗಿರುವ ಭಾಷಾಂತರಗಳೆಲ್ಲ ಸಾಮಾನ್ಯವಾಗಿ ಕೀಳುತರದ ಆಂಗ್ಲ ಕಾದಂಬರಿಗಳಿಂದ. ಅದನ್ನು ಅಧ್ವಾನ್ನ ಮಲಯಾಳದಲ್ಲಿ ಬರೆದಿದ್ದಾರೆ. ಇತ್ತೀಚಿಗೆ ಈ ಜಾತಿಯ ಕಾದಂಬರಿಗಳು ಕಡಿಮೆಯಾಗಿವೆ. ಹಲಕೆಲವು ರಾಜಕೀಯ ವಿಚಾರ ಕಾದಂಬರಿಗಳೂ ತಲೆಹಾಕಿವೆ.

ಕಾದಂಬರಿಗಳ ಮಾತು ಹಾಗಿರಲಿ. ಶ್ರೇಷ್ಠ ಆಂಗ್ಲ ಲೇಖಕರ ಉತ್ತಮ ಕಾವ್ಯಗಳ ಭಾಷಾಂತರಗಳಾಗಿವೆ. ಅವುಗಳಲ್ಲಿ ಗತಿಸಿದ ಶ್ರೀ ಟಿ. ಕಣ್ಣಾರನ್ ರ ರಾಸೆಲಾಸ್, ಲೇಡಿ ಆಫ್ ದಿ ಲೇಕ್, ಮುಂತಾದ ಹಲವು ಗ್ರಂಥಗಳಿಗೆ ಮೊದಲನೆಯ ಸ್ಥಾನವನ್ನು ಕೊಡಬೇಕು. ಈತನು ಥೀಯ್ಯಕುಲದವನು. ಬಿ. ಎ. ಮಾಡಿದ್ದನು. ಈತನಲ್ಲಿ ಬಹಳ ಯೋಗ್ಯತೆಯಿತ್ತು. ಈತನು ಬರೆದ 'ಭಾಷಾಂತರ ಬೋಧಿನಿ' ಯಲ್ಲಿ ಈತನಿಗೆ ಮಲಯಾಳ ಮತ್ತು ಇಂಗ್ಲಿಷ್ ಭಾಷೆಗಳ ವ್ಯಾಕರಣ, ಅಲಂಕಾರ ಶಾಸ್ತ್ರಗಳಲ್ಲಿದ್ದ ಪರಿಶ್ರಮವು ಚನ್ನಾಗಿ ಕಾಣುಬರುತ್ತದೆ. ರವೀಂದ್ರನಾಥ ಠಾಕೂರರ ಕಾವ್ಯಗಳೂ ಭಾಷಾಂತರಗಳಾಗಿವೆ. ಸ್ತ್ರೀಪುರುಷರು ಅನೇಕರು ನಾನಾಭಾಷಾಂತರಗಳಿಗೆ ಕೈಹಾಕಿದ್ದಾರೆ.

ಲೇಖಕರನೇಕರು ಮಲಯಾಳ ಗದ್ಯಕ್ಕೆ ಸಾಕಷ್ಟು ಸೇವೆಮಾಡಿದ್ದಾರೆ. ಆದರೆ ಪೂರ್ವ ಸಂಪ್ರದಾಯಗಳಿಗೆ ಕೈಮುಗಿದು, ಹೊಸ ಹಾದಿಯನ್ನು ಧೈರ್ಯವಾಗಿ ಹಿಡಿದು, ಗದ್ಯಶೈಲಿಯಲ್ಲಿ ನಾನಾ ಪ್ರಯೋಗಗಳನ್ನು ಮಾಡಿ, ಗದ್ಯಶೈಲಿಗೊಂದು ರೂಪವನ್ನು ಕೊಟ್ಟ ಕೀರ್ತಿಯಲ್ಲಿ ಪ್ರಧಾನಾಂಶವು ವೃತ್ತಪತ್ರಿಕೆಗಳಿಗೆ ಹೋಗಬೇಕು. ಇಂದು 'ಸರ್ವಜನಾದರಣೀಯವಾದ ಮಲಯಾಳ ಗದ್ಯಶೈಲಿ ಇದು ಎಂದು ಯಾವುದಕ್ಕೆ ಹೇಳಬಹುದೋ ಅದರ ಸೃಷ್ಟಿಗೆ ವೃತ್ತಪತ್ರಿಕೆಗಳು ಬಹಳ ಸಾಹಸಪಟ್ಟಿವೆ; ಶಬ್ದಸಂಪತ್ತಿಯನ್ನು ಬೆಳೆಸಿವೆ; ಸಾಹಿತ್ಯದಲ್ಲಿ ವಿಮರ್ಶೆಗೊಂದು ಗೌರವಸ್ಥಾನವನ್ನು ಕಲ್ಪಿಸಿಕೊಟ್ಟಿವೆ ಮಲಯಾಳದಲ್ಲಿ ದಿನಪತ್ರಿಕೆಗಳು, ವಾರಪತ್ರಿಕೆಗಳು ಮಾಸಪತ್ರಿಕೆಗಳು, ಸಚಿತ್ರಪತ್ರಿಕೆಗಳು ಸ್ತ್ರೀಯರಿಗಾಗಿಯೇ, ಹಾಸ್ಯರಸಪೋಷಣೆಗಾಗಿಯೇ, ಹುಟ್ಟಿ ಪತ್ರಿಕೆಗಳು ಬೇಕಾದಷ್ಟಿವೆ. ಇಷ್ಟು ಜಾಗ್ರತಿ

ಮಲಯಾಳದೇಶದಲ್ಲಿರುವ ಶಿಕ್ಷಣ ವ್ಯಾಪ್ತಿಯೇ ಕಾರಣ. ಭರತಖಂಡದಲ್ಲೆಲ್ಲ ಸರಾಸರಿ ೧೦೦ಕ್ಕೆ ೭|| ಮಂದಿಗೆ 'ಓನಾಮ' ಬಂದರೆ ಮಲಯಾಳದಲ್ಲಿ ೧೦೦ಕ್ಕೆ ೩೩ ಮಂದಿಗೆ ಓದುಬರಹ ಬರುತ್ತದೆ.

ಛಂದೋರೂಪ ಪ್ರಯೋಗಗಳು

ಗದ್ಯಶೈಲಿಯಲ್ಲಿ ಧಾರಾಳವಾಗಿ ಪ್ರಯೋಗಮಾಡಲು ವೃತ್ತಪತ್ರಿಕೆಗಳು ಬಹಳ ಸಹಾಯಮಾಡಿವೆ. ಆದರೆ ಕವಿತೆಯಲ್ಲಿ ಮಾತ್ರ ಸಂಪ್ರದಾಯ ಬಂಧನಗಳು ಬಹಳ ಸಾವಕಾಶವಾಗಿ ಸಡಿಲವಾಗುತ್ತಿವೆ. ಸಡಿಲವಾಗುವ ಸೂಚನೆಗಳು ಕೂಡ ಬಂದದ್ದು ಹತ್ತಿಪ್ಪತ್ತು ವರ್ಷಗಳಿಂದ ಮಾತ್ರ. 'ದ್ವಿತೀಯಾಕ್ಷರಪ್ರಾಸ', 'ಮಣಿಪ್ರವಾಳ' ಗಳ ಸೃಷ್ಟಿಯಲ್ಲೇ ಶಕ್ತಿಸಾಧನೆಗಳೆಷ್ಟೋ ನಷ್ಟವಾಗಿದೆಯಾದರೂ ಹೊಸ ಛಂದಸ್ಸಿಂದಾದರೂ ಹುಟ್ಟಲಿಲ್ಲ. ಛಂದೋರಚನೆಯಲ್ಲಿ ಬದಲಾವಣೆಗಳಾಗಬೇಕಾದರೆ ಜನರ ಚಿತ್ತವೃತ್ತಿಗಳೇ ಮೂರ್ಪಡಬೇಕು; ಯೋಚನಾರಚನೆಯಲ್ಲೇ ಪರಿವರ್ತನಗಳಾಗಬೇಕು. ಅಂತಹ ಪರಿವರ್ತನವಿನ್ನೂ ಆಗಿಲ್ಲವೆಂದು ಕಾಣುತ್ತದೆ. ಎಲ್ಲ ಕಲೆಗಳಂತೆಯೇ ಕವಿತೆಯೂ ಸಹ ಜನತೆಯ ಬುದ್ಧಿಯನ್ನು ಮತ್ತು ಹೃದಯವನ್ನು ಆಕರ್ಷಿಸಬೇಕಾದರೆ ಸಂಗೀತದಿಂದ. ಅದೇ ಪ್ರಧಾನವಾದ ಪ್ರಕೃತಿ. ಗಾನಶೂನ್ಯವಾದುದು ಹೃದಯಕ್ಕೆ ಬೇಕೆನಿಸುವುದಿಲ್ಲ; ಎಲ್ಲರಿಗೂ ಅದರಲ್ಲಿ ಉಪೇಕ್ಷೆಯುಂಟಾಗುತ್ತದೆ. ಪ್ರತಿಭಾಶೂನ್ಯನಾದ ಲೇಖಕನು ಸಂಪ್ರದಾಯ ಶರಣ್ಯನಾಗುವುದೇ ಉತ್ತಮ. ಯೋಚನಾರಚನೆಯಲ್ಲಿ ರಸಪ್ರಧಾನವಾದ ಜಾತಿಯೊಂದು; ಜ್ಞಾನ ಅಥವಾ ಬುದ್ಧಿಪ್ರಧಾನವಾದ ಜಾತಿಯೊಂದು. ಜ್ಞಾನ ಅಥವಾ ಬುದ್ಧಿಯ ಹಿಡಿತದಿಂದ ಅಲ್ಪಕಾಲ ಮುಕ್ತಿಹೊಂದಿ, ರಸಾವೇಶ ಪಡೆದಂತಹ ಜಾತಿಯೊಂದುಂಟಲ್ಲ, ಅದು ರಸವನ್ನು ಮೆಟ್ಟಿ ಹದ್ದಿನಲ್ಲಿರಿಸಿರುವಕಾರಣ ಶುದ್ಧವಾದ ರಸಪ್ರಧಾನದ ಜಾತಿಗ ಎಂದಿಗೂ ಸಮನಾಗಲಾರದು. ಇತ್ತೀಚೆಗೆ ಆಂಗ್ಲ ಕವಿತೆಯ ಪ್ರಭಾವವು ಬಲವಾಗಿದೆ. ಆಂಗ್ಲ ಕವಿತೆಯ ಹಲವು ಛಂದೋರೂಪಗಳ ಅನುಕರಣವು ಬಹಳ ರಭಸದಿಂದ ನಡೆಯುತ್ತಿದೆ. ಆದರೆ ಜ್ಞಾನಮಯ ಸಂಗೀತವೂ ಮತ್ತು ರಸಹೃದಯ ಸಂಗೀತವು– ಅಲ್ಲ– ಆತ್ಮದ ಗಾನವೂ ಒಂದೇ ಎಂದು (ಕಣ್ಣುಮುಚ್ಚಿ) ಎಣಿಸುವುದು ಶುದ್ಧತಪ್ಪು. ಭಾವಪ್ರಕಾಶದ ರೀತಿಗಳೇ ಬೇರೆ, ನಿರೂಪಣದ ಸೈಪುಣ್ಯತೆಯೇ ಬೇರೆ. ಛಂದೋರೂಪಗಳಲ್ಲಿ ಪ್ರಯೋಗಗಳೇನೋ ಅವಶ್ಯಕವಾಗಿ ನಡೆಯಬೇಕಾದ್ದೆ; ಆದರೆ ಜನತೆಯು ನಿರೀಕ್ಷಿಸುವ ಆಶೆಗಳನ್ನು ಪೂರೈಸುವ ಮಟ್ಟಿಗೆ ಈ ಪ್ರಯೋಗಗಳು ನಡೆಯುವುದು ಸಾಧುವೇ ಹೊರತು ಅನ್ಯಥಾ ಅಲ್ಲ. ಯೋಚನೆಗಳನ್ನು ಭಾವಗಳನ್ನು ಸ್ಪಷ್ಟವಾಗಿ, ಕಲಾಪ್ರಪೂರ್ಣವಾಗಿ ವ್ಯಕ್ತಪಡಿಸಲು ನಿರೂಪಣಮಾರ್ಗವು ಬಹಳಮಟ್ಟಿಗೆ ಕಾರಣವಾಗಿರುತ್ತದೆ. ಮಲಬಾರಿನ ಕವಿತಾಪ್ರಪಂಚದಲ್ಲಿ ವಿಹರಿಸುತ್ತಿರುವವರಲ್ಲಿ ಯಾರೊಬ್ಬರಲ್ಲೂ ಹೊಸ ಛಂದೋರೂಪಗಳ ಅವಶ್ಯಕತೆಯು ನಿಜವಾಗಿ ಕಂಡುಬಂದಿಲ್ಲವೆಂದೂ, ಜನಸಾಮಾನ್ಯಕ್ಕುದರ ವಾಂಛೆಯೇ ಇಲ್ಲವೆಂದೂ ನನಗೆ ತೋರುತ್ತದೆ. ಆದಕಾರಣ ಮಲಯಾಳ ಕವಿತಾಕನ್ಯೆಯು ಪ್ರಾಚೀನ ರೀತಿರಂಗದಲ್ಲೇ ವಿಹರಿಸುವುದು ಮೇಲು.

ಕುಮಾರನ್ ಆಶ

ಛಂದೋರೂಪಗಳಲ್ಲಿ ಬದಲಾವಣೆಗಳಿಲ್ಲವಾದರೂ ಕಾವ್ಯವಸ್ತುಗಳನ್ನಾರಿಸುವಿಕೆಯಲ್ಲಿ ಮಾತ್ರ ಪ್ರಾಚೀನ

ಕುಮಾರನ್ ಆಶನ್

(ಪಂಚಮ ಜಾರ್ಜ್ ಸಾರ್ವಭೌಮರು ಯುವರಾಜರಾಗಿ ಭರತಖಂಡಕ್ಕೆ ಬಂದಿದ್ದಾಗ ಈ ಕವಿಗಳಿಗೆ ಕೈಕಡಗ ಹಾಕಿ, ಜೋಡುಶಾಲು ಮರ್ಯಾದೆಮಾಡಿದರು.)

ಸಂಪ್ರದಾಯವು ಬಹಳ ಪಟ್ಟುತಿಂದಿದೆ; ಪೂರ್ವಕಾಲದ ರೂಪಕಾಲಂಕಾರ ವೈಖರಿಗಳೂ, ಉಪಮೋತ್ಪ್ರೇಕ್ಷೆಗಳೂ ಮೂಲೆಗೆ ಬಿದ್ದವು. ಈ ಹೊಸ ಮಾರ್ಗವನ್ನು ಹಿಡಿದು, ವಿಜಯವೈಭವದ ಹಂತವನ್ನೇರಿದವನಂದರೆ ಕುಮಾರನ್‌ಆಶನ್ ಎಂಬ ಕವಿ. ಇವನು ಹುಟ್ಟಿದ್ದಾದರೂ ಎಲ್ಲಿ? ತಿರುವಾಂಕೂರಿನಲ್ಲಿ ಬಹು ಕೀಳೆಂದು ಭಾವಿಸಲ್ಪಟ್ಟಿರುವ ಕುಲದಲ್ಲಿ. ನಿರ್ಭಾಗ್ಯ ರಮಣಿಯಲ್ಲಿ ಹುಟ್ಟಿ, ನಿರ್ಗತಿಕನಾಗಿ ಬೆಳೆದನು. ಮೈಸೂರು ಸರಕಾರದಲ್ಲಿ ಹಿಂದೆ 'ಸ್ಯಾನಿಟರಿ ಕವಿಮಾಷನರ್' ಆಗಿ ಕೆಲಸಮಾಡಿದ ಡಾಕ್ಟರ್ ಪಲ್‌ಪುರವರು ಇವನಮೇಲೆ ಕನಿಕರಪಟ್ಟು, ಕಾಪಾಡಿದರು; ವಿದ್ಯಾಬುದ್ಧಿ ಹೇಳಿಸಿದರು; ಇಂಗ್ಲೀಷು ಸಂಸ್ಕೃತ ಕಲಿಸಿದರು. ಎಲ್ಲ ವಿಧದಲ್ಲೂ ಜೀವದಾನಮಾಡಿದರೆಂದೇ ಹೇಳಬಹುದು. ಚಿತ್ತಾಕರ್ಷಕ ಸಂಸ್ಕೃತ ಸಾಹಿತ್ಯದಲ್ಲಾತನಿಗುಂಟಾದ ಅಭಿರುಚಿಯಿಂದ ಇಂಗ್ಲೀಷಿನಲ್ಲಾತನು ಹೆಚ್ಚು ಪರಿಶ್ರಮ ಪಡೆಯಲಿಲ್ಲ.

ಕೇರಳದ ಪ್ರಾಚೀನ ಸಾಹಿತ್ಯಸಂಪ್ರದಾಯ ಬದ್ಧವಾದ ವಾತಾವರಣದಿಂದ ಮುಕ್ತನಾಗಿ ಈತನು ದೂರವಾಗಿದ್ದು ಬೆಳೆದನು. 'ಉದುರಿದ ಹೂ' ಎಂಬ ಕವಿತೆಯೇ ಅವನ ಪ್ರತಿಭೆಯ ಪ್ರಥಮಕುಸುಮ. ಈ ಕವಿತೆಯಲ್ಲಿ ಕವಿಯು ಬಿದ್ದಹೂವೊಂದಕ್ಕಾಗಿನೊಂದು ವಿಸುಸುಯ್ಯುವನು. ಒಂದು ಹೂ ಹುಟ್ಟಿತು--ಬೆಳೆಯಿತು, ತನ್ನ ಸೋದರಿಯರೊಂದಿಗೆ ಕೂಡಿ ಮಂದ ಮಾರುತನ ನುಣ್ಣಾರಕ್ಕನುವಾಗಿ ನೃತ್ಯಮಾಡಿ ನಲಿಯಿತು. ಪ್ರಫುಲ್ಲಿತವಾಗುತ್ತಲೇ ತನ್ನಿನಿಯ ಷಟ್ಪದನೊಂದಿಗೆ ಕೂಡಿ ಮೈಮರೆಯಿತು. ಕಷ್ಟಕ್ಕೆ ನೆಲಕ್ಕುರುಳಿತು. ಸಾವಿನ ಗಂಟಲಲ್ಲಿ ಸಿಕ್ಕಿ ನರಳುತ್ತಿರುವ ನಲ್ಲೆಗಾಗಿ, ಷಟ್ಪದನು ನೊಂದು ಮರ್ಮಚ್ಛೇದಕ ಝೇಂಕಾರದೊಂದಿಗೆ ಗಿರ್ರನೆ ತಿರುತಿರುಗಿ ತಲೆಯನ್ನು ಧೊಪ್ಪನೆ ನೆಲಕ್ಕಪ್ಪಳಿಸಿ ಗೋಳಿಟ್ಟನು. ಇದೇ ಆ ಕವಿತೆಯ ವಸ್ತುವಿಶೇಷ. ದೊಡ್ಡಕರಿಯ ಜೀನುಹುಳು ನೆಲಕ್ಕುರುಳಿದ ಹೂಗಳ ರಾಶಿಯನ್ನು ಮುತ್ತಿ ಮೊರೆವುದನ್ನು ಕಣ್ಣಾರ ಕಂಡವರಿಗೆಲ್ಲ ಈ ಸಣ್ಣಕವಿತೆಯ ಸೌಂದರ್ಯರಸಾನುಭವವಾಗುವುದರಲ್ಲೇನೇನೂ ಸಂಶಯವಿಲ್ಲ.

ಈ ಕವಿಯು ಆರ್ನಾಲ್ಡನ 'ಲೈಟ್ ಆಫ್ ಏಷ್ಯಾ', 'ಮೇರಿ ಮ್ಯಾಗ್‌ಡಲೀನ್', ಸಳೆಸಿ, ಲೀಲಾ, ಸೀತಾ, ದುರವಸ್ಥೆ ಎಂಬನೇಕ ಕವಿತೆಗಳನ್ನು ಬರೆದನು. 'ದುರವಸ್ಥೆ' ಯೆಂಬ ಕವಿತೆಯು ಪರಮಾದ್ಭುತವಾದುದು. ಮಾಪಿಳ್ಳಾದಂಗೆಯಲ್ಲಿ ಸೌಂದರ್ಯದಧಿದೇವತೆಯಂತಿದ್ದ ನಂಬೂದರಿ ಕುಲಸ್ತ್ರೀಯೊಬ್ಬಳು, ಅನಾಥಳಾಗಿ 'ತ್ವಮೇವ ಶರಣಂ ಮಮ' ಎಂದು ಹೇಳಿ ಪರಜೇರಿಗೆ ಬಂದು, ಗುಡಿಸಲೊಂದರ ಬಳಿ ನಿಲ್ಲುವಳು. ಆ ಪರಯನು ನಂಬೂದರಿ ಕನ್ಯೆಯ ಮಾನಪ್ರಾಣಗಳ ಸಂರಕ್ಷಕನಾದನು. ಆ ಕನ್ಯೆಯ ಜೀವನವನ್ನು ಎಷ್ಟು ಸುಖಮಯವನ್ನಾಗಿ ಮಾಡಲು ಸಾಧ್ಯವೋ ಅಷ್ಟನ್ನೂ ಆ ಪರಯನು ಮಾಡಿನು; ಅವಳಿಗಾಗಿ ತನ್ನ ಸರ್ವಸುಖ ಸೌಕರ್ಯಗಳನ್ನು ತೊರೆದನು; ಶುಕಪಿಕಕೋಗಿಲೆಗಳನ್ನು ಹಿಡಿದು ತಂದು ಆಕೆಯ ವಿನೋದವಿಲಾಸಕ್ಕೆ ಅಣಿಮಾಡುವನು. ಹೆಚ್ಚೇನು ಆಕೆಯನ್ನು ಸುಖಪಡಿಸಲು ತಾನು ದಾಸನಾಗಿ ದುಡಿದನು. ನಿಷ್ಕಾಮ ಕರ್ಮ ಸಂನ್ಯಾಸಿಯಂತೆ ದುಡಿಯುತ್ತಿದ್ದ ಪರಯನ ಹೃದಯವು ನಿರ್ಮಲ ವಾತ್ಸಲ್ಯಹೃದಯವಿಯಾದ ನಂಬೂದರಿ ಕನ್ಯೆಯನ್ನಾಕರ್ಷಿಸಿತು. ಇದೇ ಕಥಾವಸ್ತು.

ವರ್ಣಕಕವಿ ಚಕ್ರವರ್ತಿ ಈ ಕುಮಾರನ್ ಆಶನ್. ಆತನ ರಸಹೃದಯದ ಚಿತ್ರಗಳು ನಮ್ಮ ಕಣ್ಣಿದುರಿಗೆ ಜೀವಕಳೆಯಿಂದ, ಪರಿಪೂರ್ಣ ಅಂಗಾಂಗ ಶೋಭೆಯಿಂದ ನಿಲ್ಲುತ್ತವೆ. ಆತನ ಉಪಮೆಗಳ ಸೌಭಾಗ್ಯವನ್ನು ಮೂಲದಲ್ಲಿಯೇ ಕಂಡಾನಂದಿಸಬೇಕು. ಈತನು ಆಂಗ್ಲಕವಿತೆಗಳಿಂದ ಸ್ಫೂರ್ತಿಹೊಂದಿ ಅನೇಕ ಸಣ್ಣಸಣ್ಣ ಕವಿತೆಗಳನ್ನು ರಚಿಸಿದ್ದಾನೆ; ಗೆಳೆಯರನ್ನು ಕುರಿತು ಬರೆದವಿವೆ; ಅವರ ನೆನಪಿಗಾಗಿ ಬರೆದ ಕವಿತೆಗಳೂ ಇವೆ. ಸ್ಟೀಂಬೋಟ್ (ನೌಕೆ) ನಲ್ಲಿ ಈತನು ಪ್ರಯಾಣಮಾಡುತ್ತಿರುವಾಗ ವಿಪತ್ತುಂಟಾಗಿ ಕುಮಾರನ್ ಆಶನ್‌ಕವಿಯ ಜೀವನಲತೆಯು ಕತ್ತರಿಸಿಬಿತ್ತು. ಇಲ್ಲವಾಗಿದ್ದರೆ ಮಲಯಾಳ ಕವಿತಾಕನ್ಯೆಯ ಕೀರ್ತಿವಿಸ್ತಾರಕ್ಕಾತನು ಅಪಾರ ಸೇವೆಮಾಡುತ್ತಿದ್ದನೆಂಬುದಕ್ಕೆ ವಿರೋಧವಾಣಿಯೇ ಇಲ್ಲ. ಆತನ ಪ್ರತಿಭೆಯು ವಿಕಾಸವಾಗುತ್ತ ಬಂದಿದ್ದು, ವೃದ್ಧಿಯಾಗುತ್ತಲಿತ್ತು. ಆದರೆ ಆಕಸ್ಮಿಕ ವಿಷಾದಾಂತ ಜೀವನದಿಂದ ಮಲಯಾಳ ಕವಿತೆಗೆ ಅಪಾರಕೊರತೆಯುಂಟಾಯಿತು.

ಆಶನ್ ಕವಿಯಂತೆಯೇ ಕೀರ್ತಿಯನ್ನು ಗಳಿಸಿದ ಮತ್ತು ವಿಶೇಷ ಪ್ರಮಾಣದಲ್ಲಿ ಬರೆದ ಕವಿಯೆಂದರೆ ವಳ್ಳತ್ತೋಳ್. ನಮ್ಮ ಅದೃಷ್ಟದಿಂದ ಆತನು ಜೀವಂ

ತನಾಗಿದ್ದು ಪ್ರತಿಕ್ಷಣವೂ ಮಲಯಾಳದ ಆತ್ಮವನ್ನೇ ಳೆಸುತ್ತಿದ್ದಾನೆ. ಭಾರತರಾಷ್ಟ್ರೀಯತೆಯು ವಲ್ಲತ್ತೋಳನ ಹೃದಯವನ್ನಾಕರ್ಷಿಸಿತು; ಅವನಿಗದೇ ಸ್ಫೂರ್ತಿಯ ಪರವಸ್ತುವಾಯಿತು. ರಾಷ್ಟ್ರಗೀತೆಗಳು ನೂರಾರು ಹಾಡಿ ಮಲಯಾಳ ಹೃದಯಾಂತರಾಳವನ್ನೇ ಅಳತೆಮಾಡಿ ಬಿಟ್ಟಿದ್ದಾನೆ. ಸ್ವದೇಶಿ, ಖಾದಿ, ಸ್ವರಾಜ್ಯಗಳ ಮೇಲೆಲ್ಲ ಕವಿತೆಗಳನ್ನು ಕಟ್ಟಿದ್ದಾನೆ.

ಕೊನೆಯಮಾತು

ಕೊಚಿನ್, ತಿರುವಾಂಕೂರು, ಮಲಬಾರಿನ ಅನೇಕ ಕವಿಗಳ ಮತ್ತು ಗದ್ಯಲೇಖಕರ ಹೆಸರುಗಳಿಲ್ಲ ಬಿಟ್ಟು ಹೋಗಿವೆ. ಇಲ್ಲಿನ ಅವಕಾಶದಲ್ಲಿ ಎಪುಲವಾಗಿ ಆಯಾ ಕವಿಗಳೆಲ್ಲರ ಗ್ರಂಥಗಳ ವಿಮರ್ಶೆಮಾಡಲು ಸಾಧ್ಯವೇ ಇಲ್ಲ. ಸ್ತ್ರೀಪುರುಷರನೇಕರು ಬರೆಯುತ್ತಿರುವುದು ನಿಜ. ಆದರೆ ಮೇಲೆ ಸೂಚಿಸಿದ ಕವಿಗಣದೊಂದಿಗೆ ಇವರಾರೂ ಸರಿತೂಗಲಾರರು. ಆದರೆ ಸಾಹಿತ್ಯದಲ್ಲಿ ಇವರಿಗೆ ಒಂದು ಸ್ಥಾನವಿದೆ. ಜನತೆಯಲ್ಲಿ ಕವಿಚೇತನಕ್ಕೆ ಜ್ಯೋತಿಬಾರದಂತೆ ಇವರು ಸೇವೆಮಾಡುತ್ತ ಬಂದಿದ್ದಾರೆ. ವ್ಯಕ್ತಿಗಳಲ್ಲಿ ಆಶೆಯನ್ನು, ಸಾಹಸೇಚ್ಛೆಯನ್ನು ಹುಟ್ಟಿಸಿ, ಪ್ರೋತ್ಸಾಹಿಸುತ್ತ ಬರುತ್ತಿದ್ದಾರೆ. ಪ್ರತಿಭಾಶಾಲಿಗಳ ಬರುವಿಕೆಗಾಗಿ ಇವರೆಲ್ಲ ಶ್ರಮಿಸುತ್ತಿದ್ದಾರೆ; ಪ್ರತಿಭಾಶಾಲಿಗಳ ಸೃಷ್ಟಿಗೆ ಉಚಿತ ಪರಿಸ್ಥಿತಿಯನ್ನು ಕಲ್ಪಿಸುವ ಕೈವಾಡದ ಕುಶಲಿಗಳಾಗಿ ಕೆಲಸಮಾಡುತ್ತಿದ್ದಾರೆ. ಇವರೆಲ್ಲ ಸಾಧಾರಣವಾಗಿ ಸ್ವತಂತ್ರವಾದಿಗಳು; ಪೂರ್ವಾಚಾರ ಬದ್ಧರಲ್ಲ; ಸಾಹಸಿಗಳು. ಇಂತಹ ಸಾಹಿತ್ಯಸೇವಕರ ಸಂಖ್ಯೆಯು ಹೆಚ್ಚಿ, ಪ್ರಯೋಗಕ್ಷೇತ್ರವು ವಿಸ್ತಾರವಾಗಿ, ಜನತೆಯಲ್ಲಿ ಸಾಹಿತ್ಯಾಭಿರುಚಿಯು ಹೆಚ್ಚುವುದೆಂದೂ ಸಾಹಿತ್ಯವ್ಯವಸಾಯವು ಜುರುಕಾಗಿ ನಡೆಯುವುದೆಂದೂ ಹಾರೈಸಲಾಗಿದೆ. ಈ ಬಗೆಯ ಚಟುವಟಿಕೆಯ ಜೀವನವು 'ಅನ್ಯಮಿಂದ್ರಂ ಕರಿಷ್ಯಾಮಿ' ಎಂದೆದ್ದ ಕೌಶಿಕನಂತೆ ಪ್ರತಿಭಾಶಾಲಿಗಳು ಜನ್ಮಧಾರಣಮಾಡಿ ಬಂದು ಹಿಂದಿನ ಮತ್ತು ಇಂದಿನ ಮಾರ್ಗಗಳೆರಡಕ್ಕೂ ಸೌರಸ್ಯವನ್ನುಂಟುಮಾಡುವರೆಂದೂ, ಹೊಸ ಹಾದಿಗಳನ್ನು ಹಾಕಿ ವೈಭವಯುಗದ ಎಝುತ್ತಚ್ಛನ್, ಕುಂಜನ್ ನಂಬಿಯಾರ್, ಕುಮಾರನಾಶನ್ ಮುಂತಾದ ಕವಿಕುಲ ಸಂತಾನದ ಆಗಮನಕ್ಕೆ ಅಸ್ತಿಭಾರ ಹಾಕುವರೆಂದೂ ಹಾರೈಸೋಣ.

ಮರಾಠಿ ವಾಙ್ಮಯ ಪರಿಚಯ

(ಶ್ರೀ. ರಾ. ಗೋ. ಭಿಡೆ. ಉಪಸಂಪಾದಕ, 'ಕೇಸರೀ' ಪುಣೆ)

ಪ್ರವೇಶ

ರಾಷ್ಟ್ರದ ವಾಙ್ಮಯ ನಿರ್ಮಿತಿಯೇ ಆ ರಾಷ್ಟ್ರದ ಉತ್ಕರ್ಷಾಪಕರ್ಷದ, ಯಶೋಮಾನದ ನಿಜವಾದ ಸಾಧನ. ಮನುಷ್ಯನ ಚಾರಿತ್ರ್ಯವನ್ನು ಅವನಿಗೆ ಸಂಬಂಧಪಟ್ಟವರ ಚಾರಿತ್ರ್ಯದಿಂದ ಹೇಗೆ ಅನುಮಾನಿಸಬಹುದೋ ಹಾಗೆಯೇ ರಾಷ್ಟ್ರದ ಚಾರಿತ್ರ್ಯಸ್ಥಿತಿಯನ್ನು ಅಲ್ಲಿಯ ವಾಙ್ಮಯದಿಂದ ಊಹಿಸಬಹುದು ರಾಷ್ಟ್ರದ ಶಕ್ತಿ, ತೇಜಸ್ಸು ಮತ್ತು ಇದರ ಉತ್ಕರ್ಷೇಚ್ಛೆಯ ಯಥಾರ್ಥಜ್ಞಾನಕ್ಕೆ ಆ ರಾಷ್ಟ್ರದ ವಾಙ್ಮಯವೇ ಸುಯೋಗ್ಯಸಾಧನವೆನ್ನಬಹುದು ರಾಷ್ಟ್ರದ ಶಕ್ತಿ ಸಂವರ್ಧನವೇ ವಾಙ್ಮಯದ ಮುಖ್ಯ ಮತ್ತು ಮಹತ್ವದ ಹೇತುವಾಗಿರುತ್ತದೆ ಆದ್ದರಿಂದಲೇ ಯಾವ ಗ್ರಂಥಗಳಿಂದ ನೈತಿಕ ಸತ್ಯ ಮತ್ತು ಮಾನವೀಯ ಮನೋವಿಕಾರಗಳಿಗೆ ಒಂದು ರೀತಿಯ ವಿಶಾಲತೆ, ವಿಚಾರಬದ್ಧತೆ ಮತ್ತು ಸೌಂದರ್ಯವುಂಟಾಗುವುದೋ ಅಂತಹ ಗ್ರಂಥಗಳ ಏಕೀಭಾವವು ವಾಙ್ಮಯವೆಂಬುದಾಗಿ ಮಾರ್ಲೆಯವರು ವಾಙ್ಮಯದ ವ್ಯುತ್ಪತ್ತಿಯನ್ನು ಹೇಳಿರುತ್ತಾರೆ.

ಈ ವ್ಯುತ್ಪತ್ತಿವಾದಕ್ಕನುಸಾರವಾಗಿ ನಾವು ಮರಾಠೀ ಸಾಹಿತ್ಯ ಭಂಡಾರದ ಕಡೆನೋಡಿದರೆ ಇಂದು ಮರಾಠೀ ಸಾಹಿತ್ಯದಲ್ಲಾಗಿರುವ ಉತ್ಕರ್ಷದ ಅಭಿವೃದ್ಧಿಯು ಕಳೆದ ಅರ್ಧ ಶತಮಾನದಲ್ಲಿಯೇ ಆಗಿರುತ್ತದೆಂದು ತೋರಿ ಬರುತ್ತದೆ ಮರಾಠೀ ಸಾಹಿತ್ಯಕ್ಕೆ ಪ್ರಾಪ್ತವಾಗಿರುವ ಇಂದಿನ ಸುಸಂಬದ್ಧ ಸ್ವರೂಪಕ್ಕಾಗಿ ಅನೇಕ ಕುಶಲರಾದ ಸಾಹಿತ್ಯ ಶಿಲ್ಪಿಗಳು ತಮ್ಮ ಜೀವಮಾನಗಳನ್ನು ಅರ್ಪಿಸಿರುತ್ತಾರೆಂಬುದನ್ನು ಇಲ್ಲಿ ಗಮನದಲ್ಲಿಡಬೇಕು. ನಾವೀಗ ಮರಾಠೀಭಾಷೆಯ ವರ್ತಮಾನ ಸ್ಥಿತಿಯನ್ನು ವಿಚಾರಿಸುವ ಮೊದಲು ಗತಸಾಹಿತ್ಯದ ಸಿಂಹಾವಲೋಕನ ಮಾಡುವುದು ಉಚಿತವಾಗಿದೆ.

ಮೊದಲಿಗರು

ಮರಾಠಿ ಭಾಷೆಯಲ್ಲಿ ಲೇಖನ ಪ್ರಾರಂಭವಾದುದೆಂದು? ಈ ವಿಚಾರವಾಗಿ ವಿಮರ್ಶಿಮಾಡುತ್ತಾ ಸುಪ್ರಸಿದ್ಧ ಇತಿಹಾಸ ಸಂಶೋಧಕರಾದ ಕೈಲಾಸವಾಸಿ ಪಿ. ಲ. ಭಾವೆಯವರು ತಮ್ಮ 'ಮಹಾರಾಷ್ಟ್ರ ಸಾರಸ್ವತ'ವೆಂಬ ಗ್ರಂಥದಲ್ಲಿ ಇದರ ಮಾನವನ್ನು ಸುಪ್ರಸಿದ್ಧ ಜ್ಯೋತಿಷ್ಯಾಚಾರ್ಯರಾದ ಭಾಸ್ಕರಾಚಾರ್ಯರ ಪೌತ್ರ ಚಾಂಗದೇವ ಎಂಬವರಿಗೆ ಸಲ್ಲಿಸಿರುತ್ತಾರೆ. ಇದಲ್ಲದೆ ಜ್ಯೋತಿಷಿಗಳ ಪೈಕಿ ಶ್ರೀಪತಿ ಮತ್ತು ಬ್ರಹ್ಮದೇವ ಇವರ ಕೆಲವು ಗ್ರಂಥಗಳೂ ಇವೆ. ಶ್ರೀಪತಿಯು ಸರಿ ಸುಮಾರು ಕ್ರಿ. ಶ. ೧೦೫೦ರಲ್ಲಿ ಇದ್ದನೆಂದು ಹೇಳಬಹುದು. ಇವನು 'ರತ್ನಮಾಲಾ' ಎಂಬ ಗ್ರಂಥಕ್ಕೆ ಮರಾಠಿಯಲ್ಲಿ ಟೀಕೆ ಬರೆದನು. ಇವನ ಅನಂತರ ಮುಕುಂದರಾಜ, ಜ್ಞಾನೇಶ್ವರ, ಹೇಮಾದ್ರಿ ಮುಂತಾದವರು ಸಾಹಿತ್ಯಸೇವಕರಾಗಿ ಹೋದರು. ಅಮೇಲೆ ನಾಮದೇವ, ಏಕನಾಥರ ಕಾಲವು ಉದಯವಾಯಿತು. ಇವರ ಕಾಲವಾಗುತ್ತಲೆ ಮುಕ್ತೇಶ್ವರ, ತುಕಾರಾಮ, ರಾಮದಾಸ, ವಾಮನಾದಿ ಗ್ರಂಥಕರ್ತರು ಹುಟ್ಟಿದರು. ಮತ್ತು ಶ್ರೀಧರ ಮುಂತಾದ ಕವಿಗಳೂ, ಪೇಶವಾಯಿ ಕೊನೆಯ ಮೋರೋಪಂತರೂ ಉಲ್ಲೇಖನೀಯರಾಗಿದ್ದಾರೆ.

ಪ್ರಾಚೀನ ವಾಙ್ಮಯ ವೈಶಿಷ್ಟ್ಯ

ಮುಕುಂದರಾಜನನ್ನು ಮೊದಲುಗೊಂಡು ಮೋರೋಪಂತರತನಕ ಎಲ್ಲಾ ಗ್ರಂಥಗಳನ್ನೂ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಎಲ್ಲ ಲೇಖಕರ ದೃಷ್ಟಿಕೋಣವು 'ಧಾರ್ಮಿಕ' ವಿಚಾರಗಳ ಕಡೆಗಿತ್ತೆಂಬುದು ಗೊತ್ತಾಗುತ್ತದೆ.

ಶ್ರೀಮದ್ಭಾಗವತ 'ಓವೀ ಅನುವಾದ'ವು ಮರಾಠಿಗೆ ಆಯಿತು. ಓವೀಗೀತೆಯು ವಿರಚಿತವಾಯಿತು.

ಅಷ್ಟು ಮಾತ್ರವಲ್ಲ ಮಹಾಭಾರತ, ಶ್ರೀಮದ್ರಾಮಾಯಣಗಳು ಅನುವಾದಿತವಾದುವು. ಮತ್ತು ಇಲ್ಲಿಯ ತನಕ ಸಂಸ್ಕೃತದಲ್ಲಿಯೇ ಅಡಗಿದ್ದ ಈ ಗ್ರಂಥಭಂಡಾರವು ಮರಾಠಿಗೂ ಪರಿವರ್ತಿತವಾಗಿ ಸಾಮಾನ್ಯ ಜನತೆಗೆ ಬಹಳ ಉಪಕಾರವಾದಂತಾಯಿತು. ತುಕಾರಾಮ, ವಾಮನ, ಮೋರೋಪಂತ ಮೊದಲಾದ ಕವಿರತ್ನಗಳಾದರೋ ತಮ್ಮ ರಸವತ್ತಾದ ವಾಣಿಯಿಂದಲೂ, ವ್ಯಾಸಾದಿಕ ಭಾಷೆಯಿಂದಲೂ ಮರಾಠಿಯ ಮಹತ್ವವನ್ನು ಲೋಕಕ್ಕೆ ತೋರಿದರೆಂಬುದರಲ್ಲಿ ಸಂದೇಹವೇ ಇಲ್ಲ.

ಶ್ರೀ ಸಮರ್ಥರ ಅಪೂರ್ವಕಾರ್ಯ

ಶ್ರೀಸಮರ್ಥ ರಾಮದಾಸರು ತಮ್ಮ ವಾಙ್ಮಯಕ್ಕೆ ಮೊದಲಿಗಿಂತ ಕೊಂಚ ಭಿನ್ನವಾದ ರೂಪವನ್ನು ಕೊಟ್ಟರು. ಇದು ಸರ್ವಥಾ ಇಷ್ಟವೂ, ಶ್ರೇಯಸ್ಕರವೂ ಆಗಿತ್ತು. ರಾಷ್ಟ್ರದ ಉನ್ನತಿಗೆ ರಾಜಕೀಯ ಉನ್ನತಿಯಾದರೇನೇ ಸಾಲದು ರಾಷ್ಟ್ರದ ಸರ್ವಾಂಗೀಣ ಉನ್ನತಿಗೆ ರಾಜಕೀಯ ಉನ್ನತಿಯಷ್ಟೇ ಇತರ ಅಂಗಗಳ ವಿಕಾಸವಾಗುವುದೂ ಅಗತ್ಯವಾಗಿದೆ ಎಂಬುದು ನಿಜ. ಆದರೆ ಈ ಸರ್ವಾಂಗೀಣ ಉನ್ನತಿಯಾಗಲು ಸಮಾಜಕ್ಕೆ ಯಾವ ಸ್ವಾಸ್ಥ್ಯವು ಅಪೇಕ್ಷಿತವಾಗಿರುತ್ತದೆಯೋ ಆ ಸ್ವಾಸ್ಥ್ಯಲಾಭವು ರಾಜಕೀಯ ಉನ್ನತಿಯಾಗದೆ ಆಗುವಹಾಗಿಲ್ಲವೆಂಬ ಗುಟ್ಟನ್ನು ಶ್ರೀ ಸಮರ್ಥರು ತಿಳಿದಿದ್ದರು. ಮತ್ತು ತದನುಸಾರವಾಗಿಯೇ ತಮ್ಮ ವಾಙ್ಮಯ ನಿರ್ಮಿತಿಯ ನಿರ್ಧಾರವನ್ನು ಮಾಡಿದರು. ಆಸಮಯದಲ್ಲಿ ಮಹಾರಾಷ್ಟ್ರವು ದಾಸ್ಯಬದ್ಧವಾಗಿತ್ತು. ಅದರ ಅವನತಿಯು ಸರ್ವಾಂಗಗಳಲ್ಲಿಯೂ ಆಗಿತ್ತು. ಆ ದಾಸ್ಯಬಂಧನದಿಂದ ಮಹಾರಾಷ್ಟ್ರವನ್ನು ಹೊರತೆಗೆದು ಸ್ವತಂತ್ರವನ್ನಾಗಿ ಮಾಡಬೇಕಾಗಿತ್ತು. ಮತ್ತು ಆ ಕೆಲಸವನ್ನು ಮಾಡುವುದರಲ್ಲಿ ಶ್ರೀ ಸಮರ್ಥರು ಸಮರ್ಥರಾದರು! ಅಷ್ಟೇ ಅಲ್ಲ; ಹೊಸ ರಾಷ್ಟ್ರಕ್ಕಾದರೂ ಆಪತ್ತು ಬಂದರೆ ಅದನ್ನು ನಿವಾರಿಸಿ, ದೊರಗೊಳಿಸಿ, ರಾಷ್ಟ್ರಕ್ಕೆ ನವಜೀವನ ಸಂಜೀವಿನಿಯನ್ನೆರೆಯುವ ಸಾಮರ್ಥ್ಯವು ಶ್ರೀ ಸಮರ್ಥರ 'ದಾಸಬೋಧೆ' ಯಲ್ಲಿ ಇಂದಿಗೂ ಇದೆ ಆದರೆ ನೋಡುವುದು ಮಾತ್ರ ನಮ್ಮ ಅಧೀನ ಶ್ರೀ ಸಮರ್ಥರ ಕೈಲಾಸಯಾತ್ರೆಯ ಸಮಯವು ಉಪಸ್ಥಿತವಾದಾಗ ಅವರ ಭಕ್ತಕೋಟಿಗೆ ಬಹಳ ವ್ಯಸನವಾಯಿತು ಆಗ ಶ್ರೀ ಸಮರ್ಥರು ಅವರಿಗೆ ಹೀಗೆ ಬೋಧಿಸಿದರು:-

ಭಕ್ತಜನರೆ!

"ನನ್ನ ಶರೀರ ಮತ್ತು ವಾಣಿಯು ಮನಸ್ಸಿನಿಂದ ಹೋಯಿತೆನ್ನಬಹುದು. ಆದರೂ ನಾನು ಈ ಜಗತ್ತಿನಲ್ಲಿ ಯಾವಾಗಲೂ ಜೀವಿಸುತ್ತಿದ್ದೇನೆ. ಆತ್ಮಾರಾಮ, ದಾಸಬೋಧೆ ಎಂಬ (ಗ್ರಂಥಗಳು) ನೈಸರ್ಗಿಕ ಸ್ವರೂಪದಲ್ಲಿ ನಾನಿರುವಾಗ ದುಃಖಪಡಲಿಕ್ಕೆ ಕಾರಣವಿಲ್ಲ."

ಮತ್ತು ಶ್ರೀ ಸಮರ್ಥರು ಜೀವಂತರಾಗಿದ್ದಾಗ ತಮ್ಮ ಕುಶಲಸಂಘಟನ ಚಾತುರ್ಯದಿಂದ ಮತ್ತು ಓಜಸ್ವೀವಾಣಿಯಿಂದ ಮಹಾರಾಷ್ಟ್ರದಲ್ಲಿ ಎಂತಹ ಕ್ರಾಂತಿಯುಂಟುಮಾಡಿದರೆಂಬುದು ಸ್ವರಾಜ್ಯಸ್ಥಾಪನೆಯಿಂದ ಸಿದ್ಧವಾಗಿರುತ್ತದೆ

ಸ್ವರಾಜ್ಯ ವಾಙ್ಮಯ

ಸ್ವರಾಜ್ಯ ಕಾಲದಲ್ಲಿ ಉಕ್ತಕವಿಗಳ ಹೊರತು ಗ್ರಂಥರಚನೆಯೆನ್ನಬಹುದಾದ ಕಾರ್ಯವು ಆಗಿದ್ದರೆ ಅದು 'ಬಖರೀ' ಗಳ ಮೂಲಕ ಆಗಿದೆ. ಇದಲ್ಲದೆ ಮರಾಠಿಯಲ್ಲಿ ಸಂಗೀತ ಕಾವ್ಯದ ಸ್ಥಾನವೂ ದೊಡ್ಡದಾಗಿದೆ. ಈ ಸಂಗೀತ ಕಾವ್ಯಪ್ರಾರಂಭವು ಛತ್ರಪತಿ ಶಿವಾಜಿಮಹಾರಾಜರ ಕಾಲದಿಂದ ಪೇಶವಾಯಿ ಕೊನೆಯತನಕ ಆಯಿತು ಮರಾಠಾ ಇತಿಹಾಸದಲ್ಲಿಯ ಓಜಸ್ವಿ ಮತ್ತು ವೀರರಸಪ್ರಧಾನ ಪ್ರಸಂಗಗಳಲ್ಲಿ ಕವಿಗಳು ರಚಿಸಿದ ಲಾವಣಿಗಳು (ಪೋವಾಡೆ) ಅದ್ಭುತ ಭಾವನೋದ್ದೀಪನಗಳಾಗಿವೆ. ಇಂದಿನ ಪತಿತ ಅವಸ್ಥೆಯಲ್ಲೂ ಸಹ ಅಂತಃಕರಣಗಳು ಉದ್ದೀಪ್ತವಾಗದಿರುವುದಿಲ್ಲ. ಈ 'ಬಖರೀ' ಮತ್ತು ಲಾವಣಿಗಳ ಮಹತ್ವವು ಎಂದಿನತನಕ ರಾಷ್ಟ್ರವು ಸ್ವಾತಂತ್ರ್ಯದ ಫಲವನ್ನುಣ್ಣುತ್ತಿತ್ತೋ ಅಂದಿನತನಕ ಇತ್ತು. ಈ ಪಾರತಂತ್ರ್ಯದಲ್ಲಿ ಯಾರು ಯಾರ ಲಾವಣಿಗಳನ್ನು ಹಾಡುವುದು? ಮತ್ತು ಯಾವುದರ 'ಬಖರೀ' ಬರೆಯತಕ್ಕದ್ದು?

ಬ್ರಿಟಿಷ್ ಆಳ್ವಿಕೆಯಲ್ಲಿ

ಲೇಖಕನಿಗಿರುವ ಸ್ಥಳಮರ್ಯಾದೆಯನ್ನು ಲೆಕ್ಕಿಸಿ ಮರಾಠೀ ಪ್ರಾಚೀನ ವಾಙ್ಮಯೇತಿಹಾಸದ ವರ್ಣನವನ್ನು ಸ್ಥೂಲಮಾನದಲ್ಲಿ ಮಾಡುವುದು ಅವಶ್ಯಕವಿದೆ.

ಬ್ರಿಟಿಷ್ ಆಳ್ವಿಕೆಯವರೆಗೆ ಸಂಕ್ಷಿಪ್ತವಾಗಿ ಹೇಳಿದ್ದಾ
ಯಿತು. ಈ ಮೇಲಿನ ಕಾಲದಲ್ಲಿ ಯಾವ ಪ್ರಮಾಣ
ಂದ ವಾಙ್ಮಯ ನಿರ್ಮಾಣವಾಗಬೇಕೋ ಅದು ಇಂ
ನವರೆಗೂ ಆಗಿಲ್ಲವೆಂಬುದು ಸರ್ವಸಮ್ಮತವಾದ ವಿಷ
ುವಾಗಿದೆ. ಆದರೆ ಬ್ರಿಟಿಷ್ ರಾಜ್ಯಕಾಲದಲ್ಲಿ ವಾಙ್ಮ
ುಕ್ಷೇತ್ರದ ವಿಕಾಸವುಂಟಾಯಿತು. ಮತ್ತು ಅದು
ವಿವಿಧರೂಪಗಳಿಂದಾಯಿತೆಂಬುದೂ ಒಪ್ಪತಕ್ಕಮಾತು.

ಪಾಶ್ಚಾತ್ಯ ಸಂಸರ್ಗವಾಗುವ ಮೊದಲು ವಾಙ್ಮಯ
ಪ್ರವಾಹವು ಒಂದು ವಿಶಿಷ್ಟ ದಿಕ್ಕಿನಲ್ಲಿಯೇ ಪ್ರವಹಿಸು
ತ್ತಿತ್ತು. ಆದರೆ, ಈ ಕಾಲದಲ್ಲಿ ಅದು ವಿಸ್ತೃತವಾಗಿ
ಾಙ್ಮಯಕ್ಷೇತ್ರವು ಸರ್ವತೋಮುಖವಾಗಿ ರಂಜಿತವಾ
ಯಿತು. ಮತ್ತು ವಾಙ್ಮಯವಾಹಿನಿಯು ನಾನಾ ದಿಕ್ಕು
ಳಲ್ಲಿ ಹೊರಟಿತು ಅದರೊಂದಿಗೆ ಭಾಷೆಯ ಮಾಧು
ುರ್ಯವೃದ್ಧಿಯೂ ಆಗ ತೊಡಗಿತು.

ವಿಷ್ಣುಶಾಸ್ತ್ರಿ ಚಿಪಳೂಣಕರ್

ಅರ್ವಾಚೀನ ಮರಾಠಿ ವಾಙ್ಮಯಕ್ಕೆ ಪ್ರಾಪ್ತ
ಾಗಿರುವ ಇಂದಿನ ಸ್ವರೂಪಕ್ಕೆ ಹಲವು ಮಹನೀ
ಯರು ಕಾರಣರಾದರು. ಅವರಲ್ಲಿ ಕೈಲಾಸವಾಸಿ
ವಿಷ್ಣುಶಾಸ್ತ್ರಿ ಚಿಪಳೂಣಕರರ ಸ್ಥಾನವು ಮಹತ್ವ
ಪೂರ್ಣವಾಗಿದೆ. 'ಮರಾಠಿಯ ಶಿವಾಜಿ' ಎಂಬ ಬಿರುದು
ವಿಷ್ಣುಶಾಸ್ತ್ರಿಗಳಿಗೆ ಸಲ್ಲುತ್ತದೆ! ವಿಷ್ಣುಶಾಸ್ತ್ರಿಗಳ
'ನಿಬಂಧ ಮಾಲೆ'ಗೆ ಮೊದಲು ಮರಾಠಿ ಗ್ರಂಥ
ಲೇಖನಕ್ಕೆ ಮೊದಲಾಗಿರಲಿಲ್ಲವೆಂದಲ್ಲ. ಕೃಷ್ಣ
ಶಾಸ್ತ್ರಿ ಚಿಪಳೂಣಕರ, ಪರಶುರಾಮ ಪಂತಗೋಡ
ಬೋಲೆ ಮೊದಲಾದವರ ಗ್ರಂಥಗಳ ಉದಯವಾಗಿತ್ತು.
ಆಗೆಯೇ ೧೮೪೦ ರ ಅಂದಾಜಿನಲ್ಲಿ ಮರಾಠಿಯಲ್ಲಿ
ಪತ್ರಪತ್ರಿಕೆಗಳೂ ಮೊದಲಾದುವು. ಅದರಲ್ಲಿ 'ಜ್ಞಾನ
ಪ್ರಕಾಶ' ಎಂದು ದೈನಿಕನಾಗಿ ನಮಗೆ ಕಾಣಿಸಿಗುತ್ತ
ದೆ. ಆದರೆ ವಿಷ್ಣುಶಾಸ್ತ್ರಿಗಳ ಮೊದಲು ಆದ ಪ್ರಯ
ತ್ನಗಳು ಸಮರ್ಪಕವಾಗಿರಲಿಲ್ಲ. ಆದರೆ ಶಾಸ್ತ್ರಿಗಳು
ಲೇಖನ ಕಲೆಯಲ್ಲಿ ಯೋಗ್ಯವಾಗಿ ಕಂಡ ಅನುಕರಣ
ಮಾರ್ಗವನ್ನು ಮಾಡಿದರು. ಮತ್ತು ಲೋಕಜಾಗೃತಿಯ
ಉದ್ದೇಶದಲ್ಲಿ ತಮ್ಮ ಲೇಖನಿಯನ್ನು ಪ್ರವರ್ತಿಸಿದರು.
ಈ ಕಾರಣವೇ ಶಾಸ್ತ್ರಿಗಳ 'ನಿಬಂಧ ಮಾಲೆ' ಯು
ಇಂದಿಗೂ ಮನೋಹರ ಮತ್ತು ಸುಗಂಧಯುಕ್ತವಾ
ಗಿದೆ.

ಮರಾಠಿ ನಾಟಕ

ವಾಙ್ಮಯ ರಾಜ್ಯದಲ್ಲಿ ನೋಡಿದರೆ ನಾಟಕ,
ಕಾದಂಬರಿ, ಕಾವ್ಯ, ರಾಜಕಾರಣ ಸಾಹಿತ್ಯ, ಮತ್ತು
ವೃತ್ತಪತ್ರ ಮಾಸಪತ್ರಿಕೆಗಳು ಇವೆಲ್ಲ ಕಾಣಬರು
ತ್ತವೆ. ಮತ್ತು ಮರಾಠಿ ವಾಙ್ಮಯ ಸ್ಥಾನವು ಇವು
ಗಳಲ್ಲೆಲ್ಲ ಎಲ್ಲಿದೆಯೆಂಬುದನ್ನು ನೋಡಬೇಕು.
ಮರಾಠಿಯಲ್ಲಿ ನೂತನ ನಾಟಕ ಲೇಖನದ ಆದ್ಯ
ಪ್ರವರ್ತಕರು ಪರಶುರಾಮ ಪಂತ ಗೋಡಬೋಲೆ.
ಆದರೆ ಅವರ ನಾಟಕಗಳೆಲ್ಲ ಸಂಸ್ಕೃತ ನಾಟಕಗಳ
ಅನುವಾದಗಳು. ಕೈಲಾಸವಾಸಿ ಅಣ್ಣಾಸಾಹೇಬ
ಕಿರ್ಲೋಸ್ಕರ ಇವರು ಗೋಡಬೋಲೆಯವರಿಂತ
ಹೆಚ್ಚಿನ ಪ್ರಗತಿ ಹೊಂದಿದರೆನ್ನಬಹುದು ಆದರೆ
ಸ್ವತಂತ್ರ ನಾಟಕ ರಚನಾಕಾರರಲ್ಲಿ ಶ್ರೀ ಖಾಡಿಲ
ಕರ್ ಮತ್ತು ಶ್ರೀ ಕೋಲ್ಹಟಕರೇ ಮುಖ್ಯರು.
ಇವರು ಮರಾಠಿ ರಂಗಭೂಮಿಯ ಸ್ವರೂಪವನ್ನೇ
ಪರಿವರ್ತಿಸಿದರು. ಇವರನ್ನು ಅರ್ವಾಚೀನ ನಾಟಕ
ಸೃಷ್ಟಿಯ ಜನಕರೆನ್ನಬಹುದು. ಕೈಲಾಸವಾಸಿ ಗಡ
ಕರೀಯವರು ಪ್ರತಿಭಾಸಂಪನ್ನ ನಾಟಕಕಾರರಾಗಿದ್ದರು.
ಮತ್ತು ಇತ್ತೀಚೆಗೆ ಕೆಲವು ನಾಟಕ ಕರ್ತೃಗಳು ತಲೆ
ಯೆತ್ತಿ ಪ್ರಕಾಶಕ್ಕೆ ಬಂದಿದ್ದಾರೆ ಆದರೆ ಖಾಡಿಲ್‌ಕರ್
ಮತ್ತು ಕೋಲ್ಹಟಕರರ ಸ್ಪರ್ಧೆಗೆ ನಿಲ್ಲುವವರು ಇಲ್ಲ
ನೆಂದೇ ಹೇಳಬಹುದು. ನಾಟಕ ಪ್ರಾಂಗಣದಲ್ಲಿ
ಒಂದೇಸವನೆ ನಡೆಯುತ್ತಿರುವ ಉನ್ನತಿ ಪ್ರಯತ್ನವು
ಸಂತೋಷಜನಕವಾದುದಾಗಿದೆ.

ಕಾದಂಬರಿ

ಕಾದಂಬರಿ ಲೇಖನ ಪ್ರಾರಂಭವು ಸು.ನೂರು ೪೦-೫೦
ವರ್ಷಗಳ ಹಿಂದಾಯಿತು. ಪ್ರಾರಂಭಕಾಲದ ಉಲ್ಲೇ
ಖನೀಯ ಕಾದಂಬರಿಕಾರರಲ್ಲಿ ಕೈಲಾಸವಾಸಿ ಶಂಕರ
ನೋರೋ ಠಾನಡೆಯವರೊಬ್ಬರೆ ಅದರೆ ಅವರ ಕಾದಂ
ಬರಿಗಳು ಹೆಚ್ಚಾಗಿ ಅನುವಾದಗಳು ರೂಪಾಂತರದ
ಮಾಧುರ್ಯವನ್ನೆಷ್ಟೆಂದು ಹೇಳೋಣ ಪರಭಾಷಾ
ಕನ್ನಡಿಗೆ ಸ್ವಭಾಷಾ ವೇಷವನ್ನು ಹಾಕುತ್ತಲೇ ಸ್ವಕೀ
ಯಳಲ್ಲವೆಂದು ಹೇಳುವ ಧೈರ್ಯವು ಯಾರಿಗೂ ಇಂ
ಟಾಗದು. ಸ್ವತಂತ್ರ ಪ್ರತಿಭಾವಂತ ಕಾದಂಬರಿಕಾರ
ರೆಂದರೆ ಕೈಲಾಸವಾಸಿ ಹರಿನಾರಾಯಣ ಆಪಟೆಯವರೊ
ಬ್ಬರೆ. ಇವರ ಹೆಸರು ಮರಾಠಿ ವಾಙ್ಮಯದಲ್ಲಿ ಎಂ

ದಿಗೂ ಅಳಿಸಲಾರದಂತಹುದು. ಅವರ ರಾಜಕೀಯ ಸಾಮಾಜಿಕ ಕಾದಂಬರಿಗಳೆಲ್ಲವೂ ಮರಾಠಿಯಲ್ಲಿ ಲೋಕಪ್ರಿಯಗಳಾಗಿವೆ. ಮತ್ತೆ ಇವರ ಕಾದಂಬರಿಗಳಲ್ಲಿ ಕೆಲವು ಹಿಂದಿ, ಗುಜರಾತಿ, ಕನ್ನಡಭಾಷೆಗಳಿಗೆ ಅನುವಾದವಾಗಿದೆ. ಆಪಟೆಯವರ ಶೈಲಿಯಾದರೋ ಸರ್ವಾಂಗಗಳಲ್ಲೂ ಅನುಪಮವಾದುದೆಂದು ಪ್ರಸಿದ್ಧಿಯಿದೆ. ಕೈಲಾಸವಾಸಿ ಆಪಟೆಯವರ ಅನಂತರ ಅವರ ಸ್ಥಾನವನ್ನಲಂಕರಿಸತಕ್ಕವರು ಹುಟ್ಟಲಿಲ್ಲವಾದರೂ ಅನೇಕ ಕಾದಂಬರಿಕಾರರು ಕಾಣಬರುತ್ತಿದ್ದಾರೆ. ಮತ್ತು ಈ ಕ್ಷೇತ್ರದ ಪ್ರಸಿದ್ಧಿಯು ಸ್ಥಿರವಾಗಿದ್ದು ಶಾಶ್ವತವಾಗಿ ಉಳಿಯಬಹುದೆಂಬ ಸಂಪೂರ್ಣ ವಿಶ್ವಾಸವಿದೆ. ಪ್ರೊ. ವಾ. ಮ. ಜೋಶೀ, ಪ್ರೊ. ಆಳತೇಕರ, ನಾ. ಹ. ಆಪಟೆ, ಪ್ರೊ. ಫಡಕೆ, ಶ್ರೀ ಗೂರ್ಜರ, ಪ್ರೊ. ಬೇಲಾರೆ ಇತ್ಯಾದಿ ಪ್ರಸಿದ್ಧ ಲೇಖಕರಲ್ಲಿ ಉತ್ತಮರೆಂದು ಶ್ರೀ ಕರಂದೀಕರರ ಖ್ಯಾತಿಯಿದೆ.

ಕಾವ್ಯಭಂಡಾರ

ಪ್ರಾಚೀನಕಾಲದ ಮರಾಠಿ ಗ್ರಂಥಸಂಪತ್ತಿಯಲ್ಲಿ ಅಧಿಕಾಂಶವು ಕಾವ್ಯರೂಪವಾಗಿಯೇ ಇದೆ. ಅವುಗಳಲ್ಲಿ ಜ್ಞಾನೇಶ್ವರ, ತುಕಾರಾಮ, ರಾಮದಾಸ, ವಾಮನ, ಮೋರೋಪಂತರ ಕಾವ್ಯಗಳು ವರ್ಣನ, ಉಪಮ ಮತ್ತು ಉತ್ಪ್ರೇಕ್ಷೆಗಳಿಂದ ನಿಬಿಡವಾಗಿವೆ. ಆ ಪದ್ಧತಿಯ ಕಾವ್ಯಗಳು ಈಗ ಇಷ್ಟವಾದರೂ ಇಂದಿನ ಕಾವ್ಯಗಳು ಮಧುರವಲ್ಲವೆಂದು ಹೇಳಲಾಗುವುದಿಲ್ಲ. ವಿವಿಧವಿಷಯ, ಹೊಸ ಹೊಸ ಛಂದಸ್ಸುಗಳು, ನಾನಾ ಪ್ರಕಾರದ ಪ್ರಸಂಗಗಳು ಇವುಗಳಿಂದ ಅನೇಕ ಸುಂದರ ಮತ್ತು ಭಾವನೋತ್ಕಟ ಕಾವ್ಯಗಳಿಂದು ಮರಾಠಿಯಲ್ಲಿ ಹುಟ್ಟುತ್ತಿವೆ ಗತಸಮಯದ ಕಾವ್ಯಹೃದಯ ಸ್ವರೂಪವು ಪ್ರಧಾನವಾಗಿ ಧಾರ್ಮಿಕ ಅಥವಾ ಪೌರಾಣಿಕವಾಗಿತ್ತು. ಇತ್ತಲಾಗಿ ಆ ಸ್ವರೂಪವು ಪರಿವರ್ತಿತವಾಗಿ ಕಲಾಪ್ರದರ್ಶನಕ್ಕೆ ಬೇಕಾಗುವ ದೃಷ್ಟಿಗನುಗುಣವಾಗಿ ಕಾವ್ಯರಚನೆಯಾಗುತ್ತಲಿದೆ. ಅರ್ವಾಚೀನ ಕವಿಗಳಲ್ಲಿ ರೆ. ಟಿಳಕ, ಟೋಂಬರೆ, ಕೇಶವಸುತ, ರೇಂದಾಳಕರ ಮುಂತಾದವರ ಕಾವ್ಯಗಳು ಸರಸವಾದವುಗಳೆಂದು ಹೆಸರುವಾಸಿಯಾಗಿವೆ. ಅರ್ವಾಚೀನ ಕವಿಕುಲಗುರುಗಳು 'ಕೇಶವಸುತ'ರಾಗಿದ್ದಾರೆ. ಅಧುನಿಕ ಕವಿಗಳಲ್ಲಿ ಗಿರೀಶ, ಯಶವಂತ, ಮಾಯದೇವ, ಬೇಂದ್ರೆ, ಖಾಪರ್ಡೆ, ಮೊದಲಾದವರ ಕೃತಿಗಳು ರಸಜ್ಞ ಮತ್ತು ಪ್ರತಿಭಾವಂತಗಳಿದ್ದು ಅವರು ತಮ್ಮ ತಮ್ಮ ಕ್ರಮದಿಂದ ಕಾವ್ಯದೇವತೆಯ ಸೇವೆಯನ್ನು ಮಾಡುತ್ತಿದ್ದಾರೆ.

ಸಂಶೋಧನಾತ್ಮಕ ವಾಙ್ಮಯ

ಶಾಸ್ತ್ರೀಯ ತತ್ವಜ್ಞಾನಸಂಬಂಧ ವಾಙ್ಮಯ ಪ್ರಯತ್ನಕ್ಕೇನೂ ಕಡಿಮೆಯಿಲ್ಲ. ಧಾರ್ಮಿಕ ಮತ್ತು ಸಾಮಾಜಿಕ ಪ್ರಶ್ನಸಂಬಂಧದಲ್ಲಿ ಅನೇಕ ಮಹತ್ವವುಳ್ಳ ಗ್ರಂಥಗಳ ನಿರ್ಮಾಣವಾಗಿದೆ. ಪರಂತು ಅವುಗಳಲ್ಲೆಲ್ಲ ಲೋಕಮಾನ್ಯ ಟಿಳಕರ 'ಗೀತಾ ರಹಸ್ಯ'ವು ಸರ್ವಶ್ರೇಷ್ಠಸ್ಥಾನವನ್ನು ಸಂಪಾದಿಸಿದೆ ಇತಿಹಾಸ ಸಂಶೋಧನದಲ್ಲಿ ವಿಹಾರಾಸ್ಪದವಲ್ಲದಷ್ಟು ಪ್ರಯತ್ನವು ಇತರ ಪ್ರಾಂತ್ಯಗಳಲ್ಲಿ ಆಗಿಲ್ಲವೆಂದರೆ ಅದು ಹೆಚ್ಚಿನ ಮಾತಾಗದು. ಆತ್ಮಸಂಶೋಧನಯುಗವು ಉದಯವಾಗುತ್ತಲೇ ಇತಿಹಾಸ ಸಂಶೋಧನವೂ ಆರಂಭವಾಯಿತು. ಕೈಲಾಸವಾಸಿ ರಾವ್‌ಬಹದ್ದೂರ್ ಕಾ. ನಾ. ಸಾನೆ, ಕೈಲಾಸವಾಸಿ ಇತಿಹಾಸಾಚಾರ್ಯ ರಾಜವಾಡೆ, ಕೈ. ಪಾಂಡುರಂಗ ಪಟ್ಟವರ್ಧನ, ಶ್ರೀ. ದೇವ, ಪ್ರೋ ವೋದ್ದಾರ್ ಶ್ರೀ ಆಪಟೆ, ಆ. ಬಾ. ಚಾಂದೇಕರ, ಮಜುಮದಾರರೇ ಮೊದಲಾದವರ ಸಾಹಸ ಮತ್ತು ದೀರ್ಘಪರಿಶ್ರಮಗಳ ಪ್ರಯತ್ನದಿಂದ ಮರಾಠಿಯ ಇತಿಹಾಸರೂಪವು ಚೆನ್ನಾಗಿ ಪುಷ್ಟವಾಗಿದೆ. ಇಂದಿಗೂ ಬೆಳೆಯುತ್ತಲಿದೆ ಈಗತಾನೇ ಶ್ರೀ ಶಿವಾಜೀಮಹಾರಾಜರ ತ್ರಿಶತಸಂವತ್ಸರ ಜನ್ಮೋತ್ಸವವು ನಡೆಯಿತು. ಆಗ ಉಕ್ತಸಂಶೋಧಕರು ೭-೮ ಪ್ರಚಂಡ ಗ್ರಂಥಗಳನ್ನು ಶಿವಾಜೀಮಹಾರಾಜರ ಸಂಬಂಧವಾಗಿ ಇತಿಹಾಸ ಸಮ್ಮತವಾಗಿರುವಂತೆ ಪ್ರಸಿದ್ಧಪಡಿಸಿದರು. ಇದರಿಂದ ಮರಾಠೀಯಲ್ಲಿರುವ ಸಂಶೋಧನಕಾರ್ಯದ ಕಲ್ಪನೆಯಾಗಬಲ್ಲುದು.

ಧಾರ್ಮಿಕ ವಾಙ್ಮಯ

ಈ ಭಾಗದಲ್ಲಿಯೂ ಮರಾಠಿಯಲ್ಲಿ ಉಪೇಕ್ಷೆ ಆಗಿರುವುದಿಲ್ಲ. ಈ ವಿಚಾರದಲ್ಲಿ ಹೆಚ್ಚಿನ ದೀರ್ಘಪ್ರಯತ್ನವನ್ನು ಶ್ರೀಕ್ಷೇತ್ರ ವಾಈ ಧರ್ಮಮಾರ್ತಂಡ ಕೈ. ಕಾ ವಾ. ಲೇಲೇ ಶಾಸ್ತ್ರೀಯವರು ಮಾಡಿದರು. ಮಹಾಭಾರತ, ರಾಮಾಯಣ, ಗೀತಾ, ವಿಷ್ಣುಪುರಾಣ, ಗಣೇಶಪುರಾಣ, ಋಗ್ವೇದ (ಕೆಲವು ಭಾಗ)ವಲ್ಲದೆ, ಇನ್ನು ಹಲವು ಚಿಕ್ಕದೊಡ್ಡ ಧಾರ್ಮಿಕ ಗ್ರಂಥಗಳನ್ನು

ಸಂಸ್ಕೃತದಿಂದ ಭಾಷಾಂತರಿಸಿದರು. ಮತ್ತು ಸ್ವತಂತ್ರವಾಗಿ ರಚಿಸಿ ಮರಾಠಿ ಸಾಹಿತ್ಯದೇವಿಗೆ ಅರ್ಪಿಸಿದರು. ಆ ಊರಿನಲ್ಲಿದ್ದ ಪುರಾಣ ಪ್ರಕಾಶಮಂಡಲಿಯೂ ಈ ಕಾರ್ಯದಲ್ಲಿ ಸರಿಶ್ರಮವಹಿಸಿತು. ಪುಣೆಯ ಚಿಪಳೂಣಕರ ಮಂಡಲಿಯವರು ಹಲವು ಪುರಾಣಗಳನ್ನು ಮರಾಠಿಗೆ ತಂದರು. ಆಚಾರ್ಯಭಕ್ತ ವಿಷ್ಣುಶಾಸ್ತ್ರಿಯವರು ಆದ್ಯಶಂಕರಾಚಾರ್ಯರ ಹಲವು ಗ್ರಂಥಗಳನ್ನು ಮರಾಠಿಗೆ ಪರಿವರ್ತಿಸಿದರು. ಪಾಂಗಾರಕರರು 'ಮುಮುಕ್ಷು' ಮಾಸಿಕದ ಮೂಲಕ ಧರ್ಮಶಿಕ್ಷಣದ ಕಾರ್ಯವನ್ನು ನೆರವೇರಿಸುತ್ತಿದ್ದಾರೆ. ಗೀತಾವಾಚಸ್ಪತಿ ಸದಾಶಿವಶಾಸ್ತ್ರಿ ಭಿಡೆಯವರು ಉಪನಿಷತ್ಪ್ರಕಾಶದ ಮೂಲಕ ಧಾರ್ಮಿಕ ಶಿಕ್ಷಣಕಾರ್ಯವನ್ನು ಸಮರ್ಪಕ ರೀತಿಯಿಂದ ನಡೆಸುತ್ತಿದ್ದಾರೆ.

ಶಾಸ್ತ್ರೀಯ ವಾಙ್ಮಯ

ಜ್ಯೋತಿಷಶಾಸ್ತ್ರದ ಸಂಶೋಧನ ಕಾರ್ಯವನ್ನು ಲೋ. ಟಿಳಕರು ಕೈಕೊಂಡರು. ಅದರ ಫಲವಾಗಿ ಇಂದು ಶುದ್ಧಪಂಚಾಗ ಮತ್ತು "ಕರಣಕಲ್ಪಲತೆ" ಯ ಉತ್ಪತ್ತಿಯಾಯಿತು. (ಶುದ್ಧ ಪಂಚಾಗವು ಇಂದಿಗೂ ನಡೆಯುತ್ತಿರುವದಲ್ಲದೆ ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿದೆ) ಇದಲ್ಲದೆ ಸಂಗೀತ, ಆಯುರ್ವೇದ, ವಾಸ್ತುಶಾಸ್ತ್ರ ಇತ್ಯಾದಿ ಶಾಸ್ತ್ರೀಯ ವಿಷಯಗಳಲ್ಲಿಯೂ ಮರಾಠೀವಾಙ್ಮಯವು ಹಿಂದಿಲ್ಲ. "ರಾಜಕಾರಣ" ಮಹಾರಾಷ್ಟ್ರದ ಇಷ್ಟವಾದ ವಿಷಯವಾದರೂ ಆ ಭಾಗದಲ್ಲಿ ಸಾಕಷ್ಟು ಗ್ರಂಥ ನಿರ್ಮಾಣವಾಗಿರುವುದಿಲ್ಲ ವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿದೆ ಶ್ರೀ|| ಜ. ಸ. ಕರಂದೀಕರರು ಕೌಟಿಲ್ಯ ಅರ್ಥಶಾಸ್ತ್ರವನ್ನು ಕೆಲವು ದಿನಗಳ ಹಿಂದೆಯೇ ಮರಾಠಿಯಲ್ಲಿ ಪ್ರಸಿದ್ಧ ಪಡಿಸಿದ್ದಾರೆ. ವೃತ್ತಪತ್ರಿಕೆಗಳ ಮೂಲಕ ರಾಜಕೀಯ ಶಿಕ್ಷಣಕೊಡುವ ಕೆಲಸವು ಮಹಾರಾಷ್ಟ್ರದಲ್ಲಿ ಉತ್ತಮ ರೀತಿಯಿಂದ ನಡೆಯುತ್ತಿದೆ. ಈ ಸಂಬಂಧದಲ್ಲಿ "ಕೇಸರಿ"ಯು ಉತ್ತಮರೀತಿಯಿಂದ ಕೆಲಸ ನಡಿಸಿದೆ. ನಡಿಸುತ್ತಲೂ ಇದೆ. ಅಲ್ಲದೆ ಮುಂದೆಯೂ ನಡಿಸೀತು.

ಜೀವನ ಚರಿತ್ರಾತ್ಮಕ ವಾಙ್ಮಯ

ಚರಿತ್ರಗ್ರಂಥಗಳಿಗೆ ವಾಙ್ಮಯದಲ್ಲಿ ಶ್ರೇಷ್ಠಸ್ಥಾನವಿದೆ. ಈ ಭಾಗದಲ್ಲಿಯೂ ಮರಾಠೀ ವಾಙ್ಮಯವು ಹಿಂದಿಲ್ಲ. ಮಾನನೀಯರಾದ ಐತಿಹಾಸಿಕಸ್ತ್ರೀಪುರುಷರಚರಿತ್ರೆ ಮತ್ತು ಮಾನನೀಯ ಆಂಗ್ಲೇಯರ ಚರಿತ್ರೆಗಳೂ ಮರಾಠಿಯಲ್ಲಿ ಸಿಗುತ್ತವೆ. ಇತ್ತೀಚೆಗಿನ ಉಲ್ಲೇಖನೀಯ ಪ್ರಯತ್ನವೆಂದರೆ, ಶ್ರೀ ಕೇಳಕರರು ಬರೆದ ಲೋಕಮಾನ್ಯ ಟಿಳಕರ ಚರಿತ್ರೆಯಾಗಿದೆ. ಈ ಗ್ರಂಥವು ೨೫೦೦-೩೦೦೦ ಪುಟಗಳಿದ್ದು ೩ ಖಂಡಗಳಲ್ಲಿ ವಿಭಕ್ತವಾಗಿದೆ. ಮರಾಠಿ ವಾಙ್ಮಯದಲ್ಲಿ ಇಷ್ಟು ದೊಡ್ಡ ಐತಿಹಾಸಿಕ ಗ್ರಂಥ ಬೇರೊಂದಿಲ್ಲ. ಇದಲ್ಲದೆ "ಲೋಕಮಾನ್ಯರ--ಅತವಣೆವ ಅಖ್ಯಾಯಿಕಾ" ಎಂಬ ಗ್ರಂಥದ ೩ ಭಾಗಗಳು ಪ್ರಸಿದ್ಧವಾಗಿವೆ. ಮತ್ತು ಟಿಳಕರ "ಆರಿಸಿದ ಲೇಖನಗಳು" ನಾಲ್ಕು ಭಾಗಗಳಲ್ಲಿ ಪ್ರಕಟಗೊಂಡಿವೆ. ಟಿಳಕರ ಸಂಬಂಧದಲ್ಲಿ ಉಪಲಬ್ಧವಾಗಿರುವಷ್ಟು ಸಾಹಿತ್ಯವು ಮರಾಠಿಯಲ್ಲಿ ಬೇರೆ ಯಾರ ಸಂಬಂಧದಲ್ಲಿಯೂ ಆಗಿರುವುದಿಲ್ಲ.

ವೃತ್ತಪತ್ರಗಳು

ವಾಙ್ಮಯಕ್ಷೇತ್ರದ ಇನ್ನೊಂದು ಮೆಟ್ಟಿಲೆಂದರೆ ವೃತ್ತಪತ್ರಿಕೆಗಳು, ಮತ್ತು ಮಾಸಪತ್ರಿಕೆಗಳು. ಮರಾಠಿ ಮಾತನಾಡುವವರ ಜನಸಂಖ್ಯೆಯು ಒಂದು ಕೋಟಿಯಷ್ಟೂ ಇಲ್ಲ ಅದರಲ್ಲಿಯೂ ನಿರಕ್ಷರತೆಯ ಸಾಮ್ರಾಜ್ಯವು ಅವ್ಯಾಹತವಾಗಿ ನಡೆಯುತ್ತಲಿದೆ. ರಾಜದಂಡವು ತಲೆಯಮೇಲೆಯೇ ತೂಗಾಡುತ್ತಿದೆ. ಈ ಎಲ್ಲ ಪರಿಸ್ಥಿತಿಗಳನ್ನೂ ಪರಿಶೀಲಿಸುವಾಗ ಇತರ ಪ್ರಾಂತ್ಯಗಳಿಗಿಂತ ಮರಾಠಿವಾಙ್ಮಯವು ಈ ಭಾಗದಲ್ಲೂ ಹಿಂದಿಲ್ಲವೆಂದು ಹೇಳಬಹುದು. ಇಂದು ಕೆಲವು ಮರಾಠಿ ವೃತ್ತಪತ್ರಿಕೆಗಳೇ. ಇವುಗಳಲ್ಲಿ ದೈನಿಕ ಸಾಪ್ತಾಹಿಕಗಳೂ ಸಾಕಷ್ಟಿವೆ. ಮಾಸಪತ್ರಿಕೆಗಳಲ್ಲೂ ಹಿಂದಿಲ್ಲ. ಕೇವಲ ಮನೋರಂಜನವೇ ಹೇತುವಾಗಿರದೆ ಲೋಕಶಿಕ್ಷಣ, ವಿಚಾರ ಮತ್ತು ಜನರಲ್ಲಿ ಸ್ವದೇಶಸ್ಥಿತಿಯ ಜ್ಞಾನ ಉಂಟುಮಾಡಿಕೊಡುವುದೇ ಮುಖ್ಯ ಧ್ಯೇಯವನ್ನಾಗಿ ಇಟ್ಟುಕೊಂಡು ಉತ್ತಮ ತರಗತಿಯ ಮಾಸಪತ್ರಿಕೆಗಳು ಗಣನೆಗೆ ಬಂದಿವೆ. 'ಚಿತ್ರಮಯಂ ಜಗತ್', 'ಸ್ಫೂರ್ತಿ', 'ವಾಗೀಶ್ವರೀ', 'ರತ್ನಾಕರ', 'ಪುರುಷಾರ್ಥ', 'ಮಧುಕರ', 'ಕಿರ್ಲೋಸ್ಕರ ಖಬರ್', 'ಸ್ತ್ರೀ', 'ಆನಂದ' 'ಸೃಷ್ಟಿವಿಜ್ಞಾನ', 'ಯಶವಂತ', 'ಆಯುರ್ವೇದ', 'ಮುಮುಕ್ಷು', 'ಶ್ರೀದಾಸಬೋಧ', 'ಜ್ಞಾನೇಶ್ವರೀ', ಭಾರತ ಇತಿಹಾಸ ಸಂಶೋಧನ ಮಂಡ

ಳಿಯ ತ್ರೈಮಾಸಿಕ, ಮರಾಠಿ ಸಾಹಿತ್ಯ ಪರಿಷತ್ಪತ್ರಿಕೆ ಇತ್ಯಾದಿ ನಾನಾ ಪತ್ರಿಕೆಗಳು ಮರಾಠಿ ವಾಙ್ಮಯದ ಗೌರವವನ್ನು ಅಭಿವೃದ್ಧಿಗೊಳಿಸಲು ತಮ್ಮ ಶಕ್ತಿ ಸರ್ವಸ್ವವನ್ನು ಉಪಯೋಗ ಮಾಡುತ್ತಲಿವೆ

ಸಾಹಿತ್ಯವೃದ್ಧಿ

ಮರಾಠಿ ಸಾಹಿತ್ಯ ಸಮ್ಮೇಳನದ ಅಧಿವೇಶನಗಳು ಕ್ರಮವಾಗಿ ಸೇರುತ್ತಲಿದ್ದು ಸಾಹಿತ್ಯಸೇವಕರ ಲಕ್ಷ್ಯವು ಮರಾಠಿ ವಾಙ್ಮಯದ ಸರ್ವಾಂಗೀಣ ಉನ್ನತಿಯು ಹೇಗಾಗಬಲ್ಲುದೆಂಬುದರಕಡೆಗೆ ತಿರುಗಿದೆ. ಮತ್ತು ಉತ್ತಮೋತ್ತಮ ಲೇಖಕರಿಗೆ ಸಾರ್ವಜನಿಕ ಸಂಸ್ಥೆಗಳು ಆಗಾಗ ಪಾರಿತೋಷಿಕಗಳನ್ನು ಕೊಡುತ್ತಿವೆ. ರಾಜಾಶ್ರಯದ ಅಭಾವ, ಶಿಕ್ಷಣಪ್ರಚಾರದಲ್ಲಿ ಸೌಕರ ಶಾಹಿಯ ಉದಾಸೀನತೆ ಮತ್ತು ಮಹಾರಾಷ್ಟ್ರದ ನಿರ್ಧನತೆ ಇವುಗಳಕಡೆಗೆ ಲಕ್ಷ್ಯಕೊಟ್ಟರೆ ಮರಾಠಿ ವಾಙ್ಮಯದಲ್ಲಾಗುತ್ತಿರುವ ಅಭಿವೃದ್ಧಿಯು ಭಾಷಾಭಿಮಾನಿಗಳಿಗೆ ಅಭಿಮಾನಾಸ್ಪದವೇ ಆಗಿರುತ್ತದೆ.

ವಿದ್ಯಮಾನ ಸಾಹಿತ್ಯಸೇವಕರು

ವಿದ್ಯಮಾನ ಸಾಹಿತ್ಯಸೇವಕರಲ್ಲಿ ಉಲ್ಲೇಖನೀಯ ಮತ್ತು ಮರಾಠಿಭಾಷೆಗೆ ಭೂಷಣಾಸ್ಪದರಾದವರಲ್ಲಿ ಕೆಲವರ ಹೆಸರನ್ನು ಸೂಚಿಸಿ ಈ ಲೇಖನವನ್ನು ಪೂರೈಸುವೆನು

ಭಾರತಾಚಾರ್ಯ ಚಿಂತಾಮಣಿರಾವ ವೈದ್ಯರು ಸೂಕ್ಷ್ಮಸಂಶೋಧಕರೆಂಬ ಬಿರುದನ್ನು ಸಂಪಾದಿಸಿರುತ್ತಾರೆ. ಶ್ರೀ ನರಸಿಂಹ ಚಿಂತಾಮಣಿ ಕೇಳಕರರು ಮರಾಠಿಭಾಷೆಯ ಸಿದ್ಧಹಸ್ತಲೇಖಕರು. ಕಾವ್ಯಅಲಂಕಾರಗಳ ನಿಬಿಡತೆಯು ಅವರ ಲೇಖನಗಳಲ್ಲಿ ಸಿಕ್ಕದ ಸ್ಥಳವಿಲ್ಲ. ಮತ್ತು ಅವರು ಪ್ರವೇಶಮಾಡದಂತಹ ಕ್ಷೇತ್ರವೊಂದೂ ಇಲ್ಲ. ವಿದ್ಯಮಾನ ಸಾಹಿತ್ಯಸೇವಕರಲ್ಲಿ ಅವರಂತೆ ವಿವಿಧ ವಿಸ್ತೃತಲೇಖನಗಳನ್ನು ಬರೆಯುವವರಿಲ್ಲ. ಜ. ಸ. ಕರಂದೀಕರರು ಅತ್ಯಂತ ಚಿಕಿತ್ಸಕ ಮಾರ್ಮಿಕಲೇಖಕರೂ, ಟೀಕಾಕಾರರೂ ಆಗಿರುತ್ತಾರೆ. ಇವರಲ್ಲದೆ ಶ್ರೀ ಕೋಲ್ಹಟಕರ, ಖಾಡಿಲಕರ, ಚಾಪೇಕರ, ಜೋಶೀ, ಮಟೇ, ಇತಿಹಾಸ ಸಂಶೋಧಕ ಆಪಟೇ, ಸರದೇಸಾಯಿ, ಬೆಲಾರೇ, ಸಾವರಕರ ಪ್ರಭೃತಿ ಅನೇಕ ಸಾಹಿತ್ಯಸೇವಕರು ಇದ್ದಾರೆ. ಮತ್ತು ಈ ಪರಂಪರೆಯು ಅಖಂಡವಾಗಿರುವತನಕ ಮರಾಠಿ ವಾಙ್ಮಯದ ಅಭಿವೃದ್ಧಿಯಲ್ಲಿ ನಿರಾಶರಾಗುವ ಕಾರಣವಿಲ್ಲ.

ಲೋಕಮಾನ್ಯ ತಿಲಕ

ವಿಷ್ಣುಶಾಸ್ತ್ರಿ ಚಿಪಳೂಣಕರ

(ಮರಾಠಿಯ ಲೇಖನವನ್ನು ಕನ್ನಡಕ್ಕೆ ಅನುವಾದಮಾಡಿದವರು ಶ್ರೀ ಜಿ. ಎಸ್. ಭಟ್, ಬೆಂಗಳೂರು)

ಹಿಂದೀ ವಾಙ್ಮಯ ವಿಸ್ತಾರ

(ಲೇಖಕ :—ಜಿ. ಎನ್. ಭಿಡೆ, ಹಿಂದೀ ಪ್ರಚಾರಕ, ಬೆಂಗಳೂರು ನಗರ.)

ಜಗತ್ತಿನ ಭಾಷೆಗಳಿಗೂ ಜನಾಂಗಗಳಿಗಿರುವಂತೆಯೇ ಇತಿಹಾಸವಿದೆ. ಅವುಗಳ ಇತಿಹಾಸವೂ ಇತರ ಇತಿಹಾಸಗಳಂತೆಯೇ ಅವುಗಳ ಪ್ರಾಚೀನತೆ ಹೆಚ್ಚಿದ ಹಾಗೆಲ್ಲ ಪರಿವರ್ತನಕೃತ ಮನೋರಂಜಕತೆಯಿಂದ ತುಂಬಿ ಚಿತ್ತಾಕರ್ಷಕವಾಗುತ್ತದೆ. ಈ ನಿಯಮಕ್ಕೆ ಭಾರತೀಯ ಭಾಷೆಗಳೇನೂ ಅಪವಾದವಾಗಿಲ್ಲ ಇಂದಿನತನಕ ಭಾರತ ವರ್ಷವು ಎಷ್ಟು ಪರಿವರ್ತನಗಳನ್ನು ತಂದಿದೆಯೆಂಬುದನ್ನು ಪ್ರತ್ಯೇಕ ಬರಿಯಬೇಕಾಗಿಲ್ಲ ರಾಜಕೀಯ, ಧಾರ್ಮಿಕ ಅಥವಾ ಸಾಮಾಜಿಕ ಯಾವದೇ ಆಗಲಿ, ಪರಿವರ್ತನವು ಜಾತಿಯ ಮೇಲೆ ಮಾತ್ರ ತನ್ನ ಪ್ರಭಾವವನ್ನು ಪೂರ್ಣಗೊಳಿಸದೆ, ಭಾಷೆಯ ಮೇಲೂ ಬೀರದಿರುವುದಿಲ್ಲ. ಈ ಕಾರಣದಿಂದಲೇ ಭಾಷೆಗಳು ರೂಪಾಂತರಗೊಳ್ಳುತ್ತಿರುತ್ತವೆ. ಹೀಗಿರುತ್ತ ನಮ್ಮ ವೃದ್ಧ ಭಾರತದ ಮತ್ತು ಇಂದಿನ ನವ ಭಾರತದ ಭಾಷೆಗಳ ಅನುಶೀಲನ ಮಾಡಿದರೆ, ತೋರಿ ಬರುವ ಮಹದಂತರವು ಆಶ್ಚರ್ಯಕರವಾದ್ದಲ್ಲ; ಅದು ಸ್ವಾಭಾವಿಕವೇ ಆದರೆ ಇದರ ತಥ್ಯಾಂಶದ ವಿವೇಚನವನ್ನು ಮಾಡಿದರೆ ವಿಸ್ಮಯಜನಕ ವಾಗದಿರದು. ಭಾಷಾವಿಕಾಸದ ಮುಖ್ಯ ಅವಸ್ಥೆಗಳೆರಡಿರುತ್ತವೆ. ಏ ಯೋಗಾವಸ್ಥೆ ಮತ್ತು ಸಂಯೋಗಾವಸ್ಥೆ ಎಂದು. ಈ ವಿಚಾರವಾಗಿ ಇಲ್ಲಿ ವಿವರಿಸುವುದನಗತ್ಯ. ಜಾತಿಗಳ ಸ್ಥಿತಿ ಪರಿವರ್ತನದಂತೇ ಭಾಷೆಗಳ ರೂಪ ಪರಿವರ್ತನವೂ ನೈಸರ್ಗಿಕವೇ ಆಗಿರುತ್ತದೆ.

' ಪುರಾಣೋ ಹಿಂದೀ '.

ಪ್ರಾಚೀನ ಆರ್ಯರು, ಅಂದರೆ ನಮ್ಮ ಪೂರ್ವಜರು, ಭಾರತದ ಹೊರಗಿನ ಪ್ರದೇಶಗಳಿಂದ ಹಿಂದೂಕುಷ್, ಮತ್ತು ಆಫಗಾನಿಸ್ತಾನದ ಮಾರ್ಗವಾಗಿ ಭಾರತವನ್ನು ಪ್ರವೇಶಿಸಿದರು. ಇವರ ಆಗಮನವು ಏಕಕಾಲದಲ್ಲಾಗಲಿಲ್ಲ. ಹಲವು ಶತಾಬ್ದಗಳು ಹಿಡಿದಿರಬಹುದು. ಸಾಕಷ್ಟು ಇತಿಹಾಸಪ್ರಮಾಣದ ಅಭಾವದಿಂದ ಈವಾದವಿನ್ನೂ ಸಂದಿಗ್ಧವಾಗಿಯೇ ಇದೆ. ಹಾಗೆಯೇ ಅವರ ಭಾಷೆಯೂ ಅಜ್ಞಾತಾವಸ್ಥೆಯಲ್ಲೇ ಇರುವುದಾದರೂ, ಆಗಿನಕಾಲದ ಕೆಲವು ಗ್ರಂಥಗಳು ಉಪಲಬ್ಧವಿರುವುದರಿಂದ ಭಾಷೆಯನ್ನು ಕಂಡುಹಿಡಿಯಬಹುದಾಗಿದೆ. ಇಂತಹ ಗ್ರಂಥಗಳಲ್ಲಿ ' ಋಗ್ವೇದವೂ ' ಬ್ರಾಹ್ಮಣ, ಸೂಕ್ತಗಳೂ ಆಗಿರುತ್ತವೆ. ಇವುಗಳ ಭಾಷೆಯಲ್ಲೂ ಭೇದವಿರುವುದಾದರೂ, ಮಹಾ ಭೇದವಿಲ್ಲ. ಸಮಯ ಮತ್ತು ಸ್ಥಾನಕೃತ ಭೇದವದು. ಆಕಾಲದ ಭಾಷೆಯು ವ್ಯಾವಹಾರಿಕ ಮತ್ತು ಸಾಹಿತ್ಯಾತ್ಮಕವೆಂದು ವಿಭಾಗಗೊಂಡಾಗ, ಸಾಹಿತ್ಯದ ಭಾಷೆಯು ಪರಿಮಾರ್ಜಿಸಲ್ಪಟ್ಟ ವ್ಯಾಕರಣದಿಂದ ಸಂಸ್ಕಾರಗೊಂಡು ' ಸಂಸ್ಕೃತ ' ವೆಂದು ಹೆಸರುಗೊಂಡಿತು. ಆದರೆ, ವ್ಯಾವಹಾರಿಕ ಭಾಷೆಯ ಅವಸ್ಥೆಯು ಬೇರೆಯೇ ಆಯಿತು. ಸಾಹಿತ್ಯಕ ಭಾಷೆಯು ನಿರ್ಬಂಧಗಳಿಗೊಳಗಾದಕಾರಣ ಇಂದಿಗೂ ತನ್ನ ರೂಪವನ್ನು ಅವಿಚಲಿತವಾಗಿಟ್ಟುಕೊಂಡಿರುತ್ತಿದ್ದರೂ, ವ್ಯಾವಹಾರಿಕ ಭಾಷೆಯು ಮುಂಚಿನ ರೂಪದಲ್ಲಿಲ್ಲ. ಪರಿವರ್ತಿತವಾಗಿದೆ. ಆಗಿನ ವ್ಯಾವಹಾರಿಕ ಭಾಷೆಯೇ ಪ್ರಾಕೃತವು. ಇದನ್ನೇ ಸಂಸ್ಕೃತ ಪಂಡಿತರು ' ಸರಸ್ವತಿಯ ಬಾಲಭಾಷೆ ' ಎನ್ನುತ್ತಾರೆ. ಇದೇ ಸಂಸ್ಕೃತದ ಜನನಿಯು. ಈ ಪ್ರಾಕೃತದ ಉದಾಹರಣೆಗಳು ಮೌರ್ಯ ಕಾಲಕ್ಕಿಂತ ಮುಂಚಿನವು ಸಿಗುವುದಿಲ್ಲ. ಆದುದರಿಂದ ಅದೇ ಮೊದಲಿನ ರೂಪವೆಂದು ನಂಬಲು ನಾವು ಬಾಧ್ಯರಾಗಿದ್ದೇವೆ. ಇದನ್ನೇ " ಪಾಲಿ " ಯೆಂದು ಕರೆಯುತ್ತಾರೆ.

ಪಾಲಿಯ ಅನಂತರವೇ ಪ್ರಾಕೃತದಲ್ಲಿ ಸಾಹಿತ್ಯಕ್ಕೆ ಮೊದಲಾಯಿತು. ಪ್ರಾಕೃತದ ಸಾಹಿತ್ಯವು ಮುಖ್ಯವಾಗಿ, ಮಹಾರಾಷ್ಟ್ರೀ, ಮಾಗಧೀ, ಶೌರಸೇನೀ, ಉಪಭೇದಗಳಲ್ಲಿದೆ. ಪೈಶಾಚೀ ಇತ್ಯಾದಿ ಇನ್ನೂ ಹಲವು ಉಪಭೇದಗಳವೆ. ಈ ಪ್ರಾಕೃತವು ಸಾಹಿ

ತ್ಯಕ ರೂಪಗೊಳ್ಳುತ್ತಲೇ ಪಂಡಿತರು ಅದರ ಮೇಲೆ ತಮ್ಮ ವೈಯಾಕರಣ ನಿರ್ಬಂಧವನ್ನು ಹಾಕಿದರು. ಆದುದರಿಂದ, ಅದು ರೂಪಾಂತರಗೊಳ್ಳುವುದು ನಿಂತು, ಸಂಸ್ಕೃತ ಮತ್ತು ಪ್ರಾಕೃತ ಮಿಶ್ರಿತವಾದ ಒಂದು ವ್ಯಾವಹಾರಿಕ ಭಾಷೆಯುಂಟಾಯಿತು. ಇದರ ಹೆಸರೇ ''ಅಪಭ್ರಂಶ''ವೆಂದು. ಇದರ ಉತ್ಪತ್ತಿಯು ಕ್ರಿಸ್ತ ಶಕ ೩೦೦ ರಲ್ಲಿ ಆಯಿತೆನ್ನಬಹುದು. ಆದರೆ ಇದರಲ್ಲೂ ಸಾಹಿತ್ಯರಚನೆ ಆಗತೊಡಗಿ, ವ್ಯಾವಹಾರಿಕ ಭಾಷೆಯು ರೂಪಾಂತರಗೊಂಡಿತು. ಅಪಭ್ರಂಶವೂ ವ್ಯಾಕರಣಕ್ಕೆ ಒಳಪಟ್ಟಿತು. ಆಗ ಪ್ರಾಕೃತ ಮತ್ತು ಅಪಭ್ರಂಶದಿಂದ ಒಂದು ವ್ಯಾವಹಾರಿಕ ಭಾಷೆಯುತ್ಪತ್ತಿಯಾಯಿತು. ಇದನ್ನೇ 'ಪುರಾಣೀಹಿಂದೀ' ಎಂದು ಹೆಂದೆನ್ನುತ್ತಾರೆ.

ಈ ನಮ್ಮ 'ಹಿಂದಿ'ಯ ಉತ್ಪತ್ತಿಯನ್ನು ಬರಿಯಲಿಕ್ಕೆ ಮುಖ್ಯವಾಗಿ ಇಂದಿನ ಹಲವು ಪಂಡಿತಪ್ರಕಾಂಡರೂ 'ಯವನ ಭಾಷೆ' ಯೆಂದೆನ್ನುವುದೇ ಕಾರಣವಾಯಿತು.

ಅಂತೂ ಈ ರೀತಿಯ ವಿವೇಚನೆಯಿಂದ, ಮೂಲ ಭಾಷೆಯಿಂದ, ವೈದಿಕ, ಸಂಸ್ಕೃತಗಳ ಉತ್ಪತ್ತಿಯಾಯಿತೆಂದೂ, ಅದಕ್ಕೆ ಸಾಹಿತ್ಯಕ ರೂಪಬರುತ್ತಲೇ, ವ್ಯಾವಹಾರಿಕ ಭಾಷೆಯಾಗಿ ನಡಿಯುತ್ತಿದ್ದುದನ್ನು ಪ್ರಾಕೃತವೆಂದರೆಂದೂ, ಇದರ ಮೇಲೆಯೂ ವೈಯಾಕರಣಿಗಳ ಪ್ರಭುತ್ವದಾಗ, ಅಪಭ್ರಂಶವೇ ವ್ಯಾವಹಾರಿಕ ಭಾಷೆಯಾಗಿ ಉಳಿಯಿತೆಂದೂ, ತಿಳಿಯುತ್ತದೆ. ಆದರೆ, ಅಪಭ್ರಂಶವೂ ಸಾಹಿತ್ಯಕ ಭಾಷೆಯಾಯಿತು. ಸಾಹಿತ್ಯಕ ಭಾಷೆಯು ವ್ಯಾವಹಾರಿಕ ಭಾಷೆಯಾಗಿ, ಶುದ್ಧ ಸ್ವರೂಪದಿಂದುಳಿಯುವುದು ಕಷ್ಟವೇ ಸರಿ. ಆದುದರಿಂದ ಈ ಅಪಭ್ರಂಶ—ಪ್ರಾಕೃತದಿಂದಲೇ ಆಧುನಿಕ ಆರ್ಯಭಾಷೆಗಳ ಉತ್ಪತ್ತಿಯಾಯಿತೆಂದು ಸಿದ್ಧವಾಗುತ್ತದೆ. ಯಾವಾಗ ವ್ಯಾವಹಾರಿಕ ಮತ್ತು ಸಾಹಿತ್ಯಕ ಭಾಷೆಗಳು ಭಿನ್ನ ಭಿನ್ನ ಮಾರ್ಗಗಳಲ್ಲಿ ನಡೆಯಲಾರಂಭಿಸುವುವೋ ಆಗ ಅವುಗಳೂ ಭಿನ್ನ ಭಿನ್ನ ರೂಪಗಳನ್ನು ಹೊಂದುತ್ತವೆಂಬುದು ನಿಸರ್ಗಸಿದ್ಧವು. ಆದಕಾರಣ ಇಂದು ಹಿಂದೀ ಅಥವಾ ಇತರ ಆರ್ಯಭಾಷೆಗಳಿಗೂ, ಅವುಗಳ ಜನನಿಯಾದ ಮೂಲ ಭಾಷೆಗೂ ತೋರದಿರುವ ಮಹದಂತರವು ಆಕ್ಷೇಪಣೀಯವಲ್ಲ.

ಶುದ್ಧ ಹಿಂದೀ

ಹಿಂದೀಯಲ್ಲಿ ಪಶ್ಚಿಮ ಹಿಂದೀ, ಪೂರ್ವ ಹಿಂದೀ, ಎಂಬ ಭೇದಗಳಿರುತ್ತವಾದರೂ ಅವು ಸಾಮಾನ್ಯ ಭೇದಗಳಾಗಿರುವುದರಿಂದ, ಪ್ರಕೃತ ಲೇಖನದಲ್ಲಿ ನಾವು ''ಹಿಂದೀ'' ಎಂಬ ಒಂದು ಸಾಮೂಹಿಕವಾಚಕ ಶಬ್ದದಿಂದಲೇ ವಿವೇಚಿಸುವೆವು.

ಶುದ್ಧ ಹಿಂದೀ ಭಾಷೆಯು ಇಂದು ದಿಲ್ಲೀ, ಮೀರತ್ ಪ್ರಾಂತಗಳಲ್ಲಿ ವ್ಯಾವಹಾರಿಕವಾಗಿದ್ದು, ಅಖಿಲ ಉತ್ತರ ಭಾರತದ ಸಾಹಿತ್ಯಕ ಭಾಷೆಯಾಗಿರುತ್ತದೆ. ಹಿಂದೀ ಮತ್ತು ಉರ್ದೂ ಆಧುನಿಕಸಾಹಿತ್ಯವು ಇದರಲ್ಲೇ ರಚಿತವಾಗಿದೆ ಈ ಶುದ್ಧ ಹಿಂದಿಯೇ ರೂಹೇಲಖಂಡದಲ್ಲಿ ''ಕನ್ನೌಜೀ'' ಎಂದೂ—ಅಂಬಾಲೆಯಿಂದ ಮುಂದು ವರಿದಾಗ ''ಪಂಜಾಬೀ'' ಯೆಂದೂ, ಗುಡಗಾಂವದ ದಕ್ಷಿಣ ಪೂರ್ವದಲ್ಲಿ ''ವ್ರಜಭಾಷೆ''ಯೆಂದೂ ಅನ್ನಲ್ಪಡುತ್ತದೆ.

ಹಿಂದೀ-ಉರ್ದೂ—ಹಿಂದೂಸ್ಥಾನಿಯು ವಸ್ತುತಃ ಒಂದೇ ಭಾಷೆ. ಹಿಂದಿಯ ಹಿಂದೂಸ್ಥಾನೀ ನಾಮಕರಣವು ಆಂಗ್ಲೇಯ ಪ್ರಭುಗಳಿಂದಲೂ, ಉರ್ದೂ ಅಥವಾ ರೇಖಕಾ ಎಂಬುದು, ಅರಬೀ-ಫಾರ್ಸಿ ಭಾಷೆಗಳಿಂದ ಹಲವು ಶಬ್ದಗಳನ್ನು ಸೇರಿಸಿ, ಮುಸಲ್ಮಾನರಿಂದಲೂ, ಮಾಡಲ್ಪಟ್ಟಿತು. ವಸ್ತುತಃ ಇದರ ಹೆಸರು ''ಹಿಂದೀ.''

ಹಿಂದಿಯಲ್ಲಿ ವ್ರಜಭಾಷಾ, ಅವಧಿ, ರಾಜಸ್ಥಾನೀಗಳೆಂದು ಮುಖ್ಯ ವಿಭಾಗಗಳಿವೆ. ''ಬುಂದೇಲಖಂಡೀ'' ಯು ವ್ರಜಭಾಷೆಯು ಅಂತರ್ಗತ ಉಪಭೇದವಾಗಿದೆ

ಈ ಭಾಷೆಗಳ ಶಬ್ದ ಭಂಡಾರವನ್ನು ವಿಮರ್ಶಿಸಿದರೆ, ಸಂಸ್ಕೃತ ಯಾ ಪ್ರಾಕೃತದಿಂದ ಬಂದ ತತ್ಸಮ, ತದ್ಭವ, ಅರ್ಧ ತತ್ಸಮ, ಶಬ್ದಗಳಿಂದಲೇ ತುಂಬಿರುತ್ತದೆನ್ನಬೇಕು. ಇನ್ನು ಹಲವು ಶಬ್ದಗಳು ''ದೇಶಜ'' ಗಳೆಂದು ಹೇಳಲ್ಪಡುತ್ತವೆ. ಇದರ ಉತ್ಪತ್ತಿಯ ತಿಳುವಳಿಕೆಯು ಈವರೆಗೂ ಗೊತ್ತಾಗಿಲ್ಲದಕಾರಣ ನಾಮಕರಣವಿದನ್ನು ಮಾಡಿರುತ್ತಾರೆ.

ಅನ್ಯಭಾಷೆಗಳ ಪ್ರಭಾವ

ಹಿಂದೀಯ ಮೇಲೆ ಭಾರತೀಯ ಇತರ ಭಾಷೆಗಳ ಮತ್ತು ವಿದೇಶೀ ಭಾಷೆಗಳ ಪ್ರಭಾವವೂ ಚನ್ನಾಗಿ

ಬಿದ್ದಿದೆ. ಆದರೆ, ಆದಿನಿವಾಸಿ ದ್ರಾವಿಡರ ಭಾಷೆಗಳ ಪ್ರಭಾವವು ಮಾತ್ರ "ಪ್ರಾಕೃತ"ದ ಮೂಲಕ ಬಿದ್ದಿರುತ್ತದೆಂದು ಮಿ|| ಕೇಲಾಗರ ಮತ.

ಈಗ ಆಧುನಿಕ ಆರ್ಯ ಭಾಷೆಗಳ ಅಂದರೆ, ಮರಾಠೀ, ಬಂಗಾಲೀ, ಮೊದಲಾದುವುಗಳ ಪ್ರಭಾವವೂ ಸಾಕಷ್ಟು ಬೀಳುತ್ತಲೇ ಇದೆ

ವಿದೇಶೀ ಭಾಷೆಗಳಲ್ಲಿ ಮುಸಲ್ಮಾನರ ಭಾಷೆಗಳ ಪ್ರಭಾವವೂ, ಇಂದು ಇಂಗ್ಲಿಷ್ ಮತ್ತು ಪೋರ್ಚುಗೀಸ ಭಾಷೆಯ ಪ್ರಭಾವವೂ ಬೀಳದಿಲ್ಲ. ಮುಸಲ್ಮಾನರ ಭಾಷೆಗಳು, ಫಾರಸೀ, ಅರಬಿ, ಮತ್ತು ತುರ್ಕಿಯೆಂದು ಪರಿಗಣಿಸಲ್ಪಟ್ಟಿವೆ. ಉತ್ತರ ದೇಶದಲ್ಲಿ ಮುಸಲ್ಮಾನರ ಆಧಿಪತ್ಯವು ಹಲವು ಕಾಲದವರೆಗೇ ಇದ್ದ ಕಾರಣ ಈ ಭಾಷೆಗಳ ಶಬ್ದಗಳು ವ್ಯಾವಹಾರಿಕವಾಗಿ ಮಾತ್ರವಲ್ಲ, ಸಾಹಿತ್ಯದಲ್ಲಿಯೂ ಪ್ರಚಾರಗೊಂಡಿವೆ. ಅದೇ ರೀತಿ ಇಂಗ್ಲಿಷ್‌ನಿಂದಲೂ, ಇಂದು ವ್ಯವಹಾರದಲ್ಲಿ ಬೆಳದಿರುತ್ತನೆ. ಮತ್ತು ಸಾಹಿತ್ಯದಲ್ಲಿಯೂ ಸೇರುವ ಸಂಭವವಿದೆ.

ಸಾಹಿತ್ಯ ಪ್ರವಾಹ

ಹಿಂದೀ ಸಾಹಿತ್ಯದ ಇತಿಹಾಸವನ್ನು ಧ್ಯಾನಪೂರ್ವಕವಾಗಿ ನೋಡಿದರೆ, ಅದನ್ನು ನಾವು ಭಿನ್ನಭಿನ್ನಕಾಲಗಳಲ್ಲಿ ವಿಭಾಗಮಾಡಲು ಅಸಮರ್ಥರಾಗುತ್ತೇವೆ. ಅದರ ಇತಿಹಾಸವು ಒಂದು ದೊಡ್ಡ ನದಿಯಹಾಗೆ ಇದೆ. ಅದರ ಉತ್ಪತ್ತಿ ಸ್ಥಾನವು ಒಂದೇ ಆಗಿರುತ್ತದಾದರೂ, ಕೆಲವುಕಡೆ ಪೀನಕಾಯವಾಗಿಯೂ, ಕೆಲವು ಕಡೆ ಕ್ಷೀಣಕಾಯವಾಗಿಯೂ ಪ್ರವಹಿಸುತ್ತಲಿದೆ. ಯಾವರೀತಿ ನದಿಯ ಒಂದು ಧಾರೆಯು ಬೇರೆಯಾಗಿ ಎಂದೂ ಜೊತೆ ಸೇರದೆ, ಬೇರೆಯಾಗಿಯೇ ಹರಿಯುತ್ತಿರುತ್ತದೆಯೋ, ಮತ್ತು ಹಲವು ಭೂಭಾಗಗಳಿಗಾಗಿ ಹೋಗುತ್ತಿರುತ್ತದೆಯೋ ಅದೇರೀತಿ ಹಿಂದೀ ಸಾಹಿತ್ಯ ಸರಿತೆಯೂ, ಆರಂಭಿಕ ಅವಸ್ಥೆಯಿಂದ ಮೊದಲ್ಗೊಂಡು ಅನೇಕ ಪ್ರವಾಹೆಗಳ ರೂಪವಾಗಿ ಹರಿಯುತ್ತಲಿದೆ. ಮೊದಲು ಕವಿಗಳು ರಾಜಾಶ್ರಿತರಾಗಿ ಅವರ ಯಶೋಗಾನಕ್ಕೆ ತೊಡಗಿದರು. ಮತ್ತು ದೇಶದ ಇತಿಹಾಸವನ್ನು ಕವಿತಾರೂಪವಾಗಿ ಬರೆಯುತ್ತಿದ್ದರು. ಸಮಯ ಪರಿವರ್ತನದಿಂದ ಸಾಹಿತ್ಯದ ಈ ಸ್ಥೂಲಧಾರೆಯನೀರು ಭಗವದ್ಭಕ್ತಿರೂಪೀ ಇನ್ನೊಂದು ಧಾರೆಗೆ ಸೇರಿ ಕೃಶವಾಯಿತು. ಈ ಭಗವದ್ಭಕ್ತಿ ರೂಪೀ ಧಾರೆಯು ರಾಮಾನಂದ ನುತ್ತು ವಲ್ಲಭಾಚಾರ್ಯರ ಅವರೋಧದಿಂದ ಕೃಷ್ಣ--ಮತ್ತು-ರಾಮಭಕ್ತಿ ರೂಪವಾಗಿ ವಿಭಕ್ತವಾಯಿತು. ಮುಂದೆ ಕೇಶವ ದಾಸರ ಪ್ರತಿಭಾಪ್ರವಾಹದಿಂದ ಈ ಧಾರೆಗಳೆರಡರ ರೂಪವೂ ಪರಿವರ್ತಿತವಾಯಿತು. ಮೊದಲು ಭಾವ ವ್ಯಂಜನೆ ಮತ್ತು ವಿಚಾರಗಳ ಪ್ರತ್ಯಕ್ಷೀಕರಣದ ಕಡೆಗೆ ವಿಶೇಷಧ್ಯಾನವಿರುತ್ತಿತ್ತು. ಆದರೆ ಕೇಶವನ ಕಾಲದಲ್ಲಿ, ಸಾಹಿತ್ಯಶಾಸ್ತ್ರದ ಅಂಗಪ್ರತ್ಯಂಗದಮೇಲೂ ವಿಶೇಷ ದೃಷ್ಟಿಯಿಡಲಾರಂಭವಾಯಿತು. ಆದರೆ, ಈ ಸಾಹಿತ್ಯರಚನೆಗಳೆಲ್ಲವೂ, ಧಾರ್ಮಿಕ ಮತ್ತು ನೈತಿಕ ಮಾತ್ರವೇ ಆಗಿರುತ್ತಿದ್ದುವಲ್ಲದೆ, ವೈಜ್ಞಾನಿಕ, ಭೌಗೋಲಿಕ ಮೊದಲಾದುವುಗಳು ಸರ್ವಥಾ ಇಲ್ಲವೆಂದೇ ಹೇಳಬೇಕು.

ಉತ್ಪತ್ತಿ ಮತ್ತು ವಿಕಾಸ

ಹಿಂದೀ ಸಾಹಿತ್ಯದ ಉತ್ಪತ್ತಿ ಮತ್ತು ವಿಕಾಸವು ಸಾಧಾರಣ ಇಂಗ್ಲಿಷ್ ಮತ್ತು ಹಿಂದೀದು ಒಂದೇರೀತಿ ನಡೆದಿದೆಯೆಂದು ಪಂಡಿತರ ಮತವಾಗಿದೆ. ಹಿಂದಿಯ ಉತ್ಪತ್ತಿಯ ಕಾಲವು ಅನಿಶ್ಚಿತವಾಗಿರುತ್ತದಾದರೂ, ಇತಿಹಾಸಜ್ಞರು ವಿಕ್ರಮಾಯ ೭೦೨ ರೆಂದು ಹೇಳುತ್ತಾರೆ. ಇದೇ ಕಾಲವು ಇಂಗ್ಲಿಷ್ ಸಾಹಿತ್ಯದದ್ದೂ ಆಗಿದೆ. ಆದರೆ, ಇಂಗ್ಲಿಷ್ ಸಾಹಿತ್ಯವು ಇಷ್ಟು ಪ್ರಗತಿಪರ ಸ್ಥಿತಿಯಲ್ಲಿರುವುದಕ್ಕೂ ಹಿಂದೀ ಸಾಹಿತ್ಯವು ದುರ್ಗತಿಪರ ಸ್ಥಿತಿಯಲ್ಲಿರುವುದಕ್ಕೂ ಕಾರಣವೇನೆಂದು ಕೇಳಬಹುದು. ಅದಕ್ಕೆ ಒಂದೇ ಉತ್ತರವೇನಂದರೆ, ಯಾವ ಜಾತಿಯ ಪ್ರಾಪಂಚಿಕ ಉನ್ನತಿಯು ಮುಂದುವರಿಯುವಂತೆಯೇ ಅದರ ಭಾಷೆಯು ಉನ್ನತಿಗೊಳ್ಳುತ್ತದೆ. ಹಿಂದೀಯರೆಂದೂ, ಪಾರಲೌಕಿಕದಲ್ಲಿ ಆಸಕ್ತಿಯಿಟ್ಟಷ್ಟು ಐಹಿಕದಲ್ಲಿಟ್ಟವರಲ್ಲವಾದಕಾರಣವೇ ಹಿಂದೀ ಸಾಹಿತ್ಯದ ಪ್ರಗತಿಯೂ ಕುಂಠಿತವಾಯಿತು. ಆದರೆ, ಈ ಕುಂಠಿತವಾದ ಅಂಗವು ಈ ೨೦ನೇ ಶತಮಾನದಲ್ಲಿ ಬೆಳೆಯುತ್ತಿರುವುದು ಸಂತೋಷಕರ.

ಕವಿಜನ ಪರಿಚಯ

ಈಗ ನಾವು 'ಹಿಂದೀ ಕವಿಧುರೀಣ'ರಲ್ಲಿ ಕೆಲವರ ಪರಿಚಯಮಾಡಿ ಕೊಡುವುದು ನಮ್ಮ ಕರ್ತವ್ಯವೆಂದೆಣಿಸುತ್ತೇವೆ.

ಭಾಷೆಯುತ್ಪತ್ತಿಯ ಜೊತೆಯಲ್ಲೇ ಸಾಹಿತ್ಯವೂ ಉಂಟಾಗುವುದಿಲ್ಲ. ಆದಕಾರಣ ಹಿಂದೀ ಭಾಷೆಯ ಉತ್ಪತ್ತಿಯನಂತರ ಸಾಹಿತ್ಯದ ಉತ್ಪತ್ತಿಯು ಮೂರು ಶತಮಾನಗಳು ಕಳೆದಮೇಲೂ ಆಯಿತು. ಅಂದಿನಿಂದಲೇ ಅಂದರೆ ವಿಕ್ರಮಾಯ ೧೦೦೦ದಿಂದಲೇ ಹಿಂದೀ ಸಾಹಿತ್ಯದ ಪುಷ್ಟವಾದ ಮತ್ತು ವಿಶ್ವಾಸಾರ್ಹವಾದ ಇತಿಹಾಸವು ಸಿಗುತ್ತದೆ.

ಇದಕ್ಕೆ ಮೊದಲು ಅಂದರೆ, ವಿಕ್ರಮಾಯ ೯೯೦ರಲ್ಲಿ ಭಾಟನೂ, ೧೦೦೦ದಲ್ಲಿ ಭೂಪಾಲನೂ, ೧೧೩೭ರಲ್ಲಿ ರಾಜಾನಂದರೂ ಕವಿಗಳಾಗಿದ್ದರೆಂದು ಅಸ್ಪಷ್ಟಪ್ರಮಾಣಗಳಿಂದ ಊಹಿಸಲ್ಪಟ್ಟಿದೆ. ೧೧೮೦ರ ಸಮಯ ಮುಸಲ್ಮಾನರಲ್ಲಿ ಹಿಂದೀಕವಿಗಳಿಬ್ಬರಾಗಿದ್ದರೆಂದು ತಿಳಿಯುತ್ತದೆ. ಆದರೆ ಇವರಲ್ಲಿ ಯಾರ ಕವಿತೆಗಳೂ ಸಿಗುವುದಿಲ್ಲ. ಭೂಪಾಲನ ಶ್ರೀ ಭಗವದ್ಗೀತಾ ಅನುವಾದವು ಪದ್ಯರೂಪದಲ್ಲಿ ವಿರಚಿತವಾಗಿರುವುದು ಸಿಗುತ್ತದೆ. ಆದಕಾರಣ ಇವರಿಬ್ಬರನ್ನು ಪುರಾತನ ಕವಿಗಳೆಂದಷ್ಟೇ ಹೇಳಿ ಆದಿಕವಿಯ ಮಾನವನ್ನು ''ಚಂದವರದಾಯಿ'' ಯವರಿಗೆ ಸಲ್ಲಿಸುತ್ತೇವೆ.

ಹಿಂದೀ ಸಾಹಿತ್ಯದ ಜನನಕಾಲವು ಭಾರತೀಯ ರಾಜ್ಯಕ್ರಾಂತಿಯ ಸಮಯವಾಗಿತ್ತು. ಜನರ ಲಕ್ಷ್ಯವು ಪರಕೀಯ ಆಕ್ರಮಣಕಾರಿಗಳಿಂದ ತಮ್ಮ ರಕ್ಷಣೆಮಾಡಿಕೊಳ್ಳುವುದರಲ್ಲೇ ವ್ಯಗ್ರವಾಗಿತ್ತು. ಆದುದರಿಂದ ಸಾಹಿತ್ಯದ ಕಡೆಗೆ ಹೋಗದಿದ್ದದ್ದು ಸ್ವಾಭಾವಿಕವೇ. ಅಂತಹ ವಿಕಟಸಮಯದಲ್ಲಿಯೂ ಜನರಿಗೆ ಸಾಹಿತ್ಯರುಚಿಯಿರಲಿಲ್ಲವೆಂದಲ್ಲ. ಆದರೆ ಆಗ, ಶೃಂಗಾರ ಕವಿತೆಗಳಿಗೆ ಗೌರವವಿರದೆ, ಖಡ್ಗ ಮತ್ತು ಲೇಖನಿಗಳೆರಡರಲ್ಲಿಯೂ ಸಿದ್ಧ ಹಸ್ತರಾದ ಕವಿಗಳಿಗೇನೇ ಆದರ ಸಿಗುತ್ತಿತ್ತು. ಇಂತಹ ಕವಿಗಳಲ್ಲಿ ಆದಿಕವಿ ಚಂದವರದಾಯಿಯವರೂ, ಅವರ ಸಮಕಾಲೀನರಾದ ಜಗನಿಕ ಮತ್ತು ಕೇದಾರರು ಉಲ್ಲೇಖನೀಯರು. ''ಚಂದ''ನು ಕೇವಲ ಕವಿಯಾಗಿರದೆ, ಪೃಥ್ವೀರಾಜನ ಮಂತ್ರಿಯೂ, ವೀರಭಟನೂ ಆಗಿದ್ದನು. ಇವನಿಂದ ರಚಿತವಾದ ''ಪೃಥ್ವೀರಾಜರಾಸೋ'' ಎಂಬ ನವರಸಭರಿತವಾದ ಕಾವ್ಯವು ರಸಜ್ಞರಿಗೆ ರಸಿಕವಾಗಿದೆ. ಈ ರೀತಿ ನಾವು ಹಿಂದೀ ಸಾಹಿತ್ಯದ ಆದಿಕಾಲವನ್ನು ೧೦೦೦ದಿಂದ ೧೩೦೦ ತನಕವೆಂದು ಎಣಿಸಬಹುದು. ಈ ಕಾಲದಲ್ಲಿ ವೀರಕಾವ್ಯ ರಚನೆಗಳೇ ಅದುವು.

ಅನಂತರ ಮಾಧ್ಯಮಿಕ ಕಾಲವು ಮೊದಲಾಗುತ್ತದೆ. ಇದನ್ನು ನಾವು ೧೩೦೦ ರಿಂದ ೧೫೦೦ ರ ತನಕ ಮತ್ತು ೧೫೦೦ ರಿಂದ ೧೮೦೦ ತನಕ ಎರಡು ಭಾಗಗಳಲ್ಲಿ ವಿಭಾಗಿಸುತ್ತೇವೆ. ಈ ಕಾಲಗಳಲ್ಲಿ (ಆದಿಕಾಲದಲ್ಲಿಯೂ) ಕೇವಲ ಸಾಹಿತ್ಯಕ ದೃಷ್ಟಿಯಿಂದ ಕಾವ್ಯರಚನೆಗಳಾದುವೇ ಹೊರತು, ಇವುಗಳ ಮೂಲಕ ವಾಙ್ಮಯದ ಸರ್ವಾಂಗೀಣಉನ್ನತಿಯಾಗಲಿಲ್ಲ. ಇವುಗಳಲ್ಲಿ ಸಾಮಾಜಿಕ,ವೈಜ್ಞಾನಿಕ, ಭೌಗೋಲಿಕ ಮೊದಲಾದ ದೃಷ್ಟಿಗಳಿಂದ ಅಭಾವವೇ ತುಂಬಿತ್ತು. ಈ ಕಾಲಗಳೆರಡರಲ್ಲೂ ಪದ್ಯರಚನೆಯಾಗುತ್ತಿತ್ತೇ ಹೊರತು ಗದ್ಯರಚನೆಯಾಗುತ್ತಿರಲಿಲ್ಲ. ಈ ಮಾಧ್ಯಮಿಕ ಕಾಲದ ಪೂರ್ವಾರ್ಧದಲ್ಲಿ 'ಕಬೀರ'ರ ಹೆಸರು ಸುಪ್ರಸಿದ್ಧವಾಗಿದೆ ಇವರು ಹಿಂದೂ ಮುಸಲ್ಮಾನರ ಐಕ್ಯ ಮತ್ತು ಸಮಾಜದಲ್ಲಿ ಧರ್ಮದ ಹೆಸರಿನಿಂದ ನಡೆಯುತ್ತಿದ್ದ ಕೆಟ್ಟ ಪದ್ಧತಿಗಳನ್ನು ದೂರಮಾಡುವುದಕ್ಕಾಗಿ ಬಹಳ ಪ್ರಯತ್ನ ಪಟ್ಟರು. ಇವರ ಕವಿತೆಯು ಸರಳವಾಗಿಯೂ, ಭಾವನೋದ್ದೀಪಕವಾಗಿಯೂ ಇರುತ್ತದೆ. ಇವರು ಸಾಮಾಜಿಕ ಕ್ರಾಂತಿಕಾರರಲ್ಲಿ ಮೊದಲನೆಯವರೆನ್ನಬಹುದು. ಕಾಶೀಯಲ್ಲಿ ಸತ್ತರೆ ಮುಕ್ತಿ ಎಂಬ ವಿಶ್ವಾಸವು ಹಿಂದೂಗಳಲ್ಲಿ ಇಂದಿಗೂ ಪ್ರಚಲಿತವಾಗಿದೆ. ಆದರೆ, ಇದು ಧಾರ್ಮಿಕ ತತ್ವಕ್ಕೆ ವಿರುದ್ಧವಾಗಿರುತ್ತದೆಂದು ಕಬೀರರು ಮನಗೊಂಡು, ಇದಕ್ಕೆ ಪ್ರತಿಯಾಗಿ, ತಾವು ಕಾಶೀವಾಸಿಗಳಾಗಿದ್ದಾಗ್ಗೂ ಅಂತ ಸಮಯಕ್ಕೆ ಮಗಹರ ಎಂಬಲ್ಲಿಗೆ ಹೋದರು. ಆಗ ಅವರು, 'ಜೋ ಕಬೀರಾ ಕಾಶೀಮರ್ನೆ ತೋ ರಾಮ್ನೆ ಕೌನನಿಹೋರಾ' ಎಂದು ಸಮಾಧಾನ ಪಡಿಸಿದರಂತೆ! ಇವರ ಧರ್ಮಾನುಯಾಯಿಗಳು 'ಕಬೀರಪಂಥೀ' ಎನ್ನಿಸಿಕೊಳ್ಳುತ್ತಾರೆ. ಇವರ ಕಾಲ ೧೪೭೭.

ಇವರ ನಂತರ ಧಾರ್ಮಿಕ ಸಾಹಿತ್ಯಕ್ಕೆ ಮೊದಲಾಯಿತು. ಇದರ ಅಸ್ತಿಭಾರವು ಶ್ರೀ ರಾಮಾನಂದರಿಂದ (೧೪೫೭) ಹಾಕಲ್ಪಟ್ಟು ಅವರ ಶಿಷ್ಯರಾದ ಶ್ರೀ ವಲ್ಲಭಾಚಾರ್ಯರ (೧೫೭೦) ಕಾಲದಲ್ಲಿ ವಿಕಾಸಗೊಂಡಿತು.

ನಂತರದ ಉನ್ನತಿಯು ಭಕ್ತಿರಸಪ್ರಧಾನ ರಚನೆಗಳಿಂದಾಯಿತು. ಇದರಲ್ಲಿ ಎರಡು ವಿಭಾಗಗಳಾದುವು. ರಾಮ-ಕೃಷ್ಣ! ರಾಮಭಕ್ತಿ ಸರಿತೆಯ ಪ್ರವಾಹವು ಶ್ರೀ ತುಲಸೀದಾಸರ ಕಾಲದಲ್ಲಿ ಬೆಳೆಯಿತು. ಶ್ರೀ ತುಲಸೀದಾಸರ ಹೆಸರನ್ನು ತಿಳಿಯದ ಹಿಂದೂವಿಲ್ಲ! ಇವರ

ಕಾಲವು ೧೬೩೧ ರಿಂದ ೧೬೭೦ ರ ತನಕವೆನ್ನಬಹುದು. ಇವರು ವಾಙ್ಮಯದಲ್ಲಿ ಕವಿಗಳೂ, ಧರ್ಮದಲ್ಲಿ ಆಚಾರ್ಯರೂ ಆಗಿದ್ದರು. ಇವರಿಂದ ಉಪಕೃತವಾದಷ್ಟು ಹಿಂದೀ ವಾಙ್ಮಯ ಮತ್ತು ಹಿಂದೂ ಸಮಾಜವು ಬೇರೆ ಯವರಿಂದ ಆಗಿರಲಿಕ್ಕಿಲ್ಲ. ಇವರ ಪ್ರತಿಸ್ಪರ್ಧಿ ಕವಿಗಳು ಹಿಂದೀ ಸಂಸಾರದಲ್ಲಿ ಸಿಗುವುದು ವಿರಳ. ಶ್ರೀ ತುಲಸೀದಾಸರು ತಮ್ಮ ಕವಿತಾ ತರಂಗಿಣಿಯಲ್ಲಿ ಪ್ರಕೃತಿಯ ಯತಾರ್ಥವಾದ ಮತ್ತು ಮನೋಹರವಾದ ವರ್ಣನದಿಂದ ಈಶ್ವರ ಪ್ರಕೃತಿ, ಶಾಂತರಸ, ಕಾವ್ಯಾಂಗಗಳ ಮತ್ತು ಭಕ್ತಿರಸದ ಗಂಭೀರ ತರಂಗಗಳನ್ನುಂಟುಮಾಡಿದರೆಂದು ಅವರ ಕವಿತಾಸರಿತೆಯಲ್ಲಿ ಅವಗಾಹಿಸಿದವನಿಗೆ ವಿದಿತವೇ ಆಗಿರುತ್ತದೆ. ಭಕ್ತಿರಸದ ಗಂಭೀರ ಭಾವಗಳು ಇವರ ಕವಿತೆಯ ಪ್ರತಿ ಪದದಲ್ಲೂ ಗೋಚರವಾಗುತ್ತಿವೆ ಇವರ ರಾಮಚರಿತಮಾನಸವೆಂಬ ಹಿಂದೀ ಮಹಾ ಕಾವ್ಯವು ಸುಪ್ರಸಿದ್ಧವಾಗಿದೆ. ಇದನ್ನಲ್ಲದೆ ಇನ್ನೂ ಅವರು ಸಾಧಾರಣ ೭೫ ಗ್ರಂಥಗಳನ್ನು ರಚಿಸಿದರು!

ಶ್ರೀ ಕೃಷ್ಣಪ್ರೇಮೋನ್ಮತ್ತ ಕವಿಗಳಲ್ಲಿ ಸೂರದಾಸರ ಹೆಸರು ಅಮರವಾಗಿದೆ. ಅವರ ಒಂದೊಂದು ಕೃತಿಗಳು ಶ್ರೀ ಕೃಷ್ಣನ ಪ್ರೇಮ ಸರಿತೆಯ ಒಂದೊಂದು ತರಂಗಗಳಾಗಿವೆ. ಅದರಲ್ಲಿರುವ ಅಲಂಕಾರ ಸೌಂದರ್ಯ, ಭಾವಸೌಮ್ಯವ, ಶೈಲೀ ಮಾಧುರ್ಯ ಇವು ಅಪ್ರತಿಮವಾಗಿವೆ. ಇವರು ಕೃಷ್ಣನಲ್ಲಿ ಪ್ರಾರ್ಥಿಸಿಕೊಂಡು ಅಮರಣವಾಗಿ ಅಂಧರಾಗಿದ್ದರು. ಇವರು ರಚಿಸಿದ 'ಸೂರಸಾದರ'ವೆಂಬ ಕಾವ್ಯವು ಸುಂದರವಾಗಿದೆ. ಇವರ ರಚನೆಯು ಒಂದೂಕಾಲುಲಕ್ಷದಷ್ಟಿದೆಯಂತೆ! ಇವರ ಕಾಲವು ೧೫೮೦ ಆಗಿರುತ್ತದೆ.

ಬಾದಶಹ ಅಕಬರನ ಆಸ್ಥಾನವು, ಸೌಭಾಗ್ಯಸದನವಾಗಿದ್ದಂತೆ, ಸರಸ್ವತೀ ಸದನವೆಂದೂ ಖ್ಯಾತಿಗೊಂಡಿತ್ತು. ಅಲ್ಲಿ ಮಂಡಿಸಿರುತ್ತಿದ್ದ ಕವಿಗಳ ಕವಿತಾಜ್ಯೋತಿಯು ಇಂದೂ ಹಿಂದೀ ವಾಙ್ಮಯ ಪ್ರಪಂಚವನ್ನು ಬೆಳಗಿಸುತ್ತಲಿದೆ. ಬೀರಬಲ, ತಾನಸೇನ, ಮಹಾಕವಿಗಂಗ, ಮತ್ತು ಖಾನ ಖಾನಾ ರಹೀಮರು ಪ್ರಸಿದ್ಧರು. ರಹಿಮನ ಮುಸ್ಲಿಮ್ ಹೃದಯವು ಶ್ರೀಕೃಷ್ಣನ ಪ್ರೇಮದಿಂದ ಆಕೃಷ್ಟವಾಗಿ—ಕೃಷ್ಣಮಯವಾಗಿತ್ತು. ಆತನ ಕವಿತೆಗಳು ಹಿಂದೂ-ಮುಸ್ಲಿಮ್ ಐಕ್ಯವನ್ನು ಸಾಧಿಸುವುದಕ್ಕಾಗಿ ಬಹಳ ಉಪಯೋಗಗಳಾದುವು. ಅವರ ಹೃದಯವು ಸಾಂಸಾರಿಕ ವ್ಯವಹಾರದಿಂದ ಹೆದರುತ್ತಿತ್ತು. "ಸಾಂ ಜೇಸೇ ತೋ ಜಗನಾಹೀಂ—ಧೂದೇ ಮಿಲೈಂ ನ ರಾಮ?"

೧೬೪೪ ರಿಂದ ೧೭೨೯ ರ ತನಕ 'ಹಿಂದೀ ಆಚಾರ್ಯ' ಕೇಶವದಾಸರ ಅಖಂಡವಾದ ಕವಿತಾ ತರಂಗಿಣಿಯು ಹಿಂದೀ ವಾಙ್ಮಯ ಕ್ಷೇತ್ರವನ್ನು ಸಮೃದ್ಧವಾಗಿಟ್ಟಿತು. ಇವರ ರಚನಾಪ್ರಣಾಲಿಯು ಪ್ರಾಯಶಃ ಕ್ಲಿಷ್ಟ ಮತ್ತು ಶ್ಲಿಷ್ಟವಾಗಿರುತ್ತದಾದಕಾರಣ ಅಲ್ಪಜ್ಞರು ನಿಕೃಷ್ಟವೆನ್ನುತ್ತಾರೆ. ಆದರೆ ವಸ್ತುತಃ ಹಾಗಿಲ್ಲ ಇವರು ರಾಜಕವಿಳಾಗಿದ್ದರು. ಇವರು ಸಂಸ್ಕೃತದ ಪ್ರಕಾಂಡ ಪಂಡಿತರಾಗಿದ್ದ ಕಾರಣ ಹಿಂದೀಯಲ್ಲೂ ಇವರ ಸಂಸ್ಕೃತ ಪಾಂಡಿತ್ಯವು ಗೋಚರಿಸುತ್ತಿದೆ. ಇವರ ಕವಿತೆಗಳು ಸಾಮಾನ್ಯರಿಗಾಗಿ ರಚಿತವಾಗಿರದೆ, ಬುದ್ಧಿವಂತರಿಗೆ ಮಾತ್ರ ಅದರಲ್ಲಿ ಪ್ರವೇಶ ಇದೆಯೆಂದರೆ ಅತ್ಯುಕ್ತಿ ಆಗದು.

ಈ ಕಾಲದಲ್ಲಿ ಅಕಬರನ ದರ್ಬಾರಿಂದ ಹಿಂದೀಗೆ ಅನುಪಮಸಹಾಯವಾಯಿತು. ಇದೇ ಕಾಲವು ಇಂಗ್ಲೆಂಡಿನ ಎಲಿಜಬೆತ್‌ಳ ಸಮಯ. ಅಲ್ಲಿಯೂ ಈ ಮಹಾರಾಣಿಯ ಕಾಲದಲ್ಲಿ ಸಾಹಿತ್ಯದ ಉನ್ನತಿಯು ಸಂತೋಷಕರವಾಗಿ ಆಗುತ್ತಿತ್ತು. ಈ ಕಾಲದಲ್ಲಿ ಕೃಷ್ಣಪರವರ್ಣನವೂ, ರಾಮಪರವರ್ಣನವೂ ವಿಶೇಷದಲ್ಲಿತ್ತು. ಮೊದಲು ವ್ರಜಭಾಷೆಯ ಆಧಿಕ್ಯವೂ ತುಲಸೀಗಳ ಕಾಲದಲ್ಲಿ ಅವಧೀ ಪ್ರಾಬಲ್ಯವೂ ಪ್ರಬಲವಾಯಿತು.

ಮಾಧ್ಯಮಕಾಲದ ಉತ್ತರಾರ್ಧದಿಂದ ಪದ್ಯದೊಡನೆ ಗದ್ಯರಚನೆಯು ಅಂತಿಕ ರೂಪದಿಂದ ಆಗತೊಡಗಿತು.

ಈಕಾಲದಲ್ಲಿಯೂ ಮೊದಲು, ಜಹಾಂಗೀರ್, ಷಹಾಜಹಾನ್‌ರಿಂದ ಹಿಂದೀಯು ಗೌರವಿಸಲ್ಪಟ್ಟಿತಾದರೂ, ಔರಂಗಜೇಬನಿಂದ ತಿರಸ್ಕೃತವಾಗಿ ಫಾರ್ಸಿಯೇ ವರ್ಯಾದಿಸಲ್ಪಟ್ಟಿತು. ಆದಕಾರಣ, ಇಂದಿನವರೆಗೆ ಹಿಂದೀ ವಾಙ್ಮಯದಲ್ಲಿ ನ್ಯೂನವಾಗಿದ್ದ ಭಾಗಗಳಲ್ಲಿಂದಾದ ಜಾತೀಯ ಸಾಹಿತ್ಯವು ಔರಂಗಜೇಬನ ಹಿಂದೀ ದ್ವೇಷದಿಂದ ಬೆಳೆಯಲು ಮೊದಲಾಯಿತು. ಈ ಬೆಳವಣಿಗೆಯು ಸಂಪೂರ್ಣವಾಗಿ ಆಗಲಿಲ್ಲವೆಂಬುದು ನಿಜ.

ಈ ಕಾಲವು ಆದಿಕಾಲದಂತೇ ವೀರರಚನಾಕಾಲವಾಗಿತ್ತೆನ್ನುವುದರ ಜೊತೆಗೆ ನವರಸರಸಿಕವೆಂದೂ ಅನ್ನಬೇಕು. ಸೇನಾಪತಿ ಕವಿಯ ಓಜಸ್ವಿನಿಯಾದ ವಾಣಿಯೂ ರಾಜಾ ಜಸವಂತರ ಶಾಸ್ತ್ರೀಯ ರಚನೆಗಳು, (೧೬೫೧-೧೭೦೬) ಕದನಧಾರಾಪ್ರವಾಹನಾಗಿದ್ದುವು.

ಬಿಹಾರೀಲಾಲರ ಹೆಸರು, ಹಿಂದೀ ವಾಙ್ಮಯ ಕ್ಷೇತ್ರದಲ್ಲಿ ದೃಢಮೂಲವಾಗಿದೆ. ಇವರ ರಚನೆಯು, ಅಮೋಘವೂ, ಹೃದಯಗ್ರಾಹಿಣಿಯೂ, ಭಾವನೋತ್ಕಟವೂ ಆಗಿರುತ್ತದೆ. ಇವರು ರಚಿಸಿದ ಕಾವ್ಯವು 'ಬಿಹಾರೀ ಸತ ಸ ಈ' ಎಂಬುದೊಂದೇ. ಆದರೆ, ಇವರು ಇಷ್ಟು ಚಿಕ್ಕ ಗ್ರಂಥದಲ್ಲಿ 'ಕೊಡದಲ್ಲಿ ಕಡಲು' ಎಂಬ ನಾಣ್ಣುಡಿಯನ್ನು ಸಾರ್ಥಕಪಡಿಸಿದ್ದಾರೆ ಇವರ ಕವಿತೆಗಳು, ಅಲಂಕಾರಿಕ ಮತ್ತು ಭಾವಪ್ರದರ್ಶನದಲ್ಲಿ ಅನುಪಮಗಳಾಗಿರುತ್ತವೆ. ಇವರು 'ಹಿಂದೀ ಶೃಂಗಾರ'ರಾಗಿದ್ದರೆಂದರೆ ಅತಿಶಯೋಕ್ತಿಯಾಗದು.

ಭೂಷಣಕಾಲವು ಹಿಂದೀ ಭೂಷಣ ಮಾತ್ರವಲ್ಲದೆ ಹಿಂದೂ ಭೂಷಣವಾಗಿತ್ತು. ಭೂಷಣ ಕವಿಯ ಕವಿತೆಗಳು ಹಿಂದೂ ಪಾದಶಾಹಿಯ ಸ್ಥಾವನೆಗೆ ಅತ್ಯಂತ ಉಪಯೋಗಿಗಳಾದುವು. ಇವನು ಛತ್ರಪತಿ ಶಿವಾಜಿ ಮಹಾರಾಜರ ರಾಜಕವಿಯೂ, ವೀರ ಭಟನೂ ಆಗಿದ್ದನಂತೆ! ಇವನ ಕವಿತೆಗಳಲ್ಲಿ ರಾಷ್ಟ್ರೀಯತೆ ಜಾತೀಯತೆಗಳು ಹೊರಸೂಸುತ್ತಿರುವಷ್ಟು ಬೇರೊಂದರಲ್ಲಿಲ್ಲ. ಇವನ ಕವಿತೆಗಳು ಸಾಕ್ಷಾತ್ ವೀರರಸದ ಪ್ರತಿಮೂರ್ತಿಗಳೇ ಆಗಿರುತ್ತವೆ. ಇವನ ಕಾಲವು ೧೬೨೯ರಿಂದ ಮೊದಲಾಗುವುದು. ಇವನು ಶಿವರಾಜಭೂಷಣ, ಭೂಷಣ ಹಜಾರಾ, ಭೂಷಣ ಉಲ್ಲಾಸ ಎಂಬ ಗ್ರಂಥತ್ರಯವನ್ನು ರಚಿಸಿ ಹಿಂದೀ ಸಾಹಿತ್ಯ ದೇವಿಗೆ ರತ್ನತ್ರಯವನ್ನು ಸಮರ್ಪಿಸಿರುತ್ತಾನೆ. ಇವನ ಜೀವಮಾನವು ೧೦೪ ವರ್ಷದ ತನಕವಾಗಿತ್ತಂತೆ!

ಇವನ ಸಹೋದರ ಮತಿರಾಮನ ಕವಿತೆಗಳು, ಪ್ರಾಸಾದಗುಣಪೂರ್ಣವಾಗಿದ್ದು, ಶ್ರುತಿ ಮಧುರವಾಗಿರುತ್ತವೆ.

ಹಿಂದೀ ವಾಙ್ಮಯಾಕಾಶದಲ್ಲಿ ಸೂರ-ತುಲಸೀಯವರನ್ನು 'ಸೂರ್ಯ-ಚಂದ್ರ'ರೆಂದು ಗೌರವಿಸುತ್ತಿರುವಾಗ 'ಆಕಾಶ'ನೆಂದು ಯಾರನ್ನು ಮರ್ಯಾದಿಸಬೇಕು ಎಂದರೆ, ಆ ಮಾನವು 'ಕವಿದೇವ' ನಿಗೆ ಸಲ್ಲಬೇಕೆನ್ನಬಹುದು! ಸೂರ, ತುಲಸೀ, ದೇವ ಇವರನ್ನು ನವರತ್ನಗಳಲ್ಲಿ ಅರಿಸಿದೆ. ರತ್ನತ್ರಯಗಳೆಂದು ಹಿಂದೀ ಪಂಡಿತರು ಗೌರವಿಸುತ್ತಾರೆ ಈ ದೇವ ಕವಿಯ ಕಾಲವು ೧೭೫೩ರಿಂದ ಮೊದಲಾಗುವುದು. ಈ ಕಾಲದಲ್ಲಿ ಭಕ್ತ ಮೀರಾ, ಆಚಾರ್ಯ ಮನೀರಾಮ, ಗುರು ನಾನಕ, ರಾಣಾ ಅಜಿತಸಿಂಹರ ಹೆಸರು ಪ್ರಸಿದ್ಧವಾಗಿದೆ. ಈ ಕಾಲದಲ್ಲಿ ಸಂಸ್ಕೃತ ಗ್ರಂಥಗಳಲ್ಲಿ, ಕೆಲವು ಪೌರಾಣಿಕ, ಸಾಹಿತ್ಯಕ ಗ್ರಂಥಗಳ ಅನುವಾದವಾಯಿತು ಧರ್ಮಶಾಸ್ತ್ರ, ಜ್ಯೋತಿಷ್ಯದ ಭಾಷಾಂತರಗಳು ರಚಿತವಾದವು. ಮಧ್ಯಕಾಲದ ಕವಿ ಮುರಂಧರರ ಸಂಖ್ಯೆಯನ್ನು ಕೊಡುವುದು ಇಲ್ಲಿ ಅಸಾಧ್ಯವಾಗಿರುತ್ತದೆ.

ಈ ಕಾಲದಲ್ಲಿ ಪೂರ್ವಲು, ಸಂಸ್ಕೃತವಿಮಿಶ್ರಿತ, ನಂತರ ವ್ರಜ-ಅವಧೀಮಿಶ್ರಿತ ಹಿಂದೀಯಲ್ಲಿ ರಚನೆಗಳಾಗುತ್ತಿದ್ದುವು. ಕೊನೆಗೆ ಸಂಸ್ಕೃತವೇ ಪ್ರಾಬಲ್ಯಕ್ಕೆ ಬಂದಿತು ಈ ಸಮಯದಲ್ಲಿಯೇ 'ಖಡೀ ಬೋಲೀ'ಯಲ್ಲಿ ಕಾವ್ಯರಚನೆಗೆ ಮೊದಲಾಯಿತು. ಇದರ ಆದಿಕವಿಯು 'ಖುಸರೋ' ಎಂಬುವನು. ಇದರ ಉಗಮದ ಕಾಲನಿರ್ಣಯವಿನ್ನೂ ಸಂದಿಗ್ಧವಾಗಿಯೇ ಇದೆ ಇದು ಒಂದು ಹಿಂದೀಯ ಭೇದವಿಂದಿತ್ತು' ಹೇಳಿ ಮುದರಿಯುನೆವು ಇದರ ಪೂರ್ಣವಿಕಾಸವು ವರ್ತಮಾನಕಾಲದಲ್ಲೇ ಆಯಿತು.

ಆಂಗ್ಲರ ಪ್ರಭಾವ

೧೮೦೦ ರಿಂದ ನಾವು ವರ್ತಮಾನಕಾಲವೆಂದು ಗಣಿಸುತ್ತೇವೆ ಇದರ ಆದಿಕಾಲದಲ್ಲಿ 'ನೇನೇಪ್ರವೀಣ'ರೆಂಬ ಕವಿಗಳಾದರು ಈ ಸಮಯದಿಂದ ಹಿಂದೀ ಸಾಹಿತ್ಯದ ಮೇಲೆ ಆಂಗ್ಲೇಯರ ಪ್ರಭಾವವೂ ಬೀಳತೊಡಗಿತು ಛಾಪಖಾನೆಗಳ ಸ್ಥಾಪನೆಯಾಯಿತು. ಇದರಿಂದ ಆದ ಉಪಕಾರವು ಜಗತ್ತಿಗೇ ವಿದಿತವಾಗಿದೆ ಆದರೆ ಆಂಗ್ಲೇಯರ ಶಾಂತಿಯ ಪ್ರಭಾವವು ಚಿರಸ್ಥಾಯಿಯಾದ ಫಲವಾಗಿ 'ಶಾಂತಿ'ಯ ಹೆಸರು ಭೀರುತೆಯಲ್ಲಿ ಪರ್ಯವಸಾನಗೊಂಡಿತು! ಹಿಂದೂ ದೇಶದ ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯಲ್ಪಡುವ ಸಿಪಾಹೀ ವಿದ್ರೋಹದ ಕುರಿತಾಗಿ ತತ್ಕಾಲೀನ ಒಂದು ರಚನೆಯೂ ಇಲ್ಲದಿರುವುದೇ ಇದರ ಪ್ರಮಾಣವಾಗಿದೆ.

ಈ ಕಾಲದನಂತರ ಸ್ವಾಮೀ ದಯಾನಂದರು ಕ್ರಾಂತಿಕಾರೀ ಧಾರ್ಮಿಕ ಸಾಹಿತ್ಯದಿಂದ ಹಿಂದೀಯ ಅನುಪಮಸೇವೆ ಮಾಡಿದರು. ಇದೇ ಸಮಯದಿಂದ ಪದ್ಯಕ್ಕೆ ಹ್ರಾಸವೂ, ಗದ್ಯಕ್ಕೆ ಉದಯಕಾಲವೂ ಒದಗಿತು ಈಗ ಆಂಗ್ಲೇಯರ ಸಹವಾಸದ ಕಾರಣ ಸಾಹಿತ್ಯಕ್ಷೇತ್ರದಲ್ಲಿ ಹಲವು ಪರಿವರ್ತನಗಳೊದಗಿದವು. ಇಂದಿನಿಂದಲೆ ಹಿಂದೀ ವಾಙ್ಮಯದ ವ್ಯಾಪಕ ಉನ್ನತಿ ಸಾಧಕವಾದ ಅಂಗಗಳು ಬೆಳೆಯ

ತೊಡಗಿದುವು. ಇದರಿಂದ ಹಿಂದೀ ಭಾಷೆಗೆ ಜಗತ್ತಿನ ಸ್ವರೂಪದರ್ಶನದ ಸಂಯೋಗವೊದಗಿತು. ಗಿಲ್ಕ್ರೈಸ್ಟರಿಂದ ಪ್ರೆಸ್ಸುಗಳ ಸ್ಥಾಪನೆಯಾದಕಾರಣ ಗ್ರಂಥಾಭಿವೃದ್ಧಿಗೆ ಅನುಕೂಲವಾಯಿತು. ಕಲಾಕೌಶಲ್ಯದ ಅಭಿವೃದ್ಧಿಯಾದಂತೇ ತತ್ಸಂಬಂಧ ಸಾಹಿತ್ಯವೂ ವೃದ್ಧಿಗೊಳ್ಳತೊಡಗಿತು. ಈ ಗಿಲಂಂರಿಂದ ಮೊದಲಾಗುವ ಕಾಲವನ್ನು ಎರಡು ಭಾಗಗಳನ್ನಾಗಿ ವಿಂಗಡಿಸುತ್ತೇವೆ. ಭಾರತೇಯ ಕಾಲ ಮತ್ತು ಗದ್ಯಕಾಲವೆಂದು. ಈ ಕಾಲದಲ್ಲಿ ಪದ್ಯರಚನೆಯೇ ಇಲ್ಲವೆಂದಲ್ಲ; ಆದರೆ ಗದ್ಯಕ್ಕೆ ಪ್ರಾಧಾನ್ಯತೆಯಿರುವಕಾರಣ ಹೀಗೆನ್ನಬೇಕಾಯಿತು.

ಭಾರತೇಂದು

ಭಾರತೇಂದುಗಳು ಹಿಂದೀ ವಾಙ್ಮಯವನ್ನು ತಮ್ಮ ೩೪ ವರ್ಷಗಳ ಕಾರ್ಯಪ್ರಭಾವದಿಂದ ಉಪಕೃತ ಮಾಡಿದಷ್ಟು ಹಿಂದಿನ ಅಖಂಡಕಾಲದಲ್ಲೂ ಯಾರಿಂದಲೂ ಆಗಲಿಲ್ಲ. ಇವರೇ ಹಿಂದೀ ನಾಟಕಪ್ರವರ್ತಕರೆಂದು ಹೇಳಬೇಕು. ಇವರ ಮುಂಚೆ ಒಂದೆರಡು ಸಂಸ್ಕೃತ ನಾಟಕಗಳು ಅನುವಾದಿತವಾಗಿದ್ದುವಾದರೂ ಸ್ವತಂತ್ರ ನಾಟಕಗಳು ಇವರಿಂದಲೇ ಮೊದಲ್ಗೊಂಡುವು. ಇವರು ಗದ್ಯ-ಪದ್ಯ ರಚನೆಗಳೆರಡರಲ್ಲೂ ಪ್ರತಿಭಾಸಂಪನ್ನ ಸಿದ್ಧಹಸ್ತರಾಗಿದ್ದರು. ಇವರು ರಚಿಸಿದ ನಾಟಕಗಳು ೧೯ ಆಗಿದ್ದು ಇವರ ಚಿಕ್ಕ ದೊಡ್ಡ ಗ್ರಂಥಗಳ ಸಂಖ್ಯೆಯು ೧೭೩ ರಷ್ಟಿದೆ! ಈ ಕಾಲದಲ್ಲಿ ಶ್ರೀಧರ ಪಾಠಕ, ಚಿಂಚೋಲಕರ, ಬಾಲಕೃಷ್ಣಭಟ್ಟ ಮೊದಲಾದ ಅದ್ವಿತೀಯ ಕವಿನಟರಾಗಿದ್ದರು. ಇವರಲ್ಲಿ ಹಲವರು ಭಿನ್ನ ಭಾಷಾಭಾಷಿಗಳಾಗಿದ್ದರು. ಮುನ್ಷೀದೇವೀ ಪ್ರಸಾದರು ಕವಿಗಳೂ, ಇತಿಹಾಸ ಸಂಗ್ರಾಹಕರೂ ಆಗಿದ್ದು ಉತ್ತಮ ಲೇಖಕರಾಗಿದ್ದರು.

ಪತ್ರಸಂಪಾದನಕಲಾತರಂಗಿಣಿ

ಈ ಸಮಯದಲ್ಲಿಯೇ ಹಿಂದೀ ವಾಙ್ಮಯ ಸಾಹಿತ್ಯಕ್ಕೆ ಪತ್ರಸಂಪಾದನ ಕಲಾತರಂಗಿಣಿಯೂ ಸೇರಿತು. ಆದರಿಂದ ಆದ ವಾಙ್ಮಯದ ಅಭಿವೃದ್ಧಿಯು ಅಶಾತೀತವಾಗಿದೆಯೆನ್ನಬಹುದು. ಇಂದು ಹಿಂದೀ ವಾಙ್ಮಯದಲ್ಲಿ ಭಿನ್ನಭಿನ್ನ ವಿಷಯಕವಾದ ಉಚ್ಚಕೋಟಿಯ ಹಲವು, ಮಾಸಿಕ, ತ್ರೈಮಾಸಿಕ, ಪತ್ರ, ಪತ್ರಿಕೆಗಳಿರುವುದಲ್ಲದೆ ದೈನಿಕ, ಸಾಪ್ತಾಹಿಕ ವೃತ್ತಪತ್ರಗಳ ಸಂಖ್ಯೆಯು ಸಮರ್ಪಕವಾಗಿದೆ. ಹಿಂದೀ ಸಾಮಯಿಕ ಮತ್ತು ಸಾಹಿತ್ಯಕ ಪತ್ರ-ಪತ್ರಿಕೆಗಳು ಕೇವಲ ಹಿಂದೀ ತಾಯ್ನುಡಿಯಾಗಿರುವ ಪ್ರಾಂತದಲ್ಲೇ ಆಗಿರದೆ, ಪಂಜಾಬ್, ಬಂಗಾಳ, ಮಹಾರಾಷ್ಟ್ರ, ಗುಜರಾತ್, ಮದರಾಸ್, ಪ್ರಾಂತಗಳಲ್ಲಿಯೂ ನಡೆಯುತ್ತಲಿವೆ. ಇಂದಿನ ಯುಗದ ವಿಷಯವು 'ರಾಜಕೀಯ' ವಾಗಿರುವುದರಿಂದ ಈ ವಿಷಯದಲ್ಲಿ ಈ ಕ್ಷೇತ್ರವು ಮುಂದುನರಿಯುವಷ್ಟು ಬೇರೊಂದರಲ್ಲಿಲ್ಲವೆನ್ನಬಹುದು. ಸಾಮಾಜಿಕ, ಸಾಹಿತ್ಯಕ ಕ್ಷೇತ್ರಗಳಲ್ಲಿಯೂ ಉತ್ತಮ ತರಗತಿಯ ಪತ್ರ-ಪತ್ರಿಕೆಗಳಿವೆ. ಹಾಗೆಯೇ ಆಯುರ್ವೇದ, ಸಂಗೀತ, ವಿಜ್ಞಾನ ಧರ್ಮ ಇವುಗಳಿಗಾಗಿ ಪ್ರತ್ಯೇಕ ಪ್ರತ್ಯೇಕ ಸ್ವತಂತ್ರ ಪತ್ರಿಕೆಗಳಿವೆ. ಈ ಪತ್ರ-ಪತ್ರಿಕೆಗಳ ಮತ್ತು ಅವುಗಳ ಸುಯೋಗ್ಯ ಸಂಪಾದಕರ ಉಲ್ಲೇಖ ಮಾಡುವುದು ಈ ಸ್ಥಳಮರ್ಯಾದೆಯಲ್ಲಿ ಅಸಾಧ್ಯವಾಗಿರುತ್ತದೆ.

ನವಯುಗ

ವರ್ತಮಾನ ಹಿಂದೀ ವಾಙ್ಮಯದ ಭಿನ್ನಾಭಿನ್ನ ಭಾಗಗಳಲ್ಲಿಯೂ ಪ್ರಗತಿಯಾಗುತ್ತಲಿದೆ. ನಾಟಕ, ಕಾದಂಬರೀ ವಿಜ್ಞಾನ, ಅರ್ಥಶಾಸ್ತ್ರ, ಇತಿಹಾಸ, ಚರಿತ್ರಾತ್ಮಕ ಮೊದಲಾದ ವಿಭಾಗಗಳ ದಿಗ್ದರ್ಶನ ಮಾಡುವುದು ಶಕ್ಯ ಸಾಧ್ಯವಾಗುವ ಹಾಗಿಲ್ಲವಾದ ಕಾರಣ ಕೆಲವು ಮುಖ್ಯ ಲೇಖಕರ ನಾಮಲೇಖವನ್ನು ಮಾತ್ರ ಇಲ್ಲಿ ಮಾಡುವುದಕ್ಕೆ ನಾವು ಬಾಧ್ಯವಾಗಿದ್ದೇವೆ.

ಶ್ರೀ ಮಹಾವೀರ ಪ್ರಸಾದ ದ್ವಿವೇದೀಗಳು 'ಹಿಂದೀ ಮಹಾರಥೀ' ಯೆಂದು ಸುಪ್ರಸಿದ್ಧರಾಗಿದ್ದಾರೆ. ಇವರ ಪ್ರವೇಶವಿಲ್ಲದ ವಾಙ್ಮಯಕ್ಷೇತ್ರವಿಲ್ಲ. ಇವರಿಂದ ಲಿಖಿತ ಮತ್ತು ಸಂಪಾದಿತ ಗ್ರಂಥಗಳ ಸಂಖ್ಯೆಯು ೪೦ ಕ್ಕಿಂತ ಹೆಚ್ಚಿದೆ.

ಶ್ರೀ ಅಯೋಧ್ಯಾಸಿಂಹ ಉಪಾಧ್ಯಾಯರು 'ಖಡೀ ಬೋಲೀ' ಯ (ಹಿಂದೀ ಭೇದ) ಉತ್ತಮ ಕವಿಗಳು. ಇವರ 'ಪ್ರಿಯಪ್ರವಾಸ' ಕಾವ್ಯವು ಹಿಂದೀ ವಾಙ್ಮಯದಲ್ಲಿ ನೂತನ ಕ್ರಾಂತಿಯನ್ನೇ ಉಂಟುಮಾಡಿರುತ್ತದೆ.

ಶ್ರೀ ಕಿಶೋರೀಲಾಲ, 'ದೀನ' 'ರತ್ನಾಕರ' 'ಪೂರ್ಣ' 'ಭಗವಾನದಾಸ' 'ಮಿಶ್ರ' 'ಪೊದ್ದಾರ,

ಬಿಹಾರೀಲಾಲರ ಹೆಸರು, ಹಿಂದೀ ವಾಙ್ಮಯ ಕ್ಷೇತ್ರದಲ್ಲಿ ದೃಢಮೂಲವಾಗಿದೆ. ಇವರ ರಚನೆಯು, ಅನೋಘವೂ, ಹೃದಯಗ್ರಾಹಿಣಿಯೂ, ಭಾವನೋತ್ಕಟವೂ ಆಗಿರುತ್ತದೆ. ಇವರು ರಚಿಸಿದ ಕಾವ್ಯವು 'ಬಿಹಾರೀ ಸತ ಸಈ' ಎಂಬುದೊಂದೇ. ಆದರೆ, ಇವರು ಇಷ್ಟು ಚಿಕ್ಕ ಗ್ರಂಥದಲ್ಲಿ 'ಕೊಡದಲ್ಲಿ ಕಡಲು' ಎಂಬ ನಾಣ್ಣುಡಿಯನ್ನು ಸಾರ್ಥಕಪಡಿಸಿದ್ದಾರೆ. ಇವರ ಕವಿತೆಗಳು, ಆಲಂಕಾರಿಕ ಮತ್ತು ಭಾವಪ್ರದರ್ಶನದಲ್ಲಿ ಅನುಪಮಗಳಾಗಿರುತ್ತವೆ. ಇವರು 'ಹಿಂದೀ ಶೃಂಗಾರ'ರಾಗಿದ್ದರೆಂದರೆ ಅತಿಶಯೋಕ್ತಿಯಾಗದು.

ಭೂಷಣಕಾಲವು ಹಿಂದೀ ಭೂಷಣ ಮಾತ್ರವಲ್ಲದೆ ಹಿಂದೂ ಭೂಷಣವಾಗಿತ್ತು. ಭೂಷಣ ಕವಿಯು ಕವಿತೆಗಳು ಹಿಂದೂ ಪಾದಶಾಹಿಯ ಸ್ಥಾಪನೆಗೆ ಅತ್ಯಂತ ಉಪಯೋಗಿಗಳಾದುವು. ಇವನು ಛತ್ರಪತಿ ಶಿವಾಜಿ ಮಹಾರಾಜರ ರಾಜಕವಿಯೂ, ವೀರ ಭಟನೂ ಆಗಿದ್ದನಂತೆ! ಇವನ ಕವಿತೆಗಳಲ್ಲಿ ರಾಷ್ಟ್ರೀಯತೆ ಜಾತೀಯತೆಗಳು ಹೊರಸೂಸುತ್ತಿರುವಷ್ಟು ಬೇರೊಂದರಲ್ಲಿಲ್ಲ. ಇವನ ಕವಿತೆಗಳು ಸಾಕ್ಷಾತ್ ವೀರರಸದ ಪ್ರತಿಮೂರ್ತಿಗಳೇ ಆಗಿರುತ್ತವೆ. ಇವನ ಕಾಲವು ೧೬೫೧ರಿಂದ ಮೊದಲಾಗುವುದು. ಇವನು ಶಿವರಾಜಭೂಷಣ, ಭೂಷಣ ಹಜಾರಾ, ಭೂಷಣ ಉಲ್ಲಾಸ ಎಂಬ ಗ್ರಂಥತ್ರಯವನ್ನು ರಚಿಸಿ ಹಿಂದೀ ಸಾಹಿತ್ಯ ದೇವಿಗೆ ರತ್ನತ್ರಯವನ್ನು ಸಮರ್ಪಿಸಿರುತ್ತಾನೆ. ಇವನ ಜೀವಮಾನವು ೧೦೨ ವರ್ಷದ ತನಕವಾಗಿತ್ತಂತೆ!

ಇವನ ಸಹೋದರ ಮತಿರಾಮನ ಕವಿತೆಗಳು, ಪ್ರಸಾದಗುಣಪೂರ್ಣವಾಗಿದ್ದು, ಶ್ರುತಿ ಮಧುರವಾಗಿರುತ್ತವೆ.

ಹಿಂದೀ ವಾಙ್ಮಯಾಕಾಶದಲ್ಲಿ ಸೂರ-ತುಲಸೀಯ ವರನ್ನು 'ಸೂರ್ಯ-ಚಂದ್ರ'ರೆಂದು ಗೌರವಿಸುತ್ತಿರುವಾಗ 'ಆಕಾಶ' ನೆಂದು ಯಾರನ್ನು ಮರ್ಯಾದಿಸೆಬೇಕು ಎಂದರೆ, ಆ ಮಾನವು 'ಕವಿದೇವ' ನಿಗೆ ಸಲ್ಲಬೇಕೆನ್ನಬಹುದು! ಸೂರ, ತುಲಸೀ, ದೇವ ಇವರನ್ನು ನವರತ್ನಗಳಲ್ಲಿ ಅರಿಸಿದೆ. ರತ್ನತ್ರಯಗಳೆಂದು ಹಿಂದೀ ಪಂಡಿತರು ಗೌರವಿಸುತ್ತಾರೆ. ಈ ದೇವ ಕವಿಯ ಕಾಲವು ೧೭೫೨ರಿಂದ ಮೊದಲಾಗುವುದು. ಈ ಕಾಲದಲ್ಲಿ ಭಕ್ತ ವಿಠಾ, ಆಚಾರ್ಯ ಮನೀರಾಮ, ಗುರು ನಾನಕ, ರಾಣಾ ಅಜಿತಸಿಂಹರ ಹೆಸರು ಪ್ರಸಿದ್ಧವಾಗಿದೆ. ಈ ಕಾಲದಲ್ಲಿ ಸಂಸ್ಕೃತ ಗ್ರಂಥಗಳಲ್ಲಿ, ಕೆಲವು ಪೌರಾಣಿಕ, ಸಾಹಿತ್ಯಕ ಗ್ರಂಥಗಳ ಅನುವಾದವಾಯಿತು. ಧರ್ಮಶಾಸ್ತ್ರ, ಜ್ಯೋತಿಷ್ಯದ ಭಾಷಾಂತರಗಳು ರಚಿತವಾದವು. ಮಧ್ಯಕಾಲದ ಕವಿ ದುರಂಧರರ ಸಂಖ್ಯೆಯನ್ನು ಕೊಡುವುದು ಇಲ್ಲಿ ಅಸಾಧ್ಯವಾಗಿರುತ್ತದೆ.

ಈ ಕಾಲದಲ್ಲಿ ಮೊದಲು, ಸಂಸ್ಕೃತವಿಮಿಶ್ರಿತ, ನಂತರ ವ್ರಜ-ಅವಧೀಮಿಶ್ರಿತ ಹಿಂದೀಯಲ್ಲಿ ರಚನೆಗಳಾಗುತ್ತಿದ್ದುವು. ಕೊನೆಗೆ ಸಂಸ್ಕೃತವೇ ಪ್ರಾಬಲ್ಯಕ್ಕೆ ಬಂದಿತು. ಈ ಸಮಯದಲ್ಲಿಯೇ 'ಖಡೀ ಬೋಲೀ'ಯಲ್ಲಿ ಕಾವ್ಯರಚನೆಗೆ ಮೊದಲಾಯಿತು. ಇದರ ಆದಿಕವಿಯು 'ಖುಸರೋ' ಎಂಬುವನು. ಇದರ ಉಗಮದ ಕಾಲನಿರ್ಣಯವಿನ್ನೂ ಸಂದಿಗ್ಧವಾಗಿಯೇ ಇವೆ. ಇದು ಒಂದು ಹಿಂದೀಯ ಭೇದವಿಂದಿಸ್ಥೀ ಹೇಳಿ ಮುಂದರಿಯುವೆವು ಇದರ ಪೂರ್ಣವಿಕಾಸವು ವರ್ತಮಾನಕಾಲದಲ್ಲೇ ಆಯಿತು.

ಆಂಗ್ಲರ ಪ್ರಭಾವ

೧೮೦೦ ರಿಂದ ನಾವು ವರ್ತಮಾನಕಾಲವೆಂದು ಗಣಿಸುತ್ತೇವೆ. ಇದರ ಆದಿಕಾಲದಲ್ಲಿ 'ವೇನೀಪ್ರವೀಣ' ರೆಂಬ ಕವಿಗಳಾದರು. ಈ ಸಮಯದಿಂದ ಹಿಂದೀ ಸಾಹಿತ್ಯದ ಮೇಲೆ ಆಂಗ್ಲೇಯರ ಪ್ರಭಾವವೂ ಬೀಳತೊಡಗಿತು. ಛಾಪಖಾನೆಗಳ ಸ್ಥಾಪನೆಯಾಯಿತು. ಇದರಿಂದ ಅದ ಉಪಕಾರವು ಜಗತ್ತಿಗೇ ವಿದಿತವಾಗಿದೆ. ಆದರೆ ಆಂಗ್ಲೇಯರ ಶಾಂತಿಯ ಪ್ರಭಾವವು ಚಿರಸ್ಥಾಯಿಯಾದ ಫಲವಾಗಿ 'ಶಾಂತಿ'ಯ ಹೆಸರು ಭೀರುತೆಯಲ್ಲಿ ಪರ್ಯವಸಾನಗೊಂಡಿತು! ಹಿಂದೂ ದೇಶದ ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯಲ್ಪಡುವ ಸಿಪಾಹೀ ವಿದ್ರೋಹದ ಕುರಿತಾಗಿ ತತ್ಕಾಲೀನ ಒಂದು ರಚನೆಯೂ ಇಲ್ಲದಿರುವುದೇ ಇದರ ಪ್ರಮಾಣವಾಗಿದೆ.

ಈ ಕಾಲದನಂತರ ಸ್ವಾಮೀ ದಯಾನಂದರು ಕ್ರಾಂತಿಕಾರೀ ಧಾರ್ಮಿಕ ಸಾಹಿತ್ಯದಿಂದ ಹಿಂದೀಯ ಅನುಪಮಸೇವೆ ಮಾಡಿದರು. ಇದೇ ಸಮಯದಿಂದ ಪದ್ಯಕ್ಕೆ ಹ್ರಾಸವೂ, ಗದ್ಯಕ್ಕೆ ಉದಯಕಾಲವೂ ಒದಗಿತು. ಈಗ ಆಂಗ್ಲೇಯರ ಸಹವಾಸದ ಕಾರಣ ಸಾಹಿತ್ಯಕ್ಷೇತ್ರದಲ್ಲಿ ಹಲವು ಪರಿವರ್ತನಗಳೊದಗಿದವು. ಇಂದಿನಿಂದಲೇ ಹಿಂದೀ ವಾಙ್ಮಯದ ಪ್ರಾಸಂಚಿಕ ಉನ್ನತಿ ಸಾಧಕವಾದ ಅಂಗಗಳು ಬೆಳೆಯ

ತೊಡಗಿದುವು. ಇದರಿಂದ ಹಿಂದೀ ಭಾಷೆಗೆ ಜಗತ್ತಿನ ಸ್ವರೂಪದರ್ಶನದ ಸಂಯೋಗವೊದಗಿತು. ಗಿಲ್ಕ್ರಿಸ್ಟ್ ರಿಂದ ಪ್ರೆಸ್ಸುಗಳ ಸ್ಥಾಪನೆಯಾದಕಾರಣ ಗ್ರಂಥಾಭಿವೃದ್ಧಿಗೆ ಅನುಕೂಲವಾಯಿತು. ಕಲಾಕೌಶಲ್ಯದ ಅಭಿವೃದ್ಧಿಯಾದಂತೇ ತತ್ಸಂಬಂಧ ಸಾಹಿತ್ಯವೂ ವೃದ್ಧಿಗೊಳ್ಳತೊಡಗಿತು. ಈ ಗಿಲಂರಿಂದ ಮೊದಲಾಗುವ ಕಾಲವನ್ನು ಎರಡು ಭಾಗಗಳನ್ನಾಗಿ ವಿಂಗಡಿಸುತ್ತೇವೆ. ಭಾರತೇಯ ಕಾಲ ಮತ್ತು ಗದ್ಯಕಾಲವೆಂದು ಈ ಕಾಲದಲ್ಲಿ ಪದ್ಯರಚನೆಯೇ ಇಲ್ಲವೆಂದಲ್ಲ; ಆದರೆ ಗದ್ಯಕ್ಕೆ ಪ್ರಾಧಾನ್ಯತೆಯಿರುವಕಾರಣ ಹೀಗೆನ್ನಬೇಕಾಯಿತು

ಭಾರತೇಂದು

ಭಾರತೇಂದುಗಳು ಹಿಂದೀ ವಾಙ್ಮಯವನ್ನು ತಮ್ಮ ೩೪ ವರ್ಷಗಳ ಕಾರ್ಯಪ್ರಭಾವದಿಂದ ಉಪಕೃತ ಮಾಡಿದಷ್ಟು ಹಿಂದಿನ ಅಖಂಡಕಾಲದಲ್ಲೂ ಯಾರಿಂದಲೂ ಆಗಲಿಲ್ಲ. ಇವರೇ ಹಿಂದೀ ನಾಟಕಪ್ರವರ್ತಕರೆಂದು ಹೇಳಬೇಕು ಇವರ ಮುಂಚೆ ಒಂದೆರಡು ಸಂಸ್ಕೃತ ನಾಟಕಗಳು ಅನುವಾದಿತವಾಗಿದ್ದುವಾದರೂ ಸ್ವತಂತ್ರ ನಾಟಕಗಳು ಇವರಿಂದಲೇ ಮೊದಲ್ಗೊಂಡುವು. ಇವರು ಗದ್ಯ-ಪದ್ಯ ರಚನೆಗಳೆರಡರಲ್ಲೂ ಪ್ರತಿಭಾಸಂಪನ್ನ ಸಿದ್ಧಹಸ್ತರಾಗಿದ್ದರು. ಇವರು ರಚಿಸಿದ ನಾಟಕಗಳು ೧೯ ಆಗಿದ್ದು ಇವರ ಚಿಕ್ಕ ದೊಡ್ಡ ಗ್ರಂಥಗಳ ಸಂಖ್ಯೆಯು ೧೭೫ ರಷ್ಟಿದೆ! ಈ ಕಾಲದಲ್ಲಿ ಶ್ರೀಧರ ಪಾಠಕ, ಚಿಂಚೋಲಕರ, ಬಾಲಕೃಷ್ಣಭಟ್ಟ ಮೊದಲಾದ ಅದ್ವಿತೀಯ ಕವಿನರರಾಗಿದ್ದರು. ಇವರಲ್ಲಿ ಹಲವರು ಭಿನ್ನ ಭಾಷಾಭಾಷಿಗಳಾಗಿದ್ದರು. ಮುನ್ಷೀದೇವೀ ಪ್ರಸಾದರು ಕವಿಗಳೂ, ಇತಿಹಾಸ ಸಂಗ್ರಾಹಕರೂ ಆಗಿದ್ದು ಉತ್ತಮ ಲೇಖಕರಾಗಿದ್ದರು.

ಪತ್ರಸಂಪಾದನಕಲಾತರಂಗಿಣಿ

ಈ ಸಮಯದಲ್ಲಿಯೇ ಹಿಂದೀ ವಾಙ್ಮಯ ಸಾಹಿತ್ಯಕ್ಕೆ ಪತ್ರಸಂಪಾದನ ಕಲಾತರಂಗಿಣಿಯೂ ಸೇರಿತು. ಅದರಿಂದ ಆದ ವಾಙ್ಮಯದ ಅಭಿವೃದ್ಧಿಯು ಅಶಾತೀತವಾಗಿದೆಯೆನ್ನಬಹುದು. ಇಂದು ಹಿಂದೀ ವಾಙ್ಮಯದಲ್ಲಿ ಭಿನ್ನಭಿನ್ನ ವಿಷಯಕವಾದ ಉಚ್ಚಕೋಟಿಯ ಹಲವು, ಮಾಸಿಕ, ತ್ರೈಮಾಸಿಕ, ಪತ್ರ, ಪತ್ರಿಕೆಗಳಿರುವುದಲ್ಲದೆ ದೈನಿಕ, ಸಾಪ್ತಾಹಿಕ ವೃತ್ತಪತ್ರಗಳ ಸಂಖ್ಯೆಯು ಸಮರ್ಪಕವಾಗಿದೆ. ಹಿಂದೀ ಸಾಮಯಿಕ ಮತ್ತು ಸಾಹಿತ್ಯಕ ಪತ್ರ-ಪತ್ರಿಕೆಗಳು ಕೇವಲ ಹಿಂದೀ ತಾಯ್ನುಡಿಯಾಗಿರುವ ಪ್ರಾಂತದಲ್ಲೇ ಆಗಿರದೆ, ಪಂಜಾಬ್, ಬಂಗಾಳ, ಮಹಾರಾಷ್ಟ್ರ, ಗುಜರಾತ್, ಮದರಾಸ್, ಪ್ರಾಂತಗಳಲ್ಲಿಯೂ ನಡಿಯುತ್ತಲಿವೆ. ಇಂದಿನ ಯುಗದ ವಿಷಯವು 'ರಾಜಕೀಯ' ವಾಗಿರುವುದರಿಂದ ಈ ವಿಷಯದಲ್ಲಿ ಈ ಕ್ಷೇತ್ರವು ಮುಂದುನರಿಯುವಷ್ಟು ಬೇರೊಂದರಲ್ಲಿಲ್ಲವೆನ್ನಬಹುದು. ಸಾಮಾಜಿಕ, ಸಾಹಿತ್ಯಕ ಕ್ಷೇತ್ರಗಳಲ್ಲಿಯೂ ಉತ್ತಮ ತರಗತಿಯ ಪತ್ರ-ಪತ್ರಿಕೆಗಳಿವೆ. ಹಾಗೆಯೇ ಆಯುರ್ವೇದ, ಸಂಗೀತ, ವಿಜ್ಞಾನ ಧರ್ಮ ಇವುಗಳಿಗಾಗಿ ಪ್ರತ್ಯೇಕ ಪ್ರತ್ಯೇಕ ಸ್ವತಂತ್ರ ಪತ್ರಿಕೆಗಳಿವೆ. ಈ ಪತ್ರ-ಪತ್ರಿಕೆಗಳ ಮತ್ತು ಅವುಗಳ ಸುಯೋಗ್ಯ ಸಂಪಾದಕರ ಉಲ್ಲೇಖ ಮಾಡುವುದು ಈ ಸ್ಥಳ ಮರ್ಯಾದೆಯಲ್ಲಿ ಅಸಾಧ್ಯವಾಗಿರುತ್ತದೆ.

ನವಯುಗ

ವರ್ತಮಾನ ಹಿಂದೀ ವಾಙ್ಮಯದ ಭಿನ್ನಾಭಿನ್ನ ಭಾಗಗಳಲ್ಲಿಯೂ ಪ್ರಗತಿಯಾಗುತ್ತಲಿದೆ. ನಾಟಕ, ಕಾದಂಬರೀ ವಿಜ್ಞಾನ, ಅರ್ಥಶಾಸ್ತ್ರ, ಇತಿಹಾಸ, ಚರಿತ್ರಾತ್ಮಕ ಮೊದಲಾದ ವಿಭಾಗಗಳ ದಿಗ್ದರ್ಶನ ಮಾಡುವುದು ಪ್ರಕೃತ ಸಾಧ್ಯವಾಗುವ ಹಾಗಿಲ್ಲವಾದ ಕಾರಣ ಕೆಲವು ಮುಖ್ಯ ಲೇಖಕರ ನಾಮಲೇಖನವನ್ನು ಮಾತ್ರ ಇಲ್ಲಿ ಮಾಡುವುದಕ್ಕೆ ನಾವು ಬಾಧ್ಯವಾಗಿದ್ದೇವೆ.

ಶ್ರೀ ಮಹಾವೀರ ಪ್ರಸಾದ ದ್ವಿವೇದೀಗಳು 'ಹಿಂದೀ ಮಹಾರಥೀ' ಯೆಂದು ಸುಪ್ರಸಿದ್ಧರಾಗಿದ್ದಾರೆ ಇವರ ಪ್ರವೇಶವಿಲ್ಲದ ವಾಙ್ಮಯಕ್ಷೇತ್ರವಿಲ್ಲ. ಇವರಿಂದ ಲಿಖಿತ ಮತ್ತು ಸಂಪಾದಿತ ಗ್ರಂಥಗಳ ಸಂಖ್ಯೆಯು ೪೦ ಕ್ಕಿಂತ ಹೆಚ್ಚಿದೆ.

ಶ್ರೀ ಅಯೋಧ್ಯಾಸಿಂಹ ಉಪಾಧ್ಯಾಯರು 'ಖಡೀ ಬೋಲೀ' ಯ (ಹಿಂದೀ ಭೇದ) ಉತ್ತಮ ಕವಿಗಳು. ಇವರ 'ಪ್ರಿಯಪ್ರವಾಸ' ಕಾವ್ಯವು ಹಿಂದೀ ವಾಙ್ಮಯದಲ್ಲಿ ನೂತನ ಕ್ರಾಂತಿಯನ್ನೇ ಉಂಟುಮಾಡಿರುತ್ತದೆ.

ಶ್ರೀ ಕಿಶೋರೀಲಾಲ, 'ದೀನ' 'ರತ್ನಾಕರ' 'ಪೂರ್ಣ' 'ಭಗವಾನದಾಸ' 'ಮಿಶ್ರ' 'ಪೊದ್ದಾರ,

'ಮಿಠಾರ' 'ರಾಮದಾಸಗೌಡ' 'ನವರತ್ನ' 'ಪುರುಷೋತ್ತಮದಾಸ ಟಂಡನ್' 'ಶುಕ್ಲ' 'ಸನೇಹೀ' 'ಪಾಂಡೇಯ' 'ಮೈಥಿಲೀಶರಣಗುಪ್ತ' 'ಪ್ರಪಾಠೀ, 'ವಿಕಸಿತ' 'ವಿಯೋಗಿಹರಿ' 'ಕುಸುಮ' 'ನವೀನ' 'ಉಗ್ರ' 'ನಟವರ' 'ವಿಯೋಗೀ' ಇವರೇ ಮೊದಲಾದವರು ಖಡೀ-ಬೋಲೀಯ ಕವಿಗಳೂ, ಉತ್ತಮ ಲೇಖಕರೂ, ಸಾಹಿತ್ಯ, ವಿಜ್ಞಾನ, ಭಾಯಾವಾದ, ನಾಟಕ, ಕಾದಂಬರೀ ಮೊದಲಾದ ಭಾಗಗಳಲ್ಲಿ ಹಿಂದೀವಾಙ್ಮಯ ವರ್ಧಕರೂ ಆಗಿರುತ್ತಾರೆ. ರಾಜನೈತಿಕ ಲೇಖಕರಲ್ಲಿ, ಕಾಲೀಲಕರ, ಜವಾಹರಲಾಲ, ದೇಸಾಈ, ಜೋಶೀ, ಗಣೇಶ್ಶಂಕರ ವಿದ್ಯಾರ್ಥಿ 'ಮಿಶ್ರ' ಇಂದ್ರ, ಕೃಷ್ಣಕಾಂತ ಮಾಲವೀಯ, ಶ್ಯಾಮಸುಂದರ ದಾಸ್, ಮೊದಲಾದ ಗಣ್ಯಮಾನ್ಯ ಹಿಂದೂ ಮುಸಲ್ಮಾನ ಲೇಖಕರು ಪ್ರಸಿದ್ಧರಾಗಿದ್ದಾರೆ. ಇವರಲ್ಲ ಅನೇಕರು ಪತ್ರಸಂಪಾದಕರೂ, ಮಹಾಕವಿಗಳೂ, ವಿಶ್ವವಿದ್ಯಾನಿಲಯಗಳ ಆಚಾರ್ಯರೂ, ಆಗಿರುತ್ತಾರೆ. ಸಾಮಾಜಿಕ ಲೇಖಕರಲ್ಲಿ ಶ್ರೀ ರಾಮರಖಸಿಂಗಸಹಗಲರ ಹೆಸರು ಸುಪ್ರಸಿದ್ಧವಾಗಿದೆ. ಮಹಾತ್ಮಾಜೀಯವರ ಹೆಸರನ್ನು ಯಾವ ಲೇಖಕರಿನ್ನುವುದೋ ತೋರುವುದಿಲ್ಲ. ಕಾರಣ ಅವರು ಬರಿಯದ ವಿಷಯವಿಲ್ಲ. ಅವರು ಬರೆದಿರುವ ಸಾಹಿತ್ಯ, ಧಾರ್ಮಿಕ ಮೊದಲಾದ ಗ್ರಂಥಗಳ ವಿಮರ್ಶೆಯನ್ನು ಓದಿದರೆ ಇವರನ್ನು ಒಂದು ಕಾಪಿಯ ಮರ್ಯಾದಿತ ಲೇಖಕರೆನ್ನುವುದಸಾಧ್ಯ.

ಕಾಪಂಬರೀ ಲೇಖಕರಲ್ಲಿ ಶ್ರೀ ಪ್ರೇಮಚಂದ ಬಿ. ಎ. ಯವರು ಅಪ್ರತಿಮರಾಗಿದ್ದಾರೆ. ಇವರಿಗೆ ಹಿಂದೀ ಪಂಡಿತರು 'ಉಪನ್ಯಾಸ ಸಮ್ರಾಟ್' ಎಂದು ಗೌರವಿಸುತ್ತಾರೆ. ಇವರು 'ಹಂಸ' ಎಂಬ ಮಾಸಿಕ ಪತ್ರಿಕೆಯ ಸಂಪಾದಕರು. ನಾಟಕ ವಿಭಾಗದಲ್ಲಿ ಶ್ರೀ ರಘುವೀರಶರಣ, ಈಶ್ವರೀ ಪ್ರಸಾದರ ಹೆಸರುಗಳು ಸುಪ್ರಸಿದ್ಧವಾಗಿವೆ.

ಹಿಂದೀ ಸಾಹಿತ್ಯ ಸಮ್ಮೇಳನದ ಅಧಿವೇಶನಗಳು ಕ್ರಮವಾಗಿ ನಡಿಯುತ್ತಲಿದ್ದು ಹಿಂದೀ ವಾಙ್ಮಯದ ಅಭಿವೃದ್ಧಿಯು ಈ ಸಂಸ್ಥೆಯಿಂದ ಉತ್ತಮರೀತಿಯಾಗಿ ಸಂಪಾದಿಸಲ್ಪಡುತ್ತಿದೆ. ಈ ಸಮ್ಮೇಳನವು ಉತ್ತಮೋತ್ತಮ ಗ್ರಂಥಸಂಗ್ರಹ, ಗ್ರಂಥರಚನೆ, ಪತ್ರಸಂಪಾದನೆಗಳನ್ನು ನಡಿಸುತ್ತಿದ್ದು, ಸಂಸ್ಥೆಯ ಕಡೆಯಿಂದ ಪ್ರತಿವರ್ಷವೂ ಹಿಂದೀ ಪರೀಕ್ಷೆಗಳು ನಡಿಯುತ್ತಲಿದೆ.

ರಾಷ್ಟ್ರಭಾಷೆ

ಹಿಂದೀ ವಾಙ್ಮಯದ ಮುಖ್ಯ ವಿಶೇಷವಂದರೆ, ಹಿಂದೂಸ್ಥಾನಿಗಳಿಗೆ ಹಿಂದೀ ಒಂದನ್ನು ಕಲಿಯುವುದರಿಂದಲೇ ಜಗತ್ತಿನ ವಾಙ್ಮಯ ದರ್ಶನವನ್ನು ಮಾಡಬಹುದು ಹಿಂದೀಯಲ್ಲಿ ಭಾರತೀಯ ವಾಙ್ಮಯದಿಂದಲೂ, ಇತರ ವಿದೇಶೀಯ ವಾಙ್ಮಯಗಳಿಂದಲೂ, ದಿನೇ ದಿನೇ ಅನುವಾದಗಳು ಉತ್ತಮರೀತಿಯಿಂದ ಆಗುತ್ತಲಿವೆ ಈ ತರಹದ ಸೌಲಭ್ಯವು ಇತರ ಯಾವ ಭಾರತೀಯ ಭಾಷೆಯಲ್ಲೂ ಇಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಹಿಂದಿಯೇ ಹಿಂದೂ ದೇಶದ ರಾಷ್ಟ್ರಭಾಷೆಯೆಂದು ಮೊದಲಿನಿಂದಲೂ, ಸಿದ್ಧವಾಗಿತ್ತಾದರೂ, ಇದರ ಆವಶ್ಯಕತೆ, ಉಪಯುಕ್ತತೆ, ಅರ್ಹತೆಯನ್ನು ಮಹಾತ್ಮಾಜೀಯವರೇ ಜನತೆಗೆ ತೋರಿಸಿದರು. ಇದಕ್ಕೆ ಮೊದಲೇ ಲೋಕಮಾನ್ಯ ತಿಲಕರೂ ಹಿಂದಿಯೇ ಹಿಂದೂಸ್ಥಾನದ ರಾಷ್ಟ್ರ ಭಾಷೆಯೆಂದು ಹೇಳಿದ್ದರು

ಹಿಂದಿಯು ಭಾಷಾದೃಷ್ಟಿಯಿಂದ ಮತ್ತು ಸಾಹಿತ್ಯ ದೃಷ್ಟಿಯಿಂದ ಹಿಮಾಲಯದಿಂದ ಮಹಾರಾಷ್ಟ್ರದ ವರೆಗೂ, ಪರಿಚಿತವಾಗಿದೆ. ಇಲ್ಲವೆಂದರೆ, ದ್ರಾವಿಡ ದೇಶಗಳಲ್ಲಿ. ಇಂದು ಹಿಂದಿಯ ರಾಷ್ಟ್ರಭಾಷಾಧಿಕಾರವು ಸಿದ್ಧವಾಯಿತು ರಾಷ್ಟ್ರಪತಿ ಜವಾಹರಲಾಲರು, ರಾಷ್ಟ್ರಪತಿಯ ಭದ್ರಾಸನದಿಂದ ತಮ್ಮ ಅವೇಳೆ ಭಾಷಣವನ್ನು ಹಿಂದೀಯಲ್ಲಿ ಮಾಡಿದರು.

ಇಂತು ಆದರ್ಶ ಪುರುಸರ ಬೆಂಬಲವಿರುವಾಗ ಹಿಂದಿಯು ಹಿಂದಾಗದು. ಇಂದು ಸರಕಾರವೂ ಹಿಂದೀಭಾಷೆಯೇ ಹಿಂದೂದೇಶದ ರಾಷ್ಟ್ರಭಾಷೆಯೆಂದು ಮನಗಂಡಂತೆ ಕಾಣಬರುತ್ತಲಿದೆ. ಅಲ್ಲಲ್ಲಿ ತಮ್ಮ ವಿದ್ಯಾಇಲಾಖೆಗಳಲ್ಲಿ ಹಿಂದಿಗೂ ಸ್ಥಾನ ದೊರಕತೊಡಗಿದೆ. ಈ ರೀತಿಯಲ್ಲಿ ಜನತೆ ಮತ್ತು ಸರಕಾರದ ಸಹಾಯವು ದೊರಕಿದರೆ, ನಮ್ಮ ಮಾತೃಭೂಮಿಯು ಹಿಂದೀನುಡಿಯಲ್ಲಿ ಮಾತನಾಡುತ್ತಿರುವುದನ್ನು ನಾವು ಕಾಣಬಹುದು; ಹಾಗಾಗಬಹುದೆಂಬ ವಿಶ್ವಾಸವೂ ದೃಢವಾಗಿದೆ.

ಮಂಗಳಸೂಚನೆ

ಪ್ರಾಚೀನ ಕಾಲದಲ್ಲಿ ರಾಜಕೀಯ ಸಾಹಿತ್ಯವು ಕಮ್ಮಿ ಇತ್ತು. ಆದರೆ ಈ ಇಪ್ಪತ್ತನೇ ಶತಮಾನದಲ್ಲಿ ವೃದ್ಧಿಗೊಳ್ಳುತ್ತಲಿದೆ. ಇದರಲ್ಲಿಯೂ, ಇಂದಿನ ಸ್ವಾ

ತಂತ್ರ್ಯರಣ ದುಂದುಭಿಯು ಮೊಳಗಿದಂದಿನಿಂದ, ಕವಿಗಳ ವೀರವಾಣಿಯೂ ಧ್ವನಿತವಾಗತೊಡಗಿದೆ. ಈಗಿನ ತನಕ ಆಗಿರುವ ಹಿಂದೀ ವಾಙ್ಮಯದ ಉನ್ನತಿಯು ಸರ್ವಾಂಗೀಣವಾಗಿಯುವುದಿಲ್ಲವಾದರೂ, ಇಂದಿನ ವಾಙ್ಮಯ ವೃದ್ಧಿಯ ನೋಟವನ್ನು ನೋಡಿದರೆ, ನಿರಾಶರಾಗುವ ಕಾರಣವಿಲ್ಲ. ಸದ್ಯದಲ್ಲೇ ನಮ್ಮ ಹಿಂದೀ ಬಾಲೆಯೂ ಯೋಗ್ಯಳಾಗಿ, ಸುಯೋಗ್ಯಪುರಸ್ಕಾರವನ್ನು ಭಾರತಮಾತೆಯಿಂದ ಹೊಂದುವಳೆಂಬ ವಿಶ್ವಾಸವಿದೆ. ಆ ಪುರಸ್ಕಾರವು ರಾಷ್ಟ್ರಭಾಷಾಪದಪ್ರದಾನ! ಹಿಂದಿಯ ಭಿನ್ನ ಭಾಷಾಭಾಷಿಗಳಲ್ಲಿ, ಶ್ರೀ ಪಾದ ದಾಮೋದರ ಸಾತವಳೇಕರ್, ಕಾಲೇಲಕರ, ಭಿಡೆ, ತಾಮ್ಹನಕರ್, ಗರ್ದೆ, ಫಡಕೆ, ಬಾಪಟ, ವೈದ್ಯ ಮೊದಲಾದ ಮಹಾರಾಷ್ಟ್ರೀಯರೂ, ಇನ್ನು ಇತರ ಪಂಜಾಬೀಗಳೂ, ಬಂಗಾಲೀಗಳೂ, ಜಹೂರ್‌ಬಖ್ಷ್, ಅನ್ಸಾರೀ, ಮೊದಲಾದ ಮುಸಲ್ಮಾನರೂ, ಶ್ರೀ ತಾರಾನಾಥ ಮೊದಲಾದ ಕನ್ನಡಿಗರೂ, ಪ್ರಸಿದ್ಧ ಲೇಖಕರಾಗಿದ್ದಾರೆ ಮಹಾತ್ಮಾಜೀಯವರ ಮಾತೃಭಾಷೆಯು ಗುಜರಾಥೀ. ಅವರ ಹಿಂದೀ ಪಾಂಡಿತ್ಯವು ಹಿಂದೀಯರಿಂದ ಮರಿಯಾಗಿಲ್ಲ!

ವಂಗ ವಾಙ್ಮಯ ಕಥಾನಕ

(ಶ್ರೀ ಬಾಬು ಮೋಹಿತ ಕುಮಾರ ಬಾನರ್ಜಿ, ಶಾಂತಿನಿಕೇತನ)

ಕವಿತೆಯ ನಾಡು

ಬಂಗಾಳವು ಕವಿತೆಯ ನಾಡು; ಹಕ್ಕಿಗಳ ಚಿಲಿಪಿಲಿಯೇ ಕವಿತೆ; ನದಿಗಳಾದರೋ ಸರಾಗವಾಗಿ ಹರಿಯುತ್ತವೆ; ಮಕ್ಕಳ ಅಳುವು ಶೃತಿಬದ್ಧವಾಗಿರುತ್ತದೆ. ಈ ನಾಡಿನಲ್ಲಿ ಪಾಮರ ಜನರ ಧರ್ಮಪ್ರಸಂಗಗಳೆಲ್ಲ ಕವಿತೆಗಳೆ. ಖಗೋಳ, ಆಯುರ್ವೇದ, ಮೊದಲಾದ ಶಾಸ್ತ್ರಗಳೂ ಸಹ ಕವಿತೆಯಲ್ಲಿವೆ. ಹೆಚ್ಚೇನು ನಮ್ಮ ಹಿರಿಯರು ನಮಗೆ ಬಿಟ್ಟಿರುವ ಆಸ್ತಿಯೆಲ್ಲ ಕವಿತೆಯೆ ಪ್ರಾಚೀನ ವಂಗೀಯ ವಾಙ್ಮಯವೆಲ್ಲ ಕವಿತಾಪ್ರಧಾನವಾದುದು.

ಮಾನವ ಹೃದಯದೊಳಗಿನ ಭಾವ ತರಂಗಗಳನ್ನೂ, ಕ್ರಿಯಾಕಲಾಪಗಳನ್ನೂ ಅವನುಹೊರಪಡಿಸಲೇಬೇಕು ಅದೇ ವಾಙ್ಮಯದ ಮೂಲ ಇದು ಎಲ್ಲ ನಾಡುಗಳಿಗೂ ಸಮಾನವಾದ ಧರ್ಮ. ಈ ನಿಸರ್ಗ ಧರ್ಮಕ್ಕೆ ಬಂಗಾಳವೂ ಕಟ್ಟುಬಿದ್ದಿದೆ

ಬೌದ್ಧಧರ್ಮಪ್ರಭಾವ

ಬುದ್ಧ ಧರ್ಮವಾಹಿನಿಯು ಸುಂದರ ವಂಗರಾಷ್ಟ್ರದಲ್ಲಿ ಹರಿಯಲಾರಂಭಿಸಿತು. ಆಗ ಉತ್ತಮ ಕುಲದವರು ಜನಸಾಮಾನ್ಯದ ಭಾಷೆಯಾದ ಪ್ರಾಕೃತವನ್ನು ಸಂಸ್ಕೃತಗೊಳಿಸಿದರು; ಬ್ರಾಹ್ಮಣ ಧರ್ಮಪ್ರಚಾರ ಸಾಧನವನ್ನಾಗಿ ಮಾಡಿದರು. ಜನಸಾಮಾನ್ಯರಲ್ಲಿ ಬೌದ್ಧ ಧರ್ಮ ಶ್ರದ್ಧೆಯು ಬೇರೂರಿತ್ತು. ಬ್ರಾಹ್ಮಣ ಧರ್ಮಪ್ರಚಾರಕರು ಉಪಯೋಗಿಸಿದ ಭಾಷೆಯು ಸಾಮಾನ್ಯ ಜನರಿಗೆ ಕಷ್ಟವಾಗಿತ್ತು. ಆದಕಾರಣ ಅವರು ಸುಲಭವಾದ ಭಾಷೆಯ ಕಡೆ ದೃಷ್ಟಿಯಿಟ್ಟರು. ಅದೇ 'ಬಂಗಾಳ'ಗೆ ಮೂಲ. ಪಾಮರಜನಸೇವೆಗಾಗಿ ರಾಮಾಯಿ ಪಂಡಿತನು 'ಸನ್ಯಪುರಾಣ' ಬರೆದನು; ಮಾಣಿಕಚಂದ್, ರಾಜಗೋವಿಂದ ಚಂದ್ರ, ಮಯನವತಿ ಮೊದಲಾದವರು (ಸುಮಾರು ಕ್ರಿ. ಶ. ೧೦೦೦) ಹಾಡಿದರು. ಇವರ ಬರಹಗಳಲ್ಲೂ ಬೌದ್ಧಧರ್ಮ ಪ್ರಕೃತಿಯ ಲಕ್ಷಣಗಳು ಕಾಣಬರುತ್ತವೆ.

ವೈಷ್ಣವಯುಗ

ಕೊಂಚಕಾಲಾನಂತರ ಬೌದ್ಧಯುಗ ಲಕ್ಷಣಗಳಿಂದ ಬಂಗಾಳಿಯು ದೂರವಾಯಿತು. ಅದರೇನು ಕೂಡಲೆ ವಾಙ್ಮಯವು ವೈಷ್ಣವಧರ್ಮ ಪ್ರಭಾವಕ್ಕೆ ಸಿಕ್ಕಿಬಿದ್ದಿತು. ಲಕ್ಷ್ಮಣಸೇನನ ಆಸ್ಥಾನ ಕವಿಯಾದ ಜಯದೇವ, ಶಿವಸಿಂಹರಾಯನ ಆಸ್ಥಾನಕವಿಯಾದ ವಿದ್ಯಾಪತಿ,

ಈಕ್ಷಣವೂ ಸಹ ರಾಮಪ್ರಸಾದನ ಕಾಲೀಗೀತೆಗಳು ಕೇಳುವುತ್ತವೆ. ನಿವೇದಿತಾ ಸೋದರಿಯು ಈತನನ್ನು ಏಲಿಯಂ ಬ್ಲೇಕ್ ಕವಿಗೆ ಹೋಲಿಸಿದಳು. ಈ ಹೋಲಿಕೆಯಲ್ಲಿ ಎಳ್ಳಷ್ಟೂ ಅತಿಶಯವಿಲ್ಲ. ರಾಮಪ್ರಸಾದನ ಕವಿತೆಯಲ್ಲಿ ದಾರ್ಶನಿಕನ ಧ್ವನಿಯೂ ಭಕ್ತನ ಪರವಶತೆಯೂ ಕಂಡುಬರುತ್ತದೆ.

ನವಯುಗ

೧೯ನೆಯ ಶತಮಾನ ಬಂತು. ನಮ್ಮ ಸಾಹಿತ್ಯವು ರೂಪವನ್ನೇ ಬದಲಾಯಿಸಿತು. ಬ್ರಿಟಿಷರು ಬಂದರು. ಪಾಶ್ಚಾತ್ಯವಿದ್ಯಾಪ್ರಚಾರವಾಗುತ್ತ ಬಂತು. ಶಿಕ್ಷಿತರಾದ ಬಂಗಾಳಿಗಳು ಸಾಹಿತ್ಯಕ್ಕೊಂದು ಹೊಸಹುರುಪು ಕೊಟ್ಟರು. ಈ ನವಜೀವನದಾತರಲ್ಲಿ ಕಾರೆ ಮತ್ತು ಮಾರ್ಷ್‌ಮನ್‌ರಂತಹ ಮಿಷನರಿಗಳ ಹೆಸರುಗಳನ್ನು ಹೇಳದಿರಲಾಗದು. ಈಶ್ವರಚಂದ್ರಗುಪ್ತನನ್ನು ನವಯುಗದ ಜನಕನೆಂದು ಹೇಳಬಹುದು. ಹೊಸ ಕಾಲದ ಹೊಸ ಕವಿತೆಗೆ ಮೊದಲಿಗನೀತನೆ. ಮತ, ಪ್ರೇಮಗಳೆಂಬೆರಡು ಪ್ರಕೃತಿಗಳಿಂದ ಬಂಧಿತವಾಗಿದ್ದ ಕವಿತೆಗೆ ಇವನು ಮೋಕ್ಷದಾಯಕನು. ಇವನು ಧಾರ್ಮಿಕ, ಸಾಮಾಜಿಕ, ನೈತಿಕ ಮೊದಲಾದ ಎಲ್ಲ ವಿಚಾರಗಳಮೇಲೂ ಕವಿತೆ ಕಟ್ಟಿರುವನು. ಪ್ರಕೃತಿಯನ್ನಾರಾಧಿಸಿರುವನು; ಪ್ರೇಮಗಾನವನ್ನು ಹಾಡಿರುವನು. ಕವಿತಾಕ್ಷೇತ್ರದಲ್ಲೀತನನ್ನು ವೀರಶೂರ ವಿಕ್ರಮಾರ್ಕನೆನ್ನಬಹುದು. ಬ್ರಹ್ಮಸಮಾಜದ ಪ್ರಭಾವ ವೀತನಮೇಲೆ ಬಿದ್ದಕಾರಣ ಇವನ ಕವಿತೆಗಳಲ್ಲಿ ಒಬ್ಬ ಪರಮೇಶ್ವರನ ಗಾನ ಮಾತ್ರವಿದೆ.

ಕವಿತಾಗಾರರಲ್ಲಿ ದೇಶಮಾತೆಗೊಂದು ಗರ್ಭಗೃಹ ಕಟ್ಟಿಸಿದ ಕವಿಜ್ಯೇಷ್ಠನೀತನೆ. ರಾಷ್ಟ್ರೀಯ ಆಶಾವೇಶಗಳಿಂದ ವಾಙ್ಮಯವನ್ನು ಜೀತನಗೊಳಿಸಿದ ಕೀರ್ತಿಯು ಇವನಿಗೇ ಸಲ್ಲುವುದು.

ಅನಂತರ ರಂಗಲಾಲ ಬಂಜನೇ ಉತ್ತಮೋತ್ತಮ ಕವಿ. ಈಶ್ವರಚಂದ್ರಗುಪ್ತನಿಗಿಂತಲೂ ಒಂದು ಕೈ ಮೇಲೆನ್ನಬೇಕು. ಇವನು ದೇಶಭಾಷೆಗಳಲ್ಲಿ ಮಾತ್ರವೇ ಅಲ್ಲದೆ ಐರೋಪ್ಯ ಭಾಷೆಗಳಲ್ಲೂ ಪಾಂಡಿತ್ಯ ಸಂಪಾದನೆ ಮಾಡಿದ್ದನು. ರಜಪೂತರ ವೀರಜೀವನ ಕೀರ್ತನದಿಂದಿವನು ಜನರಲ್ಲಿ ಸ್ಫೂರ್ತಿಯನ್ನುಂಟು ಮಾಡಿದನು. 'ಅಮೃತ ಸ್ವಾತಂತ್ರ್ಯ'ದ ಗುಣಗಾನ ಮಾಡಿದ, ಉತ್ಸಾಹಗಳನ್ನೆಳಿಸಿದ ಮೊದಲಕವಿ ಈತನೆ. ಈಶ್ವರಚಂದ್ರ ಮತ್ತು ರಂಗಲಾಲರ ಸಮಕಾಲೀನರಾದ ಸೈಕೇಲ್ ಮಧುಸೂದನ ದತ್ತ, ಬೆಹಾರಿಲಾಲ್ ಚಕ್ರವರ್ತಿ, ಹೇಮಚಂದ್ರ, ನವೀನಚಂದ್ರಸೇನ ಮುಂತಾ ಅನೇಕರು ಹೆಸರುವಾಸಿಯಾದವರು.

ಮಧುಸೂದನನು ರಿಚರ್ಡ್‌ಸನ್ ಡಿರೊಜಯೊ ಮುಂತಾದವರ ಪ್ರಭಾವದಿಂದ ತನ್ನ ೧೯ನೇ ವಯಸ್ಸಿನಲ್ಲೇ (೧೮೪೩) ಈಸಾಯಿ ಮತಕ್ಕೆ ಸೇರಿದನು. ಮದರಾಸಿಗೆ ಹೋಗಿ ಪತ್ರಿಕಾವೃತ್ತಿಯನ್ನು ಕೈಕೊಡನು. ಅಲ್ಲಿ ಇಂಗ್ಲಿಷ್ ಕವಿತೆಗಳನ್ನು ಬರೆದನು. ಭರತಖಂಡದಲ್ಲಿ ಮಾತ್ರವಲ್ಲ ಇಂಗ್ಲೆಂಡಿನಲ್ಲೂ ಈತನ ಕೀರ್ತಿ ಪ್ರಶಸ್ತಿ ಬಂತು. ಅನಂತರ ಕಲಿಕತ್ತೆಗೆ ಬಂದು ಬಂಗಾಳಿಯಲ್ಲಿ ನಾಟಕ ಬರೆಯಲಾರಂಭಿಸಿದನು. ಅವನ ನಾಟಕಗಳನೇಕ ರಂಗಭೂಮಿಗೆ ಬಂದವು. ಅನಂತರ ಅತನು ಸರಳರಗಳೆಯಲ್ಲಿ 'ತಿಲೊತ್ತಮಾ ಸಂಭವ ಕಾವ್ಯ' ಮತ್ತು 'ಮೇಘನಾದ ವಧ ಕಾವ್ಯ' ವೆಂಬೆರಡು ಮಹಾಕಾವ್ಯಗಳನ್ನು ರಚಿಸಿದನು. ಎರಡನೆಯದರ ಉಪಮಾಲಂಕಾರ ಸೌಂದರ್ಯ, ಪಾದಗಳಲ್ಲೂ ಕುಣಿಯುತ್ತಿರುವ ಸಂಗೀತ ಇವ 'ಮೇಘನಾದ ವಧ ಕಾವ್ಯ' ವನ್ನಿಂದಿಗೂ ಮೊದಲ ಶ್ರೇಣಿಯಲ್ಲೇ ಇರಿಸಿವೆ. ಅತನ 'ಪ್ರವಿಾಳೆ' ಯುಂತು ಅನೆಂದವಸ್ತು. ಆ 'ಸತಿ'ಯ ಚಿತ್ರವನ್ನಷ್ಟು ಅವಣ ನೀಯವಾಮದೇ ಸರಿ. ವಿಶ್ವಸಾಹಿತ್ಯದ ಉತ್ತಮೋತ್ತಮ ಸಾಹಿತ್ಯಗಳೊಂದಿಗೆ ಸರಿಸಮನಾಗಿ ನಿಲ್ಲತಕ್ಕ ತಹದಿದು; ಬಂಗಾಳೀ ಸಾಹಿತ್ಯಕ್ಕೆ 'ಸಾನೆಟ್'ಎಂಬ ಸಾಹಿತ್ಯಸ್ವರೂಪ ತಂದ ಮೊದಲಿನನು ಮಧುಸೂದನ. ಅವನ 'ಸಾನೆಟ್'ಗಳು ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್ ರ ರಚನೆಗಳಿಗೆ ಸಮಾನವಾಗಿವೆ.

ಬೆಹಾರಿಲಾಲ್ ಚಕ್ರವರ್ತಿಯು ಕೊಂಚಕಾಲ ರವೀಂದ್ರನಾಥರಿಗೆ 'ಗುರು'ವಾಗಿದ್ದನು. ಪ್ರೇಮಗೀತಗಳನ್ನೆಷ್ಟೋ ಹಾಡಿದ್ದಾನೆ. 'ಶಾರದಾ ಮಂಗಳ'ವೆ ಅಮೋಘವಾದ ವರ್ಣಕಕವಿತೆ. ಡಾ|| ಬ್ರಜೇಂದ್ರನಾಥಶೀಲರು ಈ ಕವಿತೆಯನ್ನು ಬಹಳವಾಗಿ ಹೊಗಳಿದ್ದಾರೆ.

ಹೇಮಚಂದ್ರನು 'ವೃತ್ರಸಂಹಾರ' ಕಾವ್ಯ ಬರೆದ ವಂಗ ವಾಙ್ಮಯದಲ್ಲಿ ಶಾಶ್ವತ ಕೀರ್ತಿ ಸಂಪಾದನೆ ಮಾಡಿದನು. ರಾಷ್ಟ್ರೀಯ ಕವಿಗಣದಲ್ಲಿ ಇವನು ಮುಖ್ಯನೇ. ಅವನ 'ಭಾರತ ಸಂಗೀತ'ವು ಉತ್ಸಾಹಗಳನ್ನೇಳಿಸುವಂತಹ ವೀರಕವಿತೆ—ಸ್ವಾತಂತ್ರ್ಯದ ಜ್ಞಾ

ಲೆಯು ಅತನೆದೆಯಲ್ಲಿ ಪ್ರಜ್ವಲಿಸುತ್ತಿತ್ತು. ಅತನ ಪಲ್ಲವಿಯು ಸದಾ ಸ್ವತಂತ್ರ ಭಾರತವೆ. ಹೇಸುಜೆಂ ದ್ರನದು ಸರ್ವತೋಮುಖವಾದ ಪ್ರತಿಭೆ. ಐರೋಪ್ಯ ಕವಿತಾ ಸಂಪದವನ್ನು ಬೇಕಾದಷ್ಟು ವಂಗಭಾಷೆಗೆ ತಂದು ಕೊಟ್ಟಿದ್ದಾನೆ. ಕವಿತೆಗಳೂ, ನಾಟಕಗಳೂ ಅನೇಕ ಈತನ ಭಾಷಾಂತರಗಳೆ

ನವೀನಚಂದ್ರನ 'ಪ್ಲಾಸಿಯುದ್ಧ'ವು ಪರಮಾದ್ಭುತ ಸಾಹಸವು. ಬೈರನ್ ಕವಿಯ, 'ಫೈಲ್ಗ್ರಿಮ್ಸ್ ಪ್ಯಾರಲ್ಡ್' ಕಾವ್ಯಕ್ಕೆ ಸರಿತೂಗತಕ್ಕದ್ದು 'ಕುರುಕ್ಷೇತ್ರ' ರೈವತಕ, 'ಪ್ರವಾಸ' ವೆಂಬೀ ಮೂರು ನವೀನ ಚಂದ್ರನ ಪ್ರತಿಭೆಗೆ ಶಾಶ್ವತ ಸ್ಮಾರಕಗಳು. ಇವುಗಳಲ್ಲಾತನು ಸರ್ವಧರ್ಮಸಮನ್ವಯ ಸಂದೇಶವನ್ನು ಸಾರಿದನು. ಬುದ್ಧದೇವನ ಜೀವನ ಬೋಧೆಯನ್ನು 'ಅಮಿತಾಭ' ಎಂಬ ಕಾವ್ಯದಲ್ಲಿ ಬೆಳಗಿಸಿದ್ದಾನೆ. ನವೀನನ ಕವಿತೆಯಲ್ಲಿ ಗಾನತಾನಗಳು ಮೇರೆವೀದು ಹರಿಯುತ್ತಿವೆ

ರವೀಂದ್ರನಾಥ ಠಾಕೂರ್

ರವೀಂದ್ರನು ಹೊಸಯುಗವನ್ನೇ ತಂದನು. ಬಾಲ್ಯದಲ್ಲೇ 'ವಾಲ್ಮೀಕಿ ಪ್ರತಿಭಾ' ಎಂಬ ಸಂಗೀತ ರೂಪಕ ಬರೆದು ಹೆಲ್ಲಿ, ಕೀಟ್ಸ್‌ರಂತಹ ಪ್ರತಿಭಾಶಾಲಿಗಳಂತೆ ಮೈದೋರಿದನು ಬೆಳೆದನು, ಕಲಿತನು, ವಿಲಾಯಿತಿಗೆ ಹೋಗಿ ಆಂಗ್ಲ ಸಾಹಿತ್ಯಪರಿಚಯ ಪ್ರಸಾದ ಪಡೆದನು. ಅಲ್ಲಿಂದ ಹಿಂತಿರುಗಿ ತಾನು ರಚಿಸಿದ ಕವಿತೆಗಳನ್ನೆಲ್ಲ ಸಂಗ್ರಹಿಸಿ 'ಸಂಧ್ಯಾ ಸಂಗೀತ' 'ಪ್ರಭಾತ ಸಂಗೀತ' ವೆಂಬೆರಡು ಪುಸ್ತಕಗಳನ್ನು ಪ್ರಕಟಿಸಿದನು. ಅತನು ಬರೆದ ಕವಿತೆಗಳು * ಲೆಕ್ಕವಿಲ್ಲದಷ್ಟಿವೆ

ಇವೆಲ್ಲ ಸುಂದರವಾಗಿವೆ. ಇವು ರವೀಂದ್ರನಿಗೆ ಕೀರ್ತಿ ಗೌರವಗಳನ್ನು ತಂದವು ೧೯೧೫ರಲ್ಲಿ 'ಗೀತಾಂಜಲಿ'ಗೆ ನೋಬೆಲ್ ಬಹುಮಾನವು ಸಿಕ್ಕಿತು. ವಿಶ್ವಸಾಹಿತಿಗಳಲ್ಲಿ ಭಾರತೀಯನೊಬ್ಬನಿಗೆ ಸ್ಥಾನ ಮೊರೆಯಿತು ಆ ಸ್ಥಾನಗೌರವವು ಮೊದಲು ರವೀಂದ್ರನ ಪಾಲಿಗೆ ಬಂತು. 'ವಿಶ್ವದ ದರ್ಬಾರಿನಲ್ಲಿ ವಂಗ ಸಾಹಿತ್ಯಕ್ಕೆ ಸ್ಥಾನವಿಲ್ಲವಲ್ಲಾ' ಎಂಬು ಮೊದಲುಮೊದಲು ರವೀಂದ್ರನು ಹಂಬಲಿಸುತ್ತಿದ್ದನು ತನ್ನ ತಾಯ್ನುಡಿಗೆ ಆ ಸ್ಥಾನವನ್ನು ತಾನೇ ಸಂಪಾದಿಸಿಕೊಟ್ಟನು.

ಬಂಗಾಳದ ನವೋತ್ಥಾನ ಕಾಲದಲ್ಲಿ ರವೀಂದ್ರನು ಭಾರತ ರಾಷ್ಟ್ರೀಯೋತ್ಥಾನದ ಜಾವತರಂಗಗಳನ್ನು ತನ್ನ ಕವಿತಾಲಹರಿಯಲ್ಲಿ ಬೆಬ್ಬಿಸಿದನು ಜನತೆಯನ್ನು ಎಚ್ಚರಿಸಿದನು. ಸ್ವಾತಂತ್ರ್ಯ ಸಂದೇಶ ವಾಹಿನಿಯಾಯಿತು ಇವನ ಕವಿತೆ. ಇಂದಿಗೂ ರವೀಂದ್ರನ ದೇಶಭಕ್ತಿಪರ ಕವಿತೆಗಳು ಮನೆವಾಡಾಗಿವೆ ಅಂದೇ ರವೀಂದ್ರ ಉಗ್ರಶಕ್ತಿದ ಭಾರತೀಯನು. ಭಿಕ್ಷೆಬೇಡುವ ಭಾರತೀಯನಲ್ಲ.

"ಗರಳಹ್ಯದರೆಪುರ ಸಂತು, ಅಂಗಲಾಜಿ, ಸೆರಗನೊಡ್ಡಿ,
ಸ್ಥಾನಕಾಗಿ, ಮಾನಕಾಗಿ ಬೇಡು ಎಂಬೆಯಾ ?"

ಎಂದು ಉರಿವ ಎದೆಯಿಂದ, ಪ್ರಜ್ವಲಿಸುವ ರಸನೆಯಿಂದ ಹಾಡಿ. ಹುರುನೇರಿಸಿದ ಗುಂಪಿನವ ರವೀಂದ್ರ!

ರವೀಂದ್ರನು ಇಂದು ಸಾಹಿತ್ಯ ಸಮ್ರಾಟ; ಸಂದೇಹವಿಲ್ಲ. ಸ್ವಾತಂತ್ರ್ಯ, ಸೌಂದರ್ಯ, ಪ್ರೇಮ ಇವೇ ರವೀಂದ್ರನ ಕವಿತೆಯ ಜೀವತಂತುಗಳು. ಹೆಜ್ಜೆಗೆನ್ನು ಅತ್ಯುಚ್ಚವರ್ಗದ ಭಾರತೀಯ ಮತ್ತು ಐರೋಪ್ಯ ಕವಿಗಣ್ಯ ಪಕ್ವಹೃದಯವೀ ರವೀಂದ್ರನಲ್ಲಿ ಮೂರ್ತಿವತ್ತಾಗಿದೆ ಪರಂಪರೆಯ ವ್ಯತಿಭಾಸೌಂದರ್ಯಗಳೀತನಲ್ಲಿ ನೆಲೆಸಿವೆ. ರವೀಂದ್ರನ ಕವಿತೆಗಳು ಡಬ್ಲ್ಯು. ಬಿ ಈಟ್ಸ್‌ರಂತಹ ಆಂಗ್ಲ ಕವಿಯ ಹೃದಯವನ್ನು ತಲ್ಲಣಗೊಳಿಸಿದವು. 'ವೇದಯುಗದ ಮಹರ್ಷಿಗಳಿಂದಾರಂಭವಾದ ಕವಿತೆಯು ಪರಂಪರೆಯಾಗಿ ವೃದ್ಧಿಗೊಂಡು ರವೀಂದ್ರನಲ್ಲಿ ಪಕ್ವದ ಪರಮಾವಧಿ ಹೊಂದಿತು' ಎಂದು ಸಿಲ್ವಾನ್‌ಲೆವಿ (ಫ್ರೆಂಚ್ ಪಂಡಿತರು) ಯವರು ಹೇಳಿದರು. ರವೀಂದ್ರರ ಕಾವ್ಯಪರಿಚಯದಿಂದ ಆಶಾಭರಿತರಾಗಿ ಲೆನಿಯವರು "ಯುಗಯುಗಾಂತರಗಳ ಧರ್ಮ ರಹಸ್ಯಗಳು, ಶಕ್ತಿಗಳು, ಆನಂದಲಹರಿಗಳು ಭಾರತ ಹೃದಯಾಂತರಾಳದಲ್ಲಿನ್ನೂ ಇವೆ. ಪಾಶ್ಚಾತ್ಯರಿಗೆ ಗುರೂಪದೇಶ ಮಾಡಬಲ್ಲ ಶಕ್ತಿ ಉದಕ್ಕಿನ್ನೂ ಇದೆ" ಎಂದರು.

ರವೀಂದ್ರನ ನಾಟಕರಚನಾ ಚಾತುರ್ಯವು ಪರಮಾದ್ಭುತವಾದುದು ಅತನ ಪ್ರತಿಭೆಯು ಹೆಲ್ಲಿ, ಮೆಟರ್‌ಲಿಂಕ್‌ನನ್ನು ಮೀರಿಸಿದುದು ಕಣ್ಣಿಗೆ ಕಾಣಬರುವುದಕ್ಕಿಂತ ಕಾಣಬಾರದ್ದನ್ನು ಕರಿತು ಬರೆಯುವುದರಲ್ಲೇ ತನ ಕುಶಲತೆಯು ಅವರ್ಣನೀಯನಾದುದು ಭಾವಗಳು, ಆದರ್ಶಗಳು ಇವೇ ಇವನ ರೂಪಕಗಳ ಜೀವ

* ಪ್ರಕೃತೀರ ಪರಿಶೋಧ, ಛಬಿಓಗಾನ, ಕಡಿ ಓ ಕೋಮಲ, ಮಾನಸಿ, ಸೋನಾರ ತರಿ, ಚಿತ್ತ, ಚೈತಾಲಿ, ಕಥಾ, ಕಲ್ಪನಾ, ಕ್ಷಣಿಕ, ತಿಪ್ಪು, ನೈವೇದ್ಯ, ಖೇಯಾ, ಗೀತಾಂಜಲಿ, ಒಲಾಕಾ, ಪುರನಿ, ಮುಹಲ, ಶಿಶುಭೋಲೊನಾಥ, ಪಲಾತಕಾ, ಕಾಹಿನಿ.

ಜೀವಾಳ. ಆತನ 'ವಿಸರ್ಜನ'ವು ಆತ್ಮಯಜ್ಞವೆಂಬ ಭಾವದ ರೂಪಕ. 'ಮುಕ್ತಧಾರೆ' ಯೊಳಗಿನ 'ಬಾಲ'ನು ಮಹಾತ್ಮ ಗಾಂಧಿಯ ನೆನಪನ್ನು ಮಾಡಿ ಕೊಡುತ್ತಾನೆ. ಆತನ 'ತಪತಿ'ಯು ರೂಪಕಕಾವ್ಯ ರಚನಾಕಲೆಯಲ್ಲಿ ಮೇಲ್ಮೆಟ್ಟಲನ್ನು ಮುಟ್ಟತೆನ್ನಬಹುದು. ರಾಜನ ಹೃದಯಪರಿವರ್ತನಕ್ಕಾಗಿ ರಾಣಿಯು ಮಾಡುವ 'ತಪಸ್ಯೆ'ಯ ಚಿತ್ರವು ಅದ್ಭುತಸೃಷ್ಟಿ; ಆನಂದದ ಸೃಷ್ಟಿ! ರವೀಂದ್ರನು ಸವಿಕನಸುಗಳನ್ನು ಕಾಣುವವನು; ಸಣ್ಣದನಿಯಿಂದ ಒಳಗೊಳಗೇ ಗಾನಮಾಡಿ ಸಮಾಧಿ ಸುಖವನ್ನು ಅನುಭವಿಸುವವನು; ಹೊಸಗೋತ್ರದ ಕವಿಗಳ, ಕಲಾವಿದರ, ಜನನಕಾರಣಭೂತನು.

ಇತರ ಕವಿಗಣ

ಪ್ರೇಮಗೀತೆಗಳನ್ನು ಕಟ್ಟಿಹಾಡಿದ ಇತರ ಕವಿಗಳಲ್ಲಿ ೧೯೧೯ ರಲ್ಲಿ ಕಾಲವಾದ ಅಕ್ಷಯ ಕುಮಾರ ಬೋರಲನನ್ನೂ, ಹಾಡುಗಳನ್ನು ಬರೆಯುವುದರಲ್ಲಿ ಪರಮಾಚಾರ್ಯನೆನಿಸಿ ಬಹಳ ಸಣ್ಣ ವಯಸ್ಸಿನಲ್ಲೇ (೧೯೧೦) ತೀರಿಕೊಂಡ ರಜನೀಕಾಂತ ಸೇನನನ್ನೂ, ಪ್ರತಿಭಾ ಸರಸ್ವತಿಯಂತೆ ಅಲ್ಪಕಾಲ ಬೆಳಗಿದ ಸತ್ಯೇಂದ್ರನಾಥ ದತ್ತನನ್ನೂ ಮರೆಯಲಾಗದು. ಸತ್ಯೇಂದ್ರನಾಥನನ್ನು ಮೃತ್ಯುವು ಬಹು ಬೇಗ ಕೊಂಡೊಯ್ದಿತು. ಆಗ ರವೀಂದ್ರನು ಅವನನ್ನು ಕುರಿತೊಂದು ಮೌನಕವಿತೆಯನ್ನು ಹಾಡಿ, ಮರುಗಿದನು. ಸತ್ಯೇಂದ್ರನು ಐರೋಪ್ಯ ಉತ್ತಮ ಸಾಹಿತ್ಯವನ್ನು ಬಂಗಾಳಿಗಿಳಿಸಿದನು. ಅದಿರಲಿ ನವೀನ ಛಂದಸ್ಸುಗಳನ್ನು ಹಿಡಿದಾಡಿಸಿ, ಓಡಿಸಿ, ವಿಸ್ಮಯದಾಯಕವಾದ ಸಾಹಸವನ್ನು ತೋರಿಸಿದ್ದಾನೆ.

ಜೋಗೀಂದ್ರನಾಥ ಬಸುವು ಪುರಾಣ ಕವಿತಾ ಋುರಿಗೆ ಮತ್ತೆ ಜೀವದಾನಮಾಡಬೇಕೆಂದು 'ಪೃಥ್ವೀರಾಜ', 'ಶಿವಾಜಿ' ಎಂಬೆರಡು ಪುರಾಣಕಾವ್ಯಗಳನ್ನು ರಚಿಸಿದನು. ದೇಶಬಂಧು ಚಿತ್ತರಂಜನ ದಾಸರು 'ಸಾಗರ ಸಂಗೀತ', 'ಮಾಲಂಚ', 'ಅಂತರ್ಜಮಿ' 'ಕಿಶೋರ ಕಿಶೋರೀ' ಮುಂತಾದ ಕವಿತಾ ಗುಚ್ಛಗಳಿಂದ ಸಾಹಿತ್ಯೋದ್ಯಾನವನ್ನು ಅಲಂಕರಿಸಿದರು. ಇವರ ಕವಿತೆಗಳಲ್ಲಿ ವೈಷ್ಣವ ಹೃದಯದ ಮಿಂಟು ಕೇಳಬರುತ್ತದೆ.

ಇಂದಿನ ದಿನ ಸಾಹಿತ್ಯಭೂಮಿಯಲ್ಲಿ ಸ್ತ್ರೀಯರೂ ಸುಂದರ ಸಾಹಸಿಗಳಾಗಿದ್ದಾರೆ. ಅವರಲ್ಲಿ ಶ್ರೀಮತಿ ಕಾಮಿನಿರಾಯಿ, ಶ್ರೀಮತಿ ಮಾನಕುಮಾರಿ ಬಸೆ, ಶ್ರೀಮತಿ ಗಿರೀಂದ್ರಮೋಹಿನಿ ದಾಸಿ ಮುಂತಾದವರ ಹೆಸರನ್ನು ಹೇಳದಿರಲಾಗದು. ಶ್ರೀಮತಿ ಕಾಮಿನಿರಾಯರ ಧ್ಯಾನಹೃದಯದಿಂದ ಹೊರಬೀಳುವ ಸರಳವಾದ ಕವಿತೆಗಳು ವರ್ಡ್ಸ್‌ವರ್ತನ ಕವಿತೆಗಳಿಗೆ ಸಮಾನವಾಗಿವೆ.

ಇಂದಿನ ಬಂಗಾಳದ ತರುಣ ಕವಿಗಣದಲ್ಲಿ ಕಾಳಿದಾಸರಾಯಿ, ಜತೀಂದ್ರನಾಥ ಬಗಚಿ, ಕುಮುದ್ರಂಜನ ಮಲ್ಲಿಕ್, ಸಾವಿತ್ರೀ ಪ್ರಸನ್ನ ಚತರ್ಜಿ, ಕಾಜಿ ನಜರುಲ್ ಇಸ್ಲಾಂ ಮೊದಲಾದವರ ಪ್ರಭೆಯು ಪ್ರಾಜ್ವಲ್ಯವಾಗಿದೆ. ಕಾಜಿ ನಜರುಲ್ಲನು ವಿಪ್ಲವ ಕವಿ. ಅವನ ಕವಿತೆಯೊಳಗಣ ವಿಪ್ಲವ ವಾಹಿನಿಯು ಅವನನ್ನು ಸೆರೆಮನೆಗೆ ಕೊಚ್ಚಿಕೊಂಡು ಹೋಯಿತು. ಅವನ ಕವಿತೆಗಳಿಗೆಲ್ಲ ರಾಜದ್ರೋಹದ ಮುದ್ರೆ ಬಿತ್ತು.

ಒಟ್ಟಿನಲ್ಲಿ ಕವಿತಾ ಪ್ರಪಂಚದಲ್ಲಿ ರವೀಂದ್ರನು ನವಯುಗ ಪ್ರವರ್ತಕಾಚಾರ್ಯನಾಗಿದ್ದಾನೆ. ಅವನ ಪ್ರತಿಭಾದ್ಯುತಿಯೆಲ್ಲ ಕಡೆಯೂ ಬೆಳಗುತ್ತಿದೆ.

ಮಿಷನರಿಗಳು

ಪರದಾಸ್ಯದಲ್ಲಿ ಕೊರಗುತ್ತಿರುವ ವಂಗ ಹೃದಯದ ಅಂತರ್ವಾಣಿಯು ಅದೃಶ್ಯವಾಯಿತೋ ಇಲ್ಲ ಜನಾಂಗ ಸಂಸ್ಕೃತಿಯೆ ವಿದ್ಯುತ್ ಏಕಾಸಕ್ಕೆ ಕಸಿತೆಯೇ ಸುಂದರ ಸಾಧನವೆಂಬ ಕಾರಣದಿಂದಲೋ ಏನೋ ಬಹಳ ಕಾಲದಿಂದ ವಂಗ ವಾಙ್ಮಯದಲ್ಲಿ ಗದ್ಯವೇ ಕಾಣಬರಲಿಲ್ಲ. ಬ್ರಿಟಿಷರ ಆಗಮನ, ಮಿಷನರಿಗಳ ಸಾಹಸ, ಏಸುಮತ ಪ್ರಚಾರಕರ್ಮ ಇವು ಗದ್ಯರಚನೆಗೆ ಬಹಳ ಸಹಕಾರಿಗಳಾದಂತೆ ಕಾಣಬರುತ್ತದೆ. ೧೭೭೮ರಲ್ಲಿ ಹಾಲ್ ಹೆಡ್ ಎಂಬನು ವಂಗವ್ಯಾಕರಣ ಬರೆದನು. ಇನ್ನೊಬ್ಬನು ನಿಘಂಟನ್ನು ರಚಿಸಿದನು. ಮಿಷನರಿಗಳು ಒಂದು ಮುದ್ರಾಲಯವನ್ನು ತೆರೆದರು. ಕಾರೆಯು ಬೈಬಲನ್ನು ಬಂಗಾಳಿಯಲ್ಲಿ ಬರೆದನು. 'ಸಮಾಚಾರ ದರ್ಪಣ' ಎಂಬ ಪತ್ರಿಕೆ ಹೊರಡಿಸಿದನು. ಆಂಗ್ಲ ತರುಣರಿಗೆ ಬಂಗಾಳಿ ಕಲಿಸಲು ಪಂಡಿತರ ಸಹಾಯದಿಂದ ಮಿಷನರಿಗಳು ಅನೇಕ ಪಠ್ಯಪುಸ್ತಕಗಳನ್ನು ಬರೆಸಿದರು. ಈ ಪುಸ್ತಕಗಳ ಶೈಲಿಯು ಬಿರುಸು; ಸಂಸ್ಕೃತಮಯ; ಪರ್ಶಿಯ, ಪೋರ್ಚುಗೀಸ್ ಶಬ್ದಗಳು ಹೇರಳವಾಗಿವೆ.

ಪೂತ ಜೀವನ ಸಂಧ್ಯಾ, ಮಹಾರಾಷ್ಟ್ರ ಜೀವನ ಪ್ರಭಾತ, ಸಂಸಾರ, ಸಮಾಜಗಳೆಂಬ ಆರು ಕಾದಂಬರಿಗಳನ್ನು ರಚಿಸಿದನು. ಉತ್ತಮ ಶ್ರೇಣಿಯ ಸಾಹಿತ್ಯಕ್ಕೆ ಸೇರಲರ್ಹವಾದುವು ಇವು. ಪಂಡಿತ ಸುರೇಶಚಂದ್ರ ಸಮಾಜಪತಿ, ಪಂಡಿತ ಶಿವನಾಥಶಾಸ್ತ್ರಿ, ಸ್ವರ್ಣಕುಮಾರಿದೇವಿ ಮೊದಲಾದವರ ಸೇವೆಯೂ ಸಹ ಚಿರಸ್ಮರಣೀಯವಾಗಿದೆ. ಸಣ್ಣ ಕತೆಗಳನ್ನು ಬರೆಯುವುದರಲ್ಲಿ ಪ್ರಭಾತಕುಮಾರ ಮೂಕರ್ಜಿಯು ಹೆಸರುವಾಸಿಯಾದನು. ಸ್ವಾಮಿ ವಿವೇಕಾನಂದರ ಧರ್ಮಸಾಹಿತ್ಯವಾದರೋ ತರುಣಲೋಕ ಸ್ಫೂರ್ತಿಯ ಜ್ವಾಲಾಕೇಂದ್ರವಾಯಿತು. ಶಿಶಿರಕುಮಾರ ಘೋಷ್, ಅಶ್ವಿನೀಕುಮಾರ ದತ್ತ ಮತ್ತು ಅರವಿಂದ ಘೋಷರ ಲೇಖನಗಳೂ ಸಹ ಸಾಹಿತ್ಯಕ್ಕೆ ಅಪೂರ್ವ ಶೋಭೆಯನ್ನುಂಟುಮಾಡಿವೆ.

ಗದ್ಯವಾಙ್ಮಯಕ್ಕೆ ರವೀಂದ್ರನಿಂದಾದ ಫಲವೋಪಕಾರವನ್ನು ಕೊಂಚ ಹೇಳದಿದ್ದರೆ ಮಹಾಪರಾಧವಾದೀತು. ಪ್ರಪಂಚದ ಸಣ್ಣ ಕತೆಗಳ ಲೇಖಕರಲ್ಲಿ ರವೀಂದ್ರನಿಗೊಂದು ಸ್ಥಾನ ದೊರೆತಿದೆ. ಕಾಳಿದಾಸನ ಮೇಘದೂತ, ಶಕುಂತಲ, ಕುಮಾರಸಂಭವ, ವಾಲ್ಮೀಕಿ ರಾಮಾಯಣಗಳ ಮೇಲೆ ಬರೆದಿರುವ ವಿಮರ್ಶಾತ್ಮಕ ಲೇಖನಗಳು ರವೀಂದ್ರನ ಪ್ರತಿಭೆಯ ಪ್ರಭಾವನನ್ನು ತೋರಿಸುತ್ತವೆ. ಅವನ ಶಿಕ್ಷ, ಸಮಾಜ, ಚರಿತ್ರ ಪೂಜ, ರಾಜಾಪ್ರಜಾ ಮೊದಲಾದ ಬರಹಗಳು ಸಂಯಮಸಂಸ್ಕೃತಿಯ ಪಕ್ವ ಫಲಗಳು.

ರವೀಂದ್ರನ ಕಾದಂಬರಿಗಳಲ್ಲಿಯ ಪಾತ್ರಗಳು ಮಾನವೀಗುಣ ವಿಶೇಷಗಳನ್ನು ಆಶ್ಚರ್ಯಕರವಾಗಿ ಹೊರಪಡಿಸುತ್ತವೆ. ಅವನ ಸಣ್ಣ ಕತೆಗಳಲ್ಲಿ ಯಾವ ತರದ ಪ್ರತಿಭೆಯುಂಟೋ ದೊಡ್ಡ ಕತೆಗಳಲ್ಲೂ ಅನಕ್ಕೆ ಮಿಗಿರಿದ ಪ್ರತಿಭೆಯು ಕಾಣಬರುತ್ತದೆ.

ನಾಟಕ ವಾಙ್ಮಯ

ಬಂಗಾಳಿಯ ನಾಟಕದ ಜೀವದಾತನೆಂದರೆ ಮೈಕೇಲ್ ಮಧುಸೂದನ ದತ್ತ. ಅವನೇ ನಾಟಕ ರಚನಾಕಲೆಯನ್ನು ಊರ್ಜಿತಗೊಳಿಸಿದವನು. ಅನಂತರ ದಿನೇಶಬಂಧು ಮಿತ್ರನ 'ನೀಲದರ್ಪಣ'ವು ವಸ್ತು ವಿಶೇಷ ಮತ್ತು ರಚನಾಕೌಶಲದಿಂದ ನಾಡಿನಲ್ಲೆಲ್ಲ ಹೊಸ ಜಾಗ್ರತಿಯನ್ನುಂಟುಮಾಡಿತು. ಆದರೆ ಗಿರೀಶಚಂದ್ರ ಘೋಷನೇ ಬಂಗಾಳಿ ನಾಟಕ ಸಾಹಿತ್ಯದ ಆಚಾರ್ಯಪುರುಷನು. ಸುಮಾರು ೬೦ ನಾಟಕಗಳನ್ನು ಬರೆದನು. ಎಲ್ಲವೂ ರಂಗಭೂಮಿಗೆ ಬಂದು ವಿಜಯಶ್ರಿಯನ್ನು ಪಡೆದವು! 'ಬಿಲ್ವಮಂಗಳ'ವೇ ಅವನ ಕೀರ್ತಿಕಲ್ಪತರು.

ಆದರೆ ಸರ್ವಾಂಗ ಸುಂದರವೂ, ರಸಪೂರ್ಣವೂ, ಅಪೂರ್ವರಚನಾವಿಜ್ಞಾನಕುಶಲತೆಯೂ ಉಳ್ಳ ನಾಟಕಗಳನ್ನು ರಚಿಸಿ ಬಂಗಾಳಕ್ಕೆ ಯಶಸ್ಸನ್ನು ಗಳಿಸುವ ಸುಯೋಗವು ದ್ವಿಜೇಂದ್ರಲಾಲ್‌ರಾಯನಿಗೆ ಲಭಿಸಿತು. ಐತಿಹಾಸಿಕ, ಸಾಮಾಜಿಕ, ಪೌರಾಣಿಕ ನಾಟಕಗಳನೇಕ ಅತನ ಪ್ರಸಾದದಿಂದ ನಮಗೆ ಲಭಿಸಿವೆ. ಅತನ ವರ್ಣಕಶೈಲಿಯು ಶಕ್ತಿಯುತ ರೂಪಕಕ್ಕೊಂದು ವಿಶೇಷ ಕಳೆಯನ್ನು ಕೊಟ್ಟಿದೆ. ಅತನು ಪ್ರತಿಭಾವಂತನೆನ್ನಲಿಕ್ಕೆ ಚಂದ್ರಗುಪ್ತ, ಪರಪಾರ್, ಮೇವಾಡಪತನ ಇವು ಮೂರು ನಾಟಕಗಳೇ ಸಾಕು. ದ್ವಿಜೇಂದ್ರಲಾಲನ ಪತ್ಯೆಗಳನ್ನು ಸೆಳೆಯಬಲ್ಲ ಅನೇಕ ಧಾಸ್ಯಗೀತೆಗಳನ್ನು ಹೊಸೆದಿದ್ದಾನೆ. (ಇವರಲ್ಲಿ ಈತನು ಸ್ವರ್ಗಸ್ಥನಾದನು.)

ಅನ್ಯೂತ್ಪಲಾಲ್ಬಳಳ, ಕ್ಷೀರೋದ ವಿನೋದ ವಿದ್ಯಾವಿನೋದರೂ ಸಹ ಉತ್ತಮ ನಾಟಕ ಕರ್ತೃಗಳು. ಸ್ವಳ್ಪ ಸಂಕೋಚಪಡಿಂಪ ಇಲ್ಲಿ ಇವರ ವಿಚಾರವಾಗಿ ಏನನ್ನೂ ಹೇಳಲೂ ಸ್ಥಳ್ಯವಿಲ್ಲ. ಇಂದು ನೂರಾರು ಮಂದಿ ನಾಟಕ ಲೇಖಕರಿದ್ದಾರೆ. ಆದರೆ ಅವರ ವಿಚಾರವನ್ನಾಗಿ ಈಗಲೇ ಏನು ಹೇಳಲೂ ಸಾಧ್ಯವಿಲ್ಲ. ಶಿಶಿರಕುಮಾರ ಭಾದುಡ್ಡಿಯು ಬಂಗಾಳದಲ್ಲೇಕೆ ಅಂತರ್ರಾಷ್ಟ್ರೀಯ ಖ್ಯಾತಿ ಗಳಿಸಿದನೆಂಬುದನ್ನು ಸಹ ಮಾಡಿದ್ದಾನೆ. ರವೀಂದ್ರನಾಥನ ವಿಚಾರವನ್ನಾಗಲೇ ಹೇಳಿದ್ದಾಯಿತು. ರವೀಂದ್ರನ ಹಾದಿ ಹೊಸದು. ಕಲಿತವರೂ, ಅದರ್ಶ ಜೀವಿಗಳೂ ರವೀಂದ್ರನ ನಾಟಕಗಳನ್ನು ಚನ್ನಾಗಿ ಪ್ರಶ್ನವಾಡಿಕ್ಕೊಂಡು ಆನಂದಿಸಬಲ್ಲರು.

ಕೊನೆಮಾತು

ಬಂಗಾಳದಲ್ಲಿ ಈಗ ಹೊಸಮಾದರಿಯ ಕಾದಂಬರಿ ಲೇಖಕರು ಬೇಕಾದಷ್ಟು ಮಂದಿ ಇದ್ದಾರೆ. ಶಿಶುಸಾಹಿತ್ಯವು ತಲೆಹಾಕಿ ಸಾಹಿತ್ಯ ಲೋಕವು ಆನಂದಮಯವಾಗಿದೆ. ಇದೊಂದು ಹೊಸ ಸೃಷ್ಟಿ. ಸಾಹಿತ್ಯದಲ್ಲಿ ಬಗೆಬಗೆಯ ಸ್ವರೂಪ ಸೃಷ್ಟಿಗಾಗಿ ಪ್ರಯೋಗಗಳು

ನಡೆಯುತ್ತಿವೆ. ಶರಚ್ಚಂದ್ರ ಚಟರ್ಜಿಯು ಉತ್ತಮ ತರದ ನಗೆಗಾರ. ಅವನ ಬರಹಗಳು ಅವನಿಗೆ 'ಚಾರಲ್ಸ್ ಡಿಕಿನ್ಸ್' ಎಂಬ ಬಿರುದನ್ನು ತಂದಿವೆ. ಸರಳಶೈಲಿ; ಪಾತ್ರರಚನಾಚಾತುರೀಧುರೀಣನಿವ. ಕತೆ ಹೇಳುವುದರಲ್ಲಿ ನಿಸ್ಸೀಮ. ಇವನ ಸಣ್ಣಕತೆಗಳ ನ್ನೋದಿ ಆನಂದಿಸದವರೇ ಇಲ್ಲವೆನ್ನಬೇಕು. ಮನ್ನೆ ಮನ್ನೆ ಅವನು ಬರೆದ 'ಪಾತರದಬಿ' ಎಂಬ ಕಾದಂಬರಿಯನ್ನು 'ಮುಟ್ಟುಗೋಲು' ಹಾಕಿಕ್ಕೊಂಡರು! ಮಾತೃಭೂಮಿಯ ಒಂಧವಿಮೋಚನವೇ ಆ ಕಾದಂಬರಿಯ ವಸ್ತು ವಿಶೇಷ.

ಸಾಹಿತ್ಯ ವಿಮರ್ಶಕರೂ, ಮತ, ದರ್ಶನ, ವಿಜ್ಞಾನ ಇತಿಹಾಸ, ರಾಜನೀತಿ ಮೊದಲಾದ ವಿವಿಧ ಲೇಖನ ವಿಶಾರದರೂ ತಮ್ಮತಮ್ಮ ಯೋಗ್ಯತಾನುಸಾರ ಮಾತೃ ಭಾಷಾ ಸೇವೆಮಾಡುತ್ತಿದ್ದಾರೆ. ಇಂದಿಲ್ಲ ನಾಳೆ ಬಂಗಾಳಿಯು ವಿಶ್ವಸಾಹಿತ್ಯಗಳ ಶ್ರೇಣಿಗೆ ಸೇರಲು ಅರ್ಹವಾದೀತೆಂಬುದರಲ್ಲಿ ಸಂದೇಹವಿಲ್ಲ.

ಬಾಬು ಬಂಕಿಂಚಂದ್ರ ಚಟರ್ಜಿ

ಆಧುನಿಕ ಕನ್ನಡ ವಾಙ್ಮಯ

(ಶ್ರೀ ಕೆ. ವಿ. ಪುಟ್ಟಪ್ಪ ಎಂ. ಎ., ಇಂಟರ್ ಕಾಲೇಜ್, ಮೈಸೂರು)

ಜೀವಂತ ಸಾಹಿತ್ಯ

ತಮಿಳನ್ನು ಬಿಟ್ಟರೆ ದೇಶಭಾಷೆಗಳಲ್ಲಿ ಕನ್ನಡಸಾಹಿತ್ಯವೇ ಅತಿಪ್ರಾಚೀನವಾದುದೆಂದು ಹೇಳಬಹುದು. ಕನ್ನಡದಲ್ಲಿ ಇತರ ದೇಶಭಾಷಾ ಸಾಹಿತ್ಯಗಳಲ್ಲಿ ಸಾಮಾನ್ಯವಾಗಿತೋರದ ಒಂದುವಿಶೇಷ ಗುಣವಿದೆ. ಅದುಮೊದಲಿನಿಂದಲೂ ಹೊಸ ಹೊಸ ಹಾದಿಗಳಲ್ಲಿ ಹೆಜ್ಜೆಯಿಟ್ಟು ನಡೆದು ಬಂದಿದೆ. ಬರುತ್ತ ಬರುತ್ತ ಅನೇಕ ರೂಪಾಂತರಗಳನ್ನು ಹೊಂದಿದೆ. ಜೈನರು ಪ್ರಬಲರಾಗಿದ್ದ ಕಾಲದಲ್ಲಿ ವೃತ್ತಕಂದಗಳಿಂದ ಕೂಡಿದ ಚಂಪೂ ಕಾವ್ಯಗಳೇ ವಿಶೇಷವಾಗಿದ್ದವು. ಬಸವೇಶ್ವರರು ಮತಪ್ರಚಾರ ಮಾಡಲು ತೊಡಗಿದ ಮೇಲೆ ವೀರಶೈವ ಕವಿಗಳು ಸಾಮಾನ್ಯ ಜನರೂ ಸುಲಭವಾಗಿ ತಿಳಿಯಬಹುದಾದ ವಚನಗಳನ್ನು, ಷಟ್ಪದೀಕಾವ್ಯಗಳನ್ನು ಬರೆದರು. ತರುವಾಯ ವೈಷ್ಣವ ಮತದ ಭಕ್ತಿವಾಹಿನಿಯು ನಾಡಿನಲ್ಲಿ ಪ್ರವಹಿಸಿದಾಗ ಕವಿಗಳು ಭಾಗವತ, ಮಹಾಭಾರತ, ರಾಮಾಯಣ, ಮೊದಲಾದ ಮಹಾಕಾವ್ಯಗಳನ್ನು ಜನಸಾಮಾನ್ಯರೂ ಹಾಡಿ ಓದುವಂತೆ ಸುಲಭವಾದ ಷಟ್ಪದಿಗಳಲ್ಲಿಯೇ ಗ್ರಂಥರಚನೆಮಾಡಿದರು. ಅಲ್ಲದೆ ವೀರಶೈವರು ವಚನಗಳನ್ನು ಬರದಂತೆ ದಾಸರು ಮಾತನಾಡುವ ಭಾಷೆಯಲ್ಲಿಯೇ ಅನೇಕಾನೇಕ ಕೀರ್ತನೆಗಳನ್ನು, ಬರೆದು, ಹಾಡಿ ಜನರಲ್ಲಿ ಭಕ್ತಿಯು ಹೆಚ್ಚುವಂತೆ ಮಾಡಿದರು. ಹೀಗೆ ಒಂದೊಂದು ಹೊಸಮತವು ಹುಟ್ಟಿದಾಗ ಒಂದೊಂದು ಹೊಸ ಸನ್ನಿವೇಶವು ಬಂದೊದಗಿದಾಗ ಕನ್ನಡ ಸಾಹಿತ್ಯವು ಅದರದರ ಹೊಸ ಹುರುಪನ್ನು ಹೀರಿಕೊಂಡು ಹೊಸ ಹೊಸ ರೂಪಗಳನ್ನು ತಳೆದು ವಯಸ್ಸಾದಂತೆಲ್ಲಾ ತನ್ನ ಚಿರಯೌವನವನ್ನು ಕಾಪಾಡಿಕೊಂಡು ಬಂದಿದೆ. ಸನ್ನಿವೇಶಕ್ಕೆ ತಕ್ಕಹಾಗೆ ವೇಷಾವೇಶಗಳನ್ನು ಬದಲಾಯಿಸಿಕೊಳ್ಳುತ್ತ ಸನಾತನದ ಆತ್ಮಸಾರವನ್ನು ತಿರಸ್ಕರಿಸದೆ, ನೂತನದ ಆಶೆ ಆಶಯಗಳನ್ನು ಅಸಡ್ಡೆ ಮಾಡದೆ ಮುಂದು ವರಿಯುವುದು ನಿಜವಾದ ಪ್ರಗತಿಯ ಚಿಹ್ನೆ; ನೈಜ ಜೀವನದ ಕುರಹು; ಜೀವಂತ ಸಾಹಿತ್ಯದ ಲಕ್ಷಣ.

ಆಧುನಿಕ ಕನ್ನಡ ಸಾಹಿತ್ಯವು ಸನ್ನಿವೇಶದ ಪ್ರಭಾವದಿಂದ ಜನ್ಮವೆತ್ತಿದೆ. ಅಂದರೆ ಪಾಶ್ಚಾತ್ಯ ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಭಾವದಿಂದ ಉತ್ಪನ್ನವಾಗಿದೆ. ಅದರಲ್ಲಿಯೂ ವಿಶೇಷವಾಗಿ ಇಂಗ್ಲೀಷು ಸಾಹಿತ್ಯಜ್ಯೋತಿಯಿಂದ ಪ್ರದೀಪ್ತವಾದುದು. ಅಂದರೆ ನಮ್ಮ ಪ್ರಾಚೀನ ಸಾಹಿತ್ಯಕ್ಕೂ ಪಾಶ್ಚಾತ್ಯ ಸಾಹಿತ್ಯಕ್ಕೂ ಇರುವ ಭೇದಗಳೇ ಆಧುನಿಕ ಕನ್ನಡ ಸಾಹಿತ್ಯಕ್ಕು ಪ್ರಾಚೀನ ಕನ್ನಡಸಾಹಿತ್ಯಕ್ಕು ಇರುವುವೆಂದು ಹೇಳಬಹುದು. ವರ್ಣನಾಕಾವ್ಯಗಳು ಕಡಿಮೆಯಾಗಿ ವ್ಯಂಜಕ ಕಾವ್ಯಗಳು ಹೆಚ್ಚುತ್ತಿವೆ; ಪದ್ಯಕ್ಕಿಂತ ಗದ್ಯ ಹೆಚ್ಚಿದೆ; ಹಳೆಗನ್ನಡ ಸಾಹಿತ್ಯದಲ್ಲಿ ಎಲ್ಲಿಯೂ ತೋರದಿರುವ ಪಾಶ್ಚ್ಯಭಾಗವಾದ ನಾಟಕಗಳು ಹುಟ್ಟಿವೆ; ಕಾದಂಬರಿ, ಸಣ್ಣಕತೆ, ವಿಮರ್ಶೆ ಮೊದಲಾದ ಹೊಸ ಹೊಸ ರೂಪಗಳು ಮೈದೋರಿವೆ; ಸಿದ್ಧಾಂತಮಾರ್ಗಕ್ಕಿಂತಲೂ ಸ್ವತಂತ್ರಮಾರ್ಗಕ್ಕೆ ಹೆಚ್ಚಾದ ಮನ್ನಣೆ ದೊರತಿದೆ; ವಸ್ತುವಿನ ವರ್ಣನೆಗಿಂತಲೂ ವಸ್ತುವನ್ನು ಕಂಡು ಅನುಭವಿಸಿದ ವ್ಯಕ್ತಿಯ ಭಾವದ ವರ್ಣನೆಯು ಹೆಚ್ಚುತ್ತಿದೆ; ನಿರ್ಜೀವವಾದ ನಿಯಮ ಪಾಲನೆಗಿಂತಲೂ ಸಜೀವವಾದ ನಿಯಮೋಲ್ಲಂಘನವೇ ಕಲ್ಯಾಣಕರವೆಂಬಭಾವನೆಯು ಮೂಡುತ್ತಿದೆ; ಸಾಹಿತ್ಯವಿರುವುದು ಎಲ್ಲಿಯೋ ಅಲ್ಪಸ್ವಲ್ಪ ವಿದ್ವಾಂಸರಿಗೆ ಎಂಬ ದೃಷ್ಟಿಗೆ ಬದಲಾಗಿ, ಮಾಯವಾಗಿ ಜನಸಾಮಾನ್ಯರೂ ಅದರ ರಸಾಸ್ವಾದನೆ ಮಾಡಬೇಕು ಎಂಬ ದೃಷ್ಟಿಯು ಉದ್ಭವಿಸಿದೆ. ಇಂತಹ ಧ್ಯೇಯದಿಂದ ಬರೆದ ಸಾಹಿತ್ಯವನ್ನೆಲ್ಲ ಆಧುನಿಕ ಸಾಹಿತ್ಯ ಎಂದು ಕರೆಯಬಹುದು.

ಕಾದಂಬರಿ, ನಾವೆಲು

ಮೇಲೆ ಹೇಳಿದ ದೃಷ್ಟಿಯಿಂದ ಆಧುನಿಕ ಕನ್ನಡ ಸಾಹಿತ್ಯವು ಕೀರ್ತಿಶೇಷರಾದ ಬಿ. ವೆಂಕಟಾಚಾರ್ಯರ ಕಾದಂಬರಿಗಳಿಂದ ಪ್ರಾರಂಭವಾಯಿತೆಂದು ಇಟ್ಟು ಕೊಳ್ಳಬಹುದು. ವೆಂಕಟಾಚಾರ್ಯರು ಬಂಗಾಳಿ ಭಾಷೆಯಲ್ಲಿ ಬಂಕಿಮಚಂದ್ರರು ಬರೆದ ಕಾದಂಬರಿಗಳನ್ನು ಭಾಷಾಂತರಪಾಡಿದರು. ಬಂಕಿಮಚಂದ್ರರು ಇಂಗ್ಲೀಷು



ಶ್ರೀ ಬಿ. ವೆಂಕಟಾಚಾರ್

ಭಾಷೆಯನ್ನು ತಿಳಿದವರಾಗಿದ್ದರು. ಸ್ಕಾಟ್ ಮೊದಲಾದ ಆಂಗ್ಲೇಯ ಕಾದಂಬರಿಕಾರರ ಗ್ರಂಥಗಳನ್ನು ಓದಿ, ಅವುಗಳಿಂದ ಪ್ರೇರಿತರಾಗಿ ಕಾದಂಬರಿಗಳನ್ನು ಬರೆದರು. ಆದ್ದರಿಂದ ವೆಂಕಟಾಚಾರ್ಯರ ಕಾದಂಬರಿಗಳಿಗೆ ಆಂಗ್ಲೇಯ ಸಾಹಿತ್ಯವೇ ಪ್ರೇರಕವೆಂದು ಹೇಳಬಹುದು. ಪ್ರಾಚೀನ ಭರತವರ್ಷದ ಸಾಹಿತ್ಯ ಭಾಷೆಯಾದ ಸಂಸ್ಕೃತದಲ್ಲಿ ಪುರಾಣಗಳಿದ್ದವು; ನಾಟಕಗಳಿದ್ದವು; ಕಾದಂಬರಿ ಎಂಬ ಹೆಸರಿನ ಕಥೆಯೂ ಕೂಡ ಇದೆ. ಆದರೆ ನಾವೀಗ ಕಾದಂಬರಿ ಎನ್ನುವ ಕಾವ್ಯವನ್ನು ಹೋಲುವ ಗ್ರಂಥರಚನೆಯಾಗಿರಲಿಲ್ಲ. ಸಂಸ್ಕೃತವನ್ನೇ ಮಾದರಿಯಾಗಿ ಇಟ್ಟುಕೊಂಡು ಬೆಳೆದ ದೇಶಭಾಷೆಯ ಸಾಹಿತ್ಯಗಳು ಇಂಗ್ಲೀಷಿನವರೆವ ನಾವೆಲುಗಳನ್ನು ಸಿದ್ಧಿಸಲಿಲ್ಲ. ನಾವೆಲು ಪುರಾಣ ಮತ್ತು ನಾಟಕದ ಸಮನ್ವಯದಿಂದ ಮೂಡಿದುದು; ಅದು ನಾಗರೀಕ ಪುರಾಣ; ಕರತಲರಂಗಭೂಮಿ. ಆದರಲ್ಲಿ ಪುರಾಣಗಳಲ್ಲಿರುವಂತೆ ಕಥೆ ಮತ್ತು ವರ್ಣನೆಗಳ ಸ್ವಾರಸ್ಯವೂ ಇದೆ; ನಾಟಕಗಳಲ್ಲಿರುವಂತೆ ದೃಶ್ಯ, ಸಂಭಾಷಣೆ ಇತ್ಯಾದಿಗಳ ಸ್ವಾರಸ್ಯವೂ ಇದೆ. ನಾಟಕದ ದೃಶ್ಯಗಳು ನಾವೆಲಿನಲ್ಲಿ ಅಧ್ಯಾಯಗಳಾಗಿ ರೂಪಾಂತರ ಹೊಂದಿವೆ. ಪಾಶ್ಚಾತ್ಯದೇಶಗಳಲ್ಲಿ ಪುರಾಣ ನಾಟಕಗಳು ಹುಟ್ಟಿ ಬಹಳ ದಿನಗಳಾದ ಮೇಲೆ ನಾವೆಲು ಹುಟ್ಟಿತು. ನಾಗರೀಕತೆಯು ಹೆಚ್ಚುತ್ತ ಬಂದಹಾಗೆಲ್ಲ, ವಿಜ್ಞಾನಶಾಸ್ತ್ರವು ದೇವ ದೇವತೆಗಳನ್ನು ಸ್ವರ್ಗಸಿಂಹಾಸನಚ್ಯುತರನ್ನಾಗಿ ಮಾಡುತ್ತ ಬಂದಹಾಗೆಲ್ಲ, ಜನರಿಗೆ ಪುರಾಣಗಳಲ್ಲಿ ನಂಬುಗೆಯೂ ಅಭಿರುಚಿಯೂ ಕಡಿಮೆಯಾದವು. ನಾಗರೀಕತೆಯು ಶೈಶವಾವಸ್ಥೆಯಲ್ಲಿ ಮಾನವನ ಕಲ್ಪನೆಯು ಮಕ್ಕಳ ಕಲ್ಪನೆಯಂತೆ ಇದ್ದುದರಿಂದ ನಿಸರ್ಗದ ಶಕ್ತಿಗಳಿಗೆಲ್ಲ ವ್ಯಕ್ತಿತ್ವವನ್ನು ಆರೋಪಿಸಿ ನೂರಾರು ದೇವತೆಗಳನ್ನು ಸೃಜಿಸಿ, ಪುರಾಣ, ಕಟ್ಟುಕತೆಗಳನ್ನು ಬರೆದರು. ಸೃಷ್ಟಿಯ ಗೂಢ ತತ್ವಗಳ ಗುಟ್ಟು ಮನುಷ್ಯನಿಗೆ ತಿಳಿದಂತೆಲ್ಲ ಅಮರರಾಗಿದ್ದ ದೇವತೆಗಳು ಬಹ್ವಂಶವಾಗಿ ಏಕಾತದಿಂದ ಉರುಳಿಬಿದ್ದು ಸತ್ತು ಹೋದರು. ಆದ್ದರಿಂದ ದೇವತೆಗಳ ಜೀವನಲೀಲೆಯಲ್ಲಿದ್ದ ಕುತೂಹಲವು ಮಾಯವಾಗಿ ಮನುಷ್ಯನ ಜೀವನಲೀಲೆಯಲ್ಲಿ ಕುತೂಹಲವು ಹೆಚ್ಚಾಯಿತು. ಅದರ ಫಲವಾಗಿ ನಾವೆಲುಗಳೂ ಸಾಮಾಜಿಕ ನಾಟಕಗಳೂ ಹುಟ್ಟಿದುವು. ಪಾಶ್ಚಾತ್ಯರ ಸಂಸರ್ಗದಿಂದ ನಮ್ಮವರ ನಯನಗಳು ಸ್ವರ್ಗದ ದೇವತೆಗಳಿಂದ ಮರ್ತ್ಯದ ಮಾನವರ ಕಡೆ ತಿರುಗಿದವು. ರಾಮನ ಕಥೆ, ಬಕಾಸುರನ ವಧೆ, ಶ್ರೀ ಕೃಷ್ಣನ ಲೀಲೆಗಳಿಗೆ ಬದಲಾಗಿ ಆನಂದಮಠ, ರಾಜಸಿಂಹ, ದೇವೀಚೌಧುರಾಣಿ, ವಿಷವೃಕ್ಷ ಮೊದಲಾದ ಮಾನವೀಯ ವಿಷಯಗಳು ಸಾಹಿತ್ಯದ ವಿಷಯಗಳಾದವು. ಇಂಗ್ಲಿಷ್ ನಾವೆಲು ಬಂಗಾಳಿಯ ಉಪನ್ಯಾಸಗಳ ಮುಖಾಂತರ ಕನ್ನಡ ಕಾದಂಬರಿಯಾಯಿತು. ವೆಂಕಟಾಚಾರ್ಯರ ಉದ್ಯಮದಿಂದ ನಮ್ಮಲ್ಲಿದ್ದ ಗದ್ಯದ ಕ್ಷಾಮವು ಸ್ವಲ್ಪಮಟ್ಟಿಗೆ ತೊಲಗಿತು. ಜನರು ಅವರ ಭಾಷಾಂತರಗಳನ್ನು ಓದಿ ಆನಂದಪಟ್ಟರು.

ಅನಂತರ ತಮ್ಮಣ್ಣಯ್ಯ ಅನೇಕರು ಕಾದಂಬರಿಗಳನ್ನು ಬರೆದಿದ್ದಾರೆ. ಅವರಲ್ಲಿ ಗಣ್ಯರಾದವರೆಂದರೆ ಶ್ರೀ ಗಳಗನಾಥರವರು. ಗಳಗನಾಥರು ಅನೇಕ ಸ್ವತಂತ್ರ ಕಾದಂಬರಿಗಳನ್ನು ಬರೆದರು. ವೆಂಕಟಾಚಾರ್ಯರು ಬಂಗಾಳಿ ಭಾಷೆಯ ಸಹಾಯವನ್ನು ತೆಗೆದುಕೊಂಡಂತೆ ಗಳಗನಾಥರು ಮರಾಟಿ ಭಾಷೆಯನ್ನು ಆಶ್ರಯಿಸಿದರು. ಮರಾಟಿಯು ಆಗಾಗಲೇ ಇಂಗ್ಲೀಷಿನ ಸಾಹಿತ್ಯದ ಪ್ರಭಾವಕ್ಕೆ ಸಿಲುಕಿತ್ತು. ಅಂತು ಎತ್ತಕಡೆಯಿಂದ ನೋಡಿದರೂ ಇಂಗ್ಲೀಷ್ ಸಾಹಿತ್ಯದ ಪ್ರೇರಣೆಯಿಂದಲೇ ನಮ್ಮ ಕಾದಂಬರಿಗಳು ಹೊರಬಿದ್ದವು. ಆದ್ದರಿಂದ ಕಾದಂಬರಿಗಳೆಲ್ಲ ನಿರ್ವಿವಾದವಾಗಿ ಆಧುನಿಕ ಸಾಹಿತ್ಯಕ್ಕೆ ಸೇರಿದವು. ಗಳಗನಾಥರಲ್ಲದೆ ಇನ್ನು ಇತರರು ಕಾದಂಬರಿಗಳನ್ನು ಬರೆದಿದ್ದಾರೆ. ಬಂಗಾಳಿ ಮರಾಟಿ ಸಾಹಿತ್ಯಗಳ ಮಾದರಿಯನ್ನು ಬಯಸದೆ ಸ್ವಕೀಯ ಜೀವನವನ್ನೇ ಅರಮನೆಯಿಂದ ಗುಡಿಸಲಿನವರೆಗೆ ನಿರೀಕ್ಷಿಸಿ ಚಿತ್ರ ಕಣ್ಣಿಗೆ ಕಟ್ಟುವಂತೆ ಮನೆಮಾತಿನ ಶೈಲಿಯಲ್ಲಿ ಕಾದಂಬರಿಗಳನ್ನು ಬರೆದ ಪುಟ್ಟಣ್ಣನವರನ್ನು ಇಲ್ಲಿ ಮರೆಯಲಾಗುವುದಿಲ್ಲ. ಗ್ರಂಥ ಬಾಹುಳ್ಯದ ದೃಷ್ಟಿಯಿಂದ ನಂಜನಗೂಡಿನ ಶ್ರೀಮತಿ ತಿರುಮಲಾಂಬಾರವರೂ ಶ್ರೀಮತಿ

ಶ್ರೀಮತಿ ಆರ್. ಕಲ್ಯಾಣಮ್ಮನವರು

ಆರ್. ಕಲ್ಯಾಣಮ್ಮನವರೂ ಗಣನೀಯರಾದವರು. ಇವರಲ್ಲದೆ ಒಂದೆರಡು ಕಾದಂಬರಿಗಳನ್ನು ಬರೆದ ನುಹನೀಯರು ಬಹಳವಿದ್ದಾರೆ. ಇಷ್ಟು ಕಾದಂಬರಿಗಳು ಹುಟ್ಟಿದರೂ ಪ್ರಥಮ ಶ್ರೇಣಿಗೆ ಸೇರಬಹುದಾದ ಸ್ವತಂತ್ರ ಕಾದಂಬರಿಗಳು, ನಾವೆಲ್ಲ ಇನ್ನೂ ಬಂದಿಲ್ಲ. ದಾರಿದ್ರ್ಯದಿಂದಲೋ, ಅನುಭವದದಾರಿದ್ರ್ಯದಿಂದಲೋ, ಇತಿಹಾಸ ಜ್ಞಾನಾಭಾವದಿಂದಲೋ, ಜನಜೀವನವನ್ನು ಚಿತ್ರಿಸುವ ಸಾಮರ್ಥ್ಯವಿಲ್ಲದಿರುವುದರಿಂದಲೋ, ಯಾವ ಕಾರಣದಿಂದಲೋ ಪ್ರಥಮ ವರ್ಗಕ್ಕೆ ಸೇರುವ ಕಾದಂಬರಿಕಾರನು ನಮ್ಮಲ್ಲಿ ಇನ್ನೂ ಹುಟ್ಟಿಲ್ಲ.

ಸಣ್ಣಕತೆ

ಕಾದಂಬರಿಗೆ ಬದಲಾಗಿ ಸಣ್ಣ ಕತೆಗಳು ವಿಶೇಷವಾಗಿ ಹುಟ್ಟುತ್ತಿವೆ. ಸಾಹಿತ್ಯ ಪ್ರಪಂಚಕ್ಕೆ ಕಾಲಿಡಬೇಕು ಎನ್ನುವವರೆಲ್ಲರೂ ಕೈ ಪಳಗಲಿ ಎಂದು ನೂರಲ್ಲ ಒಂದ ಸಣ್ಣಕತೆಯನ್ನು ಬರೆಯುತ್ತಾರೆ. ಸಣ್ಣಕತೆಯು ಬರೆಯಲು ಬಹು ಸುಲಭವಾದುದೆಂದು ಅನೇಕರು ತಿಳಿದುತಿದೆ. ಅಂಥವರು ಪಾಶ್ಚಾತ್ಯ ಸಾಹಿತ್ಯಗಳಲ್ಲಿ ಪುರಾಣ, ನಾಟಕ, ಕಾದಂಬರಿಗಳು ಜೆನ್ನಾಗಿ ಅಭಿವೃದ್ಧಿ ಹೊಂದಿದ ಮೇಲೆ ಸಣ್ಣಕತೆಯು ರಂಗಕ್ಕಿಳಿದು ಪ್ರಮುಖವಾಯಿತು ಎಂಬುದನ್ನು ಮರೆಯದಿರಲಿ. ಅಲ್ಲಿ ಸಣ್ಣಕತೆಯು ಹೆಚ್ಚಿಕೊಂಡುದು ಸನ್ನಿವೇಶಪ್ರಭಾವದಿಂದ. ನಾಗರಿಕತೆಯೂ ಯಂತ್ರಕೌಶಲವೂ ವ್ಯಾಪಾರವೂ ಕೈಗಾರಿಕೆಯೂ ಜೀವನದ ಹೋರಾಟವೂ ಪ್ರಬಲವಾಗಲು ಜನಗಳಿಗೆ ದೊಡ್ಡ ದೊಡ್ಡ ಕಾದಂಬರಿಗಳನ್ನು ಓದಲು ಪುರಸತ್ತು ಕಡಿಮೆಯಾಯಿತು. ತಾಳ್ಮೆಯಿಲ್ಲದೆಹೋಯಿತು. ಆದ್ದರಿಂದಲೇ ಪುರಾಣವು ಭಾವಗೀತೆಗಿಳಿದಂತೆ ಕಾದಂಬರಿಯು ಸಣ್ಣಕತೆಯಾಯಿತು. ಆದರೆ ನಾವ್ಯಮಾತ್ರ ಇದೊಂದನ್ನೂ ಗಣನೆಗೆತಾರದೆ ಸಣ್ಣಕತೆಗಳಿಗೆ ಧುಮುಕಿದ್ದೇವೆ. ಸಣ್ಣಕತೆಯು ಈಗಿನ ರೂಪದಲ್ಲಿ ನಮಗೆ ಹೊಸದಾದರೂ ಸಂಪೂರ್ಣವಾಗಿ ಹೊಸದಲ್ಲ. ಸಂಸ್ಕೃತದಲ್ಲಿಯೂ ಬೇಕಾದಷ್ಟು ಸಣ್ಣಕತೆಗಳಿದ್ದುವು. ಕಥಾಸರಿತ್ಸಾಗರ, ಪಂಚತಂತ್ರ ಮೊದಲಾದವು ಸಣ್ಣಕತೆಗಳ ಜಾತಿಗೆ ಸೇರಿದವು. ಕನ್ನಡದಲ್ಲಿಯೂ ಅಂತಹ ಕಟ್ಟುಕತೆಗಳು ಬೇಕಾದಷ್ಟಿದ್ದುವು. ಹೊಸ ರೂಪದಲ್ಲಿ ಕನ್ನಡಕ್ಕೆ ಮೊದಲು ಸಣ್ಣಕತೆಯನ್ನು ತಂದವರು ಶ್ರೀಮಾನ್ ಮಾಸ್ತಿ ವೆಂಕಟೇಶಐಯಂಗಾರ್ಯರು. ಅವರ ಕತೆಗಳನ್ನು ಓದಿ ನಾಡಿನ ಜನರು ನಲಿದರು. ಕೆಲಕಾಲದಲ್ಲೆಯೇ ಸಣ್ಣಕತೆ ಬರೆಯುವ ಹುಚ್ಚು ಅನೇಕರಿಗೆ ಹಿಡಿಯಿತು. ಮಾಸಪತ್ರಿಕೆಗಳಲ್ಲಿ ನೂರಾರು ಸಣ್ಣಕತೆಗಳು ಕಾಣಿಸಿಕೊಂಡವು. ಇನ್ನೂ ಕಾಣಿಸಿಕೊಳ್ಳುತ್ತಿವೆ. ಅವುಗ

ಳಲ್ಲಿ ಯೋಗ್ಯವಾದುದು ಒಂದು ಇದ್ದರೆ ಅಯೋಗ್ಯವಾದುವು ನೂರು ಇವೆ. ವೆಂಕಟೇಶವಯಂಗಾರ್ಯರು ಪ್ರತಿಭಾಶಾಲಿಗಳಾದುದರಿಂದ ಅವರ ಕಥೆಗಳಲ್ಲಿ ಬೇಕಾದಷ್ಟು ವೈವಿಧ್ಯವಿದೆ; ಶಕ್ತಿಯಿದೆ. ಅವರ ಕತೆಗಳ ಹೆಸರುಗಳನ್ನು ನೋಡಿದರೆ ಅದು ಗೊತ್ತಾಗುವುದು. ಒಂದು ಕತೆ ನಗಿಸಿದರೆ ಮತ್ತೊಂದು ಅಳಿಸುವುದು;

ಶ್ರೀ ಮಾಸ್ತಿ ವೆಂಕಟೇಶವಯಂಗಾರ್ಯರು

ಇನ್ನೊಂದು ಬೆದರಿಸುವುದು; ಬೇರೊಂದು ಸಂತೈಸುವುದು. ಅವರು ರಂಗಪ್ಪನ ಬಾಲಶೃಂಗಾರ ರಸವಾಣಿಯೊಂದನ್ನೇ ಮಾಡಿ ಕೈ ತೊಳೆದುಕೊಳ್ಳಲಿಲ್ಲ; ಬಾದಶಹನ ನ್ಯಾಯವನ್ನೂ ಬರೆದರು; ವೆಂಕಟರಾಯನ ಪಶ್ಚಾತ್ತಾಪವನ್ನೂ ಬರೆದರು; ಭಯಂಕರವಾದ ಇಂದಿರೆಯನ್ನೂ ಬರೆದರು; ತತ್ತ್ವಪೂರ್ಣವಾದ ಸಾರಿತ್ರಿಯ ಕಥೆಯ ದಿನಗಳನ್ನೂ ಬರೆದರು. ಆದರೆ ಇವರನ್ನು ಹಿಂಬಾಲಿಸಿದ ಯುವಕರು ಬರೆಯುವುದರಲ್ಲಿ ಇವರನ್ನು ಅನುಕರಿಸಿದರೇ ಹೊರತು ಬರವಣಿಗೆಯಲ್ಲಿ ಇವರನ್ನು ಅನುಸರಿಸಲಿಲ್ಲ. ಅದರಲ್ಲಿಯೂ ವಿದ್ಯಾರ್ಥಿಗಳಿಗೆ ಹುಡುಗ ಹುಡುಗಿಯರ ಕೋರ್ಟ್‌ಷಿಪ್ಪಿನ ಕತೆಗಳನ್ನು ಬಿಟ್ಟು ಬೇರೆಯದನ್ನು ಬರೆಯುವುದೇ ಗೊತ್ತಿಲ್ಲವೋ ಏನೋ ಎನ್ನುವಂತೆ ತೋರುತ್ತಿದೆ. ಮುಂದೆ ಬರೆಯುವವರು ವಿಮರ್ಶೆಮಾಡಿ ಬರೆದರೆ ಉತ್ತಮ. ಸಣ್ಣ ಕತೆಗಳನ್ನು ಮೊದಲು ಬರೆದವರಲ್ಲಿ ವೆಂಕಟೇಶವಯಂಗಾರ್ಯರು ಅಗ್ರಗಣ್ಯರಾದರೂ ಬಾಗಲಕೋಟೆಯ ವಾಸುದೇವಾಚಾರ್ಯರೂ ಎರಡನೆಯಸ್ಥಾನಕ್ಕೆ ಬರುವರೆಂದು ಹೇಳಬಹುದು. ಅವರ ಸೀಳ್ಕತೆಗಳು ಲಲಿತವಾಗಿವೆ. ಇತ್ತೀಚೆಗೆ ಸಣ್ಣ ಕತೆಗಳನ್ನು ಬರೆದ ತರುಣರಲ್ಲಿ "ಆನಂದ" ಎಂಬ ಸಂಕೇತನಾಮದಿಂದ ಜನರಿಗೆ ತಿಳಿದಿರುವ ಶ್ರೀಮಾನ್ ಎ. ಸೀತಾರಾಮರವರು ಗಣ್ಯರಾದವರು. ಅವರಿಗೆ ವರ್ಣಿಸುವ ಶಕ್ತಿಯೂ ದೃಶ್ಯಗಳನ್ನು ಚಿತ್ರಿಸುವ ಪ್ರತಿಭೆಯೂ ಸಾಕಾದಷ್ಟಿವೆ. ಅವರ ಸಣ್ಣಕತೆಗಳು ಓದಲು ಮಧುರವಾಗಿವೆ. ಸಣ್ಣಕತೆಗಳೇನೋ ಬೇಕಾದಷ್ಟು ಬರಲಿ. ಆದರೆ ಈಗಿರುವ ಅನುಭವನಲಯದ ವಿಸ್ತಾರವು ಸಾಲದು. ಕಾದಂಬರಿಯನ್ನು ಬರೆಯದೆ ಸಣ್ಣಕತೆಯನ್ನು ಬರೆಯಬಾರದು ಎಂದು ಯಾರೂ ಹೇಳರು. ಆದರೆ ಸಣ್ಣಕತೆಯು ಕಾದಂಬರಿಯ ಸಾರಸರ್ವಸ್ವ ಎಂಬುದನ್ನು ಯಾರೂ ಮರೆಯಬಾರದು.

ಗದ್ಯ ಸಾಹಿತ್ಯ

ಗದ್ಯಗ್ರಂಥಗಳಲ್ಲಿ ಕಾದಂಬರಿ, ಸಣ್ಣಕತೆಗಳನ್ನು ಬಿಟ್ಟರೆ ಇನ್ನುಳಿದುವು ಚರಿತ್ರೆ, ಜೀವನ ಚರಿತ್ರೆ, ಪ್ರಬಂಧ, ವಿಮರ್ಶೆ. ಶ್ರೀಯುತ ವಾಸುದೇವಯ್ಯನವರ ಆರ್ಯಕೀರ್ತಿಯ ಗದ್ಯದ ಕೀರ್ತಿಯು ನಾಡಿನಲ್ಲೆಲ್ಲ ಹಬ್ಬಿದೆ. ಕನ್ನಡಭಾಷೆಗೆ ವೀರಶೈಲಿಯೊಂದನ್ನು ದಾನಮಾಡಿದವರಲ್ಲಿ ಅವರೂ ಒಬ್ಬ ಶ್ರೇಷ್ಠಸಾಹಿತಿಗಳು. ನಮ್ಮಲ್ಲಿ ಶ್ರೇಷ್ಠವಾದ ಗದ್ಯವು ಇನ್ನೂ ಐರಾವತವಾಗಿಯೇ ಇದೆ. ಪದ್ಯ, ನಾಟಕ ಇವುಗಳಿಗಿಂತ ಗದ್ಯವು ಹೆಚ್ಚಬೇಕು. ಹಾಗಾದರೇ ಸಾಹಿತ್ಯಕ್ಕೆ ಶ್ರೇಯಸ್ಸು. ಶ್ರೀಮಾನ್ ಡಿ. ವಿ. ಗುಂಡಪ್ಪನವರು ಜೀವನ ಚರಿತ್ರೆಗಳೇ ಮೊದಲಾದ ಕೆಲವು ಗದ್ಯಗ್ರಂಥಗಳನ್ನು ಬರೆದಿದ್ದಾರೆ. ಪ್ರಬಂಧಗಳು ನಮ್ಮಲ್ಲಿ ಈಗೀಗ ಪ್ರಬಲವಾಗುತ್ತಿವೆ. ಶ್ರೀಮಾನ್ ಎ. ಸೀತಾರಾಮಯ್ಯನವರು ಅದ್ವಿತೀಯ ಪ್ರತಿಭೆಯಿಂದ ಬರೆದಿರುವ ಪಂಪಾಯಾತ್ರೆಯು ಅನ್ಯಾದೃಶವಾದುದೆಂದೇ ಹೇಳಬಹುದು. ದೊಡ್ಡ ಪ್ರಬಂಧಗಳ ಪ್ರಪಂಚದಲ್ಲಿ ಅದಕ್ಕೇ ಅಗ್ರಸ್ಥಾನ ಸಿಕ್ಕುವುದರಲ್ಲಿ ಸಂದೇಹವಿಲ್ಲ. ಅದರಲ್ಲಿ ಶೈಲಿಯು ವೈವಿಧ್ಯದಿಂದ ಅತಿಮನೋಹರವಾಗಿದೆ. ಮನೆಮಾತಿನಶೈಲಿ, ಹರಟೆಯ ಶೈಲಿ, ಗಂಡು ಶೈಲಿ ಎಲ್ಲವೂ ಇವೆ. ಪಂಪಾಯಾತ್ರೆಯನ್ನು ಬರೆದು ಶ್ರೀಮಾನ್ ಸೀತಾರಾಮಯ್ಯನವರು ಕನ್ನಡ ಗದ್ಯ ನಿಕೇತನಕ್ಕೆ ಒಂದು ನೂತನ ದ್ವಾರವನ್ನೇ ರಚಿಸಿದ್ದಾರೆ. ವಿಮರ್ಶೆಯು ಸಾಹಿತ್ಯವನ್ನೇ ವಿಷಯ

ವಾಗುಳ್ಳ ಸಾಹಿತ್ಯ. ಅದು ಪ್ರತಿಭಾಶಾಲಿಯ ಕೈಯಲ್ಲಿ ಸಿಕ್ಕರೆ ಸಾಹಿತ್ಯಕ್ಕೆ ಸೇರುವುದು; ಇಲ್ಲದಿದ್ದರೆ ಹೊರಗಾಗುವುದು. ಅದು ಅಲಂಕಾರಶಾಸ್ತ್ರ, ಅಥವಾ ವ್ಯಾಖ್ಯಾನಗಳ ಗುಂಪಿಗೆ ಸೇರಿದರೆ ಸಾಹಿತ್ಯ ಎನ್ನಿಸಿಕೊಳ್ಳದು. ವಿಮರ್ಶೆಯು ನಮಗೆ ಸಂಪೂರ್ಣವಾಗಿ ಹೊಸದೆಂದೇ ಹೇಳಬಹುದು.

ವಿಮರ್ಶೆ

ಕನ್ನಡದಲ್ಲಿ ವಿಮರ್ಶೆಯಗ್ರಂಥಗಳು ಬಹಳ ಇಲ್ಲ. ವಿಮರ್ಶೆಯನ್ನು ಗ್ರಂಥರೂಪವಾಗಿ ಮೊದಲು ಪ್ರಕಟಿಸಿದವರು ಶ್ರೀ ಮಾಸ್ತಿ ವೆಂಕಟೇಶಐಯ್ಯಂಗಾರ್ಯರು. "ವಿಮರ್ಶೆ" ಎಂಬ ಹೆಸರಿನ ಎರಡುಗ್ರಂಥಗಳು ಅವರಿಂದ ಹೊರಬಿದ್ದಿವೆ. ಅಲ್ಲದೆ "ಸಾಹಿತ್ಯ" ಎಂಬುದೂ ಅದೇ ಜಾತಿಗೆ ಸೇರಿದ್ದು. ವಿದ್ವತ್‌ಸಭೆಗಳು ಪ್ರಕಟಿಸಿರುವ ಮುದ್ದಣ, ರನ್ನಕವಿಪ್ರಶಸ್ತಿ ಇವು ಒಬ್ಬ ಕವಿಯ ವಿಷಯವಾಗಿ ಅನೇಕರು ಅನೇಕ ದೃಷ್ಟಿಯಿಂದ ಮಾಡಿರುವ ವಿಮರ್ಶೆಯಾಗಿವೆ. ಬೆಳೆಯುವ ಸಾಹಿತ್ಯಕ್ಕಾಗಲಿ, ಬೆಳೆದ ಸಾಹಿತ್ಯಕ್ಕಾಗಲಿ ವಿಮರ್ಶೆಯು ಅತ್ಯಾವಶ್ಯಕ. ಅದು ಜನರಲ್ಲಿ ಕುರುಚಿಯನ್ನು ತಿದ್ದುವುದು; ಸಾಹಿತ್ಯದ ವಿಚಾರವಾಗಿ ಸರಿಯಾದ ದೃಷ್ಟಿಯನ್ನು ನೀಡುವುದು; ಬರೆಯುವವರಿಗೂ ಎಚ್ಚರಿಕೆ ಕೊಡುವುದು; ಟೊಳ್ಳಾಗುವುದು ಗಟ್ಟಿಯಾವುದು ಎಂಬುದನ್ನು ನಿರ್ಣಯಿಸುವುದು. ಉತ್ತಮಗ್ರಂಥಗಳಲ್ಲಿ ಸಾಮಾನ್ಯರ ಕಣ್ಣಿಗೆ ಕಾಣದೆ ನುಣಚಿಕೊಂಡು ಹೋಗುವ ರಸವತ್ತಾದ ವಿಷಯಗಳನ್ನು ಒತ್ತಿಹೇಳಿ ಎತ್ತಿಹಿಡಿದು ತೋರಿಸುವುದು. ಈಗ ಮಾಸಪತ್ರಿಕೆಗಳಲ್ಲಿ ವಿಮರ್ಶೆಗಳು ಹೊರಬೀಳುತ್ತಿವೆ. ಎಲ್ಲರೂ ವಿಮರ್ಶೆಮಾಡಲು ಕುತೂಹಲದಿಂದಿದ್ದಾರೆ ಸಣ್ಣಕತೆಗಳನ್ನು ಬರೆಯುವಂತೆ! ಆದರೆ ವಿಮರ್ಶೆಮಾಡುವುದು ಮೇಲೆ ತೋರುವಷ್ಟು ಸುಲಭ ಸಾಧ್ಯವಾದ ಕಾರ್ಯವಲ್ಲ. ಅದಕ್ಕೆ ಬಹಳ ಪರಿಶ್ರಮ ಬೇಕು. ಕೆಲವರು ಗ್ರಂಥಗಳನ್ನು ಓದದೇ ವಿಮರ್ಶೆ ಮಾಡುವರೋ ಎಂದು ತೋರುತ್ತದೆ. ಮತ್ತೆ ಕೆಲವರು ಅಲ್ಲಲ್ಲಿ ಗ್ರಂಥದ ಪದ್ಯಗಳನ್ನು ತೆಗೆದುಬರೆದು "ಇಲ್ಲಿ ಕವಿ ಎಷ್ಟು ಚೆನ್ನಾಗಿ ಬರೆದಿದ್ದಾನೆ"; "ಇದು ಎಷ್ಟು ಮನೋಹರವಾಗಿದೆ"; "ಇಲ್ಲಿ ಕವಿಯ ಚಿತ್ರವು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾನೆ", "ಇದು ಚೆನ್ನಾಗಿಲ್ಲ!" "ಆಹಾ! ಮೇಲಿನ ಪದ್ಯದಲ್ಲಿ ಕವಿಯು ಎದೆಯನ್ನು ಸೂರೆಮಾಡಿದ್ದಾನೆ!" ಎಂದು ಮೊದಲಾಗಿ ಬರದರೆ ಉತ್ತಮ ವಿಮರ್ಶೆಯಾಯಿತೆಂದು ತಿಳಿದಿದ್ದಾರೆ. ಅಭಿಪ್ರಾಯಗಳನ್ನು ಸೂಚಿಸಿದರೆ ತತ್ವಪ್ರತಿಪಾದನೆ ಮಾಡಿದಂತಾಗಲಿಲ್ಲ. ಅಭಿಪ್ರಾಯದಹಿಂದೆ ಬೇಕಾದಷ್ಟು ಕಾರಣಗಳಿದ್ದರೆ ಅದು ಮಾನ್ಯವಾಗುವುದು; ಇಲ್ಲದಿದ್ದರೆ ತಿರುಳಿಲ್ಲದ ಕೂಗಾಗುವುದು. ಆದ್ದರಿಂದ ವಿಮರ್ಶೆ ಮಾಡುವವರಿಗೆ ಆಯಾ ಸಾಹಿತ್ಯದ ಪರಿಚಯ ಬಹಳ ಚೆನ್ನಾಗಿರಬೇಕು. ಅಲ್ಪ ಪರಿಶ್ರಮದಿಂದಲೂ ಅಲ್ಪಾನುಭವದಿಂದಲೂ ಬರೆದದುಷ್ಟವಿಮರ್ಶೆಯು ಕುಕಾವ್ಯಕ್ಕಿಂತಲೂ ಹಾನಿಕರವಾದುದೆಂದು ಎಲ್ಲರೂ ನೆನಪಿನಲ್ಲಿಡಬೇಕು.

ನಾಟಕ

ನಾಟಕವನ್ನು ಸಾಮಾನ್ಯವಾಗಿ ಗದ್ಯಸಾಹಿತ್ಯವೆಂದೇ ಕರೆಯಬಹುದು. ಹಳಗನ್ನಡ ಸಾಹಿತ್ಯದಲ್ಲಿ ನಾಟಕಗಳೇ ಇಲ್ಲ. ಇದು ಆಶ್ಚರ್ಯಕರವಾದ ವಿಷಯ. ಸಂಸ್ಕೃತದಲ್ಲಿ ಲೋಕಪ್ರಸಿದ್ಧರಾದ ನಾಟಕಕರ್ತರುಗಳು ಬಹಳ ಹಿಂದಯೇ ಆಗಿಹೋದರು. ನಮ್ಮ ಕವಿಗಳು ಅವರ ಕಾವ್ಯಗಳನ್ನು ಓದಿದ್ದರು ಎಂಬುದಕ್ಕೆ ಅವರ ಗ್ರಂಥಗಳಿಂದಲೇ ಆಧಾರ ಸಿಕ್ಕುತ್ತದೆ. ಆದರೂ ನಮ್ಮಲ್ಲಿ ನಾಟಕವೇ ಹುಟ್ಟಲಿಲ್ಲ. ಕನ್ನಡಕ್ಕೆ ನಾಟಕ ಬಂದದ್ದು ಈಚೀಚೆಗೆ. ಅಭಿನಯ ಚಕ್ರವರ್ತಿ ಎಂದು ಹೆಸರುಪಡೆದು ತೀರಿಹೋದ ಶ್ರೀಮಾನ್ ವರದಾಚಾರ್ಯರು ಕನ್ನಡ ರಂಗಭೂಮಿಗೆ ಸ್ಥಾಪನಾಚಾರ್ಯರೆಂದೇ ಹೇಳಬಹುದು. ಅನೇಕರು ರಂಗಭೂಮಿಗಾಗಿ ನಾಟಕಗಳನ್ನು ಬರೆದರು. ಷೇಕ್ಸ್‌ಪಿಯರ್ ಕವಿಯನಾಟಕಗಳೂ ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟವು. ಶ್ರೇಷ್ಠರಾದ ಪಂಡಿತರು, ಬುಸಪ್ರಶಸ್ತ್ಯಗಳಂಥ ಮನೀಷಿಗಳು ಶಾಕುಂತಲಾ ಮೊದಲಾದ ಸಂಸ್ಕೃತ ನಾಟಕಗಳನ್ನು ಅದ್ವಿತೀಯ ಪ್ರತಿಭೆಯಿಂದ ಕನ್ನಡಕ್ಕೆ ಪರಿವರ್ತಿಸಿದರು. ಅಂತೂ ನಾಟಕ ಯುಗವು ಶ್ರೀ ಚಾಮರಾಜೇಂದ್ರ ಒಡೆಯರವರ ಕಾಲದಲ್ಲಿ ಜಯಘೋಷವಾದ್ಯಧ್ವನಿಗಳಿಂದ ಕನ್ನಡ ಸಾಹಿತ್ಯದಲ್ಲಿ ಕಾಲಿಟ್ಟಿತು. ಆದರೆ ನಿಜವಾದ ಸಾಹಿತ್ಯದ ಒರೆಗಲ್ಲಿನ ಪರೀಕ್ಷೆಯಲ್ಲಿ ಉತ್ತೀರ್ಣವಾಗುವಂತಹ ನಾಟಕಗಳು ಎಲ್ಲಿಯೋ ಒಂದೆರಡು ಮಾತ್ರ ಹುಟ್ಟಿದವು. ಅಭಿನಯ ಚಕ್ರವರ್ತಿಯು ನಮ್ಮ ನಡುವೆ ಬಂದನು; ಆದರೆ ನಾಟಕ ಸಮ್ರಾಟನು ಬರಲಿಲ್ಲ. ನಾಟಕ ಸಮ್ರಾ

ಟನೂ ಬಂದಿದ್ದರೆ ಅಭಿನಯ ಜಕ್ಕಣಾರ್ಯನು ಅಭಿನಯ ತ್ರಿಣೇತ್ರನಾಗುತ್ತಿದ್ದನೋ ಏನೋ! ಜನರ ಅಭಿರುಚಿಯು ಅತಿಸೂಕ್ಷ್ಮವಾಗಿದ್ದುದರಿಂದ ಅಭಿನಯ ಜಕ್ಕಣವರ್ತಿಯೂ ಜನರ ರುಚಿಗೆ ತಕ್ಕಂತೆ ಕುಣಿಯಬೇಕಾಗಿ ಬಂದುದು ನಮಗಿಂತಲೂ ಅತನಿಗೇ ಶೋಚನೀಯವಾಗಿತ್ತು ಎಂದು ಹೇಳಿದರೆ ಪರದಾಚಾರ್ಯರ ಗೌರವಕ್ಕೆ ಹಾನಿಮಾಡಿದಂತಾಗದು. ಅಂತೂ ಅನೇಕರು ಅನೇಕ ನಾಟಕಗಳನ್ನು ಬರೆದರು. "ಸದಾರಮೆ" ಯಿಂದ ಹಿಡಿದು "ಶಾಕುಂತಲ" ದವರೆಗೂ ಬರೆದರು! ಅವುಗಳಲ್ಲಿ ಅನೇಕ ನಾಟಕಗಳು ನಾಗರಿಕತೆಯಿಂದ ಜಾತಿಕೆಟ್ಟ ಭಾಗವತರಾಟಗಳಂತಿವೆ! ಆ ಕುರುಹಿಯು ಇನ್ನೂ ಜನಗಳಲ್ಲಿ ಪೂರ್ಣವಾಗಿತೊಲಗಿಲ್ಲ. ಇನ್ನು ಅನ್ಯ ಕೃತವಾದ ಸಂಗೀತ, ಅನಾವಶ್ಯಕವಾದ ದೃಶ್ಯಾಡಂಬರ, ಪಟಾಸು ಹೊಡೆಯುವುದು, ದಶಾವತಾರಗಳು, ಡ್ರಿಲ್ ಮಾಡುವುದು ಇವೇ ನಾಟಕ ಕಲೆಯ ಉತ್ತಮಗುಣಗಳೆಂದು ತಿಳಿದಿರುವ ಮಹನೀಯರು ಬೇಕಾದಷ್ಟಿದ್ದಾರೆ. ರಂಗಭೂಮಿಯ ಸುಧಾರಣೆಯಾಗುತ್ತಿದೆ. ಮುಂದೆ ಶಕ್ತದೃಷ್ಟಿಯು ಋಜುವಾಗಬಹುದು. ಹೋದವರ್ಷ ವಿಶ್ವಕರ್ಣಾಟಕ ಪತ್ರಿಕೆಯಲ್ಲಿ ಪ್ರಕಟವಾದ ಕನ್ನಡ ನಾಟಕಗಳ ಪಟ್ಟಿಯನ್ನು ನೋಡಿದರೆ ಯಾವ ಕನ್ನಡಿಗನಾದರೂ ಹೆಮ್ಮೆಪಡದಿರಲಾರನು; ಓದಿದರೆ ನೋಡಾಡದಿರಲಾರನು. ಅವುಗಳಲ್ಲಿ ಕೆಲವು ಸಹ್ಯವಾಗಿರಬಹುದು; ಉಳಿದುವೇನೋ ಅಸಹ್ಯ. ಆ ಪಟ್ಟಿಯು ಒಂದು ದೊಡ್ಡ ಕಸದ ಗಾಡಿಯಂತಿದೆ; ನಡುವೆ ಸಿಕ್ಕ ರಸದ ಗುರುತಿಗೆ ಕಸದಲ್ಲಿ ಮುಚ್ಚಿಹೋಗುವಂತಿದೆ.

ಶ್ರೀಮಾನ್ ವೆಂಕಟೇಶಯಂಗಾರ್ಯರು ಕೆಲವು ಪಣ್ಣ ಪಣ್ಣ ನಾಟಕಗಳನ್ನೂ ಬರೆದರು. ಆದರೆ ಅವು ದೃಶ್ಯ ರೂಪದ ಗೀತೆಗಳಂತಿವೆ. ಆದರಿಂದ್ದ ರಂಗಭೂಮಿಯ ದೃಷ್ಟಿಯಿಂದ ಸುಕರವಾದುದಲ್ಲ ಎಂದು ಕೆಲವರ ಅಭಿಪ್ರಾಯ; ಭಿನ್ನಾಭಿಪ್ರಾಯಗಳೂ ಉಂಟು. ಪಟಾಸು, ಸಂಗೀತ, ವಿದ್ಯುಚ್ಛಕ್ತಿಯ ದೀಪ ಇವ್ಯಗಳ ಭ್ರಮಾಲಿಂಗನದಿಂದ ರಂಗಭೂಮಿಯನ್ನು ತಪ್ಪಿಸುವುದಕ್ಕೆ ಪ್ರಯತ್ನಪಟ್ಟವರಲ್ಲಿ ಶ್ರೀ ಕೈಲಾಸಂರವರು ವಂದನೀಯರು. ಅವರ ಸಾಮಾಜಿಕ ನಾಟಕಗಳು ಸರ್ವಸಾಹಿತ್ಯ ದೃಷ್ಟಿಯಿಂದಲೂ ರಮಣೀಯವಾಗಿವೆ. ಪುರಾಣ ಪ್ರಪಂಚದಲ್ಲಿಯೇ ವಿಹರಿಸುತ್ತಿದ್ದ ನಾಟಕ ದೇವಿಯು ಅವರ ನಾಟಕಗಳಲ್ಲಿ ಬಡಗುಡಿಸಲುಗಳನ್ನು ಪ್ರವೇಶಿಸಲು ಸಮ್ಮತಿಸಿದಳು. ಆದರೆ ಅವರು ತಾವೇ ಪಸುಪಾಡಿಯಾರು? ಒಸರಗ ಸಬಾಸೆಂದರೆ ಪ್ರಾಣ. ಶ್ರೀಮನ್ನಾರಾಯಣನು ಹೊರಗಂತೂ ಗೋಚರವಾಗನು; ನಾಟಕರಂಗದಲಿ ಯಾದರೂ ಅವನನ್ನು

ಶ್ರೀ ಕೈಲಾಸಂರವರು

ನೋಡಿ ಜನ್ಮಸಾರ್ಥಕಮಾಡಿಕೊಳ್ಳೋಣ ಎನ್ನುವ ರಸಿಕ ಶ್ರಮಜೀವಿಗಳು ಅತಿಯಾಗಿರುವಾಗ ಯಾರು ತಾನೇ ಏನುಮಾಡಿಯಾರು? ಅಂತೂ ವಿದ್ಯೆಯು ಹೆಚ್ಚಿದಂತೆಲ್ಲ, ನಿಜವಾದ ಕಲೆಯ ಸ್ಫುರಣವು ಜನರಲ್ಲಿ ಹಬ್ಬಿದಂತೆಲ್ಲ ಅವರ ಪ್ರಯತ್ನವು ಸಾರ್ಥಕವಾಗದಿರದು. ಶ್ರೀಯುತ ಡಿ. ವಿ. ಗುಂಡಪ್ಪನವರೂ ನಾಟಕಗಳನ್ನು ಬರೆದಿದ್ದಾರೆ. ಅವರೇ ಅನ್ನು ನಾಟಕಗಳು ಹಾದೋ ಅಲ್ಲವೋ ಎಂದು ಸಂಶಯಪಟ್ಟಿರುವುದರಿಂದ ಆ ನಾಟಕಗಳ ವಿಮರ್ಶೆಯು ಇಲ್ಲಿ ಅನಾವಶ್ಯಕ. ಇತ್ತೀಚೆಗೆ ಮತ್ತೆ ಕೆಲವರು ನಾಟಕರಚನೆಗೆ ಕೈ ಹಾಕಿರುತ್ತಾರೆ. ಇಂಗ್ಲೀಷಿನಲ್ಲಿರುವ ಬ್ಲಾಂಕ್‌ವರ್ಸನ್ನು ಕನ್ನಡದಲ್ಲಿ ಸರಳರಗಳೆಗೆ ತಿರುಗಿಸಿ ಬರೆಯುತ್ತಾರೆ. ಸರಳರಗಳೆಯು ಸಂಪೂರ್ಣ ನೂತನವಾದುದರಿಂದ ಸಂಪ್ರದಾಯಲಂಪಟರಾದ ನಮ್ಮವರಿಗೆ ಅದು ವಿಲಕ್ಷಣವಾಗಿ ಕಾಣುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಅವರೆ ಅಂತಹ ಕೆಲವು ನಾಟಕಗಳನ್ನು ಅಭಿನಯಿಸಿದಾಗ ಜನರು ನೋಡಿ ಸಂತೋಷಪಟ್ಟಂತೆ ತಿಳಿದುಬಂದಿದೆ. ಆ ಜಾತಿಯ ನಾಟಕಗಳಲ್ಲಿ ಸುಪ್ರಸಿದ್ಧವಾದುದೆಂದರೆ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ "ಅಶ್ವತ್ಥಾಮನ್" ಎಂಬ ನಾಟಕ. ಅದರಮೇಲೆ ಈ ಹಿಂದೆ ಅನೇಕ ವಿಮರ್ಶೆಗಳು ಬಂದಿವೆ. "ಧಿಯೇಟರ್" ಎಂಬ ಇಂಗ್ಲೀಷಾ ತ್ರೈಮಾಸಿಕದಲ್ಲಿಯೂ ಒಂದು ಸ್ವಾರಸ್ಯವಾದ ವಿಮರ್ಶೆ ಬಂದಿದೆ.

ಶ್ರೀ ಬಿ. ಎಂ. ಶ್ರೀಕಂಠಯ್ಯನವರು.

ಆಧಾರವಾಗಿಟ್ಟುಕೊಂಡು ಮನೋಹರವೂ ಸಮಾಜಸ್ಥಿತಿ ಧಾರಣೆಗೆ ಸಹಾಯಕವೂ ಆಗಿರುವ "ಎರಡು ಹೆಜ್ಜೆ ಅಥವಾ ಸಾವಿನ ಸಮಸ್ಯೆ" ಮತ್ತು "ಆಷಾಢಭೂತಿ" ಎಂಬ ನಾಟಕಗಳನ್ನು ಬರೆದಿದ್ದಾರೆ. ಈ ನಾಟಕಗಳು ಸರ್ವವಿಧದಿಂದಲೂ ಶ್ರೇಷ್ಠವಾದುವೆಂದು ನೋಡಿದವರೆಲ್ಲರ ನಂಬುಗೆ. ಅಂತಹ ನಾಟಕಗಳು ಹೆಚ್ಚಲಿ ಎಂಬುದು ಎಲ್ಲರ ಹಾರೈಕೆ.

ಆಧುನಿಕ ಸಾಹಿತ್ಯದಲ್ಲಿ ಹೆಜ್ಜೆ ಏಮರ್ಶೆಗೆ ಸಿಕ್ಕಿರುವುದೆಂದರೆ ಕವಿತೆ. ಆಧುನಿಕ ಕವಿತೆಯು ಸರ್ವಾಂಶದಿಂದಲೂ ಸಂಪೂರ್ಣವಾಗಿ ಆಂಗ್ಲೇಯ ಸಾಹಿತ್ಯದಿಂದ ಪ್ರೇರಿತವಾದುದು. ಹೊಸ ಛಂದಸ್ಸು, ಪಂಪನಿಗೆ ತಿಳಿದಿದ್ದರೂ ತಿಳಿಯದ ನಮಗೆ ನೂತನವಾಗಿದೆ. ಆದರೆ ನೂತನ ಮಾರ್ಗಾವಲಂಬನೆಯು ಅನೇ ಶತಮಾನಕ್ಕೇ ಹೊಸದಲ್ಲ. ಹೊಸಹಾದಿಗಳಲ್ಲಿ ಹರಿಯುವುದು ಕನ್ನಡ ಸಾಹಿತ್ಯಕ್ಕೆ ಹಳೆಯಚಾಳಿ. ಇದನ್ನು

ಶ್ರಯುತ ಬೇಂದ್ರೆಯವರು

ಬೇಕಾದಷ್ಟು ಭಿನ್ನಾಭಿಪ್ರಾಯಗಳಿವೆ. ಈ ಸರಳರಗಳೆಯ ನಾಟಕಗಳು ಉಳಿಯುತ್ತವೆಯೋ ಅಳಿಯುತ್ತವೆಯೋ ಈಗ ಹೇಳಲಾಗುವುದಿಲ್ಲ. ಕಾಲವು ಶ್ರೇಷ್ಠತೆಯ ನಿರ್ಣಾಯಕನಾದುದರಿಂದ ನಮಗೆ ಚಿಂತೆಬೇಡ. ಶ್ರೀ ಎ. ಸೀತಾರಾಮಯ್ಯನವರು ಒಂದು ಸಂಪೂರ್ಣವಾದ ಗದ್ಯ ನಾಟಕವನ್ನು ಬರೆದಿದ್ದಾರೆ. "ಸೊಹ್ರಾಬ್ ರುಸ್ತುಂ" ಆಡಿದಾಗ "ಅಗದಿ ಭಯಂಕರವಾಗಿತ್ತು!". ಕೆಲವರು ತುದಿಯ ಭಾಗದಲ್ಲಿ ದೋಷವಿದೆ ಎಂದರು. ಒಟ್ಟಿನಲ್ಲಿ ನಾಟಕವು ವೀರ್ಯವತ್ತಾಗಿದೆ. ಮೊನೆ ಮೊನ್ನೆ ಶ್ರೀ ಸಿ. ಕೆ. ವೆಂಕಟರಾಮಯ್ಯನವರು "ನಮ್ಮ ಸಮಾಜ" ಎಂಬ ಸಾಮಾಜಿಕ ನಾಟಕವನ್ನು ಬರೆದಿದ್ದಾರೆ. ಅಲ್ಲದೆ ಶ್ರೀ ವೆಂಕಟೇಶಯ್ಯಂಗಾರ್ಯರು "ಮಂಜುಳಾ" ಎಂಬ ಉತ್ಕೃಷ್ಟ ಸಾಮಾಜಿಕ ನಾಟಕವನ್ನು ರಚಿಸಿದ್ದಾರೆ. ಇದಲ್ಲದೆ ಮೈಸೂರಿನಲ್ಲಿ ಶ್ರೀಮಾನ್ ಎ. ವೆಂಕಟಾಚಾರ್ಯರೂ, ಶ್ರೀಮಾನ್ ಮೂರ್ತಿರಾಯರೂ ಪಾಶ್ಚಾತ್ಯ ಸಾಮಾಜಿಕ ನಾಟಕಗಳನ್ನು

ಮೊದಲು ಮಾಡಿದವರು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು. ಶ್ರೀನಿವಾಸನ "ಅರುಣ"ನು ಉದಯಿಸುವ ಮುನ್ನವೇ ವಿದ್ಯಾದಾಯಿನಿಯಲ್ಲಿ ಇಂಗ್ಲೀಷ್ ಗೀತೆಗಳು ಅಚ್ಚಾಗಿದ್ದವು. ಆದ್ದರಿಂದ "ಶ್ರೀ" ಯವರನ್ನು ನವಯುಗಪ್ರವರ್ತಕರೆಂದರೆ ತಪ್ಪಾಗದು. ಅವರು ಬಯಲಿಗೆ ಬಂದುದೇನೋ "ಇಂಗ್ಲೀಷ್ ಗೀತೆಗಳು" ಗ್ರಂಥರೂಪದಲ್ಲಿ ಹೊರಬಿದ್ದಮೇಲೆ. ಆದರೂ ಅವರ ಪ್ರಭಾವವು ಗುಪ್ತ ಗಾಮಿನಿಯಾದ ವಾಹಿನಿಯಂತೆ ಅನೇಕ ವ್ಯಕ್ತಿಗಳಿಗೆ ನೀರೆರೆದಿದೆ. ಆದ್ದರಿಂದಲೇ ಅವರು ಹಳಬರಿಗೆ ಹಳಬ

ಶ್ರೀ ಪಂಜೆ ಮಂಗೇಶರಾಯರು

ರಾಗಿಯೂ ಹೊಸಬರಿಗೆ ಹೊಸಬರಾಗಿಯೂ ಕಾಣು ತ್ತಾರೆ. ಶ್ರೀಮಾನ್ ಡಿ. ವಿ. ಗುಂಡಪ್ಪನವರ "ನಿವೇದನ"ದಲ್ಲಿ ಕನ್ನಡ ಕಬ್ಬಮೆಣ್ಣು ಸನಾತನ ಮತ್ತು ನೂತನಗಳ ಮಧ್ಯೆ ಹೊಸ್ತಿಲಮೇಲೆ ನಿಂತಿರುವಂತೆ ತೋರಿದೆ. ಅಲ್ಲಿರುವ ಅನೇಕ ಪದ್ಯಗಳು ವೃತ್ತಕಂದಪದ್ಯರೂಪವಾಗಿವೆ. ವಿಷಯವು ನೂತನವಾದರೂ ವೇಷವು ಪುರಾತನವಾದುದು. ಶ್ರೀನಿವಾಸನ ಕವನಗಳಲ್ಲಿ ಕವಿತಾ ವನಿತೆಯು ಹೊಸ್ತಿಲನ್ನು ದಾಟಿರುವಂತಿದ್ದಾಳೆ. ಶ್ರೀ

ಗುಂಡಪ್ಪ ಮತ್ತು ಶ್ರೀನಿವಾಸರು ನವಸಂಪ್ರದಾಯ ಪ್ರಚಾರಕ್ಕೆ ಬಹಳ ಕೆಲಸಮಾಡಿದ್ದಾರೆ. ಧಾರವಾಡದ ಕಡೆ ಶ್ರೀಯುತ ಬೇಂದ್ರೆಯವರು ಹೊಸ ಸಂಪ್ರದಾಯವನ್ನು ತರಲು ಹೆಚ್ಚು ಪ್ರಯತ್ನಿಸಿದ್ದಾರೆ. "ಹಕ್ಕಿ ಹಾರುತಿದೆ" ಎಂಬ ಕವನ ಪುಸ್ತಕದಲ್ಲಿರುವ ಅವರ ಕವನಗಳು ಕರುಳಿರಿಯುವಂತಿವೆ. ಮಂಗಳೂರಿನ ಕಡೆ ಶ್ರೀಮಾನ್ ಪಂಜೆ ಮಂಗೇಶರಾಯರು ಹೊಸ ಕವನಗಳನ್ನು ಬರೆದು ಓದಿ ಬಹಳ ಹಿಂದಿನಿಂದಲೂ ಸಾಹಿತ್ಯಸೇವೆ ಮಾಡುತ್ತಿದ್ದಾರೆ. ಶ್ರೀ ಗೋವಿಂದ ಪೈಗಳೂ ಕವನಗಳನ್ನು ಬರೆದಿದ್ದಾರೆ; ಆದರೆ ಇವರು ವಿಶೇಷವಾಗಿ ಪ್ರಾಕ್ತನ ಸಂಶೋಧನ ಪಂಡಿತರು. ಶ್ರೀ ಕಡೆಂಗೋಡ್ಲು ಶಂಕರಭಟ್ಟರೇ ಮೊದಲಾದ ತರುಣರೂ ಅತ್ತಕಡೆ ಹೊಸ ಕವನಗಳನ್ನು ಬರೆಯುವುದರಲ್ಲಿ ಗಣ್ಯರೆನಿಸಿಕೊಂಡಿದ್ದಾರೆ. "ತಳಿರು" "ಕಿರಿಯ ಕಾಣಿಕೆ" ಗಳನ್ನು ಅಚ್ಚು ಹಾಕಿಸಿದ್ದಾರೆ. ಇದಲ್ಲದೆ ಪತ್ರಿಕೆಗಳಲ್ಲಿಯೂ ಮಾಸ ಪತ್ರಿಕೆಗಳಲ್ಲಿಯೂ ಎಷ್ಟೆಷ್ಟೋ ಕವನಗಳು ಬರುತ್ತಿವೆ. ಆದರೆ ಈ ಪುಗಳಲ್ಲಿ ಅನೇಕ ಕವನಗಳು ಹೊಸ ಸಂಪ್ರದಾಯಕ್ಕೆ ಮಾನ ತರುವಂತೆ ತೋರುವುದಿಲ್ಲ. ಆದರೂ ಓದುಗರು ಕೆರಳಬಾರದು. "ಯೋಗ್ಯೋಸ್ತಿ." (ಅರ್ಹವಾದುದು ಉಳಿಯುವುದು; ಅಲ್ಲದುದು ಅಳಿಯುವುದು) ಎಂಬ ಸಿದ್ಧಾಂತವನ್ನು ನೆನ[illegible]

ಧೈರ್ಯದಿಂದ ನವಸಾಹಸಕ್ಕೆ ಪ್ರೋತ್ಸಾಹ ಕೊಡಬೇಕು. ಲುಪ್ತಸಂಧದ ಕೊರಕಲು ದಾರಿಗಿಂತಲೂ ಹೊಸ ಪ್ರಯತ್ನದ ಹೆದ್ದಾರಿಯೇ ಶ್ರೇಯಸ್ಕರವಾದುದು. ಬದುಕಿನಲ್ಲಿ ತಪ್ಪಿದ್ದರೆ ತಿದ್ದಿಕೊಳ್ಳಬಹುದು ಬದುಕೇ ಇಲ್ಲದಿದ್ದರೆ ತಿದ್ದುವುದೇನನ್ನು ?

ಆಧುನಿಕಸಾಹಿತ್ಯ ಚರಿತ್ರೆಯ ಜಾಲವಿನ್ನೂ ಹತೋಟಿಗೆ ಬಂದಿಲ್ಲ; ರೂಪುಗೊಳ್ಳುತ್ತಿದೆ. ಕೈಯಾವುದೋ ತಲೆಯಾವುದೋ ಕಾಲಾವುದೋ ಸರಿಯಾಗಿ ಗೊತ್ತಾಗುವಂತಿಲ್ಲ. ಸಾಮಗ್ರಿಯೂ ಸರಿಯಾಗಿ ದೊರೆತಿಲ್ಲ. ಎಲ್ಲವೂ ಮಬ್ಬುಮಬ್ಬಾಗಿದೆ. ಸಣ್ಣದಾದ ಈ ಲೇಖನದಲ್ಲಿ ಬಿಟ್ಟ ಹೆಸರುಗಳು ಅಗಣ್ಯವೂ ಅಪ್ರಮುಖವೂ ಆದುವೆಂದು ಯಾರೂ ತಿಳಿಯಬಾರದು. ಅಲ್ಲದೆ ಲೇಖಕರನ್ನು ಅವರವರ ಯೋಗ್ಯತೆಗೆ ಅನುಗುಣವಾಗಿ ಶ್ರೇಣೀಬದ್ಧರನ್ನಾಗಿ ಮಾಡುವ ಸಾಹಸಕ್ಕು ಕೈಹಾಕಿಲ್ಲ. ಈ ಲೇಖನವನ್ನು ತಿಳಿದವರಿಗಾಗಿ ಬರೆದುದಲ್ಲ. ಸಾಮಾನ್ಯರಿಗೆ ಆಧುನಿಕ ಕನ್ನಡ ಸಾಹಿತ್ಯದ ಕತೆ ಹೇಳುವಂತೆ ಹೇಳಿದುದು. ನಾವಿನ್ನೂ ತಪ್ಪು ಮಾಡಿ ತಿದ್ದಿಕೊಳ್ಳುವ ಸ್ಥಿತಿಯಲ್ಲಿಯೇ ಇರುವುದರಿಂದ ತಾತ್ಕಾಲಿಕವಾದ ಅಧ್ಯಾಯಗಳನ್ನು ಅಂತಿಮ ಸಿದ್ಧಾಂತಗಳೆಂದು ಯಾರೂ ಗ್ರಹಿಸಬಾರದೆಂದು ಪ್ರಾರ್ಥನೆ.

ವಿಶ್ವಕರ್ನಾಟಕ ಮುದ್ರಣಾಲಯ

ವಿಶ್ವೇಶ್ವರಪುರ — ಬೆಂಗಳೂರು ನಗರ.